ಗುರುವಾರ, ಮಾರ್ಚ್ 11, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 70 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಹಾಶಿವರಾತ್ರಿ ಹಬ್ಬದ ಶುಭಾಶಯಗಳು

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹46,100 (ಬೆಂಗಳೂರು)	₹68,400 (ಬೆಂಗಳೂರು)	72.91 ▲



ಸ್ಪರ್ಧಾ ವಾಣಿ
ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ಪರೀಕ್ಷೆಯಿಂದ ಪ್ರಾರಂಭವಾಗಿ ಐಎಎಸ್ ಹಂತದ ಪರೀಕ್ಷೆಗಳವರೆಗೆ, ಸಾಮಾನ್ಯ ಅಧ್ಯಯನ ವಿಷಯಗಳ ಬಗ್ಗೆ ಆಳವಾದ ವಿಷಯ ಜ್ಞಾನ ಅವಶ್ಯಕ.

ಮೀಸಲು: ವಿಧಾನಸಭೆಯಲ್ಲಿ ಸರ್ಕಾರದ ನಿಲುವು ಪ್ರಕಟಿಸಿದ ಕಾನೂನು ಸಚಿವ ಬೊಮ್ಮಾಯಿ

‘ಸುಪ್ರೀಂ’ ಗೆ ಪ್ರಮಾಣಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗರಿಷ್ಠ ಮೀಸಲು ಪ್ರಮಾಣವನ್ನು ಶೇ 50ರ ಮಿತಿಗಿಂತ ಹೆಚ್ಚಿಸಬಹುದೇ ಎಂದು ಅಭಿಪ್ರಾಯ ತಿಳಿಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಈ ಬಗ್ಗೆ ತನ್ನ ನಿಲುವು ತಿಳಿಸಿ ರಾಜ್ಯ ಸರ್ಕಾರ ಶೀಘ್ರ ಪ್ರಮಾಣಪತ್ರ ಸಲ್ಲಿಸಲಿದೆ’ ಎಂದು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಪಂಚಮಸಾಲಿ ಸಮುದಾಯ ಸೇರಿದಂತೆ ವಿವಿಧ ಸಮುದಾಯಗಳ ಮೀಸಲಾತಿ ಬೇಡಿಕೆ ಬಗ್ಗೆ ಸರ್ಕಾರದ ಪರವಾಗಿ ಸದನದಲ್ಲಿ ಉತ್ತರ ನೀಡಿದ ಅವರು, ‘ಸುಪ್ರೀಂ ಕೋರ್ಟ್ ಈಚೆಗೆ ನೀಡಿರುವ ಸೂಚನೆಯು ಈಗಿನ ಸಮಸ್ಯೆ ಪರಿಹಾರಕ್ಕೆ ಒಂದು ದಾರಿಯಾಗಬಹುದು’ ಎಂದರು.

‘ಪಂಚಮಸಾಲಿ ಸಮುದಾಯ ಸೇರಿದಂತೆ ಎಲ್ಲ ಸಮುದಾಯಗಳ ಮೀಸಲಾತಿ ಬೇಡಿಕೆ ಈಡೇರಿಸಲು ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಮೂವರ ಸಮಿತಿ ರಚಿಸಲಾಗುತ್ತದೆ. ಈ ಸಮಿತಿ ವರದಿ ಆಧರಿಸಿ ಸಾಂವಿಧಾನಿಕ ಹಾಗೂ ಕಾನೂನು ಚೌಕಟ್ಟಿನಲ್ಲಿ ಎಲ್ಲ ಸಮುದಾಯಗಳಿಗೆ ನ್ಯಾಯ ಒದಗಿಸಲಾಗುವುದು’ ಎಂದು ಭರವಸೆ ನೀಡಿದರು.

ಮೀಸಲಾತಿಯ ಗರಿಷ್ಠ ಮಿತಿಯನ್ನು ಶೇ 50ಕ್ಕಿಂತ ಹೆಚ್ಚು ಮಾಡದೆ ಈ ಮಿತಿಯೊಳಗೆ ಕೊಡಿ. ಈ ಬಗ್ಗೆ ಸಚಿವ ಸಂಪುಟವೇ ತೀರ್ಮಾನಿಸಬಹುದು
ಬಸನಗೌಡ ಪಾಟೀಲ ಯತ್ನಾಳ್
ಬಿಜೆಪಿ ಶಾಸಕ

‘1992ರಲ್ಲಿ ಇಂದಿರಾ ಸಾಹ್ನಿ ಪ್ರಕರಣದಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಎಲ್ಲ ಸಮುದಾಯಗಳಿಗೆ ನೀಡಲಾಗುವ ಒಟ್ಟಾರೆ ಮೀಸಲಾತಿ ಪ್ರಮಾಣ ಗರಿಷ್ಠ ಶೇ 50 ಮೀರುವಂತಿಲ್ಲ ಎಂದು ಹೇಳಿದೆ. ರಾಜ್ಯದಲ್ಲಿ ಹಲವು ಸಮುದಾಯಗಳು ಮೀಸಲಾತಿಯ ಬೇಡಿಕೆ ಇಟ್ಟಿವೆ. ಈ ಬಗ್ಗೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ವರದಿ ಕೇಳಲಾಗಿದೆ. ಈ ವರದಿ, ತಜ್ಞರ ಸಮಿತಿಯನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಸ್ಪಷ್ಟ ತೀರ್ಮಾನ ಕೈಗೊಳ್ಳಲಿದೆ’ ಎಂದು ಹೇಳಿದರು.

‘ಮೀಸಲಾತಿ ವಿಷಯದಲ್ಲಿ ಯಾವುದೇ ತೀರ್ಮಾನ ಕೈಗೊಂಡರೂ ಸಾಂವಿಧಾನಿಕ ಹಾಗೂ ಕಾನೂನು ಚೌಕಟ್ಟಿನಲ್ಲಿ ಇರಬೇಕು. ಇಲ್ಲದಿದ್ದರೆ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ. ಇದಕ್ಕೆ ಮಹಾರಾಷ್ಟ್ರ ಹಾಗೂ ರಾಜಸ್ಥಾನದ ಉದಾಹರಣೆಗಳು ನಮ್ಮ ಮುಂದೆ ಇವೆ’ ಎಂದರು.

‘ರಾಜ್ಯ ಸರ್ಕಾರ 1994ರಲ್ಲಿ ಮೀಸಲಾತಿ ಪ್ರಮಾಣವನ್ನು ಶೇ 73ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಿತ್ತು. ಆದರೆ, ಯಾವುದೇ ಅಧ್ಯಯನ ನಡೆಸದೆ ಆದೇಶ ಹೊರಡಿಸಿದ್ದರಿಂದ ಅದಕ್ಕೆ ಕೋರ್ಟ್‌ನಲ್ಲಿ ಮಾನ್ಯತೆ ಸಿಗಲಿಲ್ಲ’ ಎಂದು ಅವರು ನೆನಪಿಸಿದರು.

‘ಹಾವನೂರು, ವೆಂಕಟಸ್ವಾಮಿ, ಚಿನ್ನಪ್ಪರೆಡ್ಡಿ ಆಯೋಗದ ಮಾದರಿಯಲ್ಲೇ ಶಾಶ್ವತ ಆಯೋಗ ರಚಿಸಲು ಸರ್ಕಾರ ಮುಂದಾಗಿದೆಯೇ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

‘ಅಂತಹ ಪ್ರಸ್ತಾವ ಇಲ್ಲ. ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸಲಾಗುತ್ತದೆ’ ಎಂದು ಬೊಮ್ಮಾಯಿ ಹೇಳಿದರು.

ಮುಖ್ಯಮಂತ್ರಿ ನಾಪತ್ತೆ: ಯತ್ನಾಳ್ ಕಿಡಿ

‘ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2 ಎ ಗೆ ಸೇರಿಸುವ ಬಗ್ಗೆ ಸದನದಲ್ಲಿ ಸಕಾರಾತ್ಮಕ ಉತ್ತರ ನೀಡುವುದಾಗಿ ಹೇಳಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಾಪತ್ತೆಯಾಗಿದ್ದಾರೆ’ ಎಂದು ಬಿಜೆಪಿಯ ಹಿರಿಯ ಸದಸ್ಯ ಬಸನಗೌಡ ಪಾಟೀಲ ಯತ್ನಾಳ್ ಆಕ್ರೋಶ ವ್ಯಕ್ತಪಡಿಸಿದರು.

ಪಂಚಮಸಾಲಿ ಸಮುದಾಯದ ಮೀಸಲಾತಿ ಬೇಡಿಕೆ ಬಗ್ಗೆ ವಿಧಾನಸಭೆಯಲ್ಲಿ ಬುಧವಾರ ವಿಷಯ ಪ್ರಸ್ತಾಪಿಸಿದ ಅವರು, ‘ಸಮುದಾಯದ ಬೇಡಿಕೆ ಈಡೇರಿಸಲು ಸಕಾರಾತ್ಮಕ ಉತ್ತರ ನೀಡುತ್ತೇನೆ ಎಂದು ಮುಖ್ಯಮಂತ್ರಿ ಮಂಗಳವಾರ ನನ್ನ ಬಳಿ ಹೇಳಿದ್ದರು. ಆದರೆ, ಅವರು ಹಾಗೂ ಸಮಾಜ ಕಲ್ಯಾಣ ಸಚಿವರು ಸದನಕ್ಕೆ ಬಂದೇ ಇಲ್ಲ. ಅವರಿಗೆ ಸಮುದಾಯದ ಬಗ್ಗೆ ಎಷ್ಟು ಪ್ರೀತಿ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ’ ಎಂದರು.

5ನೇ ಪುಟ ನೋಡಿ

ಮೀಸಲು: ಸಮಿತಿಗೆ ನ್ಯಾ. ಸುಭಾಷ್ ಅಡಿ ಅಧ್ಯಕ್ಷ

ವಿವಿಧ ಸಮುದಾಯಗಳ ಮೀಸಲಾತಿ ಬೇಡಿಕೆಯ ಬಗ್ಗೆ ಪರಾಮರ್ಶೆ ನಡೆಸಿ, ವರದಿ ನೀಡಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಿ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ.ರತ್ನಪ್ರಭಾ ಮತ್ತು ಮೈಸೂರು ಮಹಾರಾಣಿ ಕಾಲೇಜಿನ ಪ್ರಾಧ್ಯಾಪಕ ಡಾ.ಬಿ.ವಿ.ವಸಂತ ಕುಮಾರ್ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸುವ ಕುರಿತ ತೀರ್ಮಾನ ತೆಗೆದುಕೊಂಡು, ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿಯ ಅಧಿಕಾರವನ್ನು ಮುಖ್ಯಮಂತ್ರಿಗೆ ನೀಡಲಾಗಿತ್ತು.

ಸಿ.ಡಿ ‘ಷಡ್ಯಂತ್ರ’ ತನಿಖೆಗೆ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧದ ಸಿ.ಡಿ ಪ್ರಕರಣದ ಹಿಂದಿನ ‘ಷಡ್ಯಂತ್ರ’ ಬಯಲಿಗೆಳೆಯಲು ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡವನ್ನು(ಎಸ್‌ಐಟಿ) ರಚಿಸಿದೆ.

‘ಸಿ.ಡಿ ಪ್ರಕರಣದ ಷಡ್ಯಂತ್ರದ ಹಿಂದಿರುವ ವ್ಯಕ್ತಿಗಳು ಯಾರು, ಅವರ ಉದ್ದೇಶಗಳೇನು ಎಂಬ ಬಗ್ಗೆ ಕೂಲಂಕಷ ತನಿಖೆಗಾಗಿ ಹೆಚ್ಚುವರಿ ಪೊಲೀಸ್ ಆಯುಕ್ತ ಸೌಮೇಂದು ಮುಖರ್ಜಿ ನೇತೃತ್ವದಲ್ಲಿ ತಂಡ ರಚಿಸಲಾಗಿದೆ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

‘ರಮೇಶ ಜಾರಕಿಹೊಳಿ ನನಗೆ ಪತ್ರ ಬರೆದಿದ್ದು, ಅದರಲ್ಲಿ ಅವರ ವಿರುದ್ಧ ಇದೇ 2 ರಂದು ಕಬ್ಬನ್ ಪಾರ್ಕ್ ಠಾಣೆಯಲ್ಲಿ ದೂರು ದಾಖಲಾಗಿರುವ ಬಗ್ಗೆ ತಿಳಿಸಿದ್ದಾರೆ. ರಾಜಕೀಯ ತೇಜೋವಧೆ ಹಾಗೂ ಮಾನಹಾನಿ ಮಾಡುವ ಉದ್ದೇಶದಿಂದ ಹಲವರು ಸೇರಿ ತಮ್ಮ ವಿರುದ್ಧ ಷಡ್ಯಂತ್ರ ರೂಪಿಸಿರುವುದಾಗಿ ತಿಳಿಸಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿ ಆದೇಶಿಸಲಾಗಿದೆ’ ಎಂದಿದ್ದಾರೆ.

ಈ ಕುರಿತು ತನಿಖೆ ನಡೆಸಬೇಕು ಎಂದು ರಮೇಶ ಜಾರಕಿಹೊಳಿ ಮತ್ತು ಬಾಲಚಂದ್ರ ಜಾರಕಿಹೊಳಿ ಅವರು ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದರು.

ವಿದೇಶಿ ಸಂಸ್ಥೆಯಿಂದ ತನಿಖೆ?: ‘ಪ್ರಕರಣದ ಬಗ್ಗೆ ಜಾರಕಿಹೊಳಿ ಕುಟುಂಬ, ವಿದೇಶಿ ಗೂಢಚಾರ ಸಂಸ್ಥೆ ಮೂಲಕ ಸ್ವತಂತ್ರ ತನಿಖೆ ನಡೆಸುತ್ತಿದೆ. ಡಿಜಿಟಲ್ ಮತ್ತು ಸೈಬರ್ ರಹಸ್ಯಗಳನ್ನು ಬಯಲಿಗೆಳೆಯುವಲ್ಲಿ ಪರಿಣತವಾಗಿರುವ ಸಂಸ್ಥೆಯ ಮೂಲಕ ಸಾಕಷ್ಟು ಮಾಹಿತಿ ಸಂಗ್ರಹಿಸಲಾಗಿದೆ. ಸಾಕ್ಷ್ಯ ಸಂಗ್ರಹವಾದ ಬಳಿಕ ನಿರ್ದಿಷ್ಟ ವ್ಯಕ್ತಿಗಳ ವಿರುದ್ಧ ಪೊಲೀಸರಿಗೆ ದೂರು ನೀಡಲು ರಮೇಶ ನಿರ್ಧರಿಸಿದ್ದಾರೆ’ ಎಂದು ಜಾರಕಿಹೊಳಿ ಆಪ್ತ ಮೂಲಗಳು ಹೇಳಿವೆ.

ಸಿ.ಡಿ ನಕಲಿ ಆಗಿದ್ದರೆ ತನಿಖೆ ಏಕೆ?

‘ಅವರು(ರಮೇಶ ಜಾರಕಿಹೊಳಿ) ನಕಲಿ ಸಿ.ಡಿ ಎನ್ನುತ್ತಿದ್ದಾರೆ. ನಕಲಿ ಆಗಿದ್ದರೆ ತನಿಖೆ ಏಕೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ.

‘ನೀವು ಸರಿ ಇದ್ದರೆ ನಿಮ್ಮನ್ನು ಯಾಕೆ ಸಿಕ್ಕಿಸುತ್ತಾರೆ. ಶರ್ಟ್, ಪ್ಯಾಂಟ್ ಬಿಚ್ಚಿ ಎಂದು ಕಾಂಗ್ರೆಸ್‌ನವರು ಹೇಳಿದ್ದರಾ? ಯಡಿಯೂರಪ್ಪ ಭ್ರಷ್ಟಚಾರಿ ಎಂದು ವಿಡಿಯೊದಲ್ಲಿ ಹೇಳಿರುವ ಅವರು, ಕನ್ನಡಿಗರನ್ನು ಅವಹೇಳನ ಮಾಡಿದ್ದಾರೆ’ ಎಂದಿದ್ದಾರೆ.

ಅಪ್ಪ–ಮಗನ ಸಿ.ಡಿಗಳೂ ಬರಲಿವೆ

‘ಎರಡೂ ಪಕ್ಷದ ನಾಯಕರು ಸೇರಿ ರಮೇಶ ಜಾರಕಿಹೊಳಿ ಸಿ.ಡಿ ಬಿಡುಗಡೆ ಮಾಡಿದ್ದಾರೆ. ಅವರು ಸುಮ್ಮನಿರುವುದಿಲ್ಲ. ರಾಜ್ಯದ ಆಡಳಿತ ನಡೆಸುತ್ತಿರುವ ಅಪ್ಪ–ಮಗ ಸೇರಿದಂತೆ 23 ನಾಯಕರ ಸಿ.ಡಿಗಳೂ ಹೊರ ಬರಲಿವೆ’ ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

‘ಎಲ್ಲ ಸಿ.ಡಿಗಳನ್ನೂ ರಮೇಶ ಅವರೇ ಬಿಡುಗಡೆ ಮಾಡಬಹುದು. ಸತ್ಯ ಯಾವತ್ತಿದ್ದರೂ ಹೊರಗೆ ಬರಲೇಬೇಕಲ್ಲ’ ಎಂದರು.

ತಳ್ಳಿದ ಅಪರಿಚಿತರು: ಗಾಯಗೊಂಡ ಮಮತಾ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಕೆಲವು ಅಪರಿಚಿತರು ತಮ್ಮನ್ನು ತಳ್ಳಿದ್ದೂ ಅಲ್ಲದೇ ಎಡಗಾಲಿಗೆ ಗಾಯ ಆಗುವಂತೆ ಕಾರಿನ ಬಾಗಿಲನ್ನು ಬಲವಾಗಿ ಮುಚ್ಚಿದ್ದಾರೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ಆರೋಪಿಸಿದ್ದಾರೆ.

ನಂದಿಗ್ರಾಮ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಲು ಅವರು ನಾಮಪತ್ರ ಸಲ್ಲಿಸಿದ ಬಳಿಕ ಈ ರೀತಿ ನಡೆದಿದೆ. ಪ್ರಕರಣದ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಚುನಾವಣಾ ಆಯೋಗವು ಈ ಬಗ್ಗೆ ವರದಿ ಕೇಳಿದೆ.

ಮಮತಾ ಅವರಿಗೆ ಕೋಲ್ಕತ್ತದಲ್ಲಿರುವ ಎಸ್‌ಎಸ್‌ಕೆಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಅವರ ಆರೋಗ್ಯದ ಮೇಲೆ ನಿಗಾ ಇರಿಸುವುದಕ್ಕಾಗಿ ಐವರು ತಜ್ಞ ವೈದ್ಯರ ಸಮಿತಿ ರಚಿಸಲಾಗಿದೆ.

‘ನನಗೆ ಪರಿಚಿತರಲ್ಲದ ನಾಲ್ಕೈದು ಜನರು ನನ್ನನ್ನು ಕೆಳಗೆ ತಳ್ಳಿದರು. ತಲೆ, ಕೈ ಮತ್ತು ಕಾಲಿಗೆ ತುಂಬಾ ನೋವಾಗಿದೆ. ಇಂದು (ಬುಧವಾರ) ರಾತ್ರಿ ನಂದಿಗ್ರಾಮದಲ್ಲಿಯೇ ತಂಗಬೇಕು ಎಂದು ಯೋಜಿಸಿದ್ದೆ, ಆದರೆ, ಈಗ ಚಿಕಿತ್ಸೆಗಾಗಿ ಕೋಲ್ಕತ್ತಕ್ಕೆ ಹೋಗಲೇಬೇಕಾಗಿದೆ’ ಎಂದು ಮಮತಾ ಹೇಳಿದರು.

ಗಾಯಗೊಂಡ ಮಮತಾ ಬ್ಯಾನರ್ಜಿ
ಪಿಟಿಐ ಚಿತ್ರ

‘ಖಂಡಿತವಾಗಿಯೂ ಇದೊಂದು ಷಡ್ಯಂತ್ರ. ಸ್ಥಳದಲ್ಲಿ ಸ್ಥಳೀಯ ಪೊಲೀಸರು ಅಥವಾ ಎಸ್‌ಪಿ ಇರಲಿಲ್ಲ’ ಎಂದು ಅವರು ಹೇಳಿದರು.

ತೀವ್ರವಾಗಿ ನೋವು ಅನುಭವಿಸುತ್ತಿರುವವರಂತೆ ಕಂಡ ಮಮತಾ ಅವರು, ಸುತ್ತುವರಿದಿದ್ದ ಪತ್ರಕರ್ತರಿಗೆ ಕೈಮುಗಿದು ತಮ್ಮನ್ನು ಹೋಗಲು ಅವಕಾಶ ಕೊಡಿ ಎಂದು ಕೋರಿದರು.

‘ಬುಧವಾರ ಸಂಜೆ 6.15ರ ಹೊತ್ತಿಗೆ ಮಮತಾ ಅವರು ಬಿರುಲಿಯಾ ಅಂಚಲ್‌ನ ದೇವಾಲಯದಲ್ಲಿ ಪೂಜೆ ಮುಗಿಸಿ ಹಿಂದಿರುಗುವುದರಲ್ಲಿದ್ದರು. ಆಗ ಕೆಲವರು ಮಮತಾ ಅವರನ್ನು ಕಾರಿನತ್ತ ತಳ್ಳಿದ್ದಾರೆ. ಬಲವಂತವಾಗಿ ಕಾರಿನ ಬಾಗಿಲು ಹಾಕಿದ್ದಾರೆ. ಬಾಗಿಲಿಗೆ ಎಡಗಾಲು ಸಿಲುಕಿಕೊಂಡು ಗಾಯವಾಗಿದೆ. ಸೊಂಟಕ್ಕೆ ಬಲವಾದ ಏಟು ಬಿದ್ದಿದೆ. ಬಳಿಕ, ಚಿಕಿತ್ಸೆಗಾಗಿ ಅವರು ಕೋಲ್ಕತ್ತಕ್ಕೆ ತೆರಳಿದ್ದಾರೆ’ ಎಂದು ನಂದಿಗ್ರಾಮದಲ್ಲಿಯೇ ಇದ್ದ ಟಿಎಂಸಿ ಸಂಸದ ಸುಖೇಂದು ಶೇಖರ್ ರಾಯ್ ಅವರು ಹೇಳಿಕೆ ನೀಡಿದ್ದಾರೆ.

ಮಮತಾ ಅವರು ನಂದಿಗ್ರಾಮ ಕ್ಷೇತ್ರದಿಂದ ನಾಮಪತ್ರ ಸಲ್ಲಿಸುವುದರೊಂದಿಗೆ ಭಾರಿ ಹಣಾಹಣಿಗೆ ರಂಗ ಸಜ್ಜಾಯಿತು. ಒಂದು ಕಾಲದಲ್ಲಿ ಮಮತಾ ಅವರ ಆಪ್ತರಾಗಿದ್ದ ಸುವೇಂದು ಅಧಿಕಾರಿ ಅವರು ಇಲ್ಲಿ ಬಿಜೆಪಿಯ ಅಭ್ಯರ್ಥಿ.

ನಾಮಪತ್ರ ಸಲ್ಲಿಕೆಗೆ ಮೊದಲು ಮಮತಾ ಅವರು ಎರಡು ಕಿ.ಮೀ. ರೋಡ್‌ಶೋ ನಡೆಸಿದರು. ಸ್ಥಳೀಯ ದೇವಾಲಯವೊಂದರಲ್ಲಿ ಪೂಜೆ ನಡೆಸಿದರು. ಟಿಎಂಸಿ ಪ್ರಧಾನ ಕಾರ್ಯದರ್ಶಿ ಸುಬ್ರತಾ ಬಕ್ಷಿ ಅವರು ಈ ಸಂದರ್ಭದಲ್ಲಿ ಜತೆಗಿದ್ದರು.

ಪಶ್ಚಿಮ ಬಂಗಾಳ ರಾಜ್ಯಪಾಲ ಜಗದೀಪ್ ಧನಕರ್ ಅವರು ಆಸ್ಪತ್ರೆಯಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಈ ಸಂದರ್ಭದಲ್ಲಿ ಟಿಎಂಸಿ ಕಾರ್ಯಕರ್ತರು ರಾಜ್ಯಪಾಲರ ವಿರುದ್ಧ ‘ಗೋ ಬ್ಯಾಕ್’ ಎಂದು ಘೋಷಣೆಗಳನ್ನು ಕೂಗಿದರು.

ಇದೇ 26ರಂದು ಭಾರತ್ ಬಂದ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಹೊಸ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯ ಗಡಿಯಲ್ಲಿ ನಡೆಸುತ್ತಿರುವ ರೈತರ ಪ್ರತಿಭಟನೆ ನಾಲ್ಕು ತಿಂಗಳು ಪೂರ್ಣಗೊಳಿಸುತ್ತಿರುವ ಬೆನ್ನಲ್ಲೇ ಮಾರ್ಚ್ 26ರಂದು ಭಾರತ್ ಬಂದ್‌ಗೆ ರೈತ ಸಂಘಟನೆಗಳು ಕರೆ ನೀಡಿವೆ.

ಮಾರ್ಚ್ 15ರಂದು ಇಂಧನ ಬೆಲೆ ಏರಿಕೆ ಮತ್ತು ರೈಲ್ವೆ ಖಾಸಗೀಕರಣವನ್ನು ವಿರೋಧಿಸಿ ರೈತರು ಮತ್ತು ಕಾರ್ಮಿಕ ಸಂಘಟನೆಗಳು ಪ್ರತಿಭಟನೆ ನಡೆಸಲಿವೆ ಎಂದು ಸಿಂಘು ಗಡಿಯಲ್ಲಿ ರೈತ ಮುಖಂಡ ಬುಟಾ ಸಿಂಗ್ ಬುರ್ಜ್‌ಗಿಲ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಹೊಸ ಮೂರು ಕೃಷಿ ಕಾನೂನುಗಳ ವಿರುದ್ಧ ನಡೆಸುತ್ತಿರುವ ನಮ್ಮ ಪ್ರತಿಭಟನೆಗೆ ನಾಲ್ಕು ತಿಂಗಳು ತುಂಬಿದಾಗ ಮಾರ್ಚ್ 26ರಂದು ಸಂಪೂರ್ಣ ಭಾರತ್ ಬಂದ್ ಆಚರಿಸುತ್ತೇವೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಶಾಂತಿಯುತ ಬಂದ್ ಪರಿಣಾಮಕಾರಿಯಾಗಿ ನಡೆಯಲಿದೆ’ ಎಂದರು.

ಸಾರಿಗೆ: ಅಂತರ ನಿಗಮ ವರ್ಗಾವಣೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆಯ ಅಧೀನದಲ್ಲಿರುವ ನಾಲ್ಕು ಸಾರಿಗೆ ನಿಗಮಗಳಲ್ಲಿನ ಮೇಲ್ವಿಚಾರಕರನ್ನು ಬಿಟ್ಟು ಮೂರು ಮತ್ತು ನಾಲ್ಕನೇ ಶ್ರೇಣಿಯ ಕಾಯಂ ನೌಕರರ ಅಂತರ ನಿಗಮ ವರ್ಗಾವಣೆಗೆ ಅವಕಾಶ ಕಲ್ಪಿಸಿ ಮಂಗಳವಾರ ಮಾರ್ಗಸೂಚಿ ಹೊರಡಿಸಲಾಗಿದೆ.

ಸಾರಿಗೆ ನೌಕರರು ಇತ್ತೀಚೆಗೆ ನಡೆಸಿದ್ದ ಮುಷ್ಕರದ ವೇಳೆ ಮುಂದಿಟ್ಟಿದ್ದ ಬೇಡಿಕೆಗಳಲ್ಲಿ ಅಂತರ ನಿಗಮಗಳ ವರ್ಗಾವಣೆ ಪ್ರಮುಖವಾಗಿತ್ತು. ಅನೇಕ ವರ್ಷಗಳಿಂದ ಈ ಬೇಡಿಕೆಗೆ ಸ್ಪಂದನೆ ಸಿಕ್ಕಿರಲಿಲ್ಲ. ಈ ಹಿಂದೆ ಆರು ಬೇಡಿಕೆಗಳನ್ನು ಈಡೇರಿಸಿದ್ದ ಇಲಾಖೆ, ಈಗ ಅಂತರ ನಿಗಮ ವರ್ಗಾವಣೆಗೂ ಅವಕಾಶ ಕಲ್ಪಿಸಿದೆ.

ನೂತನ ಮಾರ್ಗಸೂಚಿಗಳ ಪ್ರಕಾರ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ನೌಕರರನ್ನು ಅವರ ಕೋರಿಕೆಯ ಮೇರೆಗೆ ಅಂತರ ನಿಗಮಗಳಿಗೆ ವರ್ಗಾವಣೆ ಮಾಡಬಹುದು. ವರ್ಷಕ್ಕೆ ಒಂದು ಬಾರಿ ಮಾತ್ರ ಅಂತರ ನಿಗಮ ವರ್ಗಾವಣೆ ಪ್ರಕ್ರಿಯೆ ನಡೆಸಬಹುದು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದಲ್ಲಿ ಇತರ ಮೂರು ನಿಗಮಗಳ ವ್ಯವಸ್ಥಾಪಕ ನಿರ್ದೇಶಕರು ಸದಸ್ಯರಾಗಿರುವ ಸಮಿತಿ ವರ್ಗಾವಣೆ ಪ್ರಾಧಿಕಾರವಾಗಿರುತ್ತದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಕಡ್ಡಾಯವಾಗಿದ್ದು, ಸೂಕ್ತ ತಂತ್ರಾಂಶ ಅಭಿವೃದ್ಧಿಪಡಿಸಿ, ಪ್ರತಿ ವರ್ಷ ಏಪ್ರಿಲ್ 1ರಿಂದ 30ರವರೆಗೂ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಬೇಕು. ಕಲ್ಯಾಣ ಕರ್ನಾಟಕ ಸ್ಥಳೀಯ ಅಭ್ಯರ್ಥಿಗಳಿಗೂ ಮೀಸಲಾತಿ ಒದಗಿಸಬೇಕು. ಪ್ರತಿ ವರ್ಷ ಮೇ ತಿಂಗಳಿನಲ್ಲಿ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

10 ವರ್ಷ ಸೇವಾವಧಿ ಪೂರ್ಣಗೊಳಿಸಿರುವ ಕಾಯಂ ನೌಕರರು ಮಾತ್ರ ವರ್ಗಾವಣೆಗೆ ಅರ್ಹತೆ ಹೊಂದಿರುತ್ತಾರೆ. ಶಿಸ್ತು ಪ್ರಕರಣ ಬಾಕಿ ಇರುವ ನೌಕರರು ವರ್ಗಾವಣೆಗೆ ಅರ್ಹರಲ್ಲ. ಸೇವಾವಧಿಯಲ್ಲಿ ಒಮ್ಮೆ ಮಾತ್ರ ಅಂತರ ನಿಗಮ ವರ್ಗಾವಣೆಗೆ ಅವಕಾಶವಿದೆ. ಆದೇಶ ಹೊರಬಿದ್ದ ಬಳಿಕ ಬದಲಾವಣೆಗೆ ಅವಕಾಶವಿಲ್ಲ ಎಂದು ಇಲಾಖೆ ತಿಳಿಸಿದೆ.

ಕಾರ್ಯನಿರತ ವೃಂದದ ಶೇಕಡ 2ರಷ್ಟು ಸಿಬ್ಬಂದಿಯನ್ನು ಮಾತ್ರ ಇತರ ಸಾರಿಗೆ ನಿಗಮಗಳಿಗೆ ವರ್ಗಾವಣೆ ಮಾಡಬಹುದು. ಪ್ರತಿ ನಿಗಮದಲ್ಲಿ ಮಾಡುವ ಅಂತರ ನಿಗಮ ವರ್ಗಾವಣೆಯಲ್ಲಿ ಶೇ 5ರಷ್ಟನ್ನು ಪತಿ–ಪತ್ನಿ ಪ್ರಕರಣಗಳಿಗೆ ಮೀಸಲಿಡಬೇಕು. ವರ್ಗಾವಣೆ ಅರ್ಜಿಗಳಿಗೆ ಸೇವಾ ಜೇಷ್ಠತೆ ಆಧಾರದಲ್ಲಿ ಆದ್ಯತೆ ನೀಡಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ವರ್ಗಾವಣೆಗೊಂಡ ನೌಕರರು ಮೂಲ ನಿಗಮದಲ್ಲಿ ಪಡೆಯುತ್ತಿದ್ದ ವೇತನವನ್ನು ರಕ್ಷಿಸಲಾಗುತ್ತದೆ. ಆದರೆ,ಇತರ ಸೌಲಭ್ಯಗಳ ವಿಚಾರದಲ್ಲಿ ವರ್ಗಾವಣೆ ಹೊಂದುವ ನಿಗಮದ ನಿಯಮಗಳು ಅನ್ವಯವಾಗುತ್ತದೆ. ವರ್ಗಾವಣೆಗೊಂಡ ನಿಗಮದ ಜೇಷ್ಠತಾ ಪಟ್ಟಿಯ ಕೊನೆಯಲ್ಲಿ ಈ ನೌಕರರ ಹೆಸರನ್ನು ಸೇರಿಸಬೇಕು. ವರ್ಗಾವಣೆ ಭತ್ಯೆಯ ಸೌಲಭ್ಯ ಇರುವುದಿಲ್ಲ ಎಂದು ಇಲಾಖೆ ಸ್ಪಷ್ಟಪಡಿಸಿದೆ.

ಎರಡು ಬೇಡಿಕೆಗಳು ಬಾಕಿ

ಸಾರಿಗೆ ನೌಕರರ ತರಬೇತಿ ಅವಧಿಯನ್ನು ಎರಡು ವರ್ಷದಿಂದ ಒಂದು ವರ್ಷಕ್ಕೆ ಇಳಿಸುವುದು ಮತ್ತು ಸಾರಿಗೆ ನಿಗಮಗಳ ನೌಕರರಿಗೆ ಆರನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಪರಿಷ್ಕರಣೆ ಮಾಡಬೇಕೆಂಬ ಬೇಡಿಕೆಗಳು ಬಾಕಿ ಉಳಿದಿವೆ.

ತರಬೇತಿ ಅವಧಿ ಕಡಿತಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಗೆ ಕಡತ ಸಲ್ಲಿಸಲಾಗಿದೆ. ವೇತನ ಪರಿಷ್ಕರಣೆ ಸಂಬಂಧ ಸಮಿತಿ ರಚಿಸಲಾಗಿದೆ. ಸಮಿತಿಯ ವರದಿ ಬಂದ ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಇಲಾಖೆ ತಿಳಿಸಿದೆ.

ಪ್ರವಾಸಿಗರಿಗಾಗಿ ತಲೆ ಎತ್ತಲಿವೆ ತ್ರಿಸ್ಟಾರ್ ಹೋಟೆಲ್‌ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರಮುಖ ನಾಲ್ಕು ಪ್ರವಾಸಿ ತಾಣಗಳಲ್ಲಿ ಪ್ರವಾಸೋದ್ಯಮ ಇಲಾಖೆಯು ನಾಲ್ಕು ತ್ರಿಸ್ಟಾರ್ ಹೋಟೆಲ್‌ಗಳನ್ನು ನಿರ್ಮಾಣ ಮಾಡಲಿದೆ. ಈ ಕುರಿತು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ರೈಟ್ಸ್ ಸಂಸ್ಥೆಯೊಂದಿಗೆ ಬುಧವಾರ ಒಪ್ಪಂದಕ್ಕೆ ಸಹಿ ಹಾಕಿದೆ.

‘ಬೇಲೂರು, ಬಾದಾಮಿ, ವಿಜಯಪುರ ಹಾಗೂ ಹಂಪಿಯಲ್ಲಿ ಈ ಹೋಟೆಲ್‌ಗಳು ತಲೆ ಎತ್ತಲಿವೆ. ಮುಂದಿನ ತಿಂಗಳು ಭೂಮಿ ಪೂಜೆ ನೆರವೇರಿಸಲಾಗುವುದು. 18 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ, ಪ್ರವಾಸಿಗರ ಸೇವೆಗೆ ಸಮರ್ಪಿಸಲಾಗುವುದು’ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಹೇಳಿದರು.

ಯೋಗೇಶ್ವರ್

5ನೇ ಪುಟ ನೋಡಿ

ಪೊನ್ನಂಪೇಟೆ: ಕಾಫಿ ತೋಟದಲ್ಲಿ ಕೆಲಸ ಸ್ಥಗಿತ 04

ಇಂದಿನ ಪಾಡ್‌ಕಾಸ್ಟ್ ವಿಶೇಷ
ಆಟ-ನೋಟ
ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಮಿಸಳ್ ಹಾಪ್ಚಾ
ಸಿದ್ಧಾರೂಢರ ಜಾತ್ರೆ, ಜೀವನಯಾತ್ರೆ
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ–7

‘ಟಿ.ವಿ ಪ್ರಸಾರ ಕೇಬಲ್ ಕಾಯ್ದೆಗೆ ಅನುಗುಣವಾಗಿರಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿ.ವಿ ವಾಹಿನಿಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳು ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳ (ನಿಯಂತ್ರಣ) ಕಾಯ್ದೆಗೆ ಅನುಗುಣವಾಗಿರಬೇಕು ಎಂದು ಹೈಕೋರ್ಟ್ ಮಧ್ಯಂತರ ನಿರ್ದೇಶನ ನೀಡಿದೆ.

ಮಾಧ್ಯಮಗಳು ಖಾಸಗಿತನಕ್ಕೂ ಪ್ರವೇಶ ಮಾಡುವ ವಿಷಯದಲ್ಲಿ ಮಧ್ಯಪ್ರವೇಶಿಸುವಂತೆ ಕೋರಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್. ದಿನೇಶ್‌ಕುಮಾರ್ ಅವರಿದ್ದ ಪೀಠ, ಈ ಆದೇಶ ನೀಡಿತು.

ಜೆಡಿಎಸ್ ಸದಸ್ಯ ಎಂದು ಹೇಳಿಕೊಂಡಿರುವ ಆತ್ಮ ವಿ. ಹಿರೇಮಠ ಅರ್ಜಿ ಸಲ್ಲಿಸಿದ್ದು, ‘ರಮೇಶ್ ಜಾರಕಿಹೊಳಿ ಪ್ರಕರಣದಲ್ಲಿ ಮಾಧ್ಯಮಗಳು ವಿಡಿಯೊ ಪ್ರಸಾರ ಅವರ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡಂತೆ ಆಗಿದೆ. ಕೆ.ಎಸ್. ಪುಟ್ಟಸ್ವಾಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಖಾಸಗಿತನದ ಹಕ್ಕಿನ ಬಗ್ಗೆ ತಿಳಿಸಿದೆ’ ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

‘ಖಾಸಗಿತನದ ಹಕ್ಕು ಕಸಿದುಕೊಂಡಿರುವವರ ವಿರುದ್ಧ ಕೇಬಲ್ ಟೆಲಿವಿಷನ್ ನೆಟ್‌ವರ್ಕ್(ನಿಯಂತ್ರಣ) ಕಾಯ್ದೆಯ ಸೆಕ್ಷನ್ 19ರ ಅಡಿ ಕ್ರಮ ಕೈಗೊಳ್ಳುವಂತೆ ಬೆಂಗಳೂರು ಪೊಲೀಸ್ ಕಮಿಷನರ್ ಅವರಿಗೆ ನಿರ್ದೇಶನ ನೀಡಬೇಕು’ ಎಂದು ಮನವಿ ಮಾಡಿದ್ದಾರೆ.

ಬೋಧನಾ ಶುಲ್ಕ: ಬಲವಂತದ ಕ್ರಮ ಬೇಡ – ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರಿಯ ಪಠ್ಯಕ್ರಮದ ಶಾಲೆಗಳಲ್ಲಿ ಬೋಧನಾ ಶುಲ್ಕದ ಪ್ರಮಾಣ ಇಳಿಕೆಯಂಬ ಬಲವಂತದ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬಾರದು’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಕಳೆದ ವರ್ಷಕ್ಕಿಂತ ಕಡಿಮೆ ಶುಲ್ಕ ಪಾವತಿಸುವ ಪೋಷಕರ ಮನವಿಗಳನ್ನೂ ಪರಿಗಣಿಸುವಂತೆ ಆಡಳಿತ ಮಂಡಳಿಗಳಿಗೆ ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಪೀಠ ತಿಳಿಸಿತು. ವಿಚಾರಣೆಯನ್ನು ಮಾ.24ಕ್ಕೆ ಮುಂದೂಡಿತು. ಶೇ 70ರಷ್ಟು ಶುಲ್ಕ ಮಾತ್ರ ಪಡೆಯಬೇಕು ಎಂದು 2021ರ ಜನವರಿ 29ರಂದು ಸರ್ಕಾರ ಸುತ್ತೋಲೆ ಹೊರಡಿಸಿತ್ತು. ಈ ಆದೇಶ ಪ್ರಶ್ನಿಸಿ ಶಾಲಾ ಆಡಳಿತ ಮಂಡಳಿಗಳು ಮತ್ತು ಸಂಘಗಳು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದವು.

‘ಆನ್‌ಲೈನ್ ತರಗತಿಗಳು ನಡೆಯುತ್ತಿರುವ ಕಾರಣ ಬೋಧನಾ ವೆಚ್ಚ ಹೆಚ್ಚಾಗಿದೆ’ ಎಂದು ಅರ್ಜಿದಾರರು ತಿಳಿಸಿದ್ದರು.

ನೀರಿನ ಅದಾಲತ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ಇದೇ 12ರಂದು ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ವಾಣಿಜ್ಯ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳನ್ನು ಅದಾಲತ್‌ನಲ್ಲಿ ಪರಿಹರಿಸಲಾಗುವುದು.

ಬಳಕೆದಾರರು ಸಂಬಂಧಪಟ್ಟ ಉಪವಿಭಾಗದ ಕಚೇರಿ ತೆರಳಿ ಅದಾಲತ್‌ನಲ್ಲಿ ಪಾಲ್ಗೊಳ್ಳಬಹುದು.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:080–22238888, ಸಹಾಯವಾಣಿ 1916, ವಾಟ್ಸ್‌ಆ್ಯಪ್ ಸಂಖ್ಯೆ:8762228888 ಸಂಪರ್ಕಿಸಬಹುದು.

ಶಾಲೆ– ಕಾಲೇಜು ಸುರಕ್ಷತೆ: ವರದಿ ನೀಡಲು ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ, ಅನುದಾನಿತ ಮತ್ತು ಅನುದಾನರಹಿತ ಶಾಲೆ–ಕಾಲೇಜುಗಳಲ್ಲಿ ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ ನಿಯಮದ ಪ್ರಕಾರ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಸಂಬಂಧ ಪರಿಶೀಲಿಸಿ ವರದಿ ನೀಡಲು ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಸ್.ವಿ. ಸಂಕನೂರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ

ಈ ಸಮಿತಿಯಲ್ಲಿ ಪರಿಷತ್ ಸದಸ್ಯರಾದ ವೈ.ಎ. ನಾರಾಯಣಸ್ವಾಮಿ, ಪುಟ್ಟಣ್ಣ, ಅರುಣ್ ಶಹಾಪೂರ, ಗೋವಿಂದರಾಜು, ಶ್ರೀಕಂಠೇಗೌಡ, ಬೋಜೇಗೌಡ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಗೃಹ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಅಗ್ನಿಶಾಮಕ ದಳ ಪೊಲೀಸ್ ಮಹಾನಿರ್ದೇಶಕರು, ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷರು, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ, ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು, ಶಿಕ್ಷಣ ಇಲಾಖೆಯ ಆಯುಕ್ತರು ಸದಸ್ಯರು.

ಸಾರ್ವಜನಿಕ ನೋಟಿಸ್

ಜಭಾರತ್ ಎನ್‌ಕ್ಲೇವ್’’ ಇದರಲ್ಲಿ ಇರುವ ಮತ್ತು ಶ್ರೀಗಂಧಕಾವಲು ಗ್ರಾಮ, ದಾಸರಹಳ್ಳಿ ಪುರಸಭೆ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಇಲ್ಲಿನ 4 ಎಕರೆ ವಿಸ್ತೀರ್ಣದ ಸರ್ವೇ ನಂಬರ್ 6/1-ಎ ಜಮೀನಿನಲ್ಲಿ ನಿರ್ಮಿಸಲಾಗಿರುವ (‘‘ಶೆಡ್ಯೂಲ್ ಮಾಡಿರುವ ಆಸ್ತಿ’’) ಈ ಕೆಳಗಿನ ಶೆಡ್ಯೂಲ್‌ನಲ್ಲಿ ಹೆಚ್ಚು ವಿವರವಾಗಿ ಬರೆಯಲಾಗಿರುವ ವಾಸಸ್ಥಳಗಳಿಗೆ (‘‘ಉಲ್ಲೇಖಿತ ವಾಸಸ್ಥಳಗಳು’’) ಡಿ ನಂ. 8-2-120/86 ಮತ್ತು 8-2-120/86-1 ಕೀರ್ತಿ & ಪ್ರೈಡ್ ಟವರ್ಸ್, ರೋಡ್ ನಂ. 2, ಬಂಜಾರಾ ಹಿಲ್ಸ್, ಹೈದರಾಬಾದ್ - 500034 ಇಲ್ಲಿ ನೋಂದಾಯಿತ ಕಚೇರಿ ಮತ್ತು ನಂ. 35, ಜೆ.ಎಂ. ಪ್ಲಾಜಾ, 2ನೇ ಮಹಡಿ, 2ನೇ ಮುಖ್ಯರಸ್ತೆ, ಸ್ಯಾಂಕಿ ರಸ್ತೆ, ಸದಾಶಿವನಗರ, ಬೆಂಗಳೂರು - 560080 ಇಲ್ಲಿ ಶಾಖಾ ಕಚೇರಿ ಹೊಂದಿರುವ ಜನಪ್ರಿಯ ಎಂಜಿನಿಯರ್ಸ್ ಸಿಂಡಿಕೇಟ್ ಲಿಮಿಟೆಡ್ (ಈ ಹಿಂದೆ ಎಂಜಿನಿಯರ್ಸ್ ಸಿಂಡಿಕೇಟ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (‘‘ಮಾಲೀಕರು’’) ಇವರ ಹಕ್ಕು, ಸ್ವಾಧೀನಪತ್ರ ಮತ್ತು ಬಾಧ್ಯತೆಗಳನ್ನು ನಮ್ಮ ಕಕ್ಷಿಗಾರರ ಸೂಚನೆ ಮೇರೆಗೆ ನಾವು ತನಿಖೆ ಮಾಡುತ್ತಿದ್ದೇವೆ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲು ಈ ನೋಟಿಸ್ ಜಾರಿ ಮಾಡಿದ್ದೇವೆ.

ಅಡಮಾನ, ಈಡು, ಮಾರಾಟ, ಮಾರಾಟ ಒಪ್ಪಂದ, ವರ್ಗಾವಣೆ, ನಿಯೋಜನೆ, ಭೋಗ್ಯ, ಭೋಗ್ಯದ ಒಪ್ಪಂದ, ಉಪ ಭೋಗ್ಯ, ಉಪ ಭೋಗ್ಯದ ಒಪ್ಪಂದ, ಬಾಡಿಗೆ, ಪರವಾನಗಿ, ಉಪ ಪರವಾನಗಿ, ಸ್ವಾಮ್ಯದ ಹಕ್ಕು, ಹೊಣೆ, ವಿಶ್ವಾಸ, ನಿರ್ವಹಣೆ, ಅನುಭೋಗದ ಹಕ್ಕು, ಉಡುಗೊರೆ, ಕಾನೂನು ದಾವೆಯ ಸಾರ್ವಜನಿಕ ನೋಟೀಸ್ (ಲಿಸ್-ಪೆಂಡೆನ್ಸ್), ವಿನಿಮಯ, ಪಾಲು, ಫಲಾನುಭವಿಯ ಬಾಧ್ಯತೆ, ಸ್ವಾಧೀನ, ಬಿಡುಗಡೆ, ಹಕ್ಕು ತ್ಯಾಗ, ವಿಭಜನೆ, ಪವರ್ ಆಫ್ ಅಟಾರ್ನಿ, ಉಯಿಲು, ಉಯಿಲಿನ ಮೂಲಕ ನೀಡಿಕೆ, ಉತ್ತರಾಧಿಕಾರ, ಎಫ್‌ಎಸ್‌ಐ, ಅಭಿವೃದ್ಧಿಯ ಹಕ್ಕುಗಳು, ಕೌಟುಂಬಿಕ ವ್ಯವಸ್ಥೆ/ಇತ್ಯರ್ಥ, ಸ್ವಾಧೀನ, ಹಂಚಿಕೆ, ಯಾವುದೇ ನ್ಯಾಯಾಲಯದ ಆದೇಶ ಅಥವಾ ಡಿಕ್ರಿ ಅಥವಾ ನಿರ್ದೇಶನ ಅಥವಾ ಇತರ ಯಾವುದೇ ಶಾಸನ ಅಥವಾ ತೀರ್ಪು ನೀಡುವ ಅಧಿಕಾರವಿರುವ ಸಂಸ್ಥೆ ಅಥವಾ ಬೇರೆ ಯಾವುದೇ ಮಾರ್ಗ ಅಥವಾ ಇತರ ವಿಧಾನಗಳ ಮೂಲಕ ಅಥವಾ ಬೇರೆ ಯಾವುದೇ ರೀತಿಯಲ್ಲಿ ಉಲ್ಲೇಖಿತ ವಾಸಸ್ಥಳಗಳು ಅಥವಾ ಅದರ ಯಾವುದೇ ಭಾಗ ಮತ್ತು/ಅಥವಾ ಉಲ್ಲೇಖಿತ ವಾಸಸ್ಥಳಗಳಲ್ಲಿ ಮಾರಾಟವಾಗದೆ ಉಳಿದಿರುವ ಇನ್ವೆಂಟರಿ/ ಫ್ಲ್ಯಾಟ್‌ಗಲ್ಲಿನ ಮಾಲೀಕರ ಹಕ್ಕು/ ಸ್ವಾಧೀನಪತ್ರ/ ಬಾಧ್ಯತೆಗಳ ವಿರುದ್ಧ/ಅವುಗಳ ಮೇಲೆ/ ಅವುಗಳಿಗೆ ಸಂಬಂಧಿಸಿ ಯಾವುದೇ ದಾವೆ ಮತ್ತು/ ಅಥವಾ ಬೇಡಿಕೆ ಮತ್ತು/ಅಥವಾ ಆಕ್ಷೇಪಗಳನ್ನು (‘‘ದಾವೆಗಳು’’) ಹೊಂದಿರುವ ಎಲ್ಲ ವ್ಯಕ್ತಿಗಳು, ಈ ನೋಟಿಸ್ ಪ್ರಕಟಣೆಯ 14 (ಹದಿನಾಲ್ಕು) ದಿನಗಳ ಒಳಗೆ, ಎಲ್ಲ ಅಗತ್ಯ ದಾಖಲೆಗಳೊಂದಿಗೆ, ಖೈತಾನ್ - ಕಂ, ಅಡ್ವೋಕೇಟ್ಸ್ ಅಟ್ ಎಂಬಸಿ ಕ್ವೆಸ್ಟ್, 3ನೇ ಮಹಡಿ, 45/1, ಮ್ಯಾಗ್ರಥ್ ರಸ್ತೆ, ಬೆಂಗಳೂರು 560 025, ಭಾರತ ಇವರಿಗೆ ಲಿಖಿತ ರೂಪದಲ್ಲಿ ತಿಳಿಸುವುದು ಅಗತ್ಯವಾಗಿರುತ್ತದೆ ಜೊತೆಗೆ ಒಂದು ಪ್ರತಿಯನ್ನು bengaluru@khaitanco.com (ಶ್ರೀ ಸುಧೀರ್ ಮದಮ್ಮೈಯ್ಯ ಅವರ ಗಮನಕ್ಕೆ ಎಂದು ಉಲ್ಲೇಖಿಸಿ) ಇಲ್ಲಿಗೆ ಇಮೇಲ್ ಮಾಡಬೇಕು, ತಪ್ಪಿದಲ್ಲಿ ಅಂಥ ಯಾವುದೇ ದಾವೆ, ಹಕ್ಕು, ಸ್ವಾಧೀನಪತ್ರ, ಅಥವಾ ಬಾಧ್ಯತೆಗಳು ಇಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ಅದನ್ನು ವಿನಾಯಿತಿ ಅಥವಾ ಹಕ್ಕುತ್ಯಾಗ ಮತ್ತು ಅಥವಾ ಡೆವಲಪರ್‌ಗೆ ಅನ್ವಯಿಸುವುದಿಲ್ಲ ಎಂದು ಭಾವಿಸಲಾಗುತ್ತದೆ.

ಶೆಡ್ಯೂಲ್
(ಉಲ್ಲೇಖಿತ ವಾಸಸ್ಥಳಗಳ ವಿವರಣೆ)

ವಾಸಸ್ಥಳದ ಸಂಖ್ಯೆ	ಮಹಡಿ	ಸೂಪರ್ ಬಿಲ್ಟ್ ಅಪ್ ಏರಿಯಾ (ಚದರ ಅಡಿ)	ಗಡಿಗಳು			
			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ವಾಸಸ್ಥಳ ಸಂಖ್ಯೆ 72ರ ಭಾಗ	ಮೊದಲ	3850	ವಾಸಸ್ಥಳ ಸಂಖ್ಯೆ 73	ವಾಸಸ್ಥಳ ಸಂಖ್ಯೆ 71	ಖಾಲಿ ಜಾಗ	ಪ್ಯಾಸೇಜ್
ವಾಸಸ್ಥಳ ಸಂಖ್ಯೆ 76, 77, 78	ಮೊದಲ	7279	ಮೆಟ್ಟಿಲು ಮತ್ತು ಪ್ಯಾಸೇಜ್	ಖಾಲಿ ಜಾಗ	ಪ್ಯಾಸೇಜ್	ಖಾಲಿ ಜಾಗ
ವಾಸಸ್ಥಳ ಸಂಖ್ಯೆ 75	ಮೊದಲ	966	ವಾಸಸ್ಥಳ ಸಂಖ್ಯೆ 75 ರ ಉಳಿದ ಭಾಗ	ಪ್ಯಾಸೇಜ್	ಪ್ಯಾಸೇಜ್	ಖಾಲಿ ಜಾಗ
ವಾಸಸ್ಥಳ ಸಂಖ್ಯೆ 75 ರ ಭಾಗ	ಎರಡನೇ	966	ವಾಸಸ್ಥಳ ಸಂಖ್ಯೆ 75 ರ ಉಳಿದ ಭಾಗ	ಪ್ಯಾಸೇಜ್	ಪ್ಯಾಸೇಜ್	ಖಾಲಿ ಜಾಗ
ವಾಸಸ್ಥಳ ಸಂಖ್ಯೆ 68, 69, 70, 71, 72	ಎರಡನೇ	7181	ವಾಸಸ್ಥಳ ಸಂಖ್ಯೆ 73	ಮೆಟ್ಟಿಲು	ಖಾಲಿ ಜಾಗ	ಪ್ಯಾಸೇಜ್
ವಾಸಸ್ಥಳ ಸಂಖ್ಯೆ 76, 77 ಮತ್ತು 78	ಎರಡನೇ	7279	ಮೆಟ್ಟಿಲು ಮತ್ತು ಪ್ಯಾಸೇಜ್	ಖಾಲಿ ಜಾಗ	ಪ್ಯಾಸೇಜ್	ಖಾಲಿ ಜಾಗ
ವಾಸಸ್ಥಳ ಸಂಖ್ಯೆ 74 ಮತ್ತು 75	ಮೂರನೇ	4564	ಖಾಲಿ ಜಾಗ	ಪ್ಯಾಸೇಜ್	ಪ್ಯಾಸೇಜ್	ಖಾಲಿ ಜಾಗ
ವಾಸಸ್ಥಳ ಸಂಖ್ಯೆ 73	ಮೂರನೇ	3702	ಖಾಲಿ ಜಾಗ	ವಾಸಸ್ಥಳ ಸಂಖ್ಯೆ 72	ಖಾಲಿ ಜಾಗ	ಪ್ಯಾಸೇಜ್

ದಿನಾಂಕ 2021ರ ತಿಂಗಳ 11 ದಿನಾಂಕದಂದು
ಖೈತಾನ್ & ಕಂ ಪರವಾಗಿ
ಸಹಿ/-
ಸುಧೀರ್ ಮದಮ್ಮೈಯ್ಯ
ಪಾಲುದಾರರು

ಸಾರ್ವಜನಿಕ ನೋಟೀಸ್

ಜನಪ್ರಿಯ ಹನುಮ ರೆಡ್ಡಿ ಕಾಂಪ್ಲೆಕ್ಸ್ ಇಲ್ಲಿ ಇರುವ ಮತ್ತು ಹೂಡಿ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಇಲ್ಲಿನ 2 ಎಕರೆ 30 ಗುಂಟೆ ವಿಸ್ತೀರ್ಣದ ಸರ್ವೇ ನಂಬರ್ 5ರ ಜಮೀನಿನಲ್ಲಿ ನಿರ್ಮಿಸಲಾಗಿರುವ ಈ ಕೆಳಗಿನ ಶೆಡ್ಯೂಲ್‌ನಲ್ಲಿ ಹೆಚ್ಚು ವಿವರವಾಗಿ ಬರೆಯಲಾಗಿರುವ ವಾಸಸ್ಥಳಗಳಿಗೆ (‘‘ಉಲ್ಲೇಖಿತ ವಾಸಸ್ಥಳಗಳು’’) ಡಿ ನಂ. 8-2-120/86 ಮತ್ತು 8-2-120/86-1 ಕೀರ್ತಿ ಪ್ರೈಡ್ ಟವರ್ಸ್, ರೋಡ್ ನಂ. 2, ಬಂಜಾರಾ ಹಿಲ್ಸ್, ಹೈದರಾಬಾದ್ - 500034 ಇಲ್ಲಿ ನೋಂದಾಯಿತ ಕಚೇರಿ ಮತ್ತು ನಂ. 35, ಜೆ.ಎಂ. ಪ್ಲಾಜಾ, 2ನೇ ಮಹಡಿ, 2ನೇ ಮುಖ್ಯರಸ್ತೆ, ಸ್ಯಾಂಕಿ ರಸ್ತೆ, ಸದಾಶಿವನಗರ, ಬೆಂಗಳೂರು - 560080 ಇಲ್ಲಿ ಶಾಖಾ ಕಚೇರಿ ಹೊಂದಿರುವ ಜನಪ್ರಿಯ ಎಂಜಿನಿಯರ್ಸ್ ಸಿಂಡಿಕೇಟ್ ಲಿಮಿಟೆಡ್ (ಈ ಹಿಂದೆ ಎಂಜಿನಿಯರ್ಸ್ ಸಿಂಡಿಕೇಟ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (‘‘ಮಾಲೀಕರು’’) ಇವರ ಹಕ್ಕು, ಸ್ವಾಧೀನಪತ್ರ ಮತ್ತು ಬಾಧ್ಯತೆಗಳನ್ನು ನಮ್ಮ ಕಕ್ಷಿಗಾರರ ಸೂಚನೆ ಮೇರೆಗೆ ನಾವು ತನಿಖೆ ಮಾಡುತ್ತಿದ್ದೇವೆ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲು ಈ ನೋಟಿಸ್ ಜಾರಿ ಮಾಡಿದ್ದೇವೆ.

ಅಡಮಾನ, ಈಡು, ಮಾರಾಟ, ಮಾರಾಟ ಒಪ್ಪಂದ, ವರ್ಗಾವಣೆ, ನಿಯೋಜನೆ, ಭೋಗ್ಯ, ಭೋಗ್ಯದ ಒಪ್ಪಂದ, ಉಪ ಭೋಗ್ಯ, ಉಪ ಭೋಗ್ಯದ ಒಪ್ಪಂದ, ಬಾಡಿಗೆ, ಪರವಾನಗಿ, ಉಪ ಪರವಾನಗಿ, ಸ್ವಾಮ್ಯದ ಹಕ್ಕು, ಹೊಣೆ, ವಿಶ್ವಾಸ, ನಿರ್ವಹಣೆ, ಅನುಭೋಗದ ಹಕ್ಕು, ಉಡುಗೊರೆ, ಕಾನೂನು ದಾವೆಯ ಸಾರ್ವಜನಿಕ ನೋಟೀಸ್ (ಲಿಸ್-ಪೆಂಡೆನ್ಸ್), ವಿನಿಮಯ, ಪಾಲು, ಫಲಾನುಭವಿಯ ಬಾಧ್ಯತೆ, ಸ್ವಾಧೀನ, ಬಿಡುಗಡೆ, ಹಕ್ಕು ತ್ಯಾಗ, ವಿಭಜನೆ, ಪವರ್ ಆಫ್ ಅಟಾರ್ನಿ, ಉಯಿಲು, ಉಯಿಲಿನ ಮೂಲಕ ನೀಡಿಕೆ, ಉತ್ತರಾಧಿಕಾರ, ಎಫ್‌ಎಸ್‌ಐ, ಅಭಿವೃದ್ಧಿಯ ಹಕ್ಕುಗಳು, ಕೌಟುಂಬಿಕ ವ್ಯವಸ್ಥೆ/ಇತ್ಯರ್ಥ, ಸ್ವಾಧೀನ, ಹಂಚಿಕೆ, ಯಾವುದೇ ನ್ಯಾಯಾಲಯದ ಆದೇಶ ಅಥವಾ ಡಿಕ್ರಿ ಅಥವಾ ನಿರ್ದೇಶನ ಅಥವಾ ಇತರ ಯಾವುದೇ ಶಾಸನ ಅಥವಾ ತೀರ್ಪು ನೀಡುವ ಅಧಿಕಾರವಿರುವ ಸಂಸ್ಥೆ ಅಥವಾ ಬೇರೆ ಯಾವುದೇ ಮಾರ್ಗ ಅಥವಾ ಇತರ ವಿಧಾನಗಳ ಮೂಲಕ ಅಥವಾ ಬೇರೆ ಯಾವುದೇ ರೀತಿಯಲ್ಲಿ ಉಲ್ಲೇಖಿತ ವಾಸಸ್ಥಳಗಳು ಅಥವಾ ಅದರ ಯಾವುದೇ ಭಾಗ ಮತ್ತು/ಅಥವಾ ಉಲ್ಲೇಖಿತ ವಾಸಸ್ಥಳಗಳಲ್ಲಿ ಮಾರಾಟವಾಗದೆ ಉಳಿದಿರುವ ಇನ್ವೆಂಟರಿ/ ಫ್ಲ್ಯಾಟ್‌ಗಲ್ಲಿನ ಮಾಲೀಕರ ಹಕ್ಕು/ ಸ್ವಾಧೀನಪತ್ರ/ ಬಾಧ್ಯತೆಗಳ ವಿರುದ್ಧ/ಅವುಗಳ ಮೇಲೆ/ ಅವುಗಳಿಗೆ ಸಂಬಂಧಿಸಿ ಯಾವುದೇ ದಾವೆ ಮತ್ತು/ ಅಥವಾ ಬೇಡಿಕೆ ಮತ್ತು/ಅಥವಾ ಆಕ್ಷೇಪಗಳನ್ನು (‘‘ದಾವೆಗಳು’’) ಹೊಂದಿರುವ ಎಲ್ಲ ವ್ಯಕ್ತಿಗಳು, ಈ ನೋಟಿಸ್ ಪ್ರಕಟಣೆಯ 14 (ಹದಿನಾಲ್ಕು) ದಿನಗಳ ಒಳಗೆ, ಎಲ್ಲ ಅಗತ್ಯ ದಾಖಲೆಗಳೊಂದಿಗೆ, ಖೈತಾನ್ ಕಂ, ಅಡ್ವೋಕೇಟ್ಸ್ ಅಟ್ ಎಂಬಸಿ ಕ್ವೆಸ್ಟ್, 3ನೇ ಮಹಡಿ, 45/1, ಮ್ಯಾಗ್ರಥ್ ರಸ್ತೆ, ಬೆಂಗಳೂರು 560 025, ಭಾರತ ಇವರಿಗೆ ಲಿಖಿತ ರೂಪದಲ್ಲಿ ತಿಳಿಸುವುದು ಅಗತ್ಯವಾಗಿರುತ್ತದೆ ಜೊತೆಗೆ ಒಂದು ಪ್ರತಿಯನ್ನು bengaluru@khaitanco.com (ಶ್ರೀ ಸುಧೀರ್ ಮದಮ್ಮೈಯ್ಯ ಅವರ ಗಮನಕ್ಕೆ ಎಂದು ಉಲ್ಲೇಖಿಸಿ) ಇಲ್ಲಿಗೆ ಇಮೇಲ್ ಮಾಡಬೇಕು, ತಪ್ಪಿದಲ್ಲಿ ಅಂಥ ಯಾವುದೇ ದಾವೆ, ಹಕ್ಕು, ಸ್ವಾಧೀನಪತ್ರ, ಅಥವಾ ಬಾಧ್ಯತೆಗಳು ಇಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ಅದನ್ನು ವಿನಾಯಿತಿ ಅಥವಾ ಹಕ್ಕುತ್ಯಾಗ ಮತ್ತು ಅಥವಾ ಡೆವಲಪರ್‌ಗೆ ಅನ್ವಯಿಸುವುದಿಲ್ಲ ಎಂದು ಭಾವಿಸಲಾಗುತ್ತದೆ.

ಶೆಡ್ಯೂಲ್
(ಉಲ್ಲೇಖಿತ ವಾಸಸ್ಥಳಗಳ ವಿವರಣೆ)

ವಾಸಸ್ಥಳಗಳ ವಿವರಗಳು	ಯುನಿಟ್ ಸಂಖ್ಯೆ	ವಿಸ್ತೀರ್ಣ ಚದರ ಅಡಿಗಳಲ್ಲಿ (ಎಸ್‌ಬಿಎ)	ಗಡಿಗಳು			
			ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ವಾಸಸ್ಥಳ ಸಂಖ್ಯೆ 010 ಮತ್ತು 011 ಭಾಗ	ಜಿ2007 ಜಿ2008 ಜಿ2009	1103 1103 1103	ಜಿ2006 ಜಿ2007 ಜಿ2008	ಜಿ2008 ಜಿ2009 ಭೂಮಾಲೀಕರ ಯುನಿಟ್	ಜಿ2012 ಜಿ2011 ಜಿ2010	ಕಾರಿಡಾರ್ ಕಾರಿಡಾರ್ ಕಾರಿಡಾರ್
ವಾಸಸ್ಥಳ ಸಂಖ್ಯೆ 011 ಮತ್ತು 012 ಭಾಗ	ಜಿ2010 ಜಿ2011 ಜಿ2012 ಜಿ2013	1103 1103 1103 962	ಜಿ2011 ಜಿ2012 ಜಿ2013 ಕಾರಿಡಾರ್	ಭೂಮಾಲೀಕರ ಯುನಿಟ್ ಜಿ2010 ಜಿ2011 ಜಿ2012	ಕಾರಿಡಾರ್ ಕಾರಿಡಾರ್ ಕಾರಿಡಾರ್ ಕಾರಿಡಾರ್	ಜಿ2009 ಜಿ2008 ಜಿ2007 ಜಿ2006
ವಾಸಸ್ಥಳ ಸಂಖ್ಯೆ 012	ಜಿ2014 ಜಿ2015 ಜಿ2016 ಜಿ2017 ಜಿ2018	1642 678 678 678 687	ಜಿ2015 ಜಿ2016 ಜಿ2017 ಜಿ2018 ಶೌಚಾಲಯ	ಖಾಲಿ ಜಾಗ ಜಿ2014 ಜಿ2015 ಜಿ2016 ಜಿ2017	ಖಾಲಿ ಜಾಗ ಖಾಲಿ ಜಾಗ ಖಾಲಿ ಜಾಗ ಖಾಲಿ ಜಾಗ ಖಾಲಿ ಜಾಗ	ಕಾರಿಡಾರ್ ಕಾರಿಡಾರ್ ಕಾರಿಡಾರ್ ಕಾರಿಡಾರ್ ಕಾರಿಡಾರ್
ವಾಸಸ್ಥಳ ಸಂಖ್ಯೆ 013	ಜಿ2019 ಜಿ2020 ಜಿ2021 ಜಿ2022 ಜಿ2023 ಜಿ2022 ಜಿ2025 ಜಿ2026 ಜಿ2027 ಜಿ2028	985 948 948 948 948 2596 1074 1074 1074 1117	ಜಿ2020 ಜಿ2021 ಜಿ2022 ಜಿ2023 ಜಿ2022 ಭೂಮಾಲೀಕರ ಯುನಿಟ್ ಖಾಲಿ ಜಾಗ ಜಿ2025 ಜಿ2026 ಜಿ2027	ಕಾರಿಡಾರ್ ಜಿ2022 ಜಿ2020 ಜಿ2021 ಜಿ2022 ಜಿ2023 ಜಿ2026 ಜಿ2027 ಜಿ2028 ಸರ್ವೀಸ್ ರೂಮ್	ಭೂಮಾಲೀಕರ ಯುನಿಟ್ ಭೂಮಾಲೀಕರ ಯುನಿಟ್ ಭೂಮಾಲೀಕರ ಯುನಿಟ್ ಭೂಮಾಲೀಕರ ಯುನಿಟ್ ಭೂಮಾಲೀಕರ ಯುನಿಟ್ ಭೂಮಾಲೀಕರ ಯುನಿಟ್ ಕಾರಿಡಾರ್ ಕಾರಿಡಾರ್ ಕಾರಿಡಾರ್ ಕಾರಿಡಾರ್	ಕಾರಿಡಾರ್ ಕಾರಿಡಾರ್ ಕಾರಿಡಾರ್ ಕಾರಿಡಾರ್ ಕಾರಿಡಾರ್ ಕಾರಿಡಾರ್ ಖಾಲಿ ಜಾಗ ಖಾಲಿ ಜಾಗ ಖಾಲಿ ಜಾಗ ಖಾಲಿ ಜಾಗ
ವಾಸಸ್ಥಳ ಸಂಖ್ಯೆ 110 ಮತ್ತು 111 ಭಾಗ	ಎಫ್ 2108 ಎಫ್ 2109	1103 1103	ಎಫ್ 2107 ಎಫ್ 2108	ಎಫ್ 2109 ಭೂಮಾಲೀಕರ ಯುನಿಟ್	ಎಫ್ 2111 ಎಫ್ 2110	ಕಾರಿಡಾರ್ ಕಾರಿಡಾರ್
ವಾಸಸ್ಥಳ ಸಂಖ್ಯೆ 111 ಮತ್ತು 112 ಭಾಗ	ಎಫ್ 2110 ಎಫ್ 2112 ಎಫ್ 2113	1103 1103 962	ಎಫ್ 2111 ಎಫ್ 2113 ಕಾರಿಡಾರ್	ಭೂಮಾಲೀಕರ ಯುನಿಟ್ ಎಫ್ 2111 ಎಫ್ 2112	ಎಫ್ 2111 ಎಫ್ 2110 ಕಾರಿಡಾರ್	ಎಫ್ 2109 ಎಫ್ 2107 ಎಫ್ 2106
ವಾಸಸ್ಥಳ ಸಂಖ್ಯೆ 112 ಭಾಗ	ಎಫ್ 2114	2158	ಎಫ್ 2115	ಖಾಲಿ ಜಾಗ	ಖಾಲಿ ಜಾಗ	ಕಾರಿಡಾರ್
ವಾಸಸ್ಥಳ ಸಂಖ್ಯೆ 114 ಭಾಗ	ಎಫ್ 2119 ಎಫ್ 2121 ಎಫ್ 2124 ಎಫ್ 2125 ಎಫ್ 2126 ಎಫ್ 2127 ಎಫ್ 2128	964 810 810 1258 1258 1258 2413	ಎಫ್ 2120 ಎಫ್ 2122 ಭೂಮಾಲೀಕರ ಯುನಿಟ್ ಭೂಮಾಲೀಕರ ಯುನಿಟ್ ಎಫ್ 2125 ಎಫ್ 2126 ಎಫ್ 2127	ಶೌಚಾಲಯ ಎಫ್ 2120 ಎಫ್ 2123 ಎಫ್ 2126 ಎಫ್ 2127 ಎಫ್ 2128 ಕಾರಿಡಾರ್	ಖಾಲಿ ಜಾಗ ಖಾಲಿ ಜಾಗ ಖಾಲಿ ಜಾಗ ಕಾರಿಡಾರ್ ಕಾರಿಡಾರ್ ಕಾರಿಡಾರ್ ಕಾರಿಡಾರ್	ಕಾರಿಡಾರ್ ಕಾರಿಡಾರ್ ಕಾರಿಡಾರ್ ಭೂಮಾಲೀಕರ ಯುನಿಟ್ ಭೂಮಾಲೀಕರ ಯುನಿಟ್ ಭೂಮಾಲೀಕರ ಯುನಿಟ್ ಭೂಮಾಲೀಕರ ಯುನಿಟ್
ವಾಸಸ್ಥಳ ಸಂಖ್ಯೆ 211 & 212 ಭಾಗ	ಎಫ್ 2210	1103	ಎಫ್ 2211	ಭೂಮಾಲೀಕರ ಯುನಿಟ್	ಕಾರಿಡಾರ್	ಎಸ್ 2209
ವಾಸಸ್ಥಳ ಸಂಖ್ಯೆ 212 ಭಾಗ	ಎಸ್ 2214 ಎಸ್ 2219	2158 964	ಎಸ್ 2215 ಎಸ್ 2220	ಖಾಲಿ ಜಾಗ ಶೌಚಾಲಯ	ಖಾಲಿ ಜಾಗ ಖಾಲಿ ಜಾಗ	ಕಾರಿಡಾರ್ ಕಾರಿಡಾರ್
ವಾಸಸ್ಥಳ ಸಂಖ್ಯೆ 214 ಭಾಗ	ಎಸ್ 2218	821	ಶೌಚಾಲಯ	ಎಸ್ 2217	ಖಾಲಿ ಜಾಗ	ಕಾರಿಡಾರ್
ವಾಸಸ್ಥಳ ಸಂಖ್ಯೆ 312 ಭಾಗ	ಟಿ2318	821	ಶೌಚಾಲಯ	ಟಿ2317	ಖಾಲಿ ಜಾಗ	ಕಾರಿಡಾರ್

ದಿನಾಂಕ 2021ರ ಮಾರ್ಚ್ ತಿಂಗಳ 11 ದಿನಾಂಕದಂದು
ಖೈತಾನ್ ಕಂ ಪರವಾಗಿ
ಸಹಿ/-
(ಸುಧೀರ್ ಮದಮ್ಮೈಯ್ಯ)
ಪಾಲುದಾರರು

ಷೆಡ್ಯೂಲ್ ಫಾರಂ–ಎ
ಸಾರ್ವಜನಿಕ ಘೋಷಣೆ
(ಭಾರತೀಯ ಇನ್ಸಾಲ್ವನ್ಸಿ ಮತ್ತು ಬ್ಯಾಂಕ್‌ರಪ್ಸಿ ಮಂಡಳಿಯ (ವಾಲಂಟರಿ ಲಿಕ್ವಿಡೇಶನ್ ಪ್ರಾಸೆಸ್) ನಿಯಮಾವಳಿಗಳು, 2017ರ ನಿಯಮಾವಳಿ 14)
ಕ್ಲಿಕ್‌ಆರ್ ಟೆಕ್ನಾಲಜೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ಪಾಲುದಾರರ ಗಮನಕ್ಕೆ

1.	ಕಾರ್ಪೊರೇಟ್ ವ್ಯಕ್ತಿಯ ಹೆಸರು	**ಕ್ಲಿಕ್‌ಆರ್ ಟೆಕ್ನಾಲಜೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್**
2.	ಕಾರ್ಪೊರೇಟ್ ವ್ಯಕ್ತಿಯ ಇನ್ಕಾರ್ಪೊರೇಶನ್ ದಿನಾಂಕ	28/01/2013
3.	ಕಾರ್ಪೊರೇಟ್ ವ್ಯಕ್ತಿಯು ಇನ್ಕಾರ್ಪೊರೇಶನ್/ನೊಂದಣಿ ಪಡೆದುಕೊಂಡಿರುವ ಪ್ರಾಧಿಕಾರ	ಕಂಪನಿಗಳ ರಿಜಿಸ್ಟ್ರಾರ್, ಕರ್ನಾಟಕ ಹಳೆಯ ಕಂಪನಿಗಳ ಕಾಯ್ದೆ, 1956ರ ಅಡಿಯಲ್ಲಿ
4.	ಕಾರ್ಪೊರೇಟ್ ವ್ಯಕ್ತಿಯ ಕಾರ್ಪೊರೇಟ್ ಐಡೆಂಟಿಟಿ ನಂಬರ್/ ಲಿಮಿಟೆಡ್ ಲೈಯೆಬಿಲಿಟಿ ಐಡಿಂಟಿಟಿ ನಂಬರ್	U72200KA2013PTC067663
5.	ಕಾರ್ಪೊರೇಟ್ ವ್ಯಕ್ತಿಯ ನೊಂದಾಯಿತ ಕಚೇರಿ ಮತ್ತು ಪ್ರಧಾನ ಕಚೇರಿ (ಯಾವುದಾದರು ಇದ್ದಲ್ಲಿ) ವಿಳಾಸ	2ನೇ ಮಹಡಿ, ಬ್ರಿಗೇಡ್ ಸೌಥ್ ಪರೇಡ್, ನಂ. 10, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, ಕರ್ನಾಟಕ, 560001
6.	ಕಾರ್ಪೊರೇಟ್ ವ್ಯಕ್ತಿಯ ಲಿಕ್ವಿಡೇಶನ್‌ನ ಆರಂಭಿಕ ದಿನಾಂಕ	08ನೇ ಮಾರ್ಚ್ 2021
7.	ಲಿಕ್ವಿಡೇಟರ್‌ವರ ಹೆಸರು, ವಿಳಾಸ, ಇಮೇಲ್ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನೊಂದಣಿ ಸಂಖ್ಯೆ	ವಿ. ಶಂಕರ್, Email:1981shanky@gmail.com, ವಿಳಾಸ: 303, ಬ್ಲಾಕ್-ಎ, ಲೆಜೆಂಡ್ ಕಮರ್ಷಿಯಲ್ ಕಾಂಪ್ಲೆಕ್ಸ್, 3-4-770 & 136, ಐಸಿಐಸಿಐ ಬ್ಯಾಂಕ್ ಎದುರು, ಕೇಶವ ಮೆಡಿಕಲ್ಸ್ ಮೇಲೆ, ಬರ್ಕತ್‌ಪುರ, ಹೈದರಾಬಾದ್-27. ಐಬಿಬಿಐ ರೆಜಿ: ಐಬಿಬಿಐ/ಐಪಿಎ-002/ ಐಪಿ-ಎನ್00145/2017-18/10436
8.	ಕ್ಲೇಮ್‌ಗಳನ್ನು ಸಲ್ಲಿಸುವ ಅಂತಿಮ ದಿನಾಂಕ	07ನೇ ಏಪ್ರಿಲ್ 2021, 5-00 ಪಿ.ಎಂ (ಐಎಸ್‌ಟಿ)

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, **ಕ್ಲಿಕ್‌ಆರ್ ಟೆಕ್ನಾಲಜೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್** ಕಂಪನಿಯು 8ನೇ ಮಾರ್ಚ್, 2021 ರಂದು ವಾಲಂಟರಿ ಲಿಕ್ವಿಡೇಶನ್ ಆರಂಭಿಸಿರುತ್ತದೆ. **ಕ್ಲಿಕ್‌ಆರ್ ಟೆಕ್ನಾಲಜೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್**‌ನ ಪಾಲುದಾರರು, ಮೇಲೆ ಕಾಲಂ ನಂ.7 ರಲ್ಲಿ ಉಲ್ಲೇಖಿಸಲಾಗಿರುವ ಲಿಕ್ವಿಡೇಟರ್‌ರವರ ವಿಳಾಸಕ್ಕೆ 7ನೇ ಏಪ್ರಿಲ್, 2021 ರಂದು ಸಂಜೆ 5:00 (ಐಎಸ್‌ಟಿ) ಗಂಟೆಯೊಳಗೆ ತಮ್ಮ ಕ್ಲೇಮ್ ಗಳನ್ನು ಪುರಾವೆ ಸಮೇತ ಸಲ್ಲಿಸಬೇಕೆಂದು ಕರೆ ನೀಡಲಾಗಿದೆ. ಫೈನಾನ್ಷಿಯಲ್ ಕ್ರೆಡಿಟರ್‌ಗಳು ತಮ್ಮ ಕ್ಲೇಮ್ ಪುರಾವೆಗಳನ್ನು ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಸಲ್ಲಿಸಬಹುದಾಗಿರುತ್ತದೆ. ಇನ್ನಿತರ ಎಲ್ಲಾ ಪಾಲುದಾರರು ಖುದ್ದಾಗಿಯಾಗಲಿ, ಅಂಚೆ ಮೂಲಕವಾಗಲಿ ಅಥವಾ ವಿದ್ಯುನ್ಮಾನ ವಿಧಾನದಲ್ಲಾಗಲಿ ತಮ್ಮ ಕ್ಲೇಮ್ ಪುರಾವೆಗಳನ್ನು ಸಲ್ಲಿಸಬಹುದಾಗಿರುತ್ತದೆ. ಸುಳ್ಳು ಅಥವಾ ದಾರಿ ತಪ್ಪಿಸುವ ಕ್ಲೇಮ್‌ಗಳು ಸಲ್ಲಿಕೆಯಾದಲ್ಲಿ ಜುಲ್ಮಾನೆ ಎದುರಿಸಬೇಕಾಗುತ್ತದೆ.

ದಿನಾಂಕ: 09.03.2021
ಸ್ಥಳ: ಹೈದರಾಬಾದ್
ಲಿಕ್ವಿಡೇಟರ್‌ರವರ ಹೆಸರು ಮತ್ತು ಸಹಿ: ವಿ. ಶಂಕರ್.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ರಾಯ ರಾಯ ಭಟ್ಟ ಮತ್ತು ಸಮೂಹ ದೇವಾಲಯಗಳು ಪಂಪ ಮಹಾಕವಿ ರಸ್ತೆ, ಬೆಂಗಳೂರು–560004. ದೂರವಾಣಿ ಸಂಖ್ಯೆ :080–26506666

ಸಂಖ್ಯೆ:ರಾ.ರಾ.ಭ/ಸಿಆರ್:158/2020–21 ದಿನಾಂಕ:05.03.2021

ಪ್ರಕಟಣೆ

ಬೆಂಗಳೂರು ನಗರ ತಿಗಳರಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಾಲಯದಲ್ಲಿ ಖಾಲಿ ಇರುವ ಸರದಿ ಅರ್ಚಕರ ಹುದ್ದೆಯು ಸರ್ಕಾರದ ಆದೇಶ ಸಂಖ್ಯೆ: ಕಂಇ 120 ಮುಸೇವಿ 2017 ದಿನಾಂಕ: 09.04.2018ರ ಆದೇಶದಂತೆ ಸಿಬ್ಬಂದಿ ಮಾದರಿಯಲ್ಲಿ ಅನುಮೋದನೆಗೊಂಡಿದ್ದು, ಈ ಹುದ್ದೆಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಾವಳಿಗಳು 2002ರ ನಿಯಮ 12ರನ್ವಯ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ. ಅಭ್ಯರ್ಥಿಗಳು **ದಿನಾಂಕ: 20.03.2021ರ ಸಂಜೆ 5.00 ಗಂಟೆಯೊಳಗೆ** ಲಿಖಿತ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ : 080–26506666.

ಸಹಿ/–
ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ರಾಯ ರಾಯ ಭಟ್ಟ ಮತ್ತು ಸಮೂಹ ದೇವಾಲಯಗಳು, ಪಂಪಮಹಾಕವಿ ರಸ್ತೆ, ಬೆಂಗಳೂರು–04

ಕೋವಿಡ್–19 ಲಕ್ಷಣಗಳು ಇದೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BEAUTY & HEALTH

Health Clinic

HEALING HEALTH wealth relationship company visit www.universalnatureorganization.com and visit www.shivaghorishakti.com in Hindi/ English/ kannada/ Tamil. call: 9342830888.

BUSINESS

Business to Business

Finance

NRI'S INVESTMENT AND FINANCE AVAILABLE ON LOW-INTEREST AGAINST PROPERTIES,LAND, BUILDINGS SITES,FLATS, BUSINESSES ALSO AYUSH, MEDICAL HOSPITALS. CALL -7411265189

Business Offers

Dealers And Stockists

DEALERS REQUIRED all over Karnataka for Electric Cycles and Geared 3 Wheeler, developed by IIT'ian Madras. Contact: 97404 49955

General

OPPORTUNITIES TO Setup (Food Truck Shop /Tea-Coffee) in Corporate's /Tech Parks more details Kindly Contact: 6366226526.

PERSONAL

Change of Name

CHANGE OF NAME
I, Rashmi Joshi D/o Rajendra Joshi R/at. # Flat No.102, Door No.1, 'A' Street, Parappa Field, Neelasandra, Blr-47, have embraced Islam & changed my name to RIMSHA JOSHI vide affidavit dated 09/03/2021 before Notary Prasad Shetty. K. B., Bangalore

RAJESWARI M/O 14846233X- SEP/MT-DWARAPUDI SATEESH R/a Pedaboddepalli, Narsipatnam, Vishakapatnam, Andhra Pradesh changed name from RAJESWARI to DWARAPUDI RAJESWARI notary KV Mani Bangalore.

I, SUNIMOL ZACHARIAH, W/o. Zachariah Mathai, R/a: Kidangannur, Kurichumuttom, Kozhencherry, Pathanamthitta, Kerala-689532, have changed my name from SUNIMOL MATHAI to SUNIMOL ZACHARIAH vide affidavit dated 09/03/2021 before notary Harisha. G, Bangalore.

I, RENEE JOSEPH residing at 306, Veeranna Palya, Bangalore-560045 have changed my name to REBECCA RENEE JOSEPH vide affidavit dated 09/03/2021 sworn before notary K.A.Appanna, Bangalore.

I, UTTAM CHAND BALCHAND R/at #426, 7th B main road, 4th Block, Jayanagar, Blr-11, have changed my name to UTTAM KUMAR vide affidavit 10/03/2021 before notary H.S.Sakalesh Aradhya, Bangalore.

I, SHIKHA UTTAM CHOWHAN R/at #426, 7th B main road, 4th Block, Jayanagar, Blr-11, have changed my name to SHIKHA CHOWHAN vide affidavit 10/03/2021 before notary H.S. Sakalesh Aradhya, Bangalore.

DH Classifieds
BOOK YOUR AD on SATURDAY & GET 50% OFF ON SUNDAY
For more information contact:
9880856233
9731810277 | 9901641752
9845114560 | 9886213331
*condition apply

CONNECT

Entry Free..!
FALCON EVENTS Presents
ಚಿತ್ತಾರ CHITTARA
Art, Craft & Handloom Exhibition
(Pre - Ugadi Shopping Carnival)
04th - 14th March 2021 | 11 AM - 07 PM Timings
Venue: Karnataka Chitrakala Parishath, Kumara Krupa Road Bangalore-01
Contact for More Details: 9611835597 / 9036658774
Your Safety is our Priority, Covid19 Safety & Precautions in place as per Govt protocol
Visit & Shop For: 100+ Shopping Stalls | Live Performance & Much More!
Home Decors | Handmade Paintings | Lampshades | Ceramic Pots | Handlooms & Handicrafts | Curtains | Carpets | Mats | Bags | Khadi Kurtas | Silks Saree | Sarees | Designer Kurtis | Bandhani Bedsheets | Designer Jewelry | Handmade Jewelry | Toys | Pots & Much more...

Lost

I, LIKHITH CHANDRA would like to inform that i have misplaced my original 10th class mark sheet of year 2018 Enrollment No.4053451 issued by C.B.S.E. If found please contact: 9535318828

LOST
Govindaraju, S/o Late Mudalappa, Rayan Nagara Nelamangala, lost my Mother deed (Hakku Patra) of Khane Shumari No.1554/5,1485/5 located at Rayan Nagara, Nelamangala, Bengaluru Rural. **Finders may contact M: 9611962347 or near by Police Station.**

PUBLIC NOTICE

PUBLIC NOTICE
BHARAT PETROLEUM CORPORATION LIMITED (BPCL),
a company in corporate under the Indian companies act 1913 is intending to take on lease the vacant land in Sy No. 68 area 10000 Sft out of 2 acres 0.55 guntas from its owner Mrs Muniyamma W/o Niraganti Budagappa located at survey no 68 Gulimangala village, Sarjapura hobali, Anekal taluk, Bengaluru urban district bounded on the East : Vacant land. West: Vacant land. North: Gulimangala main road. South: Vacant land. for a period of 19 years 11 months. If any person or entity (organized or un organized) other than Mrs Muniyamma W/o Niraganti Budagappa is having any right or claim in any manner over the said property the same may be intimated to BPCL in the following address.
For Bharat Petroleum Corporation Limited
Territory Manager (Retail), Bangalore
7th Floor, Du Parc Trinity, 17th Off. M G Road, Bangalore - 560 001 Karnataka

Bunts' Sangha RNS Vidyaniketan
No.324, Bunts' Sangha Complex, Chord Road Vijayanagar, Bengaluru-560 040
Telephone:080-23398922
E-mail: info@bsrnsv.com
TENDER NOTIFICATION
Invites EOI from the suppliers having sound financial Capacity for the School Text Books & Note Books
Interested parties may collect Tender Document From the office and submit the same along with the Quotations to the office within 15 days from the date of this release.
Convenor Chairman

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34. Ph:080-2553 4194
TENDER NOTICE
Sealed Tenders are invited from reputed firms for the supply of
Lab Equipments to **Vemana Institute of Physiotherapy**
For more details vist: **www.reddyjanasangha.org**
Quotations should be submitted to the General Secretary at the above address within 10 days.

EDUCATIONAL

Tuitions

HOME TUITION offered from April 1st week for Biology- 8th/9th/1st & 2nd PUC by lady lecturer with 12years of teaching experience in PU colleges and high school residing at Vijaynagar. Interested members contact Mob:9916601417.

JOB OPPORTUNITIES

Manager

GOLDEN INCOME Opportunity for Businessmen, Retired/ VRS/ NRI from any organization with a leading Corporate on 13/03/2021@ 4pm, Leela Palace Old Airport road. 8105785967.

REAL ESTATE SELLING

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Old Airport Road

OUTRIGHT SALE Vimanapura unfinished flats 4 floors site 4100sqft A khatha plan approved 9845145340

Sites

Hosur Road

APPROX. ONE Acre Industrial Land for Sale. Power, Water available. Papers upto date. Ideal for Pharma aswell. Brokers Excuse. Contact: 9620938350/ 9342825263.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PUBLIC NOTICE
Public are hereby inform you that my client **M/s DS-Max Properties Pvt. Ltd.**, rep; by its Authorized Signatory, **Mr. Shivashankar Chikkeri**, having its office at # 1854, 17th Main, 30th 'B' Cross, HBR Layout, 1st stage, 5th Block, Bangalore - 560 043, intend to enter into a **Joint Development Agreement** with **Smt. Savithramma** w/o. Sri. Shivalingaiah is the absolute owner of converted land property bearing **Sy. No.134/3**, which measuring a portion of **1 acre 32 guntas**, out of **2 acres 06 guntas**, situated at **Begur Village**, Begur Hobli, Bangalore South Taluk, in vide; Conversion Order dated **31/10/2008**, in vide; Order No. **ALN:SR:(S):153/2007-08**, for residential use, issued by Special Deputy Commissioner, Bangalore District of schedule property of **Item No. I**
and whereas **Sri. Srinivas Reddy** s/o late Doddanarayana Reddy is the absolute owner of converted land property bearing **Sy. No. 130**, which measuring a portion of **2 Acres 14 Guntas**, out of **2 Acres 24 Guntas**, situated at **Begur Village**, Begur Hobli, Bangalore South Taluk, in vide; Conversion Order dated **11/11/2008**, in vide; Order No. **ALN:SR:(S):164/2006-07**, for residential use, issued by Special Deputy Commissioner, Bangalore District of schedule property of **Item No. II**
and whereas **Sri. Arun Kumar** s/o late B. Nagaraju and late Girija is the present absolute owner of converted land property bearing **Sy. No. 127/1**, which measuring a portion of **2 Acres 15 Guntas**, out of **2 Acres 18 Guntas**, situated at **Begur Village**, Begur Hobli, Bangalore South Taluk, in vide; Conversion Order dated **31/10/2008**, in vide; Order No. **ALN:SR:(S):201/2007-08**, for residential use, issued by Special Deputy Commissioner, Bangalore District of schedule property of **Item No. III**,
which total measuring of **Item No. I, II & III = 6 acres 21 guntas** and referred to as **“Composite Schedule Property”** and bounded on

East by : Private Property,
West by : Road,
North by : Land in Sy. No. 149/12,
South by : Land of Sy. No. 128/1, 2, 3, 4 & 5.

Any person or Any Authority or Any Agreement Holders having any asserting right, title, interest and claims to oppose for Joint Development of the composite schedule property and may having any manner of right, title, claims over the said property and may lodge their objections along with relevant supporting papers of their claims whatsoever to the below address within **7** days from the date of this notice, if any objections/complaints fails to comply and my client shall take further steps for entering into a regd Joint Development Agreement of above said property.

LINGARAJ. S. NADA GOUDA., ADVOCATE
#1854, 17th Main, 30th 'B' Cross
HBR Layout, 1st Stage, 5th Block,
Bangalore - 560 043.
Mob : 96204 74780 , 94481 35970

PUBLIC NOTICE
The General public are hereby notified that, my clients have agreed to purchase the Schedule property from its Owner: **SRI. NAGESH .A S/o late B. Andanappa**, residing at No.1, 'Harsha' Sri Byraveshwara Nilaya, Chananayakanapalya, Nagasandra Post, Yeshwanthapura Hobli, Bengaluru North Taluk- 560 073.
Apart from the said owner, if any other person/s have any manner of right, title and or interest or claim or charge or lien over the Schedule property or otherwise have any lawful objection/s for this sale transaction, they are hereby called upon to file their objection/s in writing, along with the photocopies of documents on which they rely, with the undersigned, **within 14 days** from the date of publication of this notice. Objection/s received thereafter will not be binding on my clients.

SCHEDULE
All that piece and parcel of the dry land **bearing Sy.No.87** measuring **1 (One) Acre 39 (Thirty nine) Guntas** and 3 Guntas of Kharab land, situated at **Doddakarenahalli Village**, Kasaba Hobli, Nelamangala Taluk and bounded as follows:
East by : Land bearing Sy.No.88
West by : Land bearing Sy.No.38 & 29
North by : Land bearing Sy.No.93
South by : National Highway.

Sd/- Goutam Chand S.F,
Advocate
Goutam Associates
No.60, 2nd Floor, Kanakapura Road,
Basavanagudi, Bangalore – 560 004.

ನಗರಸಭಾ ಕಾರ್ಯಾಲಯ, ರಾಮನಗರ
ರಾಮನಗರ ಜಿಲ್ಲೆ–562159. ದೂರವಾಣಿ: 080–27271286
ಹೆಲ್ಪ್‌ಲೈನ್ ನಂ.: 080–27276070, ವೆಬ್‌ಸೈಟ್: www.ramanagaracity.mrc.gov.in
ಇ–ಮೇಲ್: itstaff_ulb_ramanagaram@yahoo.com
ನಂ.: ನಸರಾ/ಆ.ಶಾ/ಘ.ವನಿ/ಟೆಂಡರ್/ಸಿಆರ್/ಹೆ.ವ್ಯಾ/64/2020–21 ದಿನಾಂಕ: 09.03.2021

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಮುಖಾಂತರ 2018–19ನೇ ಸಾಲಿನ ಶೇ.24.10 ಎನ್.ಎಫ್.ಸಿ ಮುಕ್ತ ನಿಧಿ ಅನುದಾನದಲ್ಲಿ ಟೆಂಡರ್ ಆಹ್ವಾನಿಸಿದ್ದು, ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ನರ್ಸಿಂಗ್‌ಹೋಂ/ಕ್ಲಿನಿಕ್ಸ್.ಆಸ್ಪತ್ರೆ/ಡಯಾಗ್ನೋಸ್ಟಿಕ್ ಸೆಂಟರ್ಸ್‌ರವರು ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಭಾಗವಹಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಚೇರಿಯ ಆರೋಗ್ಯ ಶಾಖೆಯಿಂದ ಪಡೆಯಬಹುದು.

ಕಾಮಗಾರಿ ವಿವರ: **ನಗರಸಭೆಯ ಘನತ್ಯಾಜ್ಯ ನಿರ್ವಹಣೆಯ ಎಲ್ಲಾ ಪೌರಕಾರ್ಮಿಕರು ಮತ್ತು ಕುಟುಂಬ ವರ್ಗದವರಿಗೆ ಹಾಗೂ ಇತರೆ ಸ್ವಚ್ಛತಾ ಸಿಬ್ಬಂದಿಗಳಿಗೆ ಹೆಪಟೈಟಿಸ್–ಬಿ ವ್ಯಾಕ್ಸಿನ್ ನೀಡುವುದು. ಅಂದಾಜು ಮೊತ್ತ: ರೂ. 1.24 ಲಕ್ಷ.**

ಟೆಂಡರ್ ಶೆಡ್ಯೂಲ್ ದಿನಾಂಕ: (1) ಅರ್ಜಿ ಸಲ್ಲಿಸಿ ಟೆಂಡರ್ ದಸ್ತಾವೇಜು ಪಡೆಯಲು ಕೊನೆಯ ದಿನಾಂಕ: 23.03.2021 ರಿಂದ 4.30 ಗಂಟೆಯವರೆಗೆ.
(2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.03.2021ರ ಸಂಜೆ 4.30 ಗಂಟೆಗೆ.
(3) ಟೆಂಡರ್ ತೆರೆಯುವ ದಿನಾಂಕ: 25.03.2021ರ ಸಂಜೆ 4.00 ಗಂಟೆಗೆ.

ಸಹಿ/– ಆಡಳಿತಾಧಿಕಾರಿಗಳು ನಗರಸಭೆ, ರಾಮನಗರ
ಸಹಿ/– ಪೌರಾಯುಕ್ತರು ನಗರಸಭೆ, ರಾಮನಗರ
ಹಿಸನಿ/ವಾಪಸಸಂಇ/ರಾನ/516/ಯಕ್ಷಿ/2020–21

‘ಸಿ.ಡಿ. ತಯಾರಿ: ಕಾಂಗ್ರೆಸ್ ಪಿತೂರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮ್ಮಿಶ್ರ ಸರ್ಕಾರ’ದ ಪತನಕ್ಕೆ ಕಾರಣರಾದವರ ರಾಜಕೀಯ ಜೀವನ ಮುಗಿಸಲು ಕಾಂಗ್ರೆಸ್ ಪಿತೂರಿ ಮಾಡಿದ್ದು, ಅದರ ಭಾಗವಾಗಿಯೇ ರಮೇಶ ಜಾರಕಿಹೊಳಿ ಅವರ ತೇಜೋವಧೆಯ ಸಿ.ಡಿ ಬಿಡುಗಡೆ ಆಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ದೂರಿದರು.

‘ನಕಲಿ ಸಿ.ಡಿ ತಯಾರಿಸಿರುವುದು ನೂರಕ್ಕೆ ನೂರಷ್ಟು ಆ ಪಕ್ಷದಲ್ಲಿರುವ ಕೆಲವು ಮನೆಹಾಳ ನಾಯಕರು’ ಎಂದು ಹೇಳಿದ ಅವರು, ‘20 ವರ್ಷಗಳಿಗೂ ಹೆಚ್ಚು ಕಾಲ ಕಾಂಗ್ರೆಸ್‌ನಲ್ಲಿದ್ದ ನನಗೆ ಆ ಪಕ್ಷದ ಮಹಾನ್ ನಾಯಕರ ನೈತಿಕತೆ–ಅನೈತಿಕತೆಯ ಬಗ್ಗೆ ಸಾಕಷ್ಟು ಮಾಹಿತಿ ನನ್ನ ಬಳಿಯೂ ಇದೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಪ್ರಕರಣದ ಬಗ್ಗೆ ಸಿಬಿಐ ತನಿಖೆ ಆಗಬೇಕು. ಇದರಿಂದ ಪಿತೂರಿಕೋರರು ಯಾರೆಂಬುದು ಬಯಲಿಗೆ ಬರುತ್ತದೆ. ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಬಿರುಕು ಬಿಡಲು ಮೂಲ ಕಾರಣವೇ ಅನೈತಿಕತೆ. ಅದು ಆ ಮಹಾನ್ ನಾಯಕರಿಗೂ ಗೊತ್ತಿದೆ. ಈಗ ದೊಡ್ಡದಾಗಿ ನೈತಿಕ–ಅನೈತಿಕತೆ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಅವರು ಮಾರ್ಮಿಕವಾಗಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

‘ಬಾಂಬೆಟೀಮ್’ ಟಾರ್ಗೆಟ್ ಮಾಡುತ್ತಾರೆ ಎಂಬ ಮಾಹಿತಿ ಮೊದಲೇ ನಮಗೆ ಗೊತ್ತಿತ್ತು. ಬಿಜೆಪಿ ಸರ್ಕಾರದಲ್ಲಿ ಸಚಿವರಾದವರನ್ನೇ ರಾಜಕೀಯವಾಗಿ ಮುಗಿಸುವುದು ಅವರ ಉದ್ದೇಶ. ಹೀಗಾಗಿ ಸಚಿವರನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ. ಧೈರ್ಯವಿದ್ದರೆ ರಾಜಕೀಯವಾಗಿ ಎದುರಿಸಬೇಕು. ಅದಕ್ಕೆ ನಾವೂ ಸಿದ್ಧ. ಇಂತಹ ಮನೆಹಾಳು ಕುತಂತ್ರಗಳನ್ನು ಮಾಡುವುದಲ್ಲ’ ಎಂದು ತರಾಟೆಗೆ ತೆಗೆದುಕೊಂಡರು.

ಸೆಸ್ ದರ ಕಡಿಮೆ ಮಾಡಿದ್ದರಿಂದ ಸಂಗ್ರಹ ಪ್ರಮಾಣ ಕುಸಿತ: ಎಸ್.ಟಿ.ಸೋಮಶೇಖರ್

‘ಎಪಿಎಂಸಿ ವಹಿವಾಟು ಕುಸಿದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡಿದ ನಂತರ ಎಪಿಎಂಸಿಗಳಲ್ಲಿ ವಹಿವಾಟು ಕುಸಿತವಾಗಿಲ್ಲ. ಆದರೆ, ಮಾರುಕಟ್ಟೆ ಶುಲ್ಕ (ಸೆಸ್) ಸಂಗ್ರಹದ ಪ್ರಮಾಣ ಕುಸಿದಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಎಪಿಎಂಸಿಗಳಲ್ಲಿ ವಹಿವಾಟು ಕಡಿಮೆ ಆಗಿದೆ ಎಂಬುದರಲ್ಲಿ ಹುರುಳಿಲ್ಲ. ಸೆಸ್ ಪ್ರಮಾಣವನ್ನು ಕಡಿಮೆ ಮಾಡಿದ್ದರಿಂದ ಆದಾಯವೂ ಕಡಿಮೆ ಆಗಿದೆ. ವಿಚಕ್ಷಣ ದಳವನ್ನು ರದ್ದು ಮಾಡಿದ್ದರಿಂದ, ಅದರಿಂದ ಬರುತ್ತಿದ್ದ ಆದಾಯ ಕೂಡಾ ನಿಂತು ಹೋಗಿದೆ’ ಎಂದು ತಿಳಿಸಿದರು.

ಎಪಿಎಂಸಿ ಮಾರುಕಟ್ಟೆ ಶುಲ್ಕ (ಸೆಸ್) ರದ್ದು ಮಾಡುವುದಿಲ್ಲ. ಅದರ ಪ್ರಮಾಣವನ್ನು ಕಡಿಮೆ ಮಾಡಿದ್ದೇವೆ. ಹಿಂದೆ ಅದು ಶೇ 1.5 ಇತ್ತು ಅದನ್ನು ಶೇ 0.60 ಕ್ಕೆ ಇಳಿಸಲಾಗಿದೆ. ಇದರಿಂದ ರೈತರ ಹೊರೆ ಕಡಿಮೆ ಆಗುತ್ತದೆ ಎಂದು ಸೋಮಶೇಖರ್ ತಿಳಿಸಿದರು.

ಕೊಬ್ಬರಿ ಮಾರುಕಟ್ಟೆ, ಮೆಣಸಿನ ಮಾರುಕಟ್ಟೆ ಸೇರಿ ಎಲ್ಲ ರೀತಿಯ ಎಪಿಎಂಸಿ ಮಾರುಕಟ್ಟೆಗಳಲ್ಲಿ ವಹಿವಾಟು ಮೊದಲಿನಂತೆಯೇ ಇದೆ. ಈಗ ರೈತರು ತಮ್ಮ ಉತ್ಪನ್ನಗಳನ್ನು ಉತ್ತಮ ಬೆಲೆ ಎಲ್ಲಿ ಸಿಗುತ್ತದೆಯೋ ಅಲ್ಲಿ ಮಾರಾಟ ಮಾಡಬಹುದಾಗಿದೆ. ಮಾರುಕಟ್ಟೆಯಿಂದ ಹೊರಗೆ ಮಾರಿದಾಗ ಅವರು ಸೆಸ್ ಪಾವತಿಸಬೇಕಾಗಿಲ್ಲ ಎಂದರು.

ಸೋಮಶೇಖರ್

ಆನೇಕಲ್‌ನಲ್ಲಿ 42 ಎಕರೆಯಲ್ಲಿ ಹಣ್ಣುಗಳ ಮಾರುಕಟ್ಟೆ ಮತ್ತು ದೇವನಹಳ್ಳಿಯಲ್ಲಿ 50 ಎಕರೆಯಲ್ಲಿ ಹೂವಿನ ಮಾರುಕಟ್ಟೆ ಸ್ಥಾಪಿಸಲು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಎಪಿಎಂಸಿ ವತಿಯಿಂದಲೇ ಇವುಗಳನ್ನು ಸ್ಥಾಪಿಸಲಾಗುವುದು. ಇದರಿಂದ ಈ ಭಾಗದ ರೈತರಿಗೆ ಅನುಕೂಲವಾಗಲಿದೆ ಎಂದು ಸೋಮಶೇಖರ್ ಹೇಳಿದರು.

ಡಿಸಿಸಿ ಬ್ಯಾಂಕ್‌ಗಳಿಗೆ ನಾಮನಿರ್ದೇಶನ: ಡಿಸಿಸಿ ಬ್ಯಾಂಕಿನಲ್ಲಿ ಸರ್ಕಾರದ ಸಹಭಾಗಿತ್ವವನ್ನು ಪ್ರೋತ್ಸಾಹಿಸಲು ಹಾಗೂ ಷೇರು ಬಂಡವಾಳವನ್ನು ಹೆಚ್ಚಿಸುವ ಉದ್ದೇಶದಿಂದ 21 ಡಿಸಿಸಿ ಬ್ಯಾಂಕುಗಳಿಗೆ ತಲಾ ₹10 ಲಕ್ಷ ಗರಿಷ್ಠ ಮಿತಿಗೊಳಪಟ್ಟು ಶೇ 25 ರಷ್ಟು ಷೇರು ಬಂಡವಾಳ ನೀಡಲಾಗುವುದು. ಈ ಹಿನ್ನೆಲೆಯಲ್ಲಿ ಎಲ್ಲ ಡಿಸಿಸಿ ಬ್ಯಾಂಕ್‌ಗಳಿಗೂ ರಾಜಕೀಯ ನಾಮನಿರ್ದೇಶನ ಮಾಡಲಾಗುವುದು ಎಂದು ಅವರು ಹೇಳಿದರು.

ಕೃಷಿ, ನೀರಾವರಿ, ಆರೋಗ್ಯ ಕ್ಷೇತ್ರಕ್ಕೆ ಉತ್ತಮ ಅನುದಾನವನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ ಎಂದರು.

ಸಿದ್ದರಾಮಯ್ಯ ಕಾಲದಲ್ಲೇ ಹೆಚ್ಚು ಸಾಲ: ಸಿದ್ದರಾಮಯ್ಯ ಸರ್ಕಾರ ಇದ್ದಾಗಲೇ ಅತಿ ಹೆಚ್ಚು ಸಾಲ ಮಾಡಲಾಗಿದೆ. 1953 ರಿಂದ 2013 ರವರೆಗೆ ರಾಜ್ಯ ಸರ್ಕಾರ ಪಡೆದ ಒಟ್ಟು ಸಾಲ ₹1.17 ಲಕ್ಷ ಕೋಟಿ. ಆದರೆ, ಸಿದ್ದರಾಮಯ್ಯ ಅವರ ಐದು ವರ್ಷಗಳ ಅವಧಿಯಲ್ಲಿ ₹1.30 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಸರ್ಕಾರದ ಸಾಲದ ಪ್ರಮಾಣ ಹೆಚ್ಚಿಸಲು ಇವರೇ ಕಾರಣ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಹೇಳಿದರು.

ಯಡಿಯೂರಪ್ಪ ಅಧಿಕಾರ ವಹಿಸಿಕೊಂಡಾಗ ಪ್ರವಾಹದಿಂದ ಇಡೀ ರಾಜ್ಯ ತತ್ತರಿಸಿತ್ತು. ಅದರ ಬಳಿಕ ಕೋವಿಡ್ ಬಂದ ಕಾರಣ ಸರ್ಕಾರ ಅನಿವಾರ್ಯವಾಗಿ ಸಾಲ ಮಾಡಬೇಕಾಯಿತು ಎಂದು ತಿಳಿಸಿದರು.

‘ಸೋಮಶೇಖರ್ ಏನೇನು ಮಾಡಿದ್ದಾರೆ ಎಂಬುದನ್ನು ಹೇಳಲಿ’

ಬೆಂಗಳೂರು: 'ಬಿಜೆಪಿಯವರಿಗಿಂತ ಹತ್ತಿರದಿಂದ ಎಸ್.ಟಿ. ಸೋಮಶೇಖರ್ ಅವರನ್ನು ನಾನು ನೋಡಿದ್ದೇನೆ. ಅವರು ನಮ್ಮ ನಾಯಕರಾಗಿದ್ದವರು. ಪಕ್ಷದ ವಕ್ತಾರರಾಗಿ ಕೆಲಸ ಮಾಡಿದ್ದಾರೆ. ನಾವು ಜೊತೆಯಲ್ಲೇ ರಾಜಕಾರಣ ಮಾಡಿದ್ದೇವೆ. 20 ವರ್ಷದಿಂದ ಸೋಮಶೇಖರ್ ಏನೇನು ಮಾಡಿದ್ದಾರೆ ಅದನ್ನು ಮೊದಲು ಹೇಳಲಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ರಮೇಶ್ ಜಾರಕಿಹೊಳಿ ಸಿ.ಡಿ ಕಾಂಗ್ರೆಸ್ ಪಿತೂರಿ’ ಎಂದು ಸೋಮಶೇಖರ್ ಆರೋಪಿಸಿದ್ದಾರೆ. ಈ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಸೋಮಶೇಖರ್ ಜೊತೆಯಲ್ಲಿ ಇರುವವರು ಎಲ್ಲರೂ ಸೇರಿಕೊಂಡು ಒಂದು ಸುದ್ದಿಗೋಷ್ಠಿ ಮಾಡಿ ಎಲ್ಲವನ್ನೂ ಬಿಚ್ಚಿಡಲಿ. ಕಾಂಗ್ರೆಸ್ ಪಕ್ಷದಲ್ಲಿದ್ದಾಗ 20 ವರ್ಷ ಅವರು ಏನೇನು ಮಾಡಿದ್ದಾರೋ ಅದನ್ನೂ ಹೇಳಲಿ’ ಎಂದರು.

‘ಇದನ್ನು ಅವರೇ ಹೇಳಿದ್ದಾರೋ, ಬೇರೆಯವರು ಹೇಳಿಸಿದ್ದಾರೋ, ಅಂತೂ ಬಿಜೆಪಿ ಪರವಾಗಿ ಹೇಳಿದ್ದಾರೆ. ಅವರು ನಮ್ಮ ಪಕ್ಷದಲ್ಲಿದ್ದಾಗ ಏನು ಮಾಡಿದ್ದಾರೆಂದು ಸಾಕ್ಷಿ ಸಮೇತ ಹೇಳಲಿ. ಈ ಪ್ರಕರಣ ನಾವೂ ಗಮನಿಸುತ್ತಿದ್ದೇವೆ. ಸರ್ಕಾರವೇ ಸ್ವಯಂಪ್ರೇರಿತವಾಗಿ ಕೇಸ್ ದಾಖಲಿಸಬೇಕಿತ್ತು. ಯಾಕೆ ಇನ್ನೂ ಕೇಸು ಹಾಕಿಲ್ಲ, ಕೇಸು ತೆಗೆದುಕೊಂಡಿಲ್ಲ’ ಎಂದು ಪ್ರಶ್ನಿಸಿದರು.

‘ನಗರದ ಭವಿಷ್ಯಗಳು’ ವಿಚಾರ ಸಂಕಿರಣ 20ರಂದು

ಬೆಂಗಳೂರು: ನಗರದ ಅಭಿವೃದ್ಧಿ ಮತ್ತು ಸಮಸ್ಯೆಗಳ ಕುರಿತು ಚರ್ಚಿಸುವ ಮತ್ತು ವಿಚಾರ ಮಂಥನ ನಡೆಸುವ ಇಂಡಿಯನ್ ಅರ್ಬನ್ ಡಿಸೈನರ್ಸ್ ಇನ್‌ಸ್ಟಿಟ್ಯೂಟ್‌ನ (ಐಯುಡಿಐ) ಕರ್ನಾಟಕ ಶಾಖೆಯು ಇದೇ 20 ಮತ್ತು 21ರಂದು ‘ನಗರದ ಭವಿಷ್ಯಗಳು’ ವಿಷಯ ಕುರಿತು ವಿಚಾರ ಸಂಕಿರಣ ಹಮ್ಮಿಕೊಂಡಿದೆ.

ನಗರದ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಈ ವಿಷಯ ಕುರಿತು ಸಂವಾದ ನಡೆಯಲಿದೆ. ನಗರದ ವಿವಿಧ ಭಾಗಗಳಲ್ಲಿ ಈ ಕುರಿತು ನಡೆದ ಶೈಕ್ಷಣಿಕ ಅಧ್ಯಯನ ವರದಿಗಳ ಬಗ್ಗೆಯೂ ಚರ್ಚೆ ನಡೆಸಲಾಗುತ್ತದೆ.

‘ಭವಿಷ್ಯದ ಕಲ್ಪನೆಯಲ್ಲಿ ಬೆಂಗಳೂರು’ ವಿಷಯ ಕುರಿತು ತಜ್ಞರಿಂದ 60 ನಿಮಿಷ ವಿಚಾರಗೋಷ್ಠಿ ನಡೆಯಲಿದೆ. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮತ್ತು ನಾಗರಿಕ ಸಂಸ್ಥೆಗಳ ಸದಸ್ಯರು ಈ ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಗರದ ಅಭಿವೃದ್ಧಿ ಮತ್ತು ಬದಲಾವಣೆಗೆ ತಮ್ಮದೇ ಆದ ಕೊಡುಗೆ ನೀಡಿದ ಮಹನೀಯರೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಅಗತ್ಯ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿಗೆ ಸೂಚನೆ ನೀಡಿರುವ ಕಂದಾಯ ಸಚಿವ ಆರ್. ಅಶೋಕ

‘7,069 ಗ್ರಾಮಗಳಲ್ಲಿ ಸ್ಮಶಾನ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಒಟ್ಟು 7,069 ಗ್ರಾಮಗಳಲ್ಲಿ ಸ್ಮಶಾನ ಇಲ್ಲ. ಪ್ರತಿ ಗ್ರಾಮದಲ್ಲಿಯೂ ಸ್ಮಶಾನ ಇರುವಂತೆ ಅಗತ್ಯ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಗಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ತಳವಾರ ಸಾಬಣ್ಣ, ‘ಶಹಾಬಾದ ತಾಲ್ಲೂಕಿನ ಭಂಕೂರು ಗ್ರಾಮದಲ್ಲಿ ಸ್ಮಶಾನ ಇಲ್ಲ. ಶವಸಂಸ್ಕಾರಕ್ಕೆ ಜಾಗ ಇಲ್ಲದೆ ಸ್ಥಳೀಯರು ದೇಹದಾನ ಮಾಡುತ್ತಿದ್ದಾರೆ’ ಎಂದಾಗ ಉತ್ತರಿಸಿದ ಸಚಿವರು, ‘ಭಂಕೂರು ಗ್ರಾಮದಲ್ಲಿ 23 ಎಕರೆ ಸರ್ಕಾರಿ ಜಮೀನಿದೆ. ಆದರೆ, ಈ ಭೂಮಿ ಜವಳು ಇರುವ ಕಾರಣ ಸ್ಮಶಾನಕ್ಕೆ ಬಳಸಲು ಸಾಧ್ಯವಿಲ್ಲ. ಸ್ಥಳೀಯವಾಗಿ 4 ಎಕರೆ ಜಮೀನು ಖರೀದಿ ಪ್ರಕ್ರಿಯೆ ನಡೆಯುತ್ತಿದೆ’ ಎಂದರು.

‘ಪ್ರತಿ ಹಳ್ಳಿಯಲ್ಲೂ ಸ್ಮಶಾನ ಇರಬೇಕು. ಇದು ಸರ್ಕಾರದ ಆದ್ಯತೆ. ಸ್ಮಶಾನಕ್ಕೆ ಜಮೀನು ಒದಗಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೇರಿದಂತೆ ಜಿಲ್ಲಾ ಹಂತದಲ್ಲಿ ನಿರ್ಧಾರ ತೆಗೆದುಕೊಳ್ಳಲು ಸೂಚಿಸಿದ್ದೇನೆ’ ಎಂದರು.

ಮುಖ್ಯಾಂಶಗಳು

- ಶವಸಂಸ್ಕಾರಕ್ಕೆ ಜಾಗ ಇಲ್ಲದೆ ಸ್ಥಳೀಯರು ದೇಹದಾನ
- ಭೂಮಿ ಜವಳು ಇರುವ ಕಾರಣ ಸ್ಮಶಾನಕ್ಕೆ ಬಳಸಲು ಸಾಧ್ಯವಿಲ್ಲ
- 4 ಎಕರೆ ಜಮೀನು ಖರೀದಿ ಪ್ರಕ್ರಿಯೆ

ರೈತರ ನೆರವಿಗೆ ಸಿದ್ಧ

‘ರೈತರ ನೆರವಿಗೆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರ ಸಿದ್ಧವಿದೆ. ಆತ್ಮಹತ್ಯೆಗೆ ಶರಣಾದ ರೈತ ಕುಟುಂಬಕ್ಕೆ ಪರಿಹಾರ ನೀಡಲಾಗಿದೆ. ರೈತರು ಆತ್ಮಹತ್ಯೆಯಂಥ ಪ್ರಯತ್ನಕ್ಕೆ ಕೈ ಹಾಕಬಾರದು’ ಎಂದು ಆರ್. ಅಶೋಕ ಮನವಿ ಮಾಡಿದರು.

ಕಾಂಗ್ರೆಸ್‌ನ ಡಾ. ಚಂದ್ರಶೇಖರ್ ಪಾಟೀಲ ಕಲ್ಯಾಣ ಕರ್ನಾಟಕ ಭಾಗದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅಶೋಕ, ‘ಈ ಭಾಗದ ಬಳ್ಳಾರಿ (64), ಬೀದರ್ (100), ರಾಯಚೂರು (10), ಯಾದಗಿರಿ (21), ಕಲಬುರ್ಗಿ (62), ಕೊಪ್ಪಳ (109) ಜಿಲ್ಲೆಗಳಲ್ಲಿ ಮೂರು ವರ್ಷಗಳಲ್ಲಿ 366 ಆತ್ಮಹತ್ಯೆ ನಡೆದಿದೆ. ಇದರಲ್ಲಿ 357 ರೈತ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ’ ಎಂದರು.

ಭೂ ಗೊಂದಲ ಸರಿಪಡಿಸಲು ಸಮಿತಿ: ‘ಕುಮ್ಕಿ, ಜಮ್ಮಾಬಾಣೆ ಸೇರಿದಂತೆ ರಾಜ್ಯದ ವಿವಿಧ ಭಾಗದಲ್ಲಿ ಈ ರೀತಿಯ ಭೂ ಗೊಂದಲಗಳಿದ್ದು, ಜಮೀನಿನ ಮಾಲೀಕತ್ವ, ಕಾನೂನಾತ್ಮಕ ಪರಿಹಾರಕ್ಕೆ ಸಮಿತಿ ರಚಿಸಲಾಗುವುದು’ ಎಂದು ಸಚಿವ ಆರ್. ಅಶೋಕ ಹೇಳಿದರು.

ಕೊಡಗು ಜಿಲ್ಲೆಯ ಜಮ್ಮಾ ಬಾಣೆಯ ಪಹಣಿಯಲ್ಲಿರುವ ಕುಟುಂಬದ ಮುಖ್ಯಸ್ಥ (ಪಟ್ಟೇದಾರರ) ತೆಗೆದು ಹಾಕುವ ಕುರಿತು ಕಾಂಗ್ರೆಸ್‌ನ ವೀಣಾ ಅಚ್ಚಯ್ಯ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಪಟ್ಟೇದಾರರ ಮಕ್ಕಳಿಗೆ ಜಮೀನು ನೀಡುವ ಸಂಬಂಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ’ ಎಂದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವೀಣಾ ಅಚ್ಚಯ್ಯ, ‘ಪಟ್ಟೇದಾರರ ಮಕ್ಕಳಿಗೆ ಜಮೀನು ವರ್ಗಾವಣೆಯಾದರೆ, ಒಂದು ಕುಟುಂಬದಲ್ಲಿ 100ರಿಂದ 200ರವರೆಗೆ ಮನೆತನ ಇರುತ್ತದೆ. ಅವರೆಲ್ಲರಿಗೂ ಅನ್ಯಾಯವಾಗುತ್ತದೆ. ಈ ಕ್ರಮ ಬದಲಾಗಬೇಕು. ಜಮ್ಮಾ ಬಾಣೆ ಜಮೀನು ನಮ್ಮ ಹೆಗ್ಗಳಿಕೆ. ಸರ್ಕಾರದಿಂದ ನಮಗೆ ಭೂಮಿ ಬೇಕಾಗಿಲ್ಲ. ವ್ಯವಸ್ಥೆ ಸರಿಪಡಿಸಬೇಕು’ ಎಂದು ಮನವಿ ಮಾಡಿದರು.

ಆಗ ಸಚಿವರು, ‘ರಾಜ್ಯದಾದ್ಯಂತ ಬೇರೆ ಬೇರೆ ಹೆಸರಿನಲ್ಲಿ ಈ ರೀತಿಯ ಸಮಸ್ಯೆಯಿದೆ. ರೈತರಿಗೆ ಅಥವಾ ಉಳುಮೆ ಮಾಡುವವರಿಗೆ ಭೂಮಿಯ ಹಕ್ಕು ನೀಡುವ ಸಂಬಂಧ ಸಮಿತಿ ರಚಿಸಿ, ಕಾನೂನಾತ್ಮಕವಾಗಿ ಪರಿಹಾರ ಒದಗಿಸಲಾಗುವುದು’ ಎಂದು ಭರವಸೆ ನೀಡಿದರು.

ಲಂಚ: ಗ್ರಾಮ ಲೆಕ್ಕಿಗನ ಬಂಧನ

ಬೆಂಗಳೂರು: ಪೌತಿ ಖಾತೆ ಬದಲಾವಣೆಗಾಗಿ ವ್ಯಕ್ತಿಯೊಬ್ಬರಿಂದ ₹ 60,000 ಲಂಚ ಪಡೆದ ಆರೋಪದ ಮೇಲೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಗ್ರಾಮದ ಚುಂಚನಕುಪ್ಪೆಯ ಗ್ರಾಮ ಲೆಕ್ಕಿಗ ಎಂ. ಸತೀಶ್ ಕುಮಾರ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬುಧವಾರ ಬಂಧಿಸಿದೆ.

ನಗರದ ಮರಿಯಪ್ಪನಪಾಳ್ಯದ ನಿವಾಸಿಯೊಬ್ಬರು ಪುರದಪಾಳ್ಯ ಗ್ರಾಮದಲ್ಲಿ ಹೊಂದಿರುವ ಜಮೀನಿನ ಖಾತೆಯನ್ನು ಪೌತಿ ಖಾತೆ ಆಧಾರದಲ್ಲಿ ಬದಲಾವಣೆ ಮಾಡಿಕೊಡುವಂತೆ ತಾವರೆಕೆರೆ ನಾಡ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ₹ 60,000 ಲಂಚಕ್ಕೆ ಬೇಡಿಕೆ ಇಟ್ಟಿದ್ದ ಸತೀಶ್ ಕುಮಾರ್, ಮೊದಲೇ ₹ 55,000 ಪಡೆದಿದ್ದರು. ಕೊನೆಯ ₹ 5,000ಕ್ಕಾಗಿ ಒತ್ತಾಯಿಸುತ್ತಿದ್ದರು. ಈ ಕುರಿತು ಅರ್ಜಿದಾರರು ಎಸಿಬಿ ಕಚೇರಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಎಸಿಬಿ ರಾಮನಗರ ಘಟಕದ ಅಧಿಕಾರಿಗಳು ಬುಧವಾರ ಕಾರ್ಯಾಚರಣೆ ನಡೆಸಿದರು.

ಸುದ್ದಿ 2 ನಿಮಿಷ

ನಿರ್ಮಾಪಕ ಶಂಕರಗೌಡ ವಿಚಾರಣೆ

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಭಾಗಿಯಾದ ಆರೋಪದಡಿ ಸಿನಿಮಾ ನಿರ್ಮಾಪಕ ಶಂಕರಗೌಡ ಕಚೇರಿ ಮೇಲೆ ದಾಳಿ ಮಾಡಿದ್ದ ಪೂರ್ವ ವಿಭಾಗದ ಪೊಲೀಸರು, ಶಂಕರಗೌಡ ಹಾಗೂ ಕಚೇರಿಯ ಕೆಲ ಸಿಬ್ಬಂದಿಯನ್ನು ಬುಧವಾರ ವಿಚಾರಣೆಗೆ ಒಳಪಡಿಸಿದರು.

ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆಗಳು ಸೇರಿ ಹಲವರನ್ನು ಇತ್ತೀಚೆಗಷ್ಟೇ ಬಂಧಿಸಿದ್ದ ಪೊಲೀಸರು, ₹ 4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದರು. ಆರೋಪಿಗಳು ನೀಡಿದ್ದ ಮಾಹಿತಿ ಆಧರಿಸಿ ಬಿಗ್‌ಬಾಸ್ ರಿಯಾಲಿಟಿ ಶೋ ಸ್ಪರ್ಧಿ ಮಸ್ತಾನ್ ಚಂದ್ರ ಮನೆ ಮೇಲೂ ದಾಳಿ ಮಾಡಿ ವಶಕ್ಕೆ ಪಡೆದಿದ್ದರು.

ಪ್ರಕರಣದಲ್ಲಿ ಶಂಕರಗೌಡ ಹೆಸರು ಕೇಳಿಬಂದಿದ್ದರಿಂದ, ನ್ಯಾಯಾಲಯದ ವಾರೆಂಟ್ ಪಡೆದು ಅವರ ಕಚೇರಿ ಮೇಲೂ ಮಾ. 8ರಂದು ದಾಳಿ ಮಾಡಿದ್ದರು.

‘ಕೆಂಪೇಗೌಡ ಸೇರಿದಂತೆ ಹಲವು ಸಿನಿಮಾ ನಿರ್ಮಾಣ ಮಾಡಿದ್ದ ಶಂಕರಗೌಡ, ಡ್ರಗ್ಸ್ ಖರೀದಿ ಮಾಡುತ್ತಿದ್ದ ಮಾಹಿತಿ ಇದೆ. ವಿಚಾರಣೆ ನಡೆಸಿದ ಬಳಿಕವೇ ನಿಖರ ಮಾಹಿತಿ ತಿಳಿಯಲಿದೆ. ಶಂಕರಗೌಡ ಅವರನ್ನು ವೈದ್ಯಕೀಯ ಪರೀಕ್ಷೆಗೂ ಒಳಪಡಿಸಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸ್ವಚ್ಛತಾ ಅಭಿಯಾನಕ್ಕೆ ಚಾಲನೆ

ಬೆಂಗಳೂರು: ನಿರ್ಮಾಣ್ ಶೆಲ್ಟರ್ಸ್ ಬನ್ನೇರುಘಟ್ಟದ ಸಮೀಪ ನಿರ್ಮಿಸಿರುವ ನಿಸರ್ಗ ಬಡಾವಣೆಯಲ್ಲಿ ನಿಪ್ ಮ್ಯಾಟ್ ಸಂಸ್ಥೆಯು ಹಮ್ಮಿಕೊಂಡಿದ್ದ ನಿಸರ್ಗ ಸ್ವಚ್ಛ ಅಭಿಯಾನದಲ್ಲಿ ಸಂಸ್ಥೆಯ ಟ್ರಸ್ಟಿಗಳು, ಸಿಬ್ಬಂದಿ ಹಾಗೂ ಸ್ಥಳೀಯ ನಿವಾಸಿಗಳು ಭಾಗವಹಿಸಿ, ಬಡಾವಣೆಯನ್ನು ಸ್ವಚ್ಛಗೊಳಿಸಿದರು.

ಬಡಾವಣೆಯಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ಸೇರಿದಂತೆ ವಿವಿಧ ನಿರೂಪಯುಕ್ತ ತ್ಯಾಜ್ಯವನ್ನು ಸಂಗ್ರಹಿಸಲಾಯಿತು. ಬಳಿಕ ಅವುಗಳನ್ನು ವಿಂಗಡಿಸಿ, ಕಸ ಸಂಸ್ಕರಣಾ ಘಟಕಕ್ಕೆ ಕಳುಹಿಸಲಾಯಿತು. ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ಪ್ರಾಣಿ–ಪಕ್ಷಿಗಳಿಗೆ ಆಗುವ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು. ಬಡಾವಣೆಯು 220 ಎಕರೆ ವಿಸ್ತೀರ್ಣ ಹೊಂದಿದ್ದು, ಅಲ್ಲಿನ ಶೇ 40ರಷ್ಟು ನಿವೇಶನಗಳಲ್ಲಿ ಈಗಾಗಲೇ ಮನೆಗಳು ನಿರ್ಮಾಣಗೊಂಡಿವೆ.

ಇದೇ ರೀತಿ ಪ್ರತಿ ತಿಂಗಳ ಮೊದಲನೇ ಹಾಗೂ ಮೂರನೇ ಭಾನುವಾರ ಅಭಿಯಾನ ಆಯೋಜಿಸಲಾಗುವುದು. ಬಡಾವಣೆಯಲ್ಲಿ ಕಸ ವಿಂಗಡಣೆ ಮತ್ತು ಸಂಸ್ಕರಣಾ ಘಟಕವನ್ನು ವ್ಯವಸ್ಥಿತವಾಗಿ ನಿರ್ಮಾಣ ಮಾಡಲಾಗಿದೆ. ಪ್ರತಿ ದಿನ ಮೂರು ವಾಹನಗಳಲ್ಲಿ ವ್ಯವಸ್ಥಿತವಾಗಿ ಮನೆ ಮನೆಯಿಂದ ಹಸಿ ಮತ್ತು ಒಣ ಕಸವನ್ನು ಸಂಗ್ರಹಿಸಲಾಗುತ್ತದೆ. ಬಳಿಕ ಅವುಗಳನ್ನು ಸಂಸ್ಕರಿಸಿ, ವಿಲೇವಾರಿ ಮಾಡಲಾಗುತ್ತದೆ ಎಂದು ಟ್ರಸ್ಟಿಗಳು ತಿಳಿಸಿದ್ದಾರೆ.

ಬಿಡಿಎ: ಒಂದು ವಾರ ಜನರ ಭೇಟಿಗೆ ಇಲ್ಲ ಅವಕಾಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಕಡ್ಡಾಯವಾಗಿ ಜಾರಿಗೆ ತರಲೇಬೇಕಾದ ಆದೇಶಗಳನ್ನು ಹೈಕೋರ್ಟ್ ನೀಡಿದೆ. ಇವುಗಳನ್ನು ತುರ್ತಾಗಿ ಜಾರಿಗೊಳಿಸಲು ಬಿಡಿಎ ಇದೇ 15ರಿಂದ 20ರವರೆಗೆ ‘ಹೈಕೋರ್ಟ್ ಆದೇಶ ಅನುಪಾಲನಾ ಸಪ್ತಾಹ’ವನ್ನು ಹಮ್ಮಿಕೊಂಡಿದೆ.

ಈ ಸಪ್ತಾಹದ ಅವಧಿಯಲ್ಲಿ ನಿತ್ಯವೂ ಬೆಳಿಗ್ಗೆ 9ರಿಂದ ಸಂಜೆ 5.30ರವರೆಗೆ ಬಿಡಿಎ ಕೇಂದ್ರ ಕಚೇರಿಗೆ ಸಾರ್ವಜನಿಕರ ಭೇಟಿಗೆ ಅವಕಾಶ ನಿರಾಕರಿಸಲಾಗಿದೆ. ಇ-ಹರಾಜಿನ ಮೂಲಕ ಮಾರಾಟ ಮಾಡಿರುವ ನಿವೇಶನಗಳ ನೊಂದಣಿ ಕಾರ್ಯಗಳೂ ಸೇರಿದಂತೆ ಇತರ ಕಾರ್ಯಗಳನ್ನು ಐದು ದಿನಗಳ ಮಟ್ಟಿಗೆ ಸ್ಥಗಿತಗೊಳಿಸಲಾಗುತ್ತದೆ. ಇವುಗಳ ನೊಂದಣಿಗೆ ಪ್ರತ್ಯೇಕ ದಿನಾಂಕವನ್ನು ನಿಗದಿಪಡಿಸಲಾಗುವುದು ಎಂದು ಬಿಡಿಎ ತಿಳಿಸಿದೆ.

‘500ಕ್ಕೂ ಅಧಿಕ ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶ ಜಾರಿಗೊಳಿಸಲು ಬಾಕಿ ಇದೆ. ನ್ಯಾಯಾಲಯದ ಆದೇಶ ಪಾಲನೆ ಆಗದಿರುವುದನ್ನು ಪ್ರಶ್ನಿಸಿ ಅನೇಕರು ದೂರುದಾರರು ನ್ಯಾಯಾಂಗನಿಂದನೆ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆ. ಹಲವು ಪ್ರಕರಣಗಳಲ್ಲಿ ಆದೇಶ ಜಾರಿ ವಿಳಂಬವಾಗಿದ್ದಕ್ಕೆ ಬಿಡಿಎ ದಂಡ ಪಾವತಿ ಮಾಡಬೇಕಾದ ಪ್ರಮೇಯಗಳೂ ಎದುರಾಗಿವೆ. ಆದೇಶಗಳನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಲಾಗುತ್ತಿದೆ ಎಂದು ನ್ಯಾಯಾಲಯ ಅಭಿಪ್ರಾಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ನ್ಯಾಯಾಲಯದ ಆದೇಶಗಳನ್ನು ಆದ್ಯತೆ ಮೇರೆಗೆ ಜಾರಿಗೊಳಿಸಲು ವಿಶೇಷ ಸಪ್ತಾಹ ಹಮ್ಮಿಕೊಂಡಿದ್ದೇವೆ’ ಎಂದು ಪ್ರಾಧಿಕಾರದ ಆಯುಕ್ತ ಎಚ್.ಆರ್. ಮಹದೇವ ತಿಳಿಸಿದರು.

‘ಅಧಿಕಾರಿಗಳಿಗೆ ಅನ್ಯ ಕಾರ್ಯಗಳನ್ನು ಹಚ್ಚಿದರೆ, ನ್ಯಾಯಾಲಯದ ಆದೇಶಗಳ ಅನುಷ್ಠಾನ ಮತ್ತಷ್ಟು ವಿಳಂಬವಾಗುತ್ತದೆ. ಇದನ್ನು ತಪ್ಪಿಸಲು ಒಂದು ಬಾರಿಗೆ ಸಪ್ತಾಹವನ್ನು ಹಮ್ಮಿಕೊಂಡು ಹೆಚ್ಚಿನ ಆದೇಶಗಳನ್ನು ಜಾರಿಗೊಳಿಸಲಿದ್ದೇವೆ’ ಎಂದರು.

‘ಈ ಅವಧಿಯಲ್ಲಿ ಇತರ ಸೇವೆಗಳು ಲಭ್ಯ ಇಲ್ಲದೇ ಇರುವುದಕ್ಕೆ ಸಾರ್ವಜನಿಕರು ಸಹಕರಿಸಬೇಕು’ ಎಂದು ಅವರು ವಿನಂತಿಸಿದರು.

ನಿವೃತ್ತ ಡಿಜಿ–ಐಜಿಪಿ ಇ–ಮೇಲ್ ಹ್ಯಾಕ್ ಮಾಡಿದ್ದ ಆರೋಪಿಗಳು

ಆನ್‌ಲೈನ್ ವಂಚನೆ; ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರ ಇ-ಮೇಲ್ ಹಾಗೂ ಸಾಮಾಜಿಕ ಜಾಲತಾಣ ಖಾತೆಗಳನ್ನು ಹ್ಯಾಕ್ ಮಾಡಿ ಅವರ ಹೆಸರಿನಲ್ಲಿ ಹಣ ಪಡೆದುಕೊಂಡು ವಂಚಿಸುತ್ತಿದ್ದ ನಾಗಾಲ್ಯಾಂಡ್ ಮಹಿಳೆ ಸೇರಿ ಮೂವರನ್ನು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆನ್‌ಲೈನ್ ವಂಚನೆ ಪ್ರಕರಣ ಸಂಬಂಧ ನಾಗಲ್ಯಾಂಡ್‌ನ ರುಬಿಕಾ ಅಲಿಯಾಸ್ ಇಸ್ಟರ್ ಕೊನ್ಯಾಕ್ (28), ಥಿಯಾ (31) ಹಾಗೂ ಸೆರೋಪಾ (27) ಎಂಬುವರನ್ನು ಬಂಧಿಸಲಾಗಿದೆ. ಅವರಿಂದ 4 ಮೊಬೈಲ್, 13 ಪಾನ್ ಕಾರ್ಡ್, 6 ಆಧಾರ್ ಕಾರ್ಡ್, 2 ಎಟಿಎಂ ಕಾರ್ಡ್ ಹಾಗೂ 20ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಆರೋಪಿಗಳಾದ ಥಿಯಾ, ಸೆರೋಪಾ ಹಾಗೂ ರುಬಿಕಾ

‘ನಿವೃತ್ತ ಡಿಜಿ–ಐಜಿಪಿ ಶಂಕರ್ ಬಿದರಿ ಅವರ ಇ–ಮೇಲ್ ಹ್ಯಾಕ್ ಮಾಡಿದ್ದ ಆರೋಪಿಗಳು, ಸ್ನೇಹಿತರಿಗೆ ಸಂದೇಶ ಕಳುಹಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಅದನ್ನು ನಂಬಿದ್ದ ಸ್ನೇಹಿತರೊಬ್ಬರು ಆರೋಪಿಗಳು ನೀಡಿದ್ದ ಬ್ಯಾಂಕ್ ಖಾತೆಗೆ ₹ 25 ಸಾವಿರ ನಗದು ಸಹ ಜಮೆ ಮಾಡಿದ್ದರು. ಇದು ಗೊತ್ತಾಗುತ್ತಿದ್ದಂತೆ ಶಂಕರ್ ಬಿದರಿ ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದೂ ತಿಳಿಸಿದರು.

‘ಗ್ಯಾಂಗ್‌ನ ರೂವಾರಿಗಳಾಗಿರುವ ಜೇಮ್ಸ್ ಹಾಗೂ ಪೀಟರ್ ಎಂಬುವರು ತಲೆಮರೆಸಿಕೊಂಡಿದ್ದಾರೆ’ ಎಂದೂ ಹೇಳಿದರು.

ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ: ‘ನಾಲ್ಕು ವರ್ಷಗಳ ಹಿಂದೆ ನಾಗಾಲ್ಯಾಂಡ್‌ನಿಂದ ನಗರಕ್ಕೆ ಬಂದಿದ್ದ ರುಬಿಕಾ, ಬ್ಯೂಟಿ ಪಾರ್ಲರ್‌ಗಳಲ್ಲಿ ಕೆಲಸಕ್ಕೆ ಸೇರಿದ್ದಳು. ಆಕೆಗೆ ಫೇಸ್‌ಬುಕ್‌ನಲ್ಲಿ ಜೇಮ್ಸ್ ಹಾಗೂ ಪೀಟರ್ ಪರಿಚಯವಾಗಿತ್ತು. ನಂತರ, ಅವರಿಬ್ಬರ ಆನ್‌ಲೈನ್ ವಂಚನೆ ಕೃತ್ಯಕ್ಕೆ ರುಬಿಕಾ ಸಹಾಯ ಮಾಡಲಾರಂಭಿಸಿದ್ದಳು’ ಎಂದು ಪೊಲೀಸರು ತಿಳಿಸಿದರು.

‘ನಾಗಾಲ್ಯಾಂಡ್‌ನ ನಿರುದ್ಯೋಗಿ ಯುವಕರನ್ನು ಸಂಪರ್ಕಿಸುತ್ತಿದ್ದ ರುಬಿಕಾ, ಅವರಿಗೆ ಹಣದ ಆಮಿಷವೊಡ್ಡಿ ದಾಖಲಾತಿಗಳನ್ನು ಪಡೆಯುತ್ತಿದ್ದಳು. ಅದೇ ದಾಖಲಾತಿ ಬಳಸಿಕೊಂಡು ನಗರದ ಹಲವು ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆದಿದ್ದಳು. ಆ ಖಾತೆ ವಿವರವನ್ನು ಪ್ರಮುಖ ಆರೋಪಿಗಳಾದ ಜೇಮ್ಸ್ ಹಾಗೂ ಪೀಟರ್‌ಗೆ ನೀಡುತ್ತಿದ್ದಳು.’

‘ಸಾರ್ವಜನಿಕರ ಇ–ಮೇಲ್ ಹಾಗೂ ಸಾಮಾಜಿಕ ಜಾಲತಾಣಗಳ ಖಾತೆ ಹ್ಯಾಕ್ ಮಾಡುತ್ತಿದ್ದ ಜೇಮ್ಸ್ ಹಾಗೂ ಪೀಟರ್, ರುಬಿಕಾ ನೀಡಿದ್ದ ಖಾತೆಗಳ ಸಂಖ್ಯೆಯನ್ನೇ ಬಳಸಿಕೊಂಡು ಹಣ ಹಾಕಿಸಿಕೊಳ್ಳುತ್ತಿದ್ದರು. ಅದರಲ್ಲಿ ರುಬಿಕಾಳಿಗೂ ಪಾಲು ನೀಡುತ್ತಿದ್ದರು. ಶಂಕರ್ ಬಿದರಿ ಮಾತ್ರವಲ್ಲದೇ ಹಲವು ವ್ಯಕ್ತಿಗಳ ಹೆಸರಿನಲ್ಲಿ ಆರೋಪಿಗಳು ವಂಚಿಸಿರುವ ಮಾಹಿತಿ ಇದೆ’ ಎಂದೂ ಪೊಲೀಸರು ಹೇಳಿದರು.

ಕಾರ್ಯಪಾಲಕ ಎಂಜಿನಿಯರ್ ಅಮಾನತು

ಯಡಿಯೂರು ವಾರ್ಡ್ ಕಾಮಗಾರಿ ಅಕ್ರಮ ● ಪ್ರಜಾವಾಣಿ ವರದಿ ಪರಿಣಾಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಡಿಯೂರು ವಾರ್ಡ್‌ನಲ್ಲಿ ಸಮುದಾಯ ಭವನದ ಕಾಮಗಾರಿಗೆ ಟೆಂಡರ್ ಕರೆಯುವ ವೇಳೆ, ಮೊದಲ ಮಹಡಿಗೆ, ಎರಡನೇ ಮಹಡಿಗೆ ಹಾಗೂ ಎಲೆಕ್ಟ್ರಿಕಲ್ ಕೆಲಸಗಳಿಗೆ ಪ್ರತ್ಯೇಕವಾಗಿ ಟೆಂಡರ್ ಕರೆದ ಆರೋಪದ ಮೇರೆಗೆ ಪ್ರಭಾರ ಕಾರ್ಯಪಾಲಕ ಎಂಜಿನಿಯರ್ (ಯೋಜನೆ- ದಕ್ಷಿಣ ವಲಯ) ಮಹಂತೇಶ್ ಬುರ್ನಪುರ ಅವರನ್ನು ಬಿಬಿಎಂಪಿ ಬುಧವಾರ ಅಮಾನತು ಮಾಡಿದೆ.

ಲೋಕೋಪಯೋಗಿ ಇಲಾಖೆ ನಿಯಮಾವಳಿ 85 (6)ರ ಪ್ರಕಾರ ಒಂದೇ ಸ್ಥಳದಲ್ಲಿ ನಡೆಸುವ ಒಂದು ಕಾಮಗಾರಿಗೆ ಒದಗಿಸಲಾದ ಅನುದಾನಕ್ಕೆ ಅನುಗುಣವಾಗಿ ಸಮಗ್ರವಾಗಿ ಒಂದು ಟೆಂಡರ್ ಮಾತ್ರ ಕರೆಯಬೇಕು. ಟೆಂಡರ್ ಕರೆಯುವಾಗ ಕಾಮಗಾರಿಯನ್ನು ವಿಭಜಿಸಲು ಅವಕಾಶ ಇಲ್ಲ. ಆದರೆ, ಮಹಂತೇಶ್ ಅವರು ಸಮುದಾಯ ಭವನದ ಕಾಮಗಾರಿಯನ್ನು ಮೂರು ಭಾಗಗಳಾಗಿ ವಿಭಜಿಸಿ ಟೆಂಡರ್ ಕರೆದಿದ್ದಾರೆ. ಇದರಿಂದ ಬಿಬಿಎಂಪಿಯ ಘನತೆಗೆ ಧಕ್ಕೆ ಉಂಟಾಗಿದೆ. ಅವರು ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿದೆ ಎಂದು ದಕ್ಷಿಣ ವಲಯದ ಮುಖ್ಯ ಎಂಜಿನಿಯರ್ ವರದಿ ನೀಡಿದ್ದರು.

ಮಹಂತೇಶ್ ಅವರು ಈ ಹಿಂದೆ ಸರ್ಕಾರದ ಮಟ್ಟದಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ನಿರ್ವಹಣೆ ಮಾಡುವ ಸಂದರ್ಭದಲ್ಲಿ ಅನವಶ್ಯಕವಾಗಿ ಮೇಲಧಿಕಾರಿಗಳ ಹೆಸರು ಮತ್ತು ಹುದ್ದೆಗಳನ್ನು ಟಿಪ್ಪಣಿ ಹಾಳೆಯಲ್ಲಿ ನಮೂದಿಸಿದ್ದನ್ನೂ ಕರ್ತವ್ಯ ಲೋಪ ಎಂದು ಬಿಬಿಎಂಪಿ ಪರಿಗಣಿಸಿದೆ.

ಗುತ್ತಿಗೆದಾರ ಸತೀಶ್ ಆರ್. ಅವರಿಗೆ ಅನುಕೂಲ ಕಲ್ಪಿಸಲು ರಾಜಕೀಯ ಒತ್ತಡದಿಂದ ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ (ಯೋಜನೆ –ದಕ್ಷಿಣ) ಅವರು ಸಮುದಾಯ ಭವನದ ಟೆಂಡರ್ ವಿಭಜಿಸಿರುವ ಬಗ್ಗೆ ‘ಪ್ರಜಾವಾಣಿ’ಯು ಮಾ .10ರ ಸಂಚಿಕೆಯಲ್ಲಿ ‘ಮೊದಲ ಮಹಡಿ, 2ನೇ ಮಹಡಿಗೆ ಪ್ರತ್ಯೇಕ ಟೆಂಡರ್!’ ಶೀರ್ಷಿಕೆಯಡಿ ವಿಶೇಷ ವರದಿಯನ್ನು ಪ್ರಕಟಿಸಿತ್ತು.

ಯಡಿಯೂರು ವಾರ್ಡ್‌ನಲ್ಲಿ ಬಿಬಿಎಂಪಿಯು ₹ 5.50 ಕೋಟಿ ವೆಚ್ಚದಲ್ಲಿ ಸಮುದಾಯ ಭವನವನ್ನು ನಿರ್ಮಿಸುತ್ತಿದೆ.

ರಮಿತಾ ಶೈಲೇಂದ್ರ ರಾವ್, ಸೀಮಾಶರ್ಮಾ ದಿವಾನ್, ಸುರೇಶ್ ಶಾಂತಪ್ಪ ಕೆಳಗಡೆ (ಸಂಸ್ಥೆಗೆ), ಮಂಗಳಾ ಗುಡಿಮಠ, ಮಂಜುಳಾ ರಮೇಶ್, ವಾರಿಜಾ ವಿ. ಕಾಮತ್ ಅವರಿಗೆ ಬಿ.ಎಸ್. ಯಡಿಯೂರಪ್ಪ ಅವರು ಕಿತ್ತೂರು ಚನ್ನಮ್ಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಾಗಲಾಂಬಿಕಾ ದೇವಿ, ಬಸವಲಿಂಗ ಪಟ್ಟದೇವರು ಸ್ವಾಮೀಜಿ, ಗೋವಿಂದ ಕಾರಜೋಳ, ಶಶಿಕಲಾ ಜೊಲ್ಲೆ, ಶಶಿಕಲಾ ಟೆಂಗಳೆ, ಪ್ರಮೀಳಾ ನಾಯ್ಡು ಹಾಗೂ ಇತರೆ ಅಧಿಕಾರಿಗಳು ಇದ್ದಾರೆ ಪ್ರಜಾವಾಣಿ ಚಿತ್ರ

ಮೋಹನ್ ರಾಮ್ ಕೃತಿಗೆ ಪುಸ್ತಕ ಬಹುಮಾನ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ ನೀಡುವ 2019ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಎನ್. ಕೆ. ಮೋಹನ್ ರಾಮ್ ಅವರ ‘ಕರ್ಟನ್ ಕಾಲ್‌ಗೆ ಲೈಟೇ ಬರಲಿಲ್ಲ’ ಕೃತಿ ಆಯ್ಕೆಯಾಗಿದೆ.

ಈ ಬಹುಮಾನವು ₹ 25 ಸಾವಿರ ನಗದು ಒಳಗೊಂಡಿದ್ದು, ಅಕಾಡೆಮಿಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇದನ್ನೂ ನೀಡಲಾಗುತ್ತದೆ. ರಂಗ ಪಠ್ಯಗಳ ಹೊರತಾಗಿ ಕನ್ನಡ ರಂಗಭೂಮಿಯ ಬಗ್ಗೆ ಬರಹಗಳು ಮತ್ತು ಪುಸ್ತಕಗಳನ್ನು ಉತ್ತೇಜಿಸುವ ಸಲುವಾಗಿ ಪ್ರತಿ ವರ್ಷ ರಂಗಭೂಮಿ ಕುರಿತಾದ ಪುಸ್ತಕವೊಂದಕ್ಕೆ ಬಹುಮಾನ ಘೋಷಿಸಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್ ಮಂಜುನಾಥ್ ಆರಾಧ್ಯ ತಿಳಿಸಿದ್ದಾರೆ.

ಆಹಾರ ಪೂರೈಕೆ ತಡವಾಗಿದ್ದಕ್ಕೆ ಜಗಳ

ಗ್ರಾಹಕಿಗೆ ಮುಖಕ್ಕೆ ಪಂಚ್; ಜೊಮ್ಯಾಟೊ ಬಾಯ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೊಮ್ಯಾಟೊ’ ಮೊಬೈಲ್ ಆ್ಯಪ್ ಮೂಲಕ ಕಾಯ್ದಿರಿಸಿದ್ದ ಆಹಾರದ ಪೂರೈಕೆ ತಡವಾಗಿದ್ದಕ್ಕಾಗಿ ಗ್ರಾಹಕಿ ಹಾಗೂ ಡೆಲಿವರಿ ಬಾಯ್ ನಡುವೆ ಜಗಳವಾಗಿದ್ದು, ಸಿಟ್ಟಾದ ಡೆಲಿವರಿ ಬಾಯ್ ಗ್ರಾಹಕಿಯ ಮುಖಕ್ಕೆ ಪಂಚ್ ಮಾಡಿದ್ದಾನೆ. ಗ್ರಾಹಕಿ ಮುಖಕ್ಕೆ ತೀವ್ರ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬ್ಯಾಂಡೇಜ್ ಹಾಕಿಸಿಕೊಂಡಿದ್ದಾರೆ.

‘ಮಂಗಳವಾರ ರಾತ್ರಿ ಆಹಾರ ನೀಡಲು ಬಂದಿದ್ದ ಡೆಲಿವರಿ ಬಾಯ್ ಕಾಮರಾಜ್ ಎಂಬಾತ ಅವಾಚ್ಯ ಶಬ್ದಗಳಿಂದ ನಿಂದಿಸಿ ನನ್ನ ಮೇಲೆ ಹಲ್ಲೆ ಮಾಡಿದ್ದಾನೆ’ ಎಂದು ಆರೋಪಿಸಿ ಸ್ಥಳೀಯ ನಿವಾಸಿ ಇಂದ್ರಾಣಿ ಎಂಬುವರು ದೂರು ನೀಡಿದ್ದಾರೆ. ಸ್ಥಳೀಯ ನಿವಾಸಿಯೇ ಆಗಿರುವ ಡೆಲಿವರಿ ಬಾಯ್ ಕಾಮರಾಜ್ (28) ಎಂಬಾತನನ್ನು ಬಂಧಿಸಲಾಗಿದೆ’ ಎಂದು ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

ಯುವತಿ ಇಂದ್ರಾಣಿ ಮುಖಕ್ಕೆ ಗಾಯವಾಗಿರುವುದು

ಆಗಿದ್ದೇನು?: ‘ಪ್ರಸಾದನ ಕಲಾವಿದೆ ಆಗಿರುವ ಇಂದ್ರಾಣಿ, ಜೊಮ್ಯಾಟೊ ಆ್ಯಪ್‌ನಲ್ಲಿ ಮಂಗಳವಾರ ಮಧ್ಯಾಹ್ನ 3.30ಕ್ಕೆ ಊಟ ಆರ್ಡರ್ ಮಾಡಿದ್ದರು. ಗಂಟೆಯಾದರೂ ಆಹಾರ ಬಂದಿದರಲಿಲ್ಲ. ಹೀಗಾಗಿ, ಆರ್ಡರ್ ರದ್ದುಪಡಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಂತರ ಸ್ಥಳಕ್ಕೆ ಬಂದ ಕಾಮರಾಜ್, ಅವರನ್ನು ವಾಪಸು ಹೋಗುವಂತೆ ಮಹಿಳೆ ಸೂಚಿಸಿದ್ದರು. ಇದೇ ವಿಚಾರವಾಗಿ ಕಾಮರಾಜ್ ಜಗಳ ತೆಗೆದಿದ್ದು, ಯುವತಿ ಮುಖಕ್ಕೆ ಪಂಚ್ ಮಾಡಿ ಪರಾರಿಯಾಗಿದ್ದ.

ಮಧು ಬಂಗಾರಪ್ಪ ಇಂದು ಕಾಂಗ್ರೆಸ್‌ಗೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆ ಸೊರಬ ಕ್ಷೇತ್ರದ ಮಾಜಿ ಶಾಸಕ ಮಧು ಬಂಗಾರಪ್ಪ ಅವರು ಗುರುವಾರ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಲಿದ್ದಾರೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ನಿವಾಸದಲ್ಲಿ ಬೆಳಿಗ್ಗೆ 11.30 ಗಂಟೆಗೆ ಮಧು ಬಂಗಾರಪ್ಪ ‘ಕೈ’ ಹಿಡಿಯಲಿದ್ದಾರೆ.

ಮಧು ಬಂಗಾರಪ್ಪ

ಶಿವಮೊಗ್ಗ ಜಿಲ್ಲೆಯ ಕಲ್ಲಹಳ್ಳಿಯ ತಮ್ಮ ಮನೆಯಲ್ಲಿ ಇತ್ತೀಚೆಗೆ ಸುದ್ದಿಗಾರರ ಜತೆ ಮಾತನಾಡಿದ್ದ ಅವರು, ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಮೊದಲು ಸೂಕ್ತ ರಾಜಕೀಯ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದ್ದರು.

ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಪ್ರದಾನ ಮಾಡಿದ ಸಿ.ಎಂ

‘ಮಹಿಳಾಪರ ಕಾಳಜಿಯ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಅರಮನೆ ಮೈದಾನದ ಪ್ರಿನ್ಸಸ್ ಗಾಲ್ಫ್ ಆವರಣದ ಬುಧವಾರ ಕಳೆಗಟ್ಟಿತ್ತು.

ಬಹುತೇಕ ಮಹಿಳೆಯರು ಗುಲಾಬಿ ಬಣ್ಣದ ಸೀರೆಯಲ್ಲಿ ಮಿಂಚಿದರು. ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲಿಯೂ ಸಾಧನೆ ಮಾಡಿದ ಮಹಿಳೆಯರು, ಸಂಘ–ಸಂಸ್ಥೆಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ವಿತರಿಸಿ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ‘ಮಹಿಳಾ ಪರ ಕಾಳಜಿ ಹೊಂದಿರುವ ಸರ್ಕಾರ ನಮ್ಮದು. ಮಹಿಳಾ ಸಬಲೀಕರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬಾರಿಯ ಬಜೆಟ್‌ನಲ್ಲಿ ಹಲವು ಘೋಷಣೆಗಳನ್ನು ಮಾಡಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ₹37,180 ಕೋಟಿ ಅನುದಾನ ತೆಗೆದಿರಿಸಲಾಗಿದೆ’ ಎಂದರು.

ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ‘ಮಹಿಳೆಯರು ಪುರುಷರಿಗೆ ಸಮಾನರೆಂದು 12ನೇ ಶತಮಾನದಲ್ಲಿಯೇ ಸಾರಿದವರು ಜಗಜ್ಯೋತಿ ಬಸವೇಶ್ವರರು. ಅವರ ಇಂತಹ ಚಿಂತನೆಗಳ ಹಿಂದೆ ಇದ್ದದ್ದು ಅವರ ಅಕ್ಕ ನಾಗಮ್ಮ. ರಾಜರು ಸಾಮ್ರಾಜ್ಯಕ್ಕಾಗಿ ಖಡ್ಗ ಹಿಡಿದು ಹೋರಾಡಿದರೆ ಜ್ಞಾನಕ್ಕಾಗಿ ಕತ್ತಿ ಹಿಡಿದವರು ನಾಗಮ್ಮ. ಅವರ ಕಾರ್ಯಗಳನ್ನು ಸ್ಮರಿಸುವ ಕೆಲಸ ಹೆಚ್ಚಾಗಬೇಕು’ ಎಂದರು.

ಭಾಲ್ಕಿಯ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದೇವರು ಸ್ವಾಮೀಜಿ, ‘ಅಕ್ಕ ನಾಗಮ್ಮನವರು ಬಸವಣ್ಣನವರ ವ್ಯಕ್ತಿತ್ವ ರೂಪಿಸಿದ ಕ್ರಾಂತಿ ಗಂಗೋತ್ರಿ’ ಎಂದು ಸ್ಮರಿಸಿದರು.

ಸಂಘ–ಸಂಸ್ಥೆಗಳು ಸೇರಿ 36 ಮಹಿಳೆಯರು ಹಾಗೂ 13 ಮಕ್ಕಳಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಶಶಿಕಲಾ ಜೊಲ್ಲೆ, ಮಕ್ಕಳ ಹೃದಯರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಮಾತನಾಡಿದರು.

ಮುನಿರಾಜು ಗೌಡ ಪ್ರಮಾಣ ವಚನ

ಬೆಂಗಳೂರು: ವಿಧಾನ ಪರಿಷತ್ ನೂತನ ಸದಸ್ಯರಾಗಿ ಬಿಜೆಪಿಯ ತುಳಸಿ ಮುನಿರಾಜು ಗೌಡ ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು.

ಪರಿಷತ್ ಕಲಾಪ ಆರಂಭವಾಗುತ್ತಿದ್ದಂತೆ ಕೇಸರಿ ಶಾಲು ಧರಿಸಿ ಬಂದ ತುಳಸಿ ಮುನಿರಾಜು ಗೌಡ ಅವರಿಗೆ, ಸಭಾಪತಿ ಬಸವರಾಜ ಹೊರಟ್ಟಿ ಪ್ರಮಾಣ ವಚನ ಬೋಧಿಸಿದರು. ಬಳಿಕ ಸಂವಿಧಾನ ಪುಸ್ತಕವನ್ನು ಒಳಗೊಂಡ ಸೂಟ್‌ಕೇಸ್ ಹಸ್ತಾಂತರಿಸಿದರು.

ಸದಾಶಿವ ಆಯೋಗ ವರದಿ: ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಮನವಿ

‘ವರದಿ ಚರ್ಚಿಸದೆ ಜಾರಿ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಏಕಪಕ್ಷೀಯವಾಗಿ ಜಾರಿಗೆ ತರಲು ಸರ್ಕಾರ ಮುಂದಾಗಿದೆ. ವರದಿಯಲ್ಲಿ ಸಮಗ್ರವಾಗಿ ಏನಿದೆ ಎಂಬುದು ಯಾರಿಗೂ ತಿಳಿದಿಲ್ಲ. ಇದರ ಸಾಧಕ–ಬಾಧಕಗಳನ್ನು ಬಹಿರಂಗವಾಗಿ ಚರ್ಚಿಸದೆ ಅದರ ಜಾರಿಗೆ ಸರ್ಕಾರ ಮುಂದಾಗಬಾರದು’ ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಸದಸ್ಯರು ಹೇಳಿದರು.

ನಗರದ ಮೌರ್ಯ ವೃತ್ತದಲ್ಲಿ ಒಕ್ಕೂಟದ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು.

ಚಿಂತಕಿ ಬಿ.ಟಿ. ಲಲತಾ ನಾಯಕ್, ‘ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಅವರು ವರದಿಯನ್ನು ಜಾರಿಗೊಳಿಸಲಾಗುವುದು ಎಂದು ಭರವಸೆ ನೀಡಿದ್ದಾರೆ. ಆದರೆ, ಸರ್ಕಾರ ಈವರೆಗೆ ವರದಿಯನ್ನು ಬಹಿರಂಗ ಚರ್ಚೆಗೆ ಬಿಟ್ಟಿಲ್ಲ. ವರದಿಯನ್ನು ತಿರುಚಲಾಗಿದೆ ಎಂಬ ಸುದ್ದಿ ಇದೆ. ಚಲವಾದಿ, ಲಂಬಾಣಿ, ಭೋವಿ, ಕೊರಚ ಮತ್ತು ಕೊರಮ ಇತ್ಯಾದಿ ಪರಿಶಿಷ್ಟ ಜಾತಿಗಳಿಗೆ ಅನ್ಯಾಯ ಮಾಡಲಾಗಿದೆ ಎಂಬ ಮಾಹಿತಿಯೂ ಇದೆ. ವರದಿಯ ಸತ್ಯಾಸತ್ಯತೆ ಬಹಿರಂಗವಾಗಬೇಕು’ ಎಂದು ಒತ್ತಾಯಿಸಿದರು.

ಪ್ರತಿಭಟನೆ ವೇಳೆ ಬಿ.ಟಿ. ಲಲಿತಾ ನಾಯಕ್ ಮಾತನಾಡಿದರು

‘ಒಂದು ಸಮುದಾಯವನ್ನು ಓಲೈಸಲು, ಇತರೆ 99 ಜಾತಿಗಳಿಗೆ ಅನ್ಯಾಯ ಮಾಡುವುದು, ಅಪಮಾನಿಸುವುದು ಸರಿಯಲ್ಲ. ಶ್ರೀರಾಮುಲು ಅವರು ತಮ್ಮ ಏಕಪಕ್ಷೀಯ ಹೇಳಿಕೆಯನ್ನು ಹಿಂಪಡೆಯಬೇಕು ಮತ್ತು ನಮ್ಮ ಸಮುದಾಯಗಳ ಕ್ಷಮೆ ಕೇಳಬೇಕು’ ಎಂದು ಒಕ್ಕೂಟದ ಸದಸ್ಯರು ಆಗ್ರಹಿಸಿದರು.

ಈ ಕುರಿತ ಮನವಿ ಪತ್ರವನ್ನು ಮುಖ್ಯಮಂತ್ರಿ ಗೃಹಕಚೇರಿಯ ವಿಶೇಷ ಅಧಿಕಾರಿ ಸತೀಶ್ ಅವರಿಗೆ ನೀಡಲಾಯಿತು.

ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ರಾಜೀವ್, ರವಿ ಮಾಕಳಿ, ರಾಘವೇಂದ್ರ ನಾಯ್ಕ್, ಅನಂತ್ ನಾಯ್ಕ್, ಡಾ.ರಾಜಾ ನಾಯ್ಕ್, ವಿಜಯ್ ಜಾಧವ್, ಪ್ರೊ.ಹರೀಶ್, ಸಿದ್ಯಾ ನಾಯ್ಕ್, ತೋತ್ಯಾ ನಾಯ್ಕ್, ರಮೇಶ್ ಚಹ್ವಾಣ್, ವಿನೋದ್ ಕುಮಾರ್, ವೆಂಕಟೇಶ್ ಬಂಜಾರ, ಅನಿಲ್ ನಾಯ್ಕ್, ಪಂಕಜಾ ನಾಯ್ಕ್, ಮಾಲಾ ಬಾಯಿ, ಪ್ರೊ.ಹರೀಶ್ ಲಂಬಾಣಿ, ಗುರುಪ್ರಸಾದ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಚಿತ್ರಾವಳಿ



1.ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) 2020–21ನೇ ಆರ್ಥಿಕ ವರ್ಷದ ಎರಡನೇ ಮಧ್ಯಂತರ ಲಾಭಾಂಶದ ಕಂತನ್ನು ಕೇಂದ್ರ ಸರ್ಕಾರಕ್ಕೆ ಪಾವತಿಸಿತು. ಎಚ್‌ಎಎಲ್‌ನ ಮುಖ್ಯವ್ಯವಸ್ಥಾಪಕ ನಿರ್ದೇಶಕ ಆರ್. ಮಾಧವನ್ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ₹376.92 ಕೋಟಿ ಮೊತ್ತದ ಚೆಕ್ ಅನ್ನು ದೆಹಲಿಯಲ್ಲಿ ಹಸ್ತಾಂತರಿಸಿದರು. ಹಣಕಾಸು ವಿಭಾಗದ ನಿರ್ದೇಶಕ ಸಿ.ಬಿ. ಅನಂತಕೃಷ್ಣನ್, ರಕ್ಷಣಾ ಇಲಾಖೆಯ ಉತ್ಪಾದನಾ ವಿಭಾಗದ ಕಾರ್ಯದರ್ಶಿ ರಾಜಕುಮಾರ್ ಇತರರು ಇದ್ದರು.

2. ಬಜೆಟ್‌ನಲ್ಲಿ ಒಕ್ಕಲಿಗರ ಅಭಿವೃದ್ಧಿ ಪ್ರಾಧಿಕಾರ ರಚನೆಯ ಘೋಷಣೆ ಮಾಡಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ರಾಜ್ಯ ಒಕ್ಕಲಿಗರ ಅಭಿವೃದ್ಧಿ ಪ್ರಾಧಿಕಾರ ಸಲಹಾ ಸಮಿತಿಯಿಂದ ಬುಧವಾರ ಅಭಿನಂದನೆ ಸಲ್ಲಿಸಲಾಯಿತು. ತುರುವೇಕೆರೆ ಕ್ಷೇತ್ರದ ಶಾಸಕ ಮಸಾಲೆ ಜಯರಾಂ, ಸಮಿತಿಯ ಪ್ರಧಾನ ಸಂಚಾಲಕ ನಾಗರಾಜ್ ಯಲಚವಾಡಿ ಮತ್ತು ಸದಸ್ಯರು ಇದ್ದರು

3. ನಗರದ ವಸಂತಪುರ ವಾರ್ಡ್‌ನ ಕೋಣನಕುಂಟೆ ಹಳೆಯ ಗ್ರಾಮ ವ್ಯಾಪ್ತಿಯಲ್ಲಿ ₹1ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಎಂ. ಕೃಷ್ಣಪ್ಪ ಚಾಲನೆ ನೀಡಿದರು. ಮುಖಂಡರಾದ ಜಯರಾಮು, ಟಿ.ನಾರಾಯಣ್, ಬಿಜೆಪಿ ಮುಖಂಡರಾದ ಚಂದ್ರಣ್ಣ, ಜನಾರ್ದನ್, ಡಿ.ರಾಮಮೂರ್ತಿ ಇದ್ದರು.

ನಗರದಲ್ಲಿ ಇಂದು

ಗುರುವಂದನೆ ವಿಶೇಷ ನೃತ್ಯ ಕಾರ್ಯಕ್ರಮ: ಅದಿತಿ ಶಶಿಕುಮಾರ್, ಗುರು: ಸಂಜಯ್ ಶಾಂತಾರಾಮ್, ಆಯೋಜನೆ: ಶಿವಪ್ರಿಯ ನೃತ್ಯ ಸಂಸ್ಥೆ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಸಂಜೆ 5

ಸಾಂಸ್ಕೃತಿಕ ಹಬ್ಬ, ಕಲಾಪೋಷಕ ಪ್ರಶಸ್ತಿ ಪ್ರದಾನ: ದಿವ್ಯ ಸಾನಿಧ್ಯ: ಬೇಲಿಮಠದ ಶಿವರುದ್ರ ಸ್ವಾಮೀಜಿ, ಡಾ.ಸಿ. ಸೋಮಶೇಖರ್, ಸಿ. ದಾಸೇಗೌಡರು, ಚಿ.ನಾ. ರಾಮು, ಆಯೋಜನೆ: ಮಹೇಶ್ ಲಲಿತಕಲಾ ಸಂಸ್ಥೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸಂಜೆ 5

ಕಾವ್ಯ ಶಿವರಾತ್ರಿ: ಉದ್ಘಾಟನೆ: ಶೂದ್ರ ಶ್ರೀನಿವಾಸ್, ಅಧ್ಯಕ್ಷತೆ: ಮೂಡ್ನಾಕೂಡು ಚಿನ್ನಸ್ವಾಮಿ, ಉಪಸ್ಥಿತಿ: ಕೆ.ಎನ್. ಕವನ, ಹನುಮಂತಪ್ಪ ಸಿ.ಎಸ್., ನವೀನ್ ಬಿಡದಿ, ವಿಜಯಕುಮಾರ್, ಕೆ.ಸಿ. ಶಿವಾ ರೆಡ್ಡಿ, ಆಯೋಜನೆ: ರಂಗಸಮುದ್ರ, ಕಾವ್ಯ ಮಂಡಲ, ಜನಸಂಸ್ಕೃತಿ ಪ್ರತಿಷ್ಠಾನ, ಸ್ಥಳ: ಟಿ.ಎನ್.ಬಾಲಕೃಷ್ಣ ಬಯಲು ರಂಗ ಮಂದಿರ, ರಾಜರಾಜೇಶ್ವರಿ ನಗರ, ಸಂಜೆ 6

ಕಾಯಕ ಶರಣರ ಜಯಂತಿ: ಮುಖ್ಯ ಅತಿಥಿ: ಅರವಿಂದ ಲಿಂಬಾವಳಿ, ಉಪಸ್ಥಿತಿ: ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6

ದಕ್ಷಿಣ ಆಫ್ರಿಕಾದ ವೈರಾಣು ಪತ್ತೆ

ಒಂದೇ ದಿನದಲ್ಲಿ 760 ಮಂದಿಗೆ ಸೋಂಕು ಪತ್ತೆ: ಒಂದೂವರೆ ತಿಂಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ದಕ್ಷಿಣ ಆಫ್ರಿಕಾದ ರೂಪಾಂತರ ವೈರಾಣು ಒಬ್ಬರಲ್ಲಿ ದೃಢಪಟ್ಟಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಬುಧವಾರ ಮತ್ತಷ್ಟು ಏರಿಕೆ ಕಂಡಿದ್ದು, 760 ಪ್ರಕರಣಗಳು ವರದಿಯಾಗಿವೆ. ಕಳೆದ ಒಂದೂವರೆ ತಿಂಗಳಿನಲ್ಲಿ 24 ಗಂಟೆಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಕೋವಿಡ್ ಪೀಡಿತರಾದವರಲ್ಲಿ ಮತ್ತೆ ನಾಲ್ಕು ಮಂದಿಯಲ್ಲಿ ಬ್ರಿಟನ್ ವೈರಾಣು ಕಾಣಿಸಿಕೊಂಡಿದೆ. ಇದರಿಂದಾಗಿ ಬ್ರಿಟನ್ ಮಾದರಿಯ ಕೊರೊನಾ ಸೋಂಕು ಒಳಗೊಂಡವರ ಸಂಖ್ಯೆ 29ಕ್ಕೆ ಏರಿಕೆಯಾಗಿದೆ. ಅಲ್ಲಿಂದ ಬಂದವರಲ್ಲಿ ಈವರೆಗೆ 64 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ತಿಂಗಳು 10 ದಿನಗಳ ಅವಧಿಯಲ್ಲಿ 5,550 ಮಂದಿ ಕೊರೊನಾ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 555 ಪ್ರಕರಣಗಳು ದೃಢಪಟ್ಟಿವೆ. ರಾಜ್ಯದಲ್ಲಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 9.56 ಲಕ್ಷ ದಾಟಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಐದು ಮಂದಿ ಹಾಗೂ ದಕ್ಷಿಣ ಕನ್ನಡದಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಸಾವಿಗೀಡಾದವರ ಒಟ್ಟು ಸಂಖ್ಯೆ 12,379ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ 331 ಮಂದಿ ಗುಣಮುಖರಾಗಿದ್ದು, ಚೇತರಿಸಿಕೊಂಡವರ ಸಂಖ್ಯೆ 9.36 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 70 ಸಾವಿರ ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ. ಈವರೆಗೆ 1.94 ಕೋಟಿ ಪರೀಕ್ಷೆಗಳನ್ನು ನಡೆಸಲಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, ಸದ್ಯ 7,456 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ 488 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.09 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 22 ಪ್ರಕರಣಗಳು ದೃಢಪಟ್ಟಿವೆ. ಅಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 54,287ಕ್ಕೆ ತಲುಪಿದೆ. ಕಲಬುರ್ಗಿಯಲ್ಲಿ 37, ತುಮಕೂರಿನಲ್ಲಿ 36, ಉಡುಪಿಯಲ್ಲಿ 33, ದಕ್ಷಿಣ ಕನ್ನಡ ಮತ್ತು ಧಾರವಾಡದಲ್ಲಿ ತಲಾ 25 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

ನಗರದ ಕೋವಿಡ್ ಪ್ರಕರಣಗಳು



ಬುಧವಾರದ ಏರಿಕೆ

488 ದೃಢಪಟ್ಟ ಪ್ರಕರಣ

146 ಗುಣಮುಖ | 05 ಸಾವು

62 ಸಾವಿರ ಮಂದಿಗೆ ಲಸಿಕೆ

ರಾಜ್ಯದಲ್ಲಿ ಬುಧವಾರ 2,757 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 62,198 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಇವರಲ್ಲಿ 41,529 ಮಂದಿ ಹಿರಿಯ ನಾಗರಿಕರು ಸೇರಿದ್ದಾರೆ. ಈವರೆಗೆ 11.34 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 4.71 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 2.65 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ 1.88 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 31,962 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

103 ವರ್ಷದ ಮತ್ತೊಬ್ಬ ವೃದ್ಧೆಗೆ ಲಸಿಕೆ

ಲಸಿಕೆ ಪಡೆದ 103 ವರ್ಷದ ರಂಗಮ್ಮ

ಗಿರಿನಗರದ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ 103 ವರ್ಷದ ವೃದ್ಧೆಯೊಬ್ಬರು ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ.

ಕತ್ರಿಗುಪ್ಪೆ ಬಡಾವಣೆಯಲ್ಲಿ ವಾಸವಾಗಿರುವ ರಂಗಮ್ಮ ಎನ್ನುವರು ಲಸಿಕೆ ಪಡೆಯಲು ಸೊಸೆ ಮತ್ತು ಮಗಳ ಜತೆಗೆ ಆಸ್ಪತ್ರೆಗೆ ಬಂದಿದ್ದರು. ಲಸಿಕೆ ನೀಡಿದ ಬಳಿಕ 30 ನಿಮಿಷ ಅವರ ಮೇಲೆ ವಿಶೇಷ ನಿಗಾ ಇರಿಸಿದ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿ, ಯಾವುದೇ ಅಡ್ಡ ಪರಿಣಾಮ ಕಾಣಿಸಿಕೊಂಡಿಲ್ಲ ಎನ್ನುವುದು ಖಚಿತವಾದ ಬಳಿಕ ಮನೆಗೆ ತೆರಳಲು ಅವಕಾಶ ನೀಡಿದರು. ಇವರು ಈವರೆಗೆ ನಗರದಲ್ಲಿ ಲಸಿಕೆ ಪಡೆದ ಅತೀ ಹಿರಿಯ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ. ನಗರದ ಅಪೋಲೊ ಆಸ್ಪತ್ರೆಯಲ್ಲಿ ಮಂಗಳವಾರ 103 ವರ್ಷದ ಜೆ. ಕಾಮೇಶ್ವರಿ ಎನ್ನುವವರು ಲಸಿಕೆ ಪಡೆದುಕೊಂಡಿದ್ದರು.

ಕೋವಿಡ್ ಅಂಕಿ–ಅಂಶ

ಆಧಾರ ವರ್ಲ್ಡೋಮೀಟರ್ ಪಿಟಿಐ

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ / ಒಟ್ಟು ಸೋಂಕಿತರು	11.82 ಕೋಟಿ ▲	1.126ಕೋಟಿ ▲	9,56,801 ▲
ಸಕ್ರಿಯ ಪ್ರಕರಣ	2.16 ಕೋಟಿ ▼	1.81 ಲಕ್ಷ ▼	7,456 ▲
ಗುಣಮುಖ	9.39ಕೋಟಿ ▲	1.09 ಕೋಟಿ ▲	9,36,947 ▲
ಸಾವು	26.24ಲಕ್ಷ ▲	1.58 ಲಕ್ಷ ▲	12,379 ▲

ದಿನದ ಏರಿಕೆ

	ವಿಶ್ವ	ಭಾರತ	ರಾಜ್ಯ
ಹೊಸ ಪ್ರಕರಣ	2.95 ಲಕ್ಷ ▼	17,873 ▼	760 ▲
ಗುಣಮುಖ	4.02ಲಕ್ಷ ▲	20,643 ▲	331 ▼
ಸಾವು	6,594 ▼	133 ▲	06 ▲

115 ಐಸಿಯುನಲ್ಲಿ ಇರುವವರು ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 55,683 ಲಕ್ಷ ಅಮೆರಿಕ ▲; 69,537 ಬ್ರೆಜಿಲ್ ▼; 23,302 ಫ್ರಾನ್ಸ್ ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 87.11 ಅಮೆರಿಕ ▼; 35.76 ಫ್ರಾನ್ಸ್ ▲; 10.13 ಬ್ರೆಜಿಲ್ ▲

ಎಲ್ಲಿ ಹೆಚ್ಚು ಸಾವು: 52,556 ಮಹಾರಾಷ್ಟ್ರ ▲; 12,526 ತಮಿಳುನಾಡು ▲; 10,931 ದೆಹಲಿ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ▲ 22.38 ಮಹಾರಾಷ್ಟ್ರ; 8.90 ಆಂಧ್ರಪ್ರದೇಶ ▲; 10.83 ಕೇರಳ ▲

ಪ್ರಜಾವಾಣಿ ಗ್ರಾಫಿಕ್ಸ್

ಅಹೋರಾತ್ರಿ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಕುದುರೆಗೆರೆ ಗ್ರಾಮದಲ್ಲಿರುವ ಆದಿಚುಂಚನಗಿರಿ ಶಾಖಾ ಮಠದ ನಾರಾಯಣ ಧಾಮದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ಗುರುವಾರ ಅಹೋರಾತ್ರಿ ಸಂಗೀತ್ಸೋವ ಹಮ್ಮಿಕೊಳ್ಳಲಾಗಿದೆ.

ನಾಡಿನ ಹೆಸರಾಂತ ಗಾಯಕರು ಭಕ್ತಿಗೀತೆ, ಸುಗಮ ಸಂಗೀತ ಮತ್ತು ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಸಾಯಿಕೀರ್ತಿನಾಥ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

35 ಅಡಿ ಎತ್ತರದ ಶಿವನ ವಿಗ್ರಹ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ಮೂಲನಗೆ ಪ್ರಾರ್ಥಿಸುವ ಸಂಬಂಧ ವಿಮೋಚನಾ ವೆಲ್ಫೇರ್ ಟ್ರಸ್ಟ್ 8 ಮಂದಿ ಕಲಾವಿದರ ನೆರವಿನಿಂದ 35 ಅಡಿ ಎತ್ತರದ ಶಿವನ ವಿಗ್ರಹವನ್ನು ನಿರ್ಮಿಸಿದೆ. ಅದಕ್ಕೆ ಕೊರೊನಾ ಶಿವ ಎಂದು ಹೆಸರಿಡಲಾಗಿದೆ. ಈ ವಿಗ್ರಹವನ್ನು ವಿಲ್ಸನ್ ಗಾರ್ಡನ್‌ನ ಬಿಬಿಎಂಪಿ ಮೈದಾನದಲ್ಲಿ ಇರಿಸಲಾಗಿದೆ. ಗುರುವಾರ ವಿಶೇಷ ಪೂಜೆಗಳು ನಡೆಯಲಿವೆ. ಅಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ. ಈ ವಿಗ್ರಹವು ಮಾ.14ರವರೆಗೆ ಇರಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಶೇಷಮಹಾಬಲಮುರಿ ಗಣಪತಿ ಸೇವಾ ಸಮಿತಿ ಟ್ರಸ್ಟ್ ಬೆಳಿಗ್ಗೆ 8 ಗಂಟೆಯಿಂದ ಶತ ರುದ್ರಾಭಿಷೇಕ, ಏಕವಾರ ರುದ್ರಾಭಿಷೇಕ ಹಮ್ಮಿಕೊಂಡಿದೆ. ವೈದಿಕ ಧರ್ಮ ಸನಾತನ ಟ್ರಸ್ಟ್ ಸಂಜೆ 6 ಗಂಟೆಗೆ ಆರ್ಟ್ ಆಫ್ ಲಿವಿಂಗ್ ಮುಖ್ಯಸ್ಥ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರಿಂದ ಆನ್‌ಲೈನ್ ಉಪನ್ಯಾಸ ಆಯೋಜಿಸಿದೆ.

ಶಿವ–ಪಾರ್ವತಿಗೆ ವಿಶೇಷ ಅಲಂಕಾರ

ಹನುಮಂತ ನಗರದ ಶೇಷ ಮಹಾಬಲಮುರಿ ಗಣಪತಿ ದೇವಸ್ಥಾನವು ಶಿವರಾತ್ರಿ ಪ್ರಯುಕ್ತ ಶಿವ–ಪಾರ್ವತಿ ಹಾಗೂ ಉಳಿದ ದೇವರಿಗೆ ವಿಶೇಷ ಅಲಂಕಾರವನ್ನು ಏರ್ಪಡಿಸಿದೆ. ದ್ರಾಕ್ಷಿ, ಮುತ್ತು, ಹಣ್ಣುಗಳು, ಗಂಟೆಗಳು, ಕಬ್ಬಿನಿಂದ ವಿಶೇಷ ಅಲಂಕಾರ ಮಾಡಿ, ಶಿವರಾತ್ರಿ ಆಚರಿಸಲಾಗುತ್ತದೆ ಎಂದು ದೇವಸ್ಥಾನ ಆಡಳಿತ ಮಂಡಳಿಯ ಕೆ. ಚಂದ್ರಶೇಖರ್ ತಿಳಿಸಿದ್ದಾರೆ.

ಆರ್‌.ಆರ್‌.ನಗರ: ಕಾವ್ಯ ಗಾಯನ

ರಾಜರಾಜೇಶ್ವರಿ ನಗರ: ಮಹಾಶಿವರಾತ್ರಿ ಅಂಗವಾಗಿ ಇಲ್ಲಿನ ಜೆ.ಪಿ. ಪಾರ್ಕ್ ಮತ್ತು ಲಗ್ಗೆರೆಯಲ್ಲಿ ಅಹೋರಾತ್ರಿ ಜಾಗರಣೆ, ಕಾವ್ಯಗಾಯನ ಸೇರಿದಂತೆ ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ವರ್ಷದಂತೆ ಈ ಬಾರಿಯೂ 30 ಅಡಿ ಶಿವನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು.

ವಾದ್ಯಗೋಷ್ಠಿ, ಕಾಮಿಡಿ ಕಿಲಾಡಿಗಳಿಂದ ಮತ್ತು ಮಿಮಿಕ್ರಿ ಕಲಾವಿದರಿಂದ ಹಾಸ್ಯ ಕಾರ್ಯಕ್ರಮಗಳೂ ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ದೇವಾಲಯಗಳಲ್ಲಿ ವಿಶೇಷ ಪೂಜೆಗೆ ವ್ಯವಸ್ಥೆ • ತಳಿರು, ತೋರಣ ವಿದ್ಯುತ್ ದೀಪಗಳಿಂದ ಅಲಂಕಾರ

ಶಿವರಾತ್ರಿ: ಇಡೀ ದಿನ ಆರಾಧನೆಗೆ ನಗರ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಶಿವರಾತ್ರಿ ಆಚರಣೆ ಸಂಬಂಧ ನಗರದ ಶಿವ ದೇವಾಲಯಗಳು ವಿಶೇಷ ಅಲಂಕಾರಗಳಿಂದ ಸಜ್ಜಾಗಿದ್ದು, ಗುರುವಾರ ಮುಂಜಾನೆಯಿಂದಲೇ ರುದ್ರಾಭಿಷೇಕ, ಕ್ಷೀರಾಭಿಷೇಕ ಸೇರಿದಂತೆ ವಿವಿಧ ಪೂಜಾ ವಿಧಿ ವಿಧಾನಗಳು ನಡೆಯಲಿವೆ. ವಿವಿಧ ಸಂಘ–ಸಂಸ್ಥೆಗಳು ಹಾಗೂ ದೇವಸ್ಥಾನದ ಆಡಳಿತ ಮಂಡಳಿಗಳು ಜಾಗರಣೆ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿವೆ.

ಗವಿಪುರದ ಗವಿ ಗಂಗಾಧರೇಶ್ವರ ದೇವಾಲಯ, ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಾಲಯ, ಟೆಂಪಲ್ ಸ್ಟ್ರೀಟ್‌ನ ದಕ್ಷಿಣಮುಖ ನಂದಿ ತೀರ್ಥ, ಹಲಸೂರಿನ ಸೋಮೇಶ್ವರ ದೇವಸ್ಥಾನ, ಜರಗನಹಳ್ಳಿ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ, ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ಕೋಣನಕುಂಟೆಯ ಚಂದ್ರಚೂಡೇಶ್ವರ ದೇವಸ್ಥಾನ, ಚಾಮರಾಜಪೇಟೆಯ ಮಲೆ ಮಹದೇಶ್ವರ ದೇವಸ್ಥಾನ, ಹಳೆ ವಿಮಾನ ನಿಲ್ದಾಣ ರಸ್ತೆಯ ಮುರುಗೇಶ ಪಾಳ್ಯದ ಶಿವೋಹಂ ಶಿವ ದೇವಸ್ಥಾನ, ಕೋಟೆ ಜಲಕಂಠೇಶ್ವರ ದೇವಸ್ಥಾನ ಸೇರಿದಂತೆ ನಗರದಲ್ಲಿ ಶಿವಾಲಯಗಳು ಮಹಾಶಿವರಾತ್ರಿ ಆಚರಣೆಗೆ ಸಜ್ಜಾಗಿವೆ.

ವಿಶೇಷ ಪೂಜೆ, ಪುನಸ್ಕಾರ ಮತ್ತು ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವ ಪತ್ರೆ ಅರ್ಪಣೆ, ಮಹಾ ಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳಿಗೆ ಭರದ ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತರಿಗೆ 'ಓಂ ನಮಃ ಶಿವಾಯ' ಮಂತ್ರಗಳು, ಶಿವನಾಮ ಸ್ಮರಣೆ, ಜಪ, ತಪಗಳಿಗೆ ವ್ಯವಸ್ಥೆ ಮಾಡಲಾಗಿದೆ. ಕೋವಿಡ್ ಕಾರಣ ಭಕ್ತರ ದಟ್ಟಣೆ ತಡೆಯಲು ದೇವಸ್ಥಾನದ ಆಡಳಿತ ಮಂಡಳಿಗಳು ದೇವಾಲಯದ ಆವರಣಗಳಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಕೆ ಮಾಡಿವೆ. ತಳಿರು, ತೋರಣ ಹಾಗೂ ವಿದ್ಯುತ್ ದೀಪಗಳಿಂದ ದೇವಸ್ಥಾನಗಳು ಅಲಂಕಾರಗೊಂಡಿವೆ.

ಸಾಂಸ್ಕೃತಿಕ ಕಾರ್ಯಕ್ರಮ: ಜಾಗರಣೆ ಸಂಬಂಧ ಸಂಜೆಯ ನಂತರ ನಗರದ ನಾನಾ ದೇವಸ್ಥಾನ, ಮೈದಾನಗಳಲ್ಲಿ ಸ್ಥಳೀಯ ಸಂಘ ಸಂಸ್ಥೆಗಳು, ದೇವಸ್ಥಾನ ಆಡಳಿತ ಮಂಡಳಿಗಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿವೆ. ರಾತ್ರಿಯಿಡೀ ಶಿವ ಸಂಗಮ, ಶಿವ ಅಂತ್ಯಾಕ್ಷರಿ, ಶಿವ ಧ್ವನಿ, ಶಿವ ಸಂಗಂ ಭಜನೆ, ಭಕ್ತಿಗೀತೆಗಳ ಕಾರ್ಯಕ್ರಮ ನಡೆಯಲಿವೆ.

ಬಸವನಗುಡಿಯ ಗವಿಗಂಗಾಧರೇಶ್ವರ ದೇವಾಲಯದಲ್ಲಿ ಬೆಳಿಗ್ಗೆ 6 ಗಂಟೆಯಿಂದಲೇ ಶಿವಲಿಂಗಕ್ಕೆ ಅಭಿಷೇಕ, ವಿಶೇಷ ಪೂಜೆಗಳು ನಡೆಯಲಿವೆ. ಭಕ್ತರಿಗೆ ದರ್ಶನಕ್ಕೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ.

ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘವು ಬೆಳಿಗ್ಗೆ 9ರಿಂದ ರಾತ್ರಿ 10ರವರೆಗೆ ಸಾರ್ವಜನಿಕರಿಗಾಗಿ 'ಮೃತ್ತಿಕಾ ಶಿವಲಿಂಗ ದರ್ಶನ' ಏರ್ಪಡಿಸಿದೆ. ಮಲ್ಲೇಶ್ವರದ 5ನೇ ಅಡ್ಡರಸ್ತೆಯಲ್ಲಿನ ಶ್ರೀಕಂಠೇಶ್ವರ ಭವನದಲ್ಲಿ ಭಜನೆ, ವೇದಪಾರಾಯಣ ನಡೆಯಲಿದೆ. ಅಲ್ಲಿ ಯಲಹಂಕದ ಶ್ರೀ ಶಾರದಾದೇವಿ ಆಧ್ಯಾತ್ಮಿಕ ಸಂಘವು ಮಧ್ಯಾಹ್ನ 12ಕ್ಕೆ 'ಶಿವ ಕೀರ್ತನೆ' ಹಮ್ಮಿಕೊಂಡಿದೆ. ಕುಮಾರಸ್ವಾಮಿ ಬಡಾವಣೆಯ ಬ್ರಾಹ್ಮಣ ಸೇವಾ ಸಂಘದ ಮಹಿಳಾ ವಿಭಾಗದ ಜಯಲಕ್ಷ್ಮೀ ತಂಡ ಹಾಗೂ ಟಿ. ದಾಸರಹಳ್ಳಿಯ ಶ್ರೀ ವಿನಾಯಕ ಭಜನಾ ಮಂಡಳಿಯ ಭಾಗ್ಯ ಮಂಜುನಾಥ್ ನೇತೃತ್ವದ ತಂಡವು ಸಂಜೆ 5ಕ್ಕೆ ಭಜನೆ ಆಯೋಜಿಸಿದೆ. ಸಂಜೆ 6ಕ್ಕೆ ರುದ್ರಾಭಿಷೇಕ ನಡೆಯಲಿದೆ.

ಛಾಯಾಚಿತ್ರ ಪ್ರದರ್ಶನ: ಕೆಂಗೇರಿಯ ಏಕದಳ ಬಿಲ್ವ ಬಂಡೇಮಠ ಸಂಸ್ಥಾನ ಮತ್ತು ಸ್ನೇಹಜೀವಿ ಚಾರಿಟೆಬಲ್ ಟ್ರಸ್ಟ್ ಬಂಡೇಶ್ವರಸ್ವಾಮಿ ಶಿವಯೋಗಿಗಳ ಭವನದಲ್ಲಿ ಹವ್ಯಾಸಿ ಛಾಯಾಚಿತ್ರಗಾರ ಚಕ್ರಪಾಣಿ ಸೆರೆಹಿಡಿದ ಶಿವ ದೇವಾಲಯಗಳು, ವಿಗ್ರಹಗಳ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಿದೆ.

ಹನುಮಂತನಗರದ ಶ್ರೀ ಶೇಷ ಮಹಾ ಬಲಮುರಿ ಗಣಪತಿ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಮಾಡಲಾಯಿತು. ಕೆ.ಚಂದ್ರಶೇಖರ್ ಇದ್ದಾರೆ (ಎಡಚಿತ್ರ) ಮಲ್ಲೇಶ್ವರದ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಶ್ರೀಕಂಠೇಶ್ವರ ಸ್ವಾಮಿ ಸನ್ನಿಧಿಯನ್ನು ಸಾರ್ವಜನಿಕ ದರ್ಶನಕ್ಕಾಗಿ ಕಿರಣ್ ಶಾಸ್ತ್ರಿಗಳು ವಿಶೇಷವಾಗಿ ರೂಪಿಸಿದ್ದಾರೆ – ಪ್ರಜಾವಾಣಿ ಚಿತ್ರಗಳು

ರಾತ್ರಿ ಪೂರ್ತಿ ಸಾಂಸ್ಕೃತಿಕ ಕಾರ್ಯಕ್ರಮ

ಶಿವರಾತ್ರಿ ಹಬ್ಬದ ಪ್ರಯುಕ್ತ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಷ್ಠಾನವು ಮಲ್ಲೇಶ್ವರದ 5ನೇ ಅಡ್ಡರಸ್ತೆಯಲ್ಲಿರುವ ಸರ್ಕಾರಿ ಶಾಲೆಯ ಆಟದ ಮೈದಾನದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಸಂಜೆ 7 ಗಂಟೆಗೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಅಹೋರಾತ್ರಿ ಕಾವ್ಯ ಗಾಯನ

ರಂಗಸಮುದ್ರ, ಕಾವ್ಯ ಮಂಡಲ ಮತ್ತು ಜನಸಂಸ್ಕೃತಿ ಪ್ರತಿಷ್ಠಾನ ಅಹೋರಾತ್ರಿ ಕಾವ್ಯ ಗಾಯನ 'ಕಾವ್ಯ ಶಿವರಾತ್ರಿ' ಕಾರ್ಯಕ್ರಮವನ್ನು ರಾಜರಾಜೇಶ್ವರಿ ನಗರದ ಟಿ.ಎನ್. ಬಾಲಕೃಷ್ಣ ಬಯಲು ರಂಗ ಮಂದಿರದಲ್ಲಿ ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಹಮ್ಮಿಕೊಂಡಿದೆ. ದೊಡ್ಡಗವಿ ಬಸಪ್ಪ ಮತ್ತು ತಂಡದಿಂದ ಮಂಟೇಸ್ವಾಮಿ ಮತ್ತು ಮಲೆ ಮಾದೇಶ್ವರ ಮಹಾಕಾವ್ಯ ಗಾಯನ ನಡೆಯಲಿದೆ.

ಹಾಪ್‌ಕಾಮ್ಸ್ ಮಹಾಶಿವರಾತ್ರಿ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಹಣ್ಣು, ತರಕಾರಿ ಮಾರಾಟಕ್ಕಾಗಿ 'ಶಿವರಾತ್ರಿ ಮೇಳ'ವನ್ನು ಆಯೋಜಿಸಿದೆ. ಕಲ್ಲಂಗಡಿ, ಸೇಬು, ಖರ್ಬೂಜ, ದ್ರಾಕ್ಷಿ, ಕಿತ್ತಳೆ, ಮೂಸಂಬಿ, ಬಾಳೆಹಣ್ಣು ಸೇರಿದಂತೆ ಎಲ್ಲ ಬಗೆಯ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡುವ ಸಲುವಾಗಿ ಐದು ಮಳಿಗೆಗಳನ್ನು ತೆರೆಯಲಾಗಿದೆ.

ಗುಹಾಂತರ ದ್ವಾರದ 12 ಜ್ಯೋತಿರ್ಲಿಂಗಗಳ ದರ್ಶನ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕೆ.ಆರ್.ಪುರದ ವೆಂಗಯ್ಯನಕೆರೆ ಬಳಿ ಇರುವ ಮಹಾಬಲೇಶ್ವರಸ್ವಾಮಿ ಮತ್ತು ಲಕ್ಷ್ಮಿ ನಾರಾಯಣಸ್ವಾಮಿ ದೇವಾಲಯದಲ್ಲಿ ಮಹಾ ಶಿವರಾತ್ರಿ ಮಹೋತ್ಸವ ಹಾಗೂ ಗುಹಾಂತರ ದ್ವಾರದ 12 ಜ್ಯೋತಿರ್ಲಿಂಗಗಳ ದಿವ್ಯ ದರ್ಶನವನ್ನು ಏರ್ಪಡಿಸಲಾಗಿದೆ.

ಕಳೆದ ಹತ್ತು ವರ್ಷಗಳಿಂದ ನಡೆಯುತ್ತಿರುವ ಈ ಕಾರ್ಯಕ್ರಮಕ್ಕೆ ಕೆ.ಆರ್.ಪುರ ಗ್ರಾಮಸ್ಥರು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ. ದೇವಸ್ಥಾನಕ್ಕೆ ಸುಣ್ಣಬಣ್ಣಗಳನ್ನು ಬಳಿದು ವಿಶೇಷವಾಗಿ ಸಿಂಗರಿಸಿದ್ದಾರೆ. ಗುಹಾಂತರ ದ್ವಾರದ ಹನ್ನೆರಡು ಜ್ಯೋತಿರ್ಲಿಂಗಗಳನ್ನು ಪ್ರತಿಷ್ಠಾಪಿಸಿ ಆಕರ್ಷಕವಾಗಿ ಕಾಣಲು ಹಾಗೂ ಕಣ್ಮನ ಸೆಳೆಯಲು ಜಗಮಗಿಸುವ ವಿದ್ಯುತ್ ದ್ವೀಪದ ಅಲಂಕಾರ ಮಾಡಲಾಗಿದೆ.

ಗುರುವಾರ ಬೆಳಿಗ್ಗೆ 4.30 ಗಂಟೆಯಿಂದ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕದೊಂದಿಗೆ ಮಹಾ ಶಿವರಾತ್ರಿ ಕಾರ್ಯಕ್ರಮ ಆರಂಭಗೊಳ್ಳುತ್ತದೆ. ಬೆಳಿಗ್ಗೆಯಿಂದಲೇ ಯಾಮದ ಪೂಜೆ, ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ಮಹಾಮಂಗಳರಾತಿ ಪ್ರಸಾದ ವಿನಿಯೋಗ ಮಾಡಲಾಗುತ್ತದೆ. ದೇವಸ್ಥಾನದ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಸೋಮನಾಥ ಜ್ಯೋತಿರ್ಲಿಂಗ, ತ್ರಯಂಭಕೇಶ್ವರ ಜ್ಯೋತಿರ್ಲಿಂಗ, ರಾಮೇಶ್ವರ ಜ್ಯೋತಿರ್ಲಿಂಗ, ವೃಷಭನಾಭ ಜ್ಯೋತಿರ್ಲಿಂಗ, ಭೀಮಾಶಂಕರ ಜ್ಯೋತಿರ್ಲಿಂಗ, ಕೇದಾರನಾಥ ಜ್ಯೋತಿರ್ಲಿಂಗ, ನಾಗೇಶ್ವರ ಜ್ಯೋತಿರ್ಲಿಂಗ, ಕಾಶೀ ವಿಶ್ವೇಶ್ವರ ಜ್ಯೋತಿರ್ಲಿಂಗ, ಗೃಷ್ಣೇಶ್ವರ ಜ್ಯೋತಿರ್ಲಿಂಗ, ಮಹಾಕಾಳೇಶ್ವರ ಜ್ಯೋತಿರ್ಲಿಂಗ, ಶ್ರೀಶೈಲ ಮಲ್ಲಿಕಾರ್ಜುನ ಜ್ಯೋತಿರ್ಲಿಂಗ, ಓಂಕಾರೇಶ್ವರ ಜ್ಯೋತಿರ್ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಕೆ.ಆರ್.ಪುರ ಸುತ್ತಮುತ್ತಲಿನ ಮಹದೇವಪುರ, ಆನಂದಪುರ, ಮೇಡಹಳ್ಳಿ, ಭಟ್ಟರಹಳ್ಳಿ, ಅವಲಹಳ್ಳಿ, ಬಸವನಪುರ, ದೇವಸಂದ್ರ, ರಾಮಮೂರ್ತಿ ನಗರ, ಐಟಿಐ ಕಾಲೋನಿ ಮರಗೊಂಡಹಳ್ಳಿ, ಟಿ.ಸಿ.ಪಾಳ್ಯ ಮುಂತಾದ ಕಡೆಗಳಿಂದ ಅಪಾರ ಭಕ್ತ ಸಮೂಹ ಇಲ್ಲಿಗೆ ಬಂದು ದೇವರ ಕೃಪೆಗೆ ಪಾತ್ರರಾಗಲಿದ್ದಾರೆ. ಭಕ್ತರಿಗೆ ಪ್ರಸಾದ ವಿನಿಯೋಗ ಇರುತ್ತದೆ.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ಹಿರಿಯೂರು ಶಾಸಕಿ ಪೂರ್ಣಿಮಾ ಶ್ರೀನಿವಾಸ್, ಬಿಎಂಟಿಸಿ ಅಧ್ಯಕ್ಷ ಎನ್.ಎಸ್.ನಂದೀಶ್ ರೆಡ್ಡಿ, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದಮೂರ್ತಿ, ತಹಶೀಲ್ದಾರ್ ಅಜಿತ್ ಕುಮಾರ್, ಪಾಲಿಕೆಯ ಮಾಜಿ ಸದಸ್ಯ ಪಿ.ಜೆ.ಅಂತೋಣಿಸ್ವಾಮಿ ಪಾಲ್ಗೊಳ್ಳಲಿದ್ದಾರೆ.

ಮಹಾಭಲೇಶ್ವರ ದೇವಸ್ಥಾನದಲ್ಲಿ ಸಂಕ್ರಾಂತಿ, ಕಾರ್ತಿಕ ಮಾಸದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರಲಾಗುತ್ತದೆ. ಪ್ರತಿ ವರ್ಷದಂತೆ ಈ ವರ್ಷವೂ ಮಹಾ ಶಿವರಾತ್ರಿ ಪ್ರಯುಕ್ತ ಭಕ್ತರಿಗೆ ಜ್ಯೋತಿರ್ಲಿಂಗ ದರ್ಶನದ ವ್ಯವಸ್ಥೆ ಮಾಡಲಾಗಿದೆ. 25 ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ ಎಂದು ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಕೆ.ಎನ್.ಶ್ರೀನಿವಾಸ್ ತಿಳಿಸಿದರು.

ಶಿವರಾತ್ರಿ ಪ್ರಯುಕ್ತ ಮಹಾಬಲೇಶ್ವರ ಸ್ವಾಮಿಗೆ ವಿಶೇಷ ಅಲಂಕಾರ

ಮಹಾಶಿವರಾತ್ರಿ ಮಹೋತ್ಸವ- ಅಹೋರಾತ್ರಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯಕರ್ನಾಟಕ ಜನಪರ ವೇದಿಕೆಯ ಆಶ್ರಯದಲ್ಲಿ ಮಹಾಶಿವರಾತ್ರಿ ಮಹೋತ್ಸವದ ಅಂಗವಾಗಿ ವೇದಿಕೆಯ ರಾಜ್ಯ ಮುಖ್ಯ ಸಲಹೆಗಾರ ಬಿ.ಗುಣರಂಜನ್ ಶೆಟ್ಟಿ ನೇತೃತ್ವದಲ್ಲಿ ಎಚ್‌ಎಎಲ್ 3ನೇ ಹಂತ, ನ್ಯೂ ತಿಪ್ಪಸಂದ್ರದ ಪೂರ್ಣಪ್ರಜ್ಞ ಸಾರ್ವಜನಿಕ ಆಟದ ಮೈದಾನದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಮಾರ್ಚ್ 11 ರಂದು ಬೆಳಿಗ್ಗೆಯಿಂದ ಶುಕ್ರವಾರ ಬೆಳಿಗ್ಗೆಯವರೆಗೆ ರುದ್ರಯಾಗ ಮತ್ತು ಧಾರ್ಮಿಕ ಕಾರ್ಯಕ್ರಮ ಸೇರಿದಂತೆ ಶಿವಲಿಂಗ ಸ್ಥಾಪನೆ, ಪ್ರಥಮ, ದ್ವಿತೀಯ, ತೃತೀಯ ಹಾಗೂ ಚತುರ್ಥಯಾಮದ ಅಭಿಷೇಕ ಮತ್ತು ಪೂಜೆ ನೆರವೇರಲಿದೆ ಎಂದು ವೇದಿಕೆಯ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಜೆ.ಶ್ರೀನಿವಾಸ್ ಅವರು ತಿಳಿಸಿದ್ದಾರೆ.

'ಹೊಸತನವೇ ಇಲ್ಲದ ಬಜೆಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಬಜೆಟ್‌ನಲ್ಲಿ ಏನೂ ಇಲ್ಲ. ಕಳೆದ 10 ವರ್ಷಗಳ ಬಜೆಟ್‌ನ ಅಂಕಿ ಅಂಶ ತಿರುಗು ಮುರುಗು ಮಾಡಿದ್ದಾರೆ. ಅದೇ ಯೋಜನೆ, ಅದೇ ಅನುದಾನ. ಹಣಕಾಸು ಇಲಾಖೆ ಅಧಿಕಾರಿಗಳು ಮುಖ್ಯಮಂತ್ರಿಗೇ ಟೋಪಿ ಹಾಕಿದ್ದಾರೆ' ಎಂದು ಆಡಳಿತ ಪಕ್ಷ ಬಿಜೆಪಿಯ ಎಚ್. ವಿಶ್ವನಾಥ್, ಸರ್ಕಾರಕ್ಕೇ ಚಾಟಿ ಬೀಸಿದರು.



ವಿಧಾನ ಪರಿಷತ್‌ನಲ್ಲಿ ವಿತ್ತೀಯ ಕಲಾಪದ ವೇಳೆ ಬುಧವಾರ ಮಾತನಾಡಿದ ಅವರು, 'ಹಣಕಾಸು ಖಾತೆ ನಿಭಾಯಿಸಿರುವ ಸಿದ್ದರಾಮಯ್ಯ, ಕುಮಾರಸ್ವಾಮಿ, ಯಡಿಯೂರಪ್ಪ ಹಲವು ಬಾರಿ ಬಜೆಟ್ ಮಂಡಿಸಿದ್ದಾರೆ. ಹಾಗಂತ, ಅವರು ಆರ್ಥಿಕ ತಜ್ಞರಲ್ಲ. ಆರ್ಥಿಕ ಖಾತೆಗೆಂದೇ ಪ್ರತ್ಯೇಕ ಸಚಿವರು ಬೇಕು' ಎಂದು ಪ್ರತಿಪಾದಿಸಿದರು.

'33 ಇಲಾಖೆಗಳಲ್ಲಿ ಹಣಕಾಸು, ಡಿಪಿಎಆರ್, ಕಾನೂನು ಈ ಮೂರು ಅತಿ ಮುಖ್ಯವಾದುದು. ಈ ಪೈಕಿ, ಮೊದಲ ಎರಡು ಯಡಿಯೂರಪ್ಪ ಬಳಿ ಇದೆ. ಹಣಕಾಸು ಸೇರಿದಂತೆ ಪ್ರಮುಖ ಖಾತೆಗಳನ್ನು ಮುಖ್ಯಮಂತ್ರಿ ಇಟ್ಟುಕೊಳ್ಳಬಾರದು. ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಹಣಕಾಸು ಖಾತೆ ಹೊಂದಿರಲಿಲ್ಲ. ನಮ್ಮ ಮುಖ್ಯಮಂತ್ರಿ ಏಕೆ ಇಷ್ಟೊಂದು ಖಾತೆ ಇಟ್ಟುಕೊಂಡಿದ್ದಾರೊ ಗೊತ್ತಿಲ್ಲ' ಎಂದರು.

'ಈ ಹಿಂದೆ ಹಣಕಾಸು ಇಲಾಖೆಗೆ ಪ್ರತ್ಯೇಕ ಸಚಿವರಿದ್ದರು. ಈಗ ಮುಖ್ಯಮಂತ್ರಿಯೇ ಅದನ್ನು ನಿಭಾಯಿಸುತ್ತಿದ್ದಾರೆ. ಮೈತ್ರಿ ಸರ್ಕಾರ ಅವಧಿಯಲ್ಲಿ ಹಣಕಾಸು ಖಾತೆಯನ್ನು ಬೇರೆಯವರಿಗೆ ಕೊಡಿ ಎಂದು ಕುಮಾರಸ್ವಾಮಿಗೆ ಕೇಳಿದ್ದಕ್ಕೆ, ನನಗೇನು ಸಾಮರ್ಥ್ಯ ಇಲ್ವಾ, ನಾನು ನಿಭಾಯಿಸಲ್ವಾ ಎಂದು ಕೇಳಿದ್ರು. ಮುಖ್ಯಮಂತ್ರಿಯೇ ಆ ಖಾತೆ ನಿಭಾಯಿಸಿದರೆ ಅದು ಸತ್ತು ಹೋಗುತ್ತದೆ. ಹೀಗಾಗಿ ಬೇರೆಯವರಿಗೆ ಕೊಡಿ ಎಂದೆ. ಇದರಿಂದ ನನಗೂ ಕುಮಾರಸ್ವಾಮಿಗೆ ಭಿನ್ನಾಭಿಪ್ರಾಯ ಮೂಡಿತು' ಎಂದರು.

'ಸುಮಾರು ಒಂದೂವರೆ ಲಕ್ಷ ಮಂದಿ ಹೊರಗುತ್ತಿಗೆ ನೌಕರರಿದ್ದಾರೆ. ಅವರನ್ನು ನೇಮಕ ಮಾಡಿರುವ ಗುತ್ತಿಗೆದಾರರು ಬಹುತೇಕ ಐಎಎಸ್ ಅಧಿಕಾರಿಗಳ ಸಂಬಂಧಿಕರು' ಎಂದು ವಿಶ್ವನಾಥ್ ಹೇಳುತ್ತಿದ್ದಂತೆ, ಜೆಡಿಎಸ್‌ನ ಶ್ರೀಕಂಠೇಗೌಡ, 'ಅಧಿಕಾರಿಗಳ ಪತ್ನಿಯರು, ಉಪಪತ್ನಿಯರ ಹೆಸರಿನಲ್ಲೂ ಗುತ್ತಿಗೆ, ಹೊರಗುತ್ತಿಗೆ ನಿರ್ವಹಣೆಯಾಗುತ್ತಿದೆ' ಎಂದರು.

'ವಿಧಾನಸೌಧ ಈಗ ಮಾಲ್, ದಲ್ಲಾಳಿಗಳ ಅಡ್ಡೆ'

'ವಿಧಾನಸೌಧ ಸದಾ ಸುಂದರಿ. ಈ ಸುಂದರಿಗೆ ಎಲ್ಲರೂ ಮಾರು ಹೋಗಿದ್ದಾರೆ. ಒಂದಲ್ಲ ಒಂದು ದಿನ ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತುಕೊಳ್ಳುತ್ತೇನೆಂದು ಮನೆ, ಮಠ ಮಾರಿಕೊಂಡು ಬರುತ್ತಾರೆ. ಆದರೆ, ಸಾಧ್ಯವಾಗದೆ ಪಿಶಾಚಿಗಳಾಗಿ ಇದರ ಸುತ್ತ ಸುತ್ತುತ್ತಿದ್ದಾರೆ. 'ಹಳ್ಳಿ ಹಕ್ಕಿ' ಪುಸ್ತಕದಲ್ಲಿ ಇದನ್ನು ಬರೆದಿದ್ದೇನೆ' ಎಂದು ವಿಶ್ವನಾಥ್ ಹೇಳಿದರು.

ಬಿಜೆಪಿಯ ಭಾರತಿ ಶೆಟ್ಟಿ ಮಧ್ಯಪ್ರವೇಶಿಸಿದಾಗ, 'ನಿನಗಿಂತ ಸುಂದರಿ ಯಾರು ಇಲ್ಲ ಬಿಡಮ್ಮ' ಎಂದೂ ಹಾಸ್ಯ ಚಟಾಕಿ ಹಾರಿಸಿದರು.

'ವಿಧಾನಸೌಧ ಇಂದು ಮಾಲ್ ಆಗಿದೆ. ಏನು ಬೇಕಾದರೂ ಮಾರಾಟ ಮಾಡಬಹುದು, ಖರೀದಿ ಮಾಡಬಹುದು. ವರ್ಗಾವಣೆ, ಟೆಂಡರ್ ಕೊಡಿಸುವ ದಲ್ಲಾಳಿಗಳೇ ಹೆಚ್ಚಾಗಿದ್ದಾರೆ. ವಿರೋಧ ಪಕ್ಷಗಳು ಬಲವಾಗಿಲ್ಲ. ಹೊಂದಾಣಿಕೆ ರಾಜಕೀಯ ನಡೆಯುತ್ತಿದೆ. ಟೂರಿಂಗ್ ಟಾಕೀಸ್‌ನಲ್ಲಿ ಕರೆಂಟ್ ಹೋದಂಥ ಪರಿಸ್ಥಿತಿ ಈಗಿನದ್ದು. ಟೂರಿಂಗ್ ಟಾಕೀಸ್‌ನಲ್ಲಿ ಕರೆಂಟ್ ಹೋದರೆ ಯಾರು ಯಾರನ್ನು ಬೇಕಾದರೂ ತಬ್ಬಿಕೊಳ್ಳಬಹುದು' ಎಂದು ವ್ಯಂಗ್ಯವಾಡಿದರು.

ಮಣಿಪಾಲ್ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ. ಸುದರ್ಶನ್ ಬಲ್ಲಾಳ್ ಕಿವಿಮಾತು

'ಕಿಡ್ನಿ ಸಮಸ್ಯೆಗೆ ಪ್ರಾಥಮಿಕ ಹಂತದಲ್ಲೇ ಚಿಕಿತ್ಸೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೂತ್ರಪಿಂಡದ (ಕಿಡ್ನಿ) ಸಮಸ್ಯೆಗಳನ್ನು ಪ್ರಾಥಮಿಕ ಹಂತದಲ್ಲಿಯೇ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಬೇಕಿದೆ. ಇಲ್ಲವಾದಲ್ಲಿ ಮೂತ್ರಪಿಂಡಗಳ ಕಾರ್ಯನಿರ್ವಹಣೆ ಕನಿಷ್ಠ ಮಟ್ಟಕ್ಕಿಳಿದು, ದೇಹದಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ಹೊರಹಾಕಲು ಅಸಮರ್ಥವಾಗುತ್ತವೆ' ಎಂದು ಮಣಿಪಾಲ್ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ. ಸುದರ್ಶನ್ ಬಲ್ಲಾಳ್ ತಿಳಿಸಿದರು.

ವಿಶ್ವ ಮೂತ್ರಪಿಂಡ ದಿನದ ಪ್ರಯುಕ್ತ ಮಣಿಪಾಲ್ ಆಸ್ಪತ್ರೆಗಳ ಸಮೂಹವು ನಗರದಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಬುಧವಾರ ಆಯೋಜಿಸಿದ ಮೂತ್ರಪಿಂಡ ಆರೋಗ್ಯ ಜಾಗೃತಿ ವಿಚಾರಸಂಕಿರಣದಲ್ಲಿ ಮಾತನಾಡಿದರು.

'ಮೂತ್ರಪಿಂಡದ ಮಹತ್ವದ ಬಗ್ಗೆ ಜನರಿಗೆ ಅಷ್ಟಾಗಿ ಜಾಗೃತಿಯಿಲ್ಲ. ಇದರಿಂದಾಗಿ ಅದರ ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸದೇ ಸಮಸ್ಯೆಯನ್ನು ತಂದೊಡ್ಡಿಕೊಳ್ಳುತ್ತಿದ್ದಾರೆ. ನಮ್ಮ ದೇಹದಲ್ಲಿ ಮಿದುಳು ಮತ್ತು ಹೃದಯದಂತೆ ಮೂತ್ರಪಿಂಡ ಕೂಡ ಸೂಕ್ಷ್ಮವಾದ ಅಂಗ. ರಕ್ತ ಶುದ್ಧಿ ಕಾರ್ಯದ ನಂತರ ಮೂತ್ರದ ಮೂಲಕ ದೇಹದಲ್ಲಿನ ತ್ಯಾಜ್ಯವನ್ನು ಹೊರಹಾಕಲು ಈ ಅಂಗ ಸಹಕಾರಿ. ಅದೇ ರೀತಿ, ದೇಹದಲ್ಲಿನ ಲವಣಾಂಶಗಳು, ನೀರಿನಾಂಶಗಳು, ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ಸಮತೋಲನದಲ್ಲಿ ಇರಿಸುತ್ತದೆ. ಹಾಗಾಗಿ, ಮೂತ್ರಪಿಂಡದ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿ, ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳಬೇಕು. ಸಮಸ್ಯೆಯನ್ನು ಪತ್ತೆ ಹಚ್ಚುವಲ್ಲಿ ತಡವಾದಲ್ಲಿ ಡಯಾಲಿಸಿಸ್, ಅಂಗಾಂಗ ಕಸಿ ಮಾಡಬೇಕಾಗುತ್ತದೆ' ಎಂದು ಹೇಳಿದರು.

ವೈದ್ಯ ಡಾ. ದೀಪಕ್ ದುಬೆ ಮಾತನಾಡಿ, 'ದೀರ್ಘಕಾಲದ ಸಂಕೀರ್ಣ ಮೂತ್ರಪಿಂಡ ಸಮಸ್ಯೆಯಿದ್ದಲ್ಲಿ ಅಂತಹವರಿಗೆ ಅಂಗಾಂಗ ಕಸಿ ನೆರವಾಗಲಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ನಡೆದಿರುವ ಆವಿಷ್ಕಾರಗಳಿಂದ ಕಸಿ ಪ್ರಕ್ರಿಯೆ ಸುಲಭವಾಗಿದೆ. ಈ ಕಸಿಗೆ ಒಳಪಟ್ಟ ಬಳಿಕ ವ್ಯಕ್ತಿಯ ಜೀವನಮಟ್ಟವು ಸುಧಾರಿಸುವ ಜತೆಗೆ ಈ ಮೊದಲಿನಂತೆ ಆರೋಗ್ಯಕರ ಜೀವನ ಸಾಧ್ಯವಾಗುತ್ತದೆ. ಈ ಕಸಿಗೆ ಹಲವಾರು ಮಂದಿ ಎದುರು ನೋಡುತ್ತಿದ್ದಾರೆ. ಮೂತ್ರಪಿಂಡದ ದಾನದ ಬಗ್ಗೆ ಕೂಡ ಹೆಚ್ಚಿನ ಅರಿವು ಮೂಡಬೇಕಿದೆ' ಎಂದು ತಿಳಿಸಿದರು.

ಡಾ. ಶಂಕರನ್ ಸುಂದರ್, 'ಮೂತ್ರಪಿಂಡದ ಬಗ್ಗೆ ಬಹುತೇಕರಿಗೆ ಸೂಕ್ತ ಮಾಹಿತಿಯಿಲ್ಲ. ಇದರ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಮೂಡಬೇಕಿದೆ. ಶಾಲಾ ಹಂತದಲ್ಲಿಯೇ ಮಕ್ಕಳಿಗೆ ಈ ಅಂಗದ ಬಗ್ಗೆ ತಿಳಿಸುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಪಠ್ಯದಲ್ಲಿ ಮೂತ್ರಪಿಂಡದ ಕಾರ್ಯವೈಖರಿ, ಸಮಸ್ಯೆಗಳು ಮತ್ತು ಚಿಕಿತ್ಸೆಗಳ ಬಗ್ಗೆ ಸೇರಿಸಬೇಕು. ಮೂತ್ರಪಿಂಡ ದಾನಕ್ಕೆ ಕೂಡ ಹೆಸರು ನೋಂದಾಯಿಸಿ, ಇನ್ನೊಂದು ಜೀವಕ್ಕೆ ನೆರವಾಗಬೇಕು' ಎಂದರು.

ಇದೇ ವೇಳೆ ಮೂತ್ರಪಿಂಡ ಕಾಯಿಲೆಯನ್ನು ಜಯಿಸಿದವರು ಹಾಗೂ ಚಿಕಿತ್ಸೆ ಪಡೆದುಕೊಳ್ಳುತ್ತಿರುವವರು ತಮ್ಮ ಅನುಭವ ಹಂಚಿಕೊಂಡರು. ದಿ.ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸೀತಾರಾಮನ್ ಶಂಕರ್ ಇದ್ದರು.

ವಿಶ್ವ ಮೂತ್ರಪಿಂಡ ದಿನದ ಪ್ರಯುಕ್ತ ಮಣಿಪಾಲ್ ಆಸ್ಪತ್ರೆಗಳ ಸಮೂಹವು 'ಪ್ರಜಾವಾಣಿ' ಮತ್ತು ಡೆಕ್ಕನ್ ಹೆರಾಲ್ಡ್ ಸಹಯೋಗದಲ್ಲಿ ಆಯೋಜಿಸಿದ ವಿಚಾರಸಂಕಿರಣದಲ್ಲಿ ಡಾ.ಆರ್. ಸಂಜಯ್ ರಾಂಪುರೆ (ಎಡಭಾಗ) ಮತ್ತು ರೋಗಿ ವೆಂಕಟೇಶ್ ಜೋಶಿ (ಬಲಭಾಗ) ಸಂವಾದ ನಡೆಸಿದರು. ಡಾ. ನಾಗಸುಬ್ರಮಣ್ಯಮ್ ಎಸ್. ಇದ್ದರು – ಪ್ರಜಾವಾಣಿ ಚಿತ್ರ

'ಸಮತೋಲನ ಅವಶ್ಯ'

'ಮಧುಮೇಹ, ಅಧಿಕ ರಕ್ತದೊತ್ತಡ, ಬೊಜ್ಜು ಸೇರಿದಂತೆ ಜೀವನಶೈಲಿ ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಮೂತ್ರಪಿಂಡದ ಸಮಸ್ಯೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಹಾಗಾಗಿ, ಕಾಲ ಕಾಲಕ್ಕೆ ತಪಾಸಣೆಯನ್ನು ಮಾಡಿಸಿಕೊಳ್ಳುತ್ತಿರಬೇಕು. ಪೌಷ್ಟಿಕ ಆಹಾರ ಸೇವನೆ, ಉತ್ತಮ ಜೀವನಶೈಲಿ, ವ್ಯಾಯಾಮವನ್ನು ಅಳವಡಿಸಿಕೊಳ್ಳಬೇಕು. ಈಗಾಗಲೇ ಕಿಡ್ನಿ ಸಮಸ್ಯೆ ಎದುರಿಸುತ್ತಿರುವವರು ನಿಯಮಿತವಾಗಿ ಡಯಾಲಿಸಿಸ್ ಮಾಡಿಸಿಕೊಳ್ಳುವ ಜತೆಗೆ ವೈದ್ಯರ ಸಲಹೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಡಾ. ಸಂಜಯ್ ರಾಂಪುರೆ ಹೇಳಿದರು.

20 ದಿನದಿಂದ ನರಭಕ್ಷಕ ಹುಲಿಯ ಭೀತಿ: ಕೆಲಸಕ್ಕೆ ಬರಲು ಕಾರ್ಮಿಕರ ಹಿಂದೇಟು

ಪೊನ್ನಂಪೇಟೆ: ಕಾಫಿ ತೋಟದಲ್ಲಿ ಕೆಲಸ ಸ್ಥಗಿತ

• ಆದಿತ್ಯ ಕೆ.ಎ.

ಪೊನ್ನಂಪೇಟೆ (ಕೊಡಗು): ನರಭಕ್ಷಕ ಹುಲಿಯ ಭೀತಿಗೆ ಒಳಗಾಗಿರುವ ಗ್ರಾಮಗಳ ವ್ಯಾಪ್ತಿಯಲ್ಲಿನ ಕಾಫಿ ಎಸ್ಟೇಟ್‌ಗಳಿಗೆ ಕೆಲಸಕ್ಕೆ ಬರಲು ಕಾರ್ಮಿಕರು ಹಿಂದೇಟು ಹಾಕುತ್ತಿದ್ದು, 20 ದಿನಗಳಿಂದ ತೋಟದಲ್ಲಿ ಕೆಲಸ ಸ್ಥಗಿತವಾಗಿದೆ.

ಕೊಡಗಿನ ದಕ್ಷಿಣ ಭಾಗದ ಪೊನ್ನಂಪೇಟೆ ತಾಲ್ಲೂಕಿನ 10ಕ್ಕೂ ಹೆಚ್ಚು ಗ್ರಾಮಗಳ ವ್ಯಾಪ್ತಿಯಲ್ಲಿ ನರಭಕ್ಷಕ ಹುಲಿ ಸಂಚರಿಸುತ್ತಿದ್ದು, ಕಾರ್ಮಿಕರು ಕೆಲಸಕ್ಕೆ ಬರುತ್ತಿಲ್ಲ. 20 ದಿನಗಳ ಅಂತರದಲ್ಲಿ, ಕಾರ್ಮಿಕರ ಕುಟುಂಬದ ಇಬ್ಬರು ಬಾಲಕರು ಹಾಗೂ ಕಾರ್ಮಿಕ ಮಹಿಳೆಯೊಬ್ಬರು ಬಲಿಯಾಗಿದ್ದಾರೆ. 12 ಜಾನುವಾರುಗಳು ಹುಲಿ ದಾಳಿಗೆ ತುತ್ತಾಗಿವೆ. ದುಡಿಯುವ ವರ್ಗ ಆತಂಕದಲ್ಲಿದೆ.

ಕಾಫಿ ಕೊಯ್ಲು ಪೂರ್ಣವಾಗಿದೆ. ಇನ್ನೇನು ಕಾಳುಮೆಣಸು ಕೊಯ್ಲು ಆರಂಭಿಸಬೇಕು ಎನ್ನುವಷ್ಟರಲ್ಲಿ ನರಭಕ್ಷಕ ಹುಲಿಯ ಉಪಟಳ ತೀವ್ರವಾಗಿದೆ. ಯಾರಿಗೂ ತೋಟಗಳತ್ತ ತೆರಳಲು ಸಾಧ್ಯವಾಗುತ್ತಿಲ್ಲ. ಸಕಾಲದಲ್ಲಿ ಕಾಳುಮೆಣಸು ಕೊಯ್ಲು ಮಾಡದಿದ್ದರೆ, ಫಸಲು ನೆಲಕ್ಕೆ ಉದುರುವ ಆತಂಕ ಎದುರಾಗಿದೆ.

'ಮರ ಕಸಿ, ಕಾಫಿ ಗಿಡಗಳ ಕಪಾತು ಕೆಲಸವನ್ನೂ ಮಳೆ ಆರಂಭವಾಗುವ ಮೊದಲೇ ಮುಗಿಸಿಕೊಳ್ಳಬೇಕು. ಕಾರ್ಮಿಕರ ಕೊರತೆಯ ನಡುವೆಯೂ ಹೇಗೋ ಕೆಲಸ ನಡೆಯುತ್ತಿತ್ತು; ಈಗ ಉಳಿದ ಕಾರ್ಮಿಕರೂ ಆತಂಕದಲ್ಲಿದ್ದಾರೆ' ಎಂದು ಬೆಳೆಗಾರರು ನೋವು ತೋಡಿಕೊಂಡರು.

'ಕಾಡಾನೆ ಹಾವಳಿಯಿಂದ ಬೇಸತ್ತಿದ್ದೆವು. ಈಗ ಹುಲಿ ಕಾಟ ಶುರುವಾಗಿದೆ. ಜಿಲ್ಲೆಯಲ್ಲಿ ಕೃಷಿ ಮಾಡುವುದೇ ಬೇಡ ಎನ್ನುವಂತಾಗಿದೆ. ಸಂಜೆಯಾದ ಮೇಲೆ ರಸ್ತೆಗಳಲ್ಲಿ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಬೈಕ್‌ನಲ್ಲಿ ಹೋಗಲು ಭಯ. ಕಾರು, ಜೀಪು ಉಳ್ಳವರು ಮಾತ್ರ ಪಟ್ಟಣಕ್ಕೆ ಹೋಗಿ ಸಾಮಗ್ರಿ ಖರೀದಿಸಿ ಮನೆಗೆ ತರುತ್ತಿದ್ದಾರೆ. ಕಾರ್ಮಿಕರ ಸಂಕಷ್ಟ ಮಾತ್ರ ಹೇಳತೀರದಾಗಿದೆ. ಈ ಆತಂಕದ ನಡುವೆ ವಿದ್ಯಾರ್ಥಿಗಳು ಶಾಲೆ, ಕಾಲೇಜುಗಳಿಗೆ ತೆರಳುವುದಾದರೂ ಹೇಗೆ?' ಎಂದು ತೆರಾಲು ಗ್ರಾಮದ ಕೆ.ಹರೀಶ್ ಅಳಲು ತೋಡಿಕೊಂಡರು.

'ಒಂದಲ್ಲ, ಐದು ಹುಲಿ': 'ಈ ಭಾಗದಲ್ಲಿ ಒಂದಲ್ಲ, ಐದು ಹುಲಿಗಳು ಸಂಚರಿಸುತ್ತಿವೆ' ಎಂಬ ಅನುಮಾನವನ್ನು ಗ್ರಾಮಸ್ಥರು ವ್ಯಕ್ತಪಡಿಸಿದ್ದಾರೆ. 'ಒಂದು ದಿನ ಮಂಚಳ್ಳಿಯಲ್ಲಿ ಹುಲಿ ದಾಳಿ ನಡೆದರೆ, ಮರು ದಿವಸ ಅಲ್ಲಿಂದ 10ರಿಂದ 20 ಕಿ.ಮೀ ದೂರದ ಸ್ಥಳದಲ್ಲಿ ದಾಳಿ ನಡೆಯುತ್ತಿದೆ. ಇದು ಸಾಕಷ್ಟು ಅನುಮಾನಕ್ಕೆ ಕಾರಣವಾಗಿದೆ. ಕಾರ್ಯಾಚರಣೆ ಇನ್ನಷ್ಟು ಚುರುಕಾಗಬೇಕು. ಜನರು ನೆಮ್ಮದಿಯಿಂದ ಬದುಕುವ ವಾತಾವರಣ ನಿರ್ಮಿಸಬೇಕು' ಎಂದು ರೈತ ಸಂಘದ ಮುಖಂಡರು ಆಗ್ರಹಿಸಿದ್ದಾರೆ.

ಜಾನುವಾರು ಮಾರಾಟಕ್ಕೆ ನಿರ್ಧಾರ: ದಕ್ಷಿಣ ಕೊಡಗಿನ ಗ್ರಾಮಗಳ ಕೃಷಿಕರು, ಹಸು ಸಾಕಿ ಹೈನುಗಾರಿಕೆಯಿಂದ ಆದಾಯ ಗಳಿಸುತ್ತಿದ್ದರು. ಈಗ ಮೇಯಲು ಬಿಟ್ಟಿರುವ ಜಾನುವಾರು ಮೇಲೆ ಹುಲಿ ದಾಳಿ ನಡೆಸುತ್ತಿದ್ದು, ಕಳೆದ ಕೆಲವು ತಿಂಗಳಿಂದ ದಕ್ಷಿಣದ ಬಿರುನಾಣಿಯಿಂದ ಉತ್ತರದ ಮಾಲ್ದಾರೆಯ ಅರಣ್ಯದ ಅಂಚಿನ ಗ್ರಾಮಗಳಲ್ಲಿ ನೂರಾರು ಜಾನುವಾರು ಬಲಿಯಾಗಿವೆ. ಉಳುಮೆ, ಹಾಲಿಗಾಗಿ ಸಾಕಿದ್ದ ಜಾನುವಾರು ಕಳೆದುಕೊಂಡಿರುವ ರೈತರು ಅವುಗಳನ್ನು ಸಾಕುವುದನ್ನೇ ಬಿಟ್ಟಿದ್ದಾರೆ.

'ಒಂದೂವರೆ ತಿಂಗಳಿಂದ ಹುಲಿ ದಾಳಿಯು ನಿರಂತರವಾಗಿದ್ದು, ಉಳಿದಿರುವ ಜಾನುವಾರುಗಳ ಮಾರಾಟಕ್ಕೂ ಕೃಷಿಕರು ನಿರ್ಧರಿಸಿದ್ದಾರೆ. ಆದರೆ, ರಾಜ್ಯದಲ್ಲಿ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಜಾರಿಯಾದ ಮೇಲೆ ಜಾನುವಾರು ಖರೀದಿಗೂ ಯಾರೂ ಬರುತ್ತಿಲ್ಲ. ಇದು ಮತ್ತೊಂದು ರೀತಿಯ ಸಂಕಷ್ಟ ತಂದಿದೆ' ಎಂದು ಕೃಷಿಕ ಮಂದಯ್ಯ ಅವರು ಹೇಳಿದರು.

ಅರಣ್ಯ ಇಲಾಖೆ ಕಚೇರಿಗೆ ಮುತ್ತಿಗೆ; ಹೆದ್ದಾರಿ ತಡೆ

ಹುಲಿ ಸೆರೆ ಕಾರ್ಯಾಚರಣೆ ವಿಳಂಬವಾಗುತ್ತಿದ್ದು, ಜಿಲ್ಲೆಯಲ್ಲಿ ಜನಾಕ್ರೋಶ ಹೆಚ್ಚಾಗಿದೆ. ಬೆಳ್ಳೂರು ಗ್ರಾಮದಲ್ಲಿ ಅಹೋರಾತ್ರಿ ಧರಣಿ ಮುಂದುವರಿದಿದೆ. ಬುಧವಾರ ರೈತ ಸಂಘದ ನೇತೃತ್ವದಲ್ಲಿ ಬೃಹತ್ ವಾಹನ ಜಾಥಾ ನಡೆಯಿತು.

ಕಾನೂರು ವೃತ್ತದಿಂದ ಜಾಥಾ ಆರಂಭಗೊಂಡು, ಮತ್ತಿಗೋಡು ವನ್ಯಜೀವಿ ವಲಯ ಅರಣ್ಯ ಕಚೇರಿ ತಲುಪಿತು. ಬೆಳೆಗಾರರು, ಕಾರ್ಮಿಕರು, ರೈತ ಸಂಘದ ಮುಖಂಡರು, ವಲಯ ಅರಣ್ಯ ಕಚೇರಿಗೆ ಮುತ್ತಿಗೆ ಹಾಕಿ, ಆಕ್ರೋಶ ಹೊರಹಾಕಿದರು. ಹೆದ್ದಾರಿ ತಡೆ ನಡೆಸಿದರು.

ಕೊಡಗಿನಲ್ಲಿ ವನ್ಯಜೀವಿಗಳ ಹಾವಳಿ ನಿಯಂತ್ರಣಕ್ಕೆ ಆಗ್ರಹಿಸಿ ರೈತ ಸಂಘದ ನೇತೃತ್ವದಲ್ಲಿ ಬುಧವಾರ ಹೆದ್ದಾರಿ ತಡೆ ನಡೆಯಿತು

ಹುಲಿ ದಾಳಿಯಿಂದ ತಪ್ಪಿಸಿಕೊಳ್ಳಲು ಬೆಳೆಗಾರರಿಗೆ ಕೋವಿ ಬಳಸಲು ಸರ್ಕಾರ ಅವಕಾಶ ನೀಡಬೇಕು. ಇಲ್ಲದಿದ್ದರೆ ಜನರೇ ಬಂದೂಕು ಕೈಗೆತ್ತಿಕೊಳ್ಳಲಿದ್ದಾರೆ

ಪವನ್ ಪೆಮ್ಮಯ್ಯ, ಅಧ್ಯಕ್ಷ, ಕೊಡಗು ರಕ್ಷಣಾ ವೇದಿಕೆ

ಕೂಲಿ ಮಾಡಲೆಂದು ಕೊಡಗಿಗೆ ಬಂದಿದ್ದೆವು. ಕೆಲಸಕ್ಕೆ ಹೋದರೆ, ಪ್ರಾಣವನ್ನೇ ಕಳೆದುಕೊಳ್ಳುವ ಸ್ಥಿತಿಯಿದೆ. ಹಾಗೇನಾದರೂ ಆದರೆ, ಹೆಂಡತಿ–ಮಕ್ಕಳ ಗತಿ ಏನು?

ಅಪ್ಪು, ತೋಟದ ಕಾರ್ಮಿಕ

ಶಿವಮೊಗ್ಗ ಪಾಲಿಕೆ: ಮತ್ತೆ ಬಿಜೆಪಿಗೇ ಗದ್ದುಗೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ನಿರೀಕ್ಷೆಯಂತೆ ಮಹಾನಗರ ಪಾಲಿಕೆ ಮೇಯರ್, ಉಪ ಮೇಯರ್ ಸ್ಥಾನ ಮೂರನೇ ಅವಧಿಗೂ ಬಿಜೆಪಿ ವಶವಾಯಿತು.

ಸುನೀತಾ ಅಣ್ಣಪ್ಪ

ಸುನೀತಾ ಕೆ.ವಿ. ಅಣ್ಣಪ್ಪ ಮೇಯರ್ ಹಾಗೂ ಕೆ.ಶಂಕರ್ ಗನ್ನಿ ಉಪ ಮೇಯರ್ ಸ್ಥಾನಕ್ಕೆ ಬುಧವಾರ ಆಯ್ಕೆಯಾದರು.

ಶಂಕರ್ ಗನ್ನಿ

ಮೇಯರ್ ಸ್ಥಾನ ಬಿಸಿಎಂ 'ಎ' ಮಹಿಳೆಗೆ ಹಾಗೂ ಉಪ ಮೇಯರ್ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. 35 ಸದಸ್ಯ ಬಲದ ಪಾಲಿಕೆಯಲ್ಲಿ ಬಿಜೆಪಿ 23 ಸದಸ್ಯರನ್ನು ಹೊಂದಿದೆ. ಇಬ್ಬರೂ ತಲಾ 25 ಮತಗಳನ್ನು ಪಡೆದು ಕಾಂಗ್ರೆಸ್ ಅಭ್ಯರ್ಥಿಗಳನ್ನು 14 ಮತಗಳ ಅಂತರದಲ್ಲಿ ಸೋಲಿಸಿದರು. ಈ ಬಾರಿಯೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ಬಣದ ಸದಸ್ಯರೇ ಮೇಲುಗೈ ಸಾಧಿಸಿದರು.

ಶಾಸಕ ಸಂಗಮೇಶ್ವರಗೆ ಜಾಮೀನು

ಶಿವಮೊಗ್ಗ: ಭದ್ರಾವತಿ ಶಾಸಕ ಬಿ.ಕೆ. ಸಂಗಮೇಶ್ವರ ವಿರುದ್ಧ ದಾಖಲಾಗಿದ್ದ ಜಾತಿ ನಿಂದನೆ ಪ್ರಕರಣದಲ್ಲಿ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ಜಾಮೀನು ನೀಡಿದೆ.

ಫೆ. 28ರಂದು ಭದ್ರಾವತಿಯಲ್ಲಿ ನಡೆದ ಕಬಡ್ಡಿ ಪಂದ್ಯದ ಸಮಾರೋಪದಲ್ಲಿ ಬಿಜೆಪಿ– ಕಾಂಗ್ರೆಸ್ ಮಧ್ಯೆ ಘರ್ಷಣೆ ನಡೆದಿತ್ತು. ಶಾಸಕ ಸಂಗಮೇಶ್ವರ, ಪುತ್ರ ಗಣೇಶ್, ಸಹೋದರ ಬಿ.ಕೆ. ಮೋಹನ್ ಅವರ ವಿರುದ್ಧ ಜಾತಿ ನಿಂದನೆ, ಇತರರ ವಿರುದ್ಧ ಕೊಲೆ ಯತ್ನ, ದೌರ್ಜನ್ಯ ಪ್ರಕರಣ ದಾಖಲಾಗಿತ್ತು. ಬಿಜೆಪಿ ಮುಖಂಡರ ವಿರುದ್ಧವೂ ಪ್ರತಿ ದೂರು ದಾಖಲಿಸಲಾಗಿತ್ತು. ಬಿಜೆಪಿ ಹಾಗೂ ಪೊಲೀಸರ ದೌರ್ಜನ್ಯ ಖಂಡಿಸಿ ಸಂಗಮೇಶ್ವರ ಅವರು ಸದನದಲ್ಲಿ ಅಂಗಿ ಬಿಚ್ಚಿ, ಅಮಾನತಿಗೆ ಒಳಗಾಗಿದ್ದರು.

ನಿರೀಕ್ಷಣಾ ಜಾಮೀನು ಕೋರಿ ಮೂವರೂ ವಾರದ ಹಿಂದೆ ಅರ್ಜಿ ಸಲ್ಲಿಸಿದ್ದರು. ಬಂಧನ ಭೀತಿ ಎದುರಿಸಿದ್ದ ಮೂವರಿಗೆ ನ್ಯಾಯಾಧೀಶ ಕುಡು ಒಕ್ಕಲಿಗರ್ ಸೋಮಪ್ಪ ನಿರೀಕ್ಷಣಾ ಜಾಮೀನು ನೀಡಿದ್ದಾರೆ.

ಪ್ರಜಾವಾಣಿ facebook LIVE
FB.com/prajavani.net
ಶಿವರಾತ್ರಿ ವಿಶೇಷ
ಶಿವತತ್ತ್ವ ಸತ್ಯ
ಇಸ್ರೋ ಉಪ ನಿರ್ದೇಶಕಿ, ಬಾಹ್ಯಾಕಾಶ ವಿಜ್ಞಾನಿ
ಡಾ. ಶುಭಲಕ್ಷ್ಮೀ ಕೃಷ್ಣಮೂರ್ತಿ ಅವರ ಗಾಯನ
ಸಂಸ್ಕೃತಿ ಚಿಂತಕಿ, ವಿಭು ಅಕಾಡೆಮಿಯ
ಡಾ.ವಿ.ಬಿ. ಆರತಿ ಅವರಿಂದ ವಾಚನ
ವಯಲಿನ್: ವಿದ್ವಾನ್ ಮೈಸೂರು ಸಂಜೀವ್ ಕುಮಾರ್
ಮೃದಂಗ: ವಿದ್ವಾನ್ ಬೆಂಗಳೂರು ರಾಮನಾಥ್
ಇಂದು ಸಂಜೆ 6ರಿಂದ

ಪ್ರಜಾವಾಣಿ facebook PREMIER
FB.com/prajavani.net
ಯಕ್ಷ ನವ್ಯ ನಿನಾದ
ನಾದಪ್ರಿಯ ಈಶ್ವರನಿಗೆ ಗಾನಾರ್ಚನೆ
ತೆಂಕು-ಬಡಗು ಯಕ್ಷಗಾನದ ಗಾಯನ-ವಾದನ ವೈಭವಕ್ಕೆ ವಯಲಿನ್, ಕೊಳಲು, ಗಿಟಾರ್, ಕೀಬೋರ್ಡ್ ಹಾಗೂ ರಿದಂ ಪ್ಯಾಡ್‌ಗಳ ಸಾಥ್

ಕಲಾವಿದರು: ರಾಘವೇಂದ್ರ ಮಯ್ಯ, ಅಮೃತಾ ಅಡಿಗ, ರಾಕೇಶ್ ಮಲ್ಯ, ಎ.ಪಿ.ಪಾಠಕ್, ಕೌಶಿಕ್ ರಾವ್ ಹಾಗೂ ಇತರರು
ಇಂದು ರಾತ್ರಿ 8ರಿಂದ

ಸರ್ಕಾರಿ ಶಾಲೆ ದತ್ತು ಪಡೆದ ವಿಶ್ವವಿದ್ಯಾಲಯಗಳು



ಪ್ರೊ.ಎಂ.ಆರ್. ದೊರೆಸ್ವಾಮಿ

ಬೆಂಗಳೂರು: 'ಉನ್ನತ ಶಿಕ್ಷಣ ಸಂಸ್ಥೆಗಳು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಬೇಕು ಎಂದು ಮಾಡಿಕೊಂಡ ಮನವಿಗೆ ರಾಜ್ಯದ ಪ್ರಮುಖ ವಿಶ್ವವಿದ್ಯಾಲಯಗಳು ಸ್ಪಂದಿಸಿವೆ' ಎಂದು ರಾಜ್ಯ ಸರ್ಕಾರದ ಶೈಕ್ಷಣಿಕ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಹೇಳಿದ್ದಾರೆ.

'ಹುಬ್ಬಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ 10, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ 5 ಹಾಗೂ ಬೆಂಗಳೂರಿನ ಜ್ಯೋತಿ ನಿವಾಸ್ ಸ್ವಾಯತ್ತ ಕಾಲೇಜು 5 ಸರ್ಕಾರಿ ಶಾಲೆಗಳನ್ನು ದತ್ತು ಪಡೆದುಕೊಂಡಿವೆ.

ಉಗ್ರರ ಜತೆ ಸಂಪರ್ಕ ಶಂಕೆ: ಮನೆಗಳ ಶೋಧ

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ: ಉಗ್ರರ ಸಂಘಟನೆ ಜತೆ ಸಂಪರ್ಕ ಹೊಂದಿರಬಹುದು ಎಂಬ ಶಂಕೆಯಿಂದ ಮಂಗಳವಾರ ಪಟ್ಟಣದಲ್ಲಿ ರಾಷ್ಟ್ರೀಯ ತನಿಖಾ ದಳದ ಪೊಲೀಸರು ಇಬ್ಬರು ಯುವಕರ ಮನೆಗಳನ್ನು ಶೋಧಿಸಿ, ಪೋಷಕರಿಂದ ಮಾಹಿತಿ ಸಂಗ್ರಹಿಸಿದ್ದಾರೆ.

ಪಟ್ಟಣದ ಮೀನು ಮಾರುಕಟ್ಟೆ ಸಮೀಪದ ಇಬ್ಬರು ಯುವಕರ ಮನೆಗೆ ಬೆಳಿಗ್ಗೆ 7ಕ್ಕೆ ಬಂದ ರಾಷ್ಟ್ರೀಯ ತನಿಖಾ ದಳದ ಪೊಲೀಸರು ತಪಾಸಣೆ ನಡೆಸಿ, ಪೋಷಕರ ಮೊಬೈಲ್ ವಶಕ್ಕೆ ಪಡೆದಿದ್ದಾರೆ ಎನ್ನಲಾಗಿದೆ.

ತನಿಖಾ ದಳದ ಪೊಲೀಸರು ಒಂದು ವರ್ಷದಿಂದ ತೀರ್ಥಹಳ್ಳಿಯ ಕೆಲವು ಪ್ರದೇಶಗಳ ಮೇಲೆ ತೀವ್ರ ನಿಗಾ ಇರಿಸಿದ್ದಾರೆ. ಉಗ್ರರು ಬಳಸಿದ್ದ ಸ್ಯಾಟಲೈಟ್ ಫೋನ್ ನೆಟ್‌ವರ್ಕ್ ತೀರ್ಥಹಳ್ಳಿಯ ಹೊರವಲಯದಲ್ಲಿ ಪತ್ತೆಯಾಗಿತ್ತು ಎಂದು ವರ್ಷದ ಹಿಂದೆಯೂ ತಪಾಸಣೆ ನಡೆಸಿದ್ದರು. ತಾಂತ್ರಿಕ ಪದವಿ ಪಡೆದು ಬೆಂಗಳೂರಿನಲ್ಲಿದ್ದ ಇಲ್ಲಿನ ಮಾಜಿ ಸೈನಿಕರೊಬ್ಬರ ಪುತ್ರ ಉಗ್ರರ ಸಂಘಟನೆ ಜತೆ ಸಂಪರ್ಕ ಹೊಂದಿರುವ ಶಂಕೆಯ ಮೇಲೆ ತನಿಖೆ ನಡೆದಿದೆ. ಯುವಕನ ಹತ್ತಿರದ ಸಂಬಂಧಿಯೊಬ್ಬ ಉಗ್ರರ ಗುಂಪಿನಲ್ಲಿ ಗುರುತಿಸಿಕೊಂಡಿದ್ದಾನೆ ಎಂಬ ಸುದ್ದಿಯೂ ಹಬ್ಬಿತ್ತು.

ಪೊಲೀಸರೆದುರು ಕಣ್ಣೀರಿಟ್ಟ ಪೋಷಕರು: ಪೊಲೀಸರು ಮನೆಯ ತಪಾಸಣೆಗೆ ಬಂದಾಗ ಪೋಷಕರು ಕಣ್ಣೀರು ಹಾಕಿದರು. ಸುಮಾರು ಮೂರು ತಾಸು ತಪಾಸಣೆ ನಡೆಯಿತು. ಮನೆಯ ಸದಸ್ಯರು, ಅವರ ವೃತ್ತಿ ಕುರಿತು ವಿವರ ಪಡೆದರು ಎಂದು ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದರು.

ಉಗ್ರರ ಸಂಘಟನೆ ಜೊತೆ ಸಂಪರ್ಕ ಇದೆ ಎಂಬ ಶಂಕೆಯಿಂದ ತೀರ್ಥಹಳ್ಳಿ ಪಟ್ಟಣದ ಮೀನು ಮಾರುಕಟ್ಟೆ ಸಮೀಪ ಮಂಗಳವಾರ ರಾಷ್ಟ್ರೀಯ ತನಿಖಾ ದಳದ ಪೊಲೀಸರು ಶೋಧ ನಡೆಸಿದರು

ಭೂಮಾಪನಾ ಇಲಾಖೆ: ದಯಾನಂದ ಆಯುಕ್ತ

ಬೆಂಗಳೂರು: ರಾಜೀವ್ ಗಾಂಧಿ ವಸತಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಸ್.ಬಸವರಾಜ್‌ಗೆ ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಹುದ್ದೆಯ ಹೆಚ್ಚುವರಿ ಹೊಣೆ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತ ಕೆ.ಎ. ದಯಾನಂದಗೆ ಭೂ ದಾಖಲೆಗಳ ಆಯುಕ್ತರ ಹೊಣೆ ನೀಡಲಾಗಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರಇರುವುದಿಲ್ಲ. ಸಂಸ್ಥೆಯ ಜಾಹೀರಾತುಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಪರ್ವ ನಾಟಕ ಪ್ರದರ್ಶನ ನಾಳೆಯಿಂದ

ಮೈಸೂರು: ರಂಗಾಯಣದ ವತಿಯಿಂದ ಆಯೋಜಿಸಿರುವ, ಸಾಹಿತಿ ಎಸ್.ಎಲ್. ಭೈರಪ್ಪ ಅವರ 'ಪರ್ವ' ಕಾದಂಬರಿಯ ರಂಗರೂಪದ ವಿಶೇಷ ಪ್ರದರ್ಶನ ಮಾರ್ಚ್ 12ರಿಂದ 14ರವರೆಗೆ ಮೈಸೂರಿನಲ್ಲಿ ನಡೆಯಲಿದೆ.

ಏಳೂವರೆ ಗಂಟೆಯ ಈ ನಾಟಕವು ನಾಲ್ಕು ವಿರಾಮಗಳೊಂದಿಗೆ ಪ್ರದರ್ಶನಗೊಳ್ಳಲಿದ್ದು, ಪ್ರಕಾಶ್ ಬೆಳವಾಡಿ ನಿರ್ದೇಶಿಸಿದ್ದಾರೆ.

ಮಾ. 25ರಿಂದ ಮೇ ಕೊನೆಯವರೆಗೆ, ಪ್ರತಿ ಗುರುವಾರ (ಆದಿ ಪರ್ವ), ಶುಕ್ರವಾರ (ನಿಯೋಗ ಪರ್ವ) ಮತ್ತು ಶನಿವಾರದಂದು (ಯುದ್ಧ ಪರ್ವ) ಸಂಚಿಕೆಯ ರೂಪದಲ್ಲಿ; ಭಾನುವಾರದಂದು ನಾಟಕವು ಇಡಿಯಾಗಿ ಪ್ರದರ್ಶನಗೊಳ್ಳಲಿದೆ ಎಂದು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.

ಆಸ್ತಿ ನೋಂದಣಿಗೆ ಕಾಡುವ ‘ಸರ್ವರ್’ ಭೂತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಸರ್ವರ್ ಸಮಸ್ಯೆ ಎಂಬ ಭೂತ ಎಡಬಿಡದೇ ಕಂಟಕವಾಗಿ ಕಾಡುತ್ತಿದೆ. ಆಗಾಗ ಸ್ಥಗಿತಗೊಳ್ಳುವ ಸರ್ವರ್‌ನಿಂದ ಈ ಕಚೇರಿಗೆ ಹೋಗಲು ಜನ ಭಯಪಡುವಂತಾಗಿದೆ.

ಸರ್ವರ್ ಒಮ್ಮೆ ಸ್ಥಗಿತಗೊಂಡರೆ ಸರಿಪಡಿಸಲು ಎರಡು ಮೂರು ದಿನಗಳೇ ಬೇಕಾಗುತ್ತದೆ. ಎಲ್ಲವೂ ಸರಿಯಾಗಿದೆ ಎಂದು ಕಾರ್ಯನಿರ್ವಹಿಸುವ ವೇಳೆ ದಿಢೀರ್ ದೋಷ ಕಾಣಿಸಿಕೊಂಡು ಸಾಫ್ಟ್‌ವೇರ್ ಕಾರ್ಯನಿರ್ವಹಿಸದಂತೆ ಮಾಡುತ್ತದೆ. ರಿಪೇರಿಯಾದರೂ ಯಾವಾಗ ಕೈಕೊಡುವುದೋ ಎಂಬ ಭಯದಲ್ಲೇ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಫೆಬ್ರುವರಿ ಮೊದಲ ವಾರದಲ್ಲಿ ಕಾಣಿಸಿಕೊಂಡ ಸರ್ವರ್ ದೋಷದಿಂದ ಎರಡು ದಿನ ಕಾರ್ಯನಿರ್ವಹಣೆ ಸ್ಥಗಿತಗೊಂಡಿತ್ತು. ಈಗ ಕಳೆದ ಎರಡು ದಿನ (ಸೋಮವಾರ ಮತ್ತು ಮಂಗಳವಾರ) ಇದೇ ರೀತಿಯ ಸಮಸ್ಯೆ ಅಲ್ಲದಿದ್ದರೂ ಒಟಿಪಿ ಸಂಖ್ಯೆ ಇರುವ ಎಸ್‌ಎಂಎಸ್ ಬಾರದೆ ನೋಂದಣಿ ಕಾರ್ಯ ಸ್ಥಗಿತಗೊಂಡಿತ್ತು. ನೋಂದಣಿ ಪ್ರಕ್ರಿಯೆಯಲ್ಲಿ ಒಳಪಟ್ಟವರ ದೂರವಾಣಿ ಸಂಖ್ಯೆ ಪಡೆದು ಒಟಿಪಿ ಕಳಿಸಲಾಗುತ್ತದೆ. ಆದರೆ, ಎರಡು ದಿನ ಯಾರ ದೂರವಾಣಿ ಸಂಖ್ಯೆಗೂ ಒಟಿಪಿ ಎಸ್‌ಎಂಎಸ್ ಬರಲೇ ಇಲ್ಲ.

ಬೆಂಗಳೂರಿನ 43 ಸೇರಿ ರಾಜ್ಯದ ಒಟ್ಟು 282 ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಆಸ್ತಿ ನೋಂದಣಿ ಕೆಲಸ ಸ್ಥಗಿತಗೊಂಡು ಜನ ಪರದಾಡಿದರು. ಬುಧವಾರ ಸ್ವಲ್ಪ ಸುಧಾರಿಸಿದ್ದರೂ, ಇ.ಸಿ(ಋಣಭಾರ ಪ್ರಮಾಣಪತ್ರ) ಪಡೆಯಲು ಆಗಲಿಲ್ಲ. ಯಾವುದೇ ನೋಂದಣಿಗೂ ಇ.ಸಿ ಮುಖ್ಯವಾಗಿ ಬೇಕು. ಅದನ್ನೇ ಪಡೆಯಲಾಗದಿದ್ದರೆ ಉಳಿದ ಕೆಲಸವೆಲ್ಲವೂ ನಿಲ್ಲಲಿದೆ. ಈ ಹಿಂದೆಯೇ ಇ.ಸಿ ಪಡೆದಿದ್ದವರು ಮಾತ್ರ ನೋಂದಣಿ ಮಾಡಿಸಿಕೊಳ್ಳಲು ಸಾಧ್ಯವಾಯಿತು.

ಎರಡು ದಿನ ಕಾರ್ಯನಿರ್ವಹಣೆ ಸ್ಥಗಿತಗೊಂಡಿದ್ದ ಕಾರಣ ಬುಧವಾರ ಎಲ್ಲಾ ಉಪನೋಂದಣಾಧಿಕಾರಿ ಕಚೇರಿಗಳೂ ತುಂಬಿ ತುಳುಕಿದವು.

ವಿಜಯನಗರ ಕಚೇರಿಯಲ್ಲಿ ‘ಸರ್ವರ್ ತಾಂತ್ರಿಕ ತೊಂದರೆಯಿಂದಾಗಿ ಇ.ಸಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿಲ್ಲ’ ಎಂದು ಫಲಕವನ್ನೇ ಅಂಟಿಸಲಾಗಿದೆ.

‘ಸರ್ವರ್ ಸರಿಯಾಗಲಿದೆ ಎಂದು ಎರಡು ದಿನಗಳ ಕಾಲ ಕಚೇರಿ ಬಳಿಯೇ ನಿಂತು ವಾಪಸ್ ಹೋಗಿದ್ದೇವೆ. ಬುಧವಾರ ಸ್ವಲ್ಪ ಸುಧಾರಿಸಿದ್ದು, ಮತ್ತೆ ಯಾವಾಗ ಕಾರ್ಯ ನಿಲ್ಲಿಸಲಿದೆಯೋ ಗೊತ್ತಿಲ್’ ಎಂದು ರಾಜಾಜಿನಗರ ಕಚೇರಿಯಲ್ಲಿ ಆಸ್ತಿ ನೋಂದಣಿಗೆ ಬಂದಿದ್ದ ಕೃಷ್ಣಕುಮಾರ್ ಹೇಳಿದರು.

‘ಮೂರು ದಿನಗಳಿಂದ ಈ ಕಚೇರಿ ಮೆಟ್ಟಿಲು ಸವೆಸಿ ಸಾಕಾಗಿ ಹೋಗಿದೆ. ಆಸ್ತಿ ನೋಂದಣಿಗೆ ಹಾಜರಿರಲೇಬೇಕು ಎಂದು ಕರೆದುಕೊಂಡು ಬಂದಿದ್ದಾರೆ. ಕುಳಿತುಕೊಳ್ಳಲು ಆಗದ ಸ್ಥಿತಿಯಲ್ಲಿದ್ದೇನೆ’ ಎಂದು 87 ವರ್ಷದ ಪಾರ್ವತಮ್ಮ ಬೇಸರ ವ್ಯಕ್ತಪಡಿಸಿದರು.

‘ಆಸ್ತಿ ನೋಂದಣಿಗೆ ಸದ್ಯ ಬಳಕೆಯಾಗುತ್ತಿರುವ ಕಾವೇರಿ ತಂತ್ರಾಂಶದ ನಿರ್ವಹಣೆಯ ಹೊಣೆಯನ್ನು ಕಂಪನಿಯೊಂದಕ್ಕೆ ನೀಡಲಾಗಿದೆ. ನಿರ್ವಹಣೆ ಸಮರ್ಪಕವಾಗಿ ಇಲ್ಲದಿದ್ದರೂ ಬದಲಾವಣೆ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ ಸರ್ಕಾರ ಇದೆ. ಕೇಂದ್ರ ಸಚಿವರೊಬ್ಬರ ಆಪ್ತರು ತಾತ್ರಾಂಶ ನಿರ್ವಹಣೆ ಹೊಣೆ ಹೊತ್ತಿದ್ದಾರೆ. ಹೀಗಾಗಿಯೇ ಬದಲಾವಣೆ ಮಾಡಲು ಸರ್ಕಾರ ಮನಸ್ಸು ಮಾಡುತ್ತಿಲ್ಲ’ ಎನ್ನುವುದು ನೋಂದಣಿ ಇಲಾಖೆಯ ಮೂಲಗಳ ಅಹವಾಲು.



ರಾಜಾಜಿನಗರದ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಆಸ್ತಿ ನೋಂದಣಿಗೆ ಮುಗಿ ಬಿದ್ದಿರುವ ಜನ –ಪ್ರಜಾವಾಣಿ ಚಿತ್ರ

ಸರ್ವರ್ ಸಮಸ್ಯೆಯಿದೆ ಎಂಬ ಫಲಕ

ಹುಬ್ಬಳ್ಳಿ: ಧಾರವಾಡ ಜಿಲ್ಲೆಯ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಸರ್ವರ್ ಸಮಸ್ಯೆ ಹೆಚ್ಚಾಗಿದೆ. ಬೆಳಗಾವಿ, ಹಾವೇರಿ, ವಿಜಯಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿಯೂ ಇದೇ ಸಮಸ್ಯೆಯಿದೆ. ಆದರೆ, ಕೆಲ ತಿಂಗಳ ಹಿಂದೆ ಉತ್ತರ ಕನ್ನಡ ಹಾಗೂ ಗದಗ ಜಿಲ್ಲೆಗಳಲ್ಲಿ ಹೆಚ್ಚಾಗಿದ್ದ ಈ ಸಮಸ್ಯೆ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿದೆ.

ಜನರು ನಿತ್ಯ ಸರ್ವರ್ ಬಗ್ಗೆ ವಿಚಾರಿಸುವುದರಿಂದ ಹುಬ್ಬಳ್ಳಿ ಉತ್ತರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ‘ಸರ್ವರ್ ಸಮಸ್ಯೆಯಿದೆ’ ಎಂಬ ಫಲಕವನ್ನೇ ಅಂಟಿಸಲಾಗಿದೆ.

ಸರ್ವರ್ ಅಲ್ಲ, ಒಟಿಪಿ ಸಮಸ್ಯೆ

ಸೋಮವಾರ ವಾರ ಮಾತ್ರ ನೋಂದಣಿ ಸ್ಥಗಿತವಾಗಿತ್ತು. ಅದಕ್ಕೆ ಸರ್ವರ್ ಸಮಸ್ಯೆ ಕಾರಣವಲ್ಲ. ಒಟಿಪಿ ಸಂಖ್ಯೆ ಇರುವ ಎಸ್‌ಎಂಎಸ್ ಬಾರದಿರುವುದು ಕಾರಣ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಯುಕ್ತ ಕೆ.ಪಿ.ಮೋಹನ್‌ರಾಜ್ ಸ್ಪಷ್ಟಪಡಿಸಿದರು.

ಈ ಬಗ್ಗೆ ಇ–ಗೌರ್ನೆನ್ಸ್ ಇಲಾಖೆಯನ್ನು ಸಂಪರ್ಕಿಸಿದರೆ ಎಲ್ಲಾ ಇಲಾಖೆಗಳಿಗೂ ಸಮಸ್ಯೆಯಾಗಿದೆ. ಬೇರೆ ರಾಜ್ಯಗಳಲ್ಲೂ ಈ ಸಮಸ್ಯೆ ಆಗಿದೆ ಎಂಬ ಉತ್ತರ ಬಂದಿದೆ ಎಂದು ಹೇಳಿದರು.

ಕಾವೇರಿ ತಂತ್ರಾಂಶ ಬೇರೆ ಬೇರೆ ತಂತ್ರಾಂಶಗಳ ಜತೆ ಜೋಡಣೆ ಆಗಿದೆ. ಬೇರೆ ತಂತ್ರಾಂಶದಲ್ಲಿ ದೋಷ ಕಾಣಿಸಿಕೊಂಡರೂ, ನಮ್ಮ ಕಾವೇರಿ ತಂತ್ರಾಂಶವೂ ಸ್ಥಗಿತಗೊಳ್ಳುತ್ತದೆ ಎಂದರು.

‘ಸಮಸ್ಯೆ ಬುಧವಾರ ಇತ್ಯರ್ಥವಾಗಿದ್ದು, ರಾಜ್ಯದಲ್ಲೇ ಹಿಂದೆಂದಿಗಿಂತ ಅತೀ ಹೆಚ್ಚು 11,900 ಆಸ್ತಿಗಳ ನೋಂದಣಿಯಾಗಿದೆ. ಬೇರೆ ದಿನಗಳಲ್ಲಿ 7 ಸಾವಿರದಿಂದ 9 ಸಾವಿರ ನೋಂದಣಿ ಆಗುತ್ತಿತ್ತು’ ಎಂದು ವಿವರಿಸಿದರು.

ತಪ್ಪದ ಸರ್ವರ್ ಸಮಸ್ಯೆ

ಮೈಸೂರು ಜಿಲ್ಲೆಯ ಉಪನೋಂದಣಾಧಿಕಾರಿ ಕಚೇರಿಗಳಲ್ಲೂ ಸರ್ವರ್ ಸಮಸ್ಯೆ ಕಾಡುತ್ತಿದೆ. ಮೂರು ದಿನದಿಂದ ಖರೀದಿದಾರರು, ಮಾರಾಟಗಾರರ ಮೊಬೈಲ್‌ಗೆ ಒಟಿಪಿ ಸಕಾಲಕ್ಕೆ ಬರುತ್ತಿಲ್ಲ. ಸೋಮವಾರ, ಮಂಗಳವಾರ ಮಧ್ಯಾಹ್ನ 3 ಗಂಟೆ ನಂತರ ಬಂದಿದೆ. ಬುಧವಾರವೂ ಸಮಸ್ಯೆ ಪರಿಹಾರವಾಗದಿದ್ದರಿಂದ ಜನರು ಪರದಾಡಿದ್ದು ಗೋಚರಿಸಿತು. ಗುರುವಾರ ರಜೆ ಇರುವುದರಿಂದ ಜನದಟ್ಟಣೆಯೂ ಹೆಚ್ಚಿತ್ತು.

ಸದ್ಯಕ್ಕೆ ಸಮಸ್ಯೆ ಸರಿಯಾಗಿದೆ

ದಾವಣಗೆರೆ: ಆಸ್ತಿ ನೋಂದಣಿಗೆ ಕಾವೇರಿ ಸಾಫ್ಟ್‌ವೇರ್‌ಗೆ ನೋಂದಣಿದಾರರ ಮೊಬೈಲ್ ನಂಬರ್ ನಮೂದಿಸಿದಾಗ ವನ್ ಟೈಮ್ ಪಾಸ್‌ವರ್ಡ್ (ಒಟಿಪಿ) ಬಾರದೇ ಸೋಮವಾರ ಮತ್ತು ಮಂಗಳವಾರ ಸಮಸ್ಯೆಯಾಗಿತ್ತು.

ಮಂಗಳವಾರ ಮಧ್ಯಾಹ್ನದ ಬಳಿಕ ಈ ಸಮಸ್ಯೆ ಬಗೆಹರಿದಿದೆ. ಹಾಗಾಗಿ ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳ ಎಲ್ಲ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಬುಧವಾರ ಭಾರಿ ಸಂಖ್ಯೆಯಲ್ಲಿ ನೋಂದಣಿದಾರರು ಬಂದು ಸರತಿಯಲ್ಲಿ ನಿಂತಿದ್ದರು. ಇದು ದೇಶದಾದ್ಯಂತ ಉಂಟಾಗಿರುವ ಸಮಸ್ಯೆ ಆಗಿತ್ತು. ಈಗ ಸರಿಯಾಗಿದೆ ಎಂದು ನೋಂದಣಾಧಿಕಾರಿಗಳು ತಿಳಿಸಿದ್ದಾರೆ.

ಆಸ್ತಿ ನೋಂದಣಿ ಪ್ರಮಾಣ ಇಳಿಕೆ

ಕಲಬುರ್ಗಿ: ಜಿಲ್ಲೆಯ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಬಹುತೇಕ ನಿತ್ಯವೂ ಸರ್ವರ್ ಸಮಸ್ಯೆ ಕಾಣಿಸಿಕೊಳ್ಳುತ್ತಿದ್ದು, ನೋಂದಣಿಗಾಗಿ ಬಂದವರು ಗಂಟೆಗಟ್ಟಲೇ ಕಾಯುವ ಸ್ಥಿತಿ ನಿರ್ಮಾಣವಾಗಿದೆ.

ಬುಧವಾರವೂ ಒಂದು ಗಂಟೆ ಸರ್ವರ್ ಸ್ಥಗಿತಗೊಂಡಿತ್ತು. ಮಾರ್ಚ್ 8-9ರಂದು ಇಡೀ ದಿನ ಸರ್ವರ್ ಸ್ಥಗಿತಗೊಂಡು ನೋಂದಣಿ ಕೆಲಸಗಳು ಸ್ಥಗಿತಗೊಂಡಿದ್ದವು ಎನ್ನುತ್ತಾರೆ ಇಲಾಖೆ ಸಿಬ್ಬಂದಿ.

‘ಸರ್ವರ್ ಸಮಸ್ಯೆ ಬಗ್ಗೆ ಕೇಂದ್ರ ಕಚೇರಿಗೆ ಮಾಹಿತಿ ನೀಡಿದ್ದೇವೆ. ಸರಿಪಡಿಸುವ ಭರವಸೆ ನೀಡಿದ್ದಾರೆ’ ಎನ್ನುತ್ತಾರೆ ಕಲಬುರ್ಗಿ ಉಪನೋಂದಣಾಧಿಕಾರಿ ಬಿ.ಶ್ರೀಕಾಂತ.

ಕರಾವಳಿಯಲ್ಲಿ ಸಮಸ್ಯೆ: ಚಿಕ್ಕಮಗಳೂರಿನಲ್ಲಿ ಇಲ್ಲ ತೊಂದರೆ

ಮಂಗಳೂರು: ಕರಾವಳಿಯ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಆಗಾಗ ಸರ್ವರ್ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವುದೇ ತೊಂದರೆ ಇಲ್ಲ.

ಉಡುಪಿಯಲ್ಲಿ ಸೋಮವಾರದಿಂದ ಮಂಗಳವಾರ ಮಧ್ಯಾಹ್ನದವರೆಗೆ ಸರ್ವರ್‌ನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಆಸ್ತಿ ನೋಂದಣಿ ಸ್ಥಗಿತವಾಗಿತ್ತು. ಮಂಗಳವಾರ ಮಧ್ಯಾಹ್ನದಿಂದ ಸಮಸ್ಯೆ ಬಗೆಹರಿದಿದೆ ಎಂದು ಜಿಲ್ಲಾ ನೋಂದಣಾಧಿಕಾರಿ ರವೀಂದ್ರ ಪೂಜಾರ್ ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ವರ್ ಸಮಸ್ಯೆ ಹಾಗೂ ಒಟಿಪಿ ಸಮಸ್ಯೆ ಮುಂದುವರಿದಿದೆ. ಇದರಿಂದ ನೋಂದಣಿ ಪ್ರಕ್ರಿಯೆಗೆ ಹಿನ್ನಡೆಯಾಗುತ್ತಿದೆ ಎಂದು ನೋಂದಣಾಧಿಕಾರಿ ಕಚೇರಿ ಅಧಿಕಾರಿಗಳು ತಿಳಿಸಿದರು.

ತಾಂತ್ರಿಕ ದೋಷ: ಅಡಚಣೆಗೆ ಕ್ಷಮಿಸಿ

ಬೆಂಗಳೂರು ಗ್ರಾಮಾಂತರ: ತುಮಕೂರು ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕಿನ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಸಮಯದಲ್ಲಿ ಒಟಿಪಿ ಬರುತ್ತಿಲ್ಲ. ಮೂರು ದಿನಗಳಿಂದ ಒಟಿಪಿ ಬರುವುದು ಸ್ಥಗಿತಗೊಂಡಿದೆ.

ದೇವನಹಳ್ಳಿಯ ಉಪ ನೋಂದಣಿ ಕಚೇರಿಯ ನಾಮಫಲಕದ ಜಾಗದಲ್ಲೇ ‘ತಾಂತ್ರಿಕ ದೋಷ: ಅಡಚಣೆಗೆ ಕ್ಷಮಿಸಿ’ ಎಂದು ಬರೆದು ಅಂಟಿಸಲಾಗಿದೆ. ನೋಂದಣಿ ಪ್ರಕ್ರಿಯೆಯು ಕೇಸ್ವಾನ್(ಕರ್ನಾಟಕ ಸ್ಟೇಟ್ ವೈಡ್ ಏರಿಯಾ ನೆಟ್‌ವರ್ಕ್) ಮೇಲೆ ಅವಲಂಬಿತವಾಗಿದೆ. ಈ ಸಮಸ್ಯೆ ಸರಿಯಾಗಬೇಕೆಂದರೆ ಕೇಸ್ವಾನ್ ನೆಟ್‌ವರ್ಕ್ ಲಭ್ಯತೆ ಹಾಗೂ ಗುಣಮಟ್ಟ ಸುಧಾರಣೆಯಾಗಬೇಕಿದೆ.

ಆನ್‌ಲೈನ್ ಗೇಮಿಂಗ್ ಸೂಪರ್ ಪವರ್ ಆಗುವ ಸಾಮರ್ಥ್ಯ ಭಾರತಕ್ಕಿದೆ

ಆನ್‌ಲೈನ್ ಗೇಮಿಂಗ್ ಉದ್ಯಮ ಭಾರತದಲ್ಲಿ ತೀವ್ರವಾಗಿ ಬೆಳವಣಿಗೆ ಹೊಂದಿತ್ತಿದೆ. ವಿಪುಲ ಉದ್ಯೋಗಾವಕಾಶಗಳ ಸೃಷ್ಟಿ, ಗಣನೀಯ ವಹಿವಾಟು ತರಬಲ್ಲ ಇ–ಸ್ಪೋರ್ಟ್ಸ್‌ಗಳಿಗೆ ಉತ್ತಮ ವೇದಿಕೆಯನ್ನೂ ಈ ಉದ್ಯಮ ಒದಗಿಸಲಿದೆ ಎಂದು ಆಲ್ ಇಂಡಿಯಾ ಗೇಮಿಂಗ್ ಫೆಡರೇಶನ್‌ನ ಸಿಇಒ ರೋಲ್ಯಾಂಡ್ ಲ್ಯಾಂಡರ್ಸ್ ವಿಶ್ವಾಸ ವ್ಯಕ್ತಪಡಿಸುತ್ತಾರೆ. ಈ ಕ್ಷೇತ್ರದಲ್ಲಿನ ಅವಕಾಶಗಳು, ಉದ್ಯಮ ಎದುರಿಸುತ್ತಿರುವ ಸವಾಲುಗಳು ಹಾಗೂ ಪೂರಕವಾಗಿ ಆಗಬೇಕಾದ ಕಾರ್ಯಗಳ ಬಗ್ಗೆ ಅವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ



ರೋಲ್ಯಾಂಡ್ ಲ್ಯಾಂಡರ್ಸ್, ಸಿಇಒ ಆಲ್ ಇಂಡಿಯಾ ಗೇಮಿಂಗ್ ಫೆಡರೇಶನ್

ಪ್ರಸ್ತುತಿ ಪಿವಿ ಬ್ರ್ಯಾಂಡ್ ಸ್ಪಾಟ್

• ಮೊಬೈಲ್ ಗೇಮಿಂಗ್ ಹಾಗೂ ಜೂಜು ನಡುವೆ ಯಾವ ವ್ಯತ್ಯಾಸವೂ ಇಲ್ಲ ಎಂಬ ಗ್ರಹಿಕೆ ಹಲವರದು. ಅವು ಹೇಗೆ ಭಿನ್ನ?

– ಮೊಬೈಲ್ ಮತ್ತು ಆನ್‌ಲೈನ್ ಗೇಮ್‌ಗಳನ್ನು ಆಡುವಾಗ, ಜೂಜಾಟಗಳಲ್ಲಿ ಹಣದ ವ್ಯವಹಾರ ಇರುತ್ತದೆ. ಈ ಒಂದು ಕಾರಣಕ್ಕೆ ಆನ್‌ಲೈನ್ ಗೇಮ್ ಆಡುವವರನ್ನು ಜೂಜುಕೋರರು ಎಂದು ಕರೆಯುವುದು ತಪ್ಪು. ಆನ್‌ಲೈನ್ ಗೇಮ್‌ಗಳಿಗೆ ನಿರ್ದಿಷ್ಟ ಕೌಶಲಗಳು ಅಗತ್ಯ. ಹೀಗಾಗಿ ಇಲ್ಲಿ ಅದೃಷ್ಟವನ್ನೇ ನೆಚ್ಚಿಕೊಂಡು ಆಡಲು ಆಗುವುದಿಲ್ಲ. ಇನ್ನೂ ವಿಸ್ತಾರವಾಗಿ ಹೇಳಬೇಕು ಎಂದರೆ ಕೌಶಲ ಆಧಾರಿತ ಆನ್‌ಲೈನ್ ಗೇಮ್‌ಗಳು ಮೊಬೈಲ್‌ನಲ್ಲಿ ಸಹ ಸುಲಭವಾಗಿ ಸಿಗುತ್ತವೆ. ಸಾಮಾನ್ಯ ಸ್ತರದ ಇ–ಗೇಮ್‌ಗಳು, ಫ್ಯಾಂಟಸಿ ಸ್ಪೋರ್ಟ್ಸ್, ಪೋಕರ್, ರಮ್ಮಿಯಂತಹ ಆಟಗಳು ಇದರಲ್ಲಿ ಸೇರಿವೆ. ಅದೇ ಜೂಜು ಎಂದು ವರ್ಗೀಕರಿಸಲಾಗುವ ಆಟಗಳ ಪೈಕಿ ರೌಲೆಟ್, ಬ್ಲ್ಯಾಕ್‌ಜಾಕ್, ಸ್ಲಾಟ್ ಗೇಮ್‌ಗಳು ಪ್ರಮುಖವಾಗಿವೆ. ಈ ಜೂಜಾಟಗಳು ಕೆಲವು ವಿದೇಶಿ ವೆಬ್‌ಸೈಟ್‌ಗಳು, ಆ್ಯಪ್‌ಗಳ ಮೂಲಕ ಈಗೀಗ ಸುಲಭವಾಗಿ ಸಿಗುತ್ತಿವೆ. ಬೆಟ್ಟಿಂಗ್ ಮತ್ತು ಜೂಜಿಗೆ ಸಂಬಂಧಿಸಿದ ವೆಬ್‌ಸೈಟ್ ಮೂಲಕವೂ ಕೆಲವು ಕೌಶಲಾಧಾರಿತ ಗೇಮ್‌ಗಳು ಸಿಗುತ್ತವೆ

• ಭಾರತ ಮತ್ತು ಕರ್ನಾಟಕದಲ್ಲಿ ಈ ಮೊಬೈಲ್ ಗೇಮಿಂಗ್ ಕ್ಷೇತ್ರವನ್ನು ನಿಯಂತ್ರಿಸಲು ಯಾವ ರೀತಿಯ ನೀತಿ ರೂಪಿಸಬೇಕು ಎಂದು ನೀವು ಬಯಸುತ್ತೀರಿ?

– ಈ ನಿಟ್ಟಿನಲ್ಲಿ ಇತ್ತೀಚೆಗೆ ಆಲ್ ಇಂಡಿಯಾ ಗೇಮಿಂಗ್ ಫೆಡರೇಶನ್ (ಎಐಜಿಎಫ್) ಪ್ರಚಾರಕಾರ್ಯ ಕೈಗೊಂಡಿತ್ತು. ಆನ್‌ಲೈನ್ ಗೇಮ್‌ಗಳನ್ನು ಯಾಕೆ ಪ್ರೋತ್ಸಾಹಿಸಬೇಕು. ಅವುಗಳಿಂದ ವಿವಿಧ ರಾಜ್ಯಗಳಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಯಾವ ರೀತಿ ಲಾಭವಾಗುತ್ತದೆ ಎಂಬುದನ್ನು ಪರಿಣಾಮಕಾರಿಯಾಗಿ ಮನವರಿಕೆ ಮಾಡಿಕೊಡಲಾಯಿತು. ನೀತಿ ನಿರೂಪಣೆಗೆ ಸಂಬಂಧಿಸಿದಂತೆ ಎಐಜಿಎಫ್ ತನ್ನ ಸದಸ್ಯ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿತು. ನೀತಿ ರೂಪಿಸುವಂತೆ ಕೋರಿ ಸರ್ಕಾರಕ್ಕೆ ಸಂಘಟನೆವತಿಯಿಂದ ಮನವಿಯನ್ನೂ ಸಲ್ಲಿಸಲಾಯಿತು.

‘ಎನಿಮೇಷನ್, ವಿಷುವಲ್ ಎಫೆಕ್ಟ್ಸ್, ಗೇಮಿಂಗ್ ಹಾಗೂ ಕಾಮಿಕ್ಸ್ (ಎವಿಜಿಸಿ) ಪಾಲಿಸಿ’ಯ ಸ್ವರೂಪ, ವ್ಯಾಪ್ತಿಯನ್ನು ವಿಸ್ತರಿಸಲು ಸಲಹೆಗಳನ್ನು ನೀಡಲಾಯಿತು. ಅಂದರೆ, ಈ ನೀತಿಯು ಕೌಶಲ ಆಧಾರಿತ ಮೊಬೈಲ್ ಗೇಮ್‌ಗಳನ್ನು ಒಳಗೊಳ್ಳಬೇಕು. ಆನ್‌ಲೈನ್ ಗೇಮ್‌ಗಳನ್ನು ಆಪರೇಟ್ ಮಾಡುವವರು, ಆ್ಯಪ್ ಅಭಿವೃದ್ಧಿಪಡಿಸುವವರ ನೋಂದಣಿಗೆ ವ್ಯವಸ್ಥೆಯೊಂದನ್ನು ರೂಪಿಸಬೇಕು. ಈ ವ್ಯವಸ್ಥೆ ರೂಪಿಸುವ ಕಾರ್ಯದಲ್ಲಿ ಎಐಜಿಎಫ್ ಹಾಗೂ ಇದರ ಅಂಗಸಂಸ್ಥೆಗಳು ಸರ್ಕಾರಕ್ಕೆ ನೆರವಾಗಲಿವೆ.

ಆನ್‌ಲೈನ್ ಗೇಮ್‌ಗಳು ಕಾನೂನುಬದ್ಧ ವೇದಿಕೆಗಳಲ್ಲಿ ಸಿಗುತ್ತವೆ ಎಂಬುದನ್ನು ಖಾತರಿಪಡಿಸುವುದು ಮುಖ್ಯ. ಇದರಿಂದ, ಕರ್ನಾಟಕದಲ್ಲಿ ಕಾನೂನುಬಾಹಿರ ಆನ್‌ಲೈನ್‌ಗೇಮ್‌ಗಳು ಸಿಗುವುದಿಲ್ಲ ಎಂಬ ಸಂದೇಶವೂ ರವಾನೆಯಾಗುತ್ತದೆ.

• ಪೂರಕವಾದ ನೀತಿ ಈ ಕ್ಷೇತ್ರದ ಅಭಿವೃದ್ಧಿಗೆ ಚುರುಕು ನೀಡಬಲ್ಲದೇ?

– ಖಂಡಿತ ಇದು ಸಾಧ್ಯ. ಈಗಾಗಲೇ ಎಐಜಿಎಫ್ ತನ್ನದೇ ಆದ ನೀತಿಯೊಂದನ್ನು ಅನುಸರಿಸುತ್ತಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಕ್ಷೇತ್ರದ ಕ್ರೋಢೀಕೃತ ವಾರ್ಷಿಕ ಪ್ರಗತಿ ದರ (ಸಿಎಜಿಆರ್) ಶೇ 30ರಷ್ಟಿದೆ. ಇನ್ನು, ಅನುಕೂಲಕರವಾದ ನೀತಿಯಿಂದ ಈ ಕ್ಷೇತ್ರದ ಪ್ರಗತಿ ಮತ್ತಷ್ಟೂ ವೇಗ ಪಡೆದುಕೊಳ್ಳುವುದು ನಿಶ್ಚಿತ.

• ಉದ್ಯೋಗ ಮತ್ತು ವ್ಯವಹಾರದ ದೃಷ್ಟಿಯಿಂದ ನೋಡಿದಾಗ ಆನ್‌ಲೈನ್ ಗೇಮಿಂಗ್‌ನಿಂದ ಯಾವ ಪ್ರಮಾಣದ ಅವಕಾಶಗಳ ಸೃಷ್ಟಿ ಸಾಧ್ಯ?

–2022ರ ವೇಳೆಗೆ ಆನ್‌ಲೈನ್ ಗೇಮಿಂಗ್ ಉದ್ಯಮ 40,000 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ಒದಗಿಸುವುದು. ಪರೋಕ್ಷ ತೆರಿಗೆ ಸಂಗ್ರಹವನ್ನು ಅವಲೋಕಿಸಿದರೆ ಈ ಉದ್ಯಮದಿಂದಾಗುವ ವಹಿವಾಟು ಎಷ್ಟು ಎಂಬುದು ಗೊತ್ತಾಗುತ್ತದೆ. 2022ರ ವೇಳೆ ಈ ಪರೋಕ್ಷ ತೆರಿಗೆ ಪ್ರಮಾಣ ₹ 28.60 ಶತಕೋಟಿಯಷ್ಟಾಗಲಿದ್ದು, ಇದು ಶೇ 43ರಷ್ಟು ಸಿಎಜಿಆರ್ ಆಗುವುದು.

• ಇ–ಸ್ಪೋರ್ಟ್ಸ್ ಭಾರತದಲ್ಲಿ ಜನಪ್ರಿಯಗೊಳ್ಳುತ್ತಿದೆ ಎಂದು ನಿಮಗೆ ಅನಿಸುತ್ತಿದೆಯೇ?

– ಕೆಪಿಎಂಜಿ ಸಿದ್ಧಪಡಿಸಿರುವ ಒಂದು ವರದಿ ಪ್ರಕಾರ ಇ–ಸ್ಪೋರ್ಟ್ಸ್ ವೀಕ್ಷಿಸುವವರ ಸಂಖ್ಯೆ 2020ರಲ್ಲಿ ದ್ವಿಗುಣಗೊಂಡಿದೆ. ಅಂದರೆ, 1.70 ಕೋಟಿಗೆ ಏರಿಕೆಯಾಗಿದೆ ಎಂದಾಯಿತು. 2025ರ ವೇಳೆಗೆ ವೀಕ್ಷಿಸುವವರ ಸಂಖ್ಯೆ 13 ಕೋಟಿ ಮೀರಲಿದೆ ಎಂದೂ ಕೆಪಿಎಂಜಿ ಅಂದಾಜಿಸಿದೆ. ಇನ್ನು, ಇ–ಸ್ಪೋರ್ಟ್ಸ್‌ನಲ್ಲಿ ವಿತರಿಸಲಾಗುವ ಬಹುಮಾನದ ಮೊತ್ತದಲ್ಲಿ ಶೇ 25–30ರಷ್ಟು ಹೆಚ್ಚಳ ಕಂಡುಬಂದಿದೆ. 2019ರಲ್ಲಿ ಭಾರತದ 285 ಆಟಗಾರರು ₹ 1.49 ಕೋಟಿ ಮೊತ್ತದ ಬಹುಮಾನ ಗೆದ್ದಿದ್ದಾರೆ. ಇ–ಸ್ಪೋರ್ಟ್ಸ್ ಆಡುವವರ ಸಂಖ್ಯೆಯ ದೃಷ್ಟಿಯಿಂದ ವಿಶ್ವದಲ್ಲಿ ಭಾರತ 16ನೇ ಸ್ಥಾನದಲ್ಲಿದೆ. ಈ ಕ್ಷೇತ್ರದಲ್ಲಿನ ಸ್ಟಾರ್ಟ್‌ಅಪ್‌ಗಳು, ಕಂಪನಿಗಳ ಸರಾಸರಿ ಆದಾಯ 68 ದಶಲಕ್ಷ ಡಾಲರ್.

ಇ–ಸ್ಪೋರ್ಟ್ಸ್‌ಗೆ ಭಾರತದಲ್ಲಿ ಉತ್ತಮ ಭವಿಷ್ಯ ಇದೆ. ಜಾಗತಿಕವಾಗಿಯೂ ತನ್ನ ಛಾಪು ಮೂಡಿಸುವ ಸಾಮರ್ಥ್ಯವನ್ನು ಭಾರತ ಹೊಂದಿದೆ. ಆತ್ಮನಿರ್ಭರ ಭಾರತ ಯೋಜನೆಯಡಿ ದೇಶೀಯ ಸೊಗಡಿನ ಹಲವಾರು ಗೇಮ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ.

• ಇ–ಸ್ಪೋರ್ಟ್ಸ್ ಮತ್ತು ಮೊಬೈಲ್ ಗೇಮಿಂಗ್ ಕ್ಷೇತ್ರಗಳು ಪ್ರತಿಭಾವಂತರಿಗೆ ಹೇಗೆ ಅನುಕೂಲಕರ?

– ಈ ಕ್ಷೇತ್ರ ಅಸಾಧಾರಣ ಗತಿಯಲ್ಲಿ ಬೆಳೆಯುತ್ತಿದೆ. ದೇಶದ ಪ್ರತಿಭಾವಂತರಿಗೆ ವಿಪುಲ ಅವಕಾಶಗಳನ್ನು ಒದಗಿಸುತ್ತಿದೆ. ಗೇಮ್‌ಗಳನ್ನು ಅಭಿವೃದ್ಧಿಪಡಿಸುವವರು, ಪಬ್ಲಿಷರ್, ವೃತ್ತಿಪರ ಆಟಗಾರರು, ಟೂರ್ನಾಮೆಂಟ್‌ಗಳಿಗೆ, ಇವೆಂಟ್ ಸಂಘಟಕರಿಗೆ, ಸ್ಟಾರ್ಟ್‌ಅಪ್‌ಗಳು, ಹೂಡಿಕೆದಾರರು, ಸಾಫ್ಟ್‌ವೇರ್ ಡೆವಲೆಪರ್ಸ್, ಹಾರ್ಡ್‌ವೇರ್ ಪರಿಣತರು, ಇ–ಸ್ಪೋರ್ಟ್ಸ್ ಕೆಫೆಗಳು ಹಾಗೂ ಈ ಕ್ಷೇತ್ರಕ್ಕೆ ಪೂರಕವಾಗಿ ಸಾಧನ–ಸೇವೆ ಒದಗಿಸುವ ಉದ್ಯಮಿಗಳಿಗೆ ಅವಕಾಶಗಳು ಕೈಬೀಸಿ ಕರೆಯುತ್ತವೆ.

ಹಕ್ಕುಸ್ವಾಮ್ಯಗಳ ಮಾಲೀಕತ್ವ, ಬ್ರಾಡ್‌ಕಾಸ್ಟಿಂಗ್, ಡಿಜಿಟಲ್ ಮೀಡಿಯಾ ಹಕ್ಕುಗಳ ಕ್ಷೇತ್ರಗಳಲ್ಲಿರುವವರಿಗೂ ಅನಂತ ಅವಕಾಶಗಳಿವೆ. ಭಾರತದಲ್ಲಿನ ಆನ್‌ಲೈನ್ ಗೇಮಿಂಗ್ ಸ್ಟಾರ್ಟ್‌ಅಪ್‌ಗಳಲ್ಲಿ ಹೂಡಿಕೆ 450 ದಶಲಕ್ಷ ಡಾಲರ್‌ಗೂ ಅಧಿಕ. ಈ ಉದ್ಯಮ ಹಾಗೂ ಪ್ರತಿಭಾವಂತರ ಪರಿಶ್ರಮ ಒದಗಿಸಿರುವ ಅವಕಾಶಗಳು ಎಷ್ಟು ಎಂಬುದು ಇದರಿಂದ ವೇದ್ಯವಾಗುತ್ತದೆ.

ಮುಖ್ಯಾಂಶಗಳು

- ಆನ್‌ಲೈನ್ ಗೇಮ್‌ಗಳಿಗೆ ನಿರ್ದಿಷ್ಟ ಕೌಶಲಗಳು ಅಗತ್ಯ. ಹೀಗಾಗಿ ಇಲ್ಲಿ ಅದೃಷ್ಟವನ್ನೇ ನೆಚ್ಚಿಕೊಂಡು ಆಡಲು ಆಗುವುದಿಲ್ಲ.
- ಆನ್‌ಲೈನ್ ಗೇಮ್‌ಗಳನ್ನು ಆಪರೇಟ್ ಮಾಡುವವರು, ಆ್ಯಪ್ ಅಭಿವೃದ್ಧಿಪಡಿಸುವವರ ನೋಂದಣಿಗೆ ವ್ಯವಸ್ಥೆಯೊಂದನ್ನು ರೂಪಿಸಬೇಕು.
- ಇ–ಸ್ಪೋರ್ಟ್ಸ್ ಮತ್ತು ಮೊಬೈಲ್ ಗೇಮಿಂಗ್ ಕ್ಷೇತ್ರಗಳು ಅಸಾಧಾರಣ ಗತಿಯಲ್ಲಿ ಬೆಳೆಯುತ್ತಿವೆ. ದೇಶದ ಪ್ರತಿ ಭಾವಂತರಿಗೆ ವಿಪುಲ ಅವಕಾಶಗಳನ್ನು ಒದಗಿಸುತ್ತಿವೆ.

ಅಕ್ರಮ ಆಸ್ತಿ: ಎಸಿಬಿ ತನಿಖೆಗೆ ಅಸಹಕಾರ

ಇನ್‌ಸ್ಪೆಕ್ಟರ್ ವಿಕ್ಟರ್ ಸೈಮನ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ತನಿಖೆಗೆ ಅಸಹಕಾರ ತೋರಿದ ಬೆಂಗಳೂರು ಮಹಾ ನಗರ ಕಾರ್ಯಪಡೆ (ಬಿಎಂಟಿಎಫ್) ಪೊಲೀಸ್ ಇನ್‌ಸ್ಪೆಕ್ಟರ್ ವಿಕ್ಟರ್ ಸೈಮನ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬುಧವಾರ ಬಂಧಿಸಿದೆ.

ಇನ್‌ಸ್ಪೆಕ್ಟರ್ ವಿಕ್ಟರ್ ಸೈಮನ್

ವಿಕ್ಟರ್ ಸೈಮನ್ ಸೇರಿದಂತೆ ಒಂಬತ್ತು ಅಧಿಕಾರಿಗಳ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ. ಮಂಗಳವಾರ ರಾಜ್ಯದ 28 ಸ್ಥಳಗಳ ಮೇಲೆ ದಾಳಿಮಾಡಿದ್ದ ಎಸಿಬಿ ಅಧಿಕಾರಿಗಳು, ಶೋಧ ನಡೆಸಿದ್ದರು. ಸೈಮನ್ ಅವರ ಬಳಿ ಈವರೆಗೆ ಆದಾಯಕ್ಕಿಂತಲೂ ₹ 2.28 ಕೋಟಿ ಮೌಲ್ಯದ ಹೆಚ್ಚಿನ ಆಸ್ತಿ ಪತ್ತೆಯಾಗಿದೆ.

ಎಲ್ಲ ಪ್ರಶ್ನೆಗಳಿಗೂ ‘ನನಗೆ ಗೊತ್ತಿಲ್ಲ’ ಎಂಬ ಉತ್ತರವನ್ನೇ ನೀಡುತ್ತಿದ್ದರು. ತನಿಖೆಗೆ ಅಸಹಕಾರ ತೋರಿದ ಕಾರಣದಿಂದ ಎಸಿಬಿ ಡಿವೈಎಸ್‌ಪಿ ವಜೀರ್ ಅಲಿಖಾನ್ ನೇತೃತ್ವದ ತನಿಖಾ ತಂಡ, ವಿಕ್ಟರ್ ಅವರನ್ನು ಬುಧವಾರ ಬೆಳಿಗ್ಗೆ ಬಂಧಿಸಿದೆ.

‘ವಿಕ್ಟರ್ ಸೈಮನ್ ಅವರನ್ನು ಬಂಧಿಸಿದ ಬಳಿಕ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ತನಿಖಾ ತಂಡದ ಕೋರಿಕೆಯಂತೆ ಆರೋಪಿಯನ್ನು ಶನಿವಾರದವರೆಗೂ ಎಸಿಬಿ ವಶಕ್ಕೆ ನೀಡಿ ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ’ ಎಂದು ಎಸಿಬಿ ಬೆಂಗಳೂರು ನಗರ ಘಟಕದ ಎಸ್‌ಪಿ ಕುಲದೀಪ್ ಕುಮಾರ್ ಆರ್. ಜೈನ್ ತಿಳಿಸಿದ್ದಾರೆ.

‘ವಿಕ್ಟರ್ ಬಳಿಯಲ್ಲಿ ದುಬಾರಿ ಬೆಲೆ ಕಾರುಗಳ ಹಲವು ಕೀಗಳು ದೊರಕಿವೆ. ಈ ಬಗ್ಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ಮೊಬೈಲ್ ತೆರೆಯಲು ಪಾಸ್‌ವರ್ಡ್ ನೀಡುತ್ತಿಲ್ಲ. ಮನೆಯಲ್ಲಿ ಪತ್ತೆಯಾಗಿರುವ ಭಾರಿ ಮೌಲ್ಯದ ಆಸ್ತಿ ದಾಖಲೆಗಳ ಬಗ್ಗೆಯೂ ಮಾಹಿತಿ ನೀಡುತ್ತಿಲ್ಲ. ಈ ಕಾರಣದಿಂದಾಗಿಯೇ ಅವರನ್ನು ಬಂಧಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಜಿಎಸ್‌ಟಿ ಅಧಿಕಾರಿಗಳಿಂದ ತಪಾಸಣೆ: ಬೆಳಗಾವಿಯ ಉಪ ಮುಖ್ಯ ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟರ್ ಹಣಮಂತ ಶಿವಪ್ಪ ಚಿಕ್ಕಣ್ಣನವರ ಮೇಲೂ ಮಂಗಳವಾರ ಎಸಿಬಿ ದಾಳಿ ನಡೆದಿತ್ತು. ಅವರು ಅಲ್ಲಿ ಎಲೆಕ್ಟ್ರಿಕ್ ಉಪಕರಣಗಳ ಮಳಿಗೆ ಹೊಂದಿರುವುದು ಪತ್ತೆಯಾಗಿತ್ತು. ಅಲ್ಲಿ ಸರಕು ಮತ್ತು ಸೇವಾ ತೆರಿಗೆ ಇಲಾಖೆಯ ಎಂಟು ಅಧಿಕಾರಿಗಳ ತಂಡ ಬುಧವಾರ ತಪಾಸಣೆ ನಡೆಸಿದೆ ಎಂಬ ಮಾಹಿತಿ ಲಭ್ಯವಾಗಿದೆ.

ವಿಕ್ಟರ್ ಸೈಮನ್ ಮನೆಯಲ್ಲಿ 22.36 ಲೀಟರ್ ಹಾಗೂ ಹಾವೇರಿಯ ಕೈಗಾರಿಕೆಗಳು ಮತ್ತು ಬಾಯ್ಲರ್ಸ್ ಇಲಾಖೆಯ ಉಪ ನಿರ್ದೇಶಕ ಕೆ.ಎಂ. ಪ್ರಥಮ್ ಮನೆಯಲ್ಲಿ 34.5 ಲೀಟರ್ ಮದ್ಯದ ದಾಸ್ತಾನು ಪತ್ತೆಯಾಗಿತ್ತು. ಇಬ್ಬರ ವಿರುದ್ಧವೂ ಅಬಕಾರಿ ಅಧಿಕಾರಿಗಳು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಅಕ್ರಮ ಆಸ್ತಿ ಪ್ರಮಾಣ	(ಶೇಕಡಾವಾರುಗಳಲ್ಲಿ)
ರಾಜು ಪತ್ತಾರ್, ಲೆಕ್ಕಾಧಿಕಾರಿ, ಜೆಸ್ಕಾಂ, ಯಾದಗಿರಿ	223.44
ಕೃಷ್ಣೇಗೌಡ, ಯೋಜನಾ ನಿರ್ದೇಶಕ, ನಿರ್ಮಿತಿ ಕೇಂದ್ರ, ಚಿಕ್ಕಬಳ್ಳಾಪುರ	295.86
ಹಣಮಂತ ಶಿವಪ್ಪ ಚಿಕ್ಕಣ್ಣನವರ, ಉಪ ಮುಖ್ಯ ಎಲೆಕ್ಟ್ರಿಕ್ ಇನ್‌ಸ್ಪೆಕ್ಟರ್, ಬೆಳಗಾವಿ	161.57
ಸುಬ್ರಮಣ್ಯ ಕೆ. ವಡ್ಡರ್, ಜಂಟಿ ನಿರ್ದೇಶಕ, ನಗರ ಮತ್ತು ಗ್ರಾಮಾಂತರ ಯೋಜನೆ, ಮೈಸೂರು	82.33
ಮುನಿಗೋಪಾಲರಾಜು, ಸೂಪರಿಂಟೆಂಡಿಂಗ್ ಎಂಜಿನಿಯರ್, ಚೆಸ್ಕಾಂ, ಮೈಸೂರು	196.27
ಚನ್ನವೀರಪ್ಪ, ಎಫ್‌ಡಿಎ, ಪ್ರಾದೇಶಿಕ ಸಾರಿಗೆ ಆಯುಕ್ತರ ಕಚೇರಿ, ಮೈಸೂರು ದಕ್ಷಿಣ	149.51
ವಿಕ್ಟರ್ ಸೈಮನ್, ಪೊಲೀಸ್ ಇನ್‌ಸ್ಪೆಕ್ಟರ್ ಬಿಎಂಟಿಎಫ್	257.46
ಕೆ. ಸುಬ್ರಮಣ್ಯಂ, ಕಿರಿಯ ಎಂಜಿನಿಯರ್, ನಗರ ಯೋಜನೆ ಸಹಾಯಕ ನಿರ್ದೇಶಕರ ಕಚೇರಿ, ಬಿಬಿಎಂಪಿ ಯಲಹಂಕ ವಲಯ	364.59
ಕೆ.ಎಂ. ಪ್ರಥಮ್, ಉಪ ನಿರ್ದೇಶಕ, ಕೈಗಾರಿಕೆಗಳು ಮತ್ತು ಬಾಯ್ಲರ್ಸ್ ಇಲಾಖೆ, ಹಾವೇರಿ	118

ಸಚಿವರ ಸಾಮೂಹಿಕ ಗೈರು: ಪರಿಷತ್ ಕಲಾಪ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ವಿಧಾನ ಮಂಡಲದಲ್ಲಿ

ಬೆಂಗಳೂರು: ಕಲಾಪದಲ್ಲಿ ಭಾಗವಹಿಸಬೇಕಿದ್ದ ಸಚಿವರು ಸಾಮೂಹಿಕವಾಗಿ ಗೈರಾಗಿದ್ದರಿಂದ ಬುಧವಾರ ಮಧ್ಯಾಹ್ನದ ಬಳಿಕ ವಿಧಾನ ಪರಿಷತ್ ಕಲಾಪವೇ ನಡೆಯಲಿಲ್ಲ.

ಮಧ್ಯಾಹ್ನ 1.45ಕ್ಕೆ ಗಂಟೆಗೆ ಸದನದ ಕೋರಂ ಬೆಲ್ ಹಾಕಲಾಯಿತು. 15 ನಿಮಿಷಗಳ ಬಳಿಕ ಕಲಾಪ ಆರಂಭವಾಯಿತು. ಆದರೆ, ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಮತ್ತು ಕೆಲವು ಸದಸ್ಯರು ಮಾತ್ರ ಆಡಳಿತ ಪಕ್ಷದ ಸಾಲಿನಲ್ಲಿದ್ದರು. ಸಚಿವರಾದ ಎಂ.ಟಿ.ಬಿ. ನಾಗರಾಜ್, ಕೆ. ಗೋಪಾಲಯ್ಯ, ಸಿ.ಸಿ. ಪಾಟೀಲ, ಮುರುಗೇಶ ನಿರಾಣಿ, ಸಿ.ಪಿ. ಯೋಗೇಶ್ವರ ಹಾಜರಿರಬೇಕಿತ್ತು. ಇವರೆಲ್ಲರೂ ಸದನಕ್ಕೆ ಬಂದಿರಲಿಲ್ಲ.

ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಬಜೆಟ್ ಕುರಿತು ಮಾತನಾಡಬೇಕಿತ್ತು. ಸಭಾಪತಿ ಬಸವರಾಜ ಹೊರಟ್ಟಿ ಅವರು ಹರಿಪ್ರಸಾದ್ ಅವರಿಗೆ ಮಾತನಾಡಲು ಅವಕಾಶ ನೀಡಿದರು. ಆದರೆ, ಆಡಳಿತ ಪಕ್ಷದ ಸಾಲಿನಲ್ಲಿ ಸಚಿವರು ಮತ್ತು ಶಾಸಕರು ಗೈರಾಗಿರುವ ಬಗ್ಗೆ ವಿರೋಧ ಪಕ್ಷದ ಸದಸ್ಯರು ಆಕ್ಷೇಪ ಎತ್ತಿದರು.

‘ಸಚಿವ ಆರ್. ಶಂಕರ್ ಮನೆಯಲ್ಲಿ ಭೋಜನ ಕೂಟ ಇರುವುದರಿಂದ ಸಚಿವರು, ಶಾಸಕರು ಅಲ್ಲಿಗೆ ತೆರಳಿದ್ದಾರೆ. ಶೀಘ್ರದಲ್ಲಿ ಸದನಕ್ಕೆ ಬರುತ್ತಾರೆ’ ಎಂದು ಸಭಾ ನಾಯಕರು ಉತ್ತರಿಸಿದರು.

ಕೆಲಕಾಲ ವಾದ, ಪ್ರತಿವಾದ ನಡೆಯಿತು. ‘ಸಚಿವರು ಸಾಮೂಹಿಕವಾಗಿ ಸದನಕ್ಕೆ ಗೈರಾಗಿರುವುದರಿಂದ ಕಲಾಪವನ್ನು ಸೋಮವಾರ ಬೆಳಿಗ್ಗೆ 10 ಗಂಟೆಗೆ ಮುಂದೂಡುತ್ತಿದ್ದೇನೆ‘ ಎಂದು ಸಭಾಪತಿ ಪ್ರಕಟಿಸಿದರು.

ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೊರೆಯಾದ ಪರೀಕ್ಷಾ ಶುಲ್ಕ

ಪಿ.ಜಿ ಪ್ರವೇಶ ಪರೀಕ್ಷಾ ಶುಲ್ಕಕ್ಕೂ ಜಿಎಸ್‌ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಬಿಇ) ವೈದ್ಯಕೀಯ ಸ್ನಾತಕೋತ್ತರ ಪ್ರವೇಶ ಪರೀಕ್ಷಾ(ನೀಟ್) ಶುಲ್ಕವನ್ನು ಹೆಚ್ಚಳ ಮಾಡಿದ್ದು, ಇದಕ್ಕೆ ಜಿಎಸ್‌ಟಿ (ಸರಕು ಸೇವಾ ತೆರಿಗೆ) ವಿಧಿಸಿರುವುದು ಭಾರಿ ವಿರೋಧಕ್ಕೆ ಕಾರಣವಾಗಿದೆ.

ಅಲ್ಲದೆ, ಪರೀಕ್ಷಾ ವಿಧಾನದಲ್ಲೂ ಕೊನೆಗಳಿಗೆಯಲ್ಲಿ ಬದಲಾವಣೆ ಮಾಡಲಾಗಿದೆ. ಕಳೆದ ವರ್ಷದ ವರೆಗೆ 300 ಪ್ರಶ್ನೆಗಳಿಗೆ ಉತ್ತರ ಬರೆಯಬೇಕಾಗಿತ್ತು. ಈ ವರ್ಷ 200 ಪ್ರಶ್ನೆಗಳಿಗೆ ಉತ್ತರ ಬರೆಯಬೇಕಾಗಿದೆ. ಕೊನೆ ಗಳಿಗೆಯ ಬದಲಾವಣೆ ವಿದ್ಯಾರ್ಥಿಗಳು ಮತ್ತು ಬೋಧಕರಲ್ಲಿ ಗೊಂದಲ ಉಂಟು ಮಾಡಿದೆ.

ಈ ಪರೀಕ್ಷೆಗೆ ಹಾಜರಾಗುವ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ₹5,015, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ₹3,835 ನಿಗದಿ ಮಾಡಲಾಗಿದೆ. ಕಳೆದ ವರ್ಷ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ₹3,750, ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರ ಹಿಂದುಳಿದವರಿಗೆ ₹2,750 ಇತ್ತು.

ಪರಿಷ್ಕೃತ ಶುಲ್ಕವು ಶೇ 18 ರಷ್ಟು ಜಿಎಸ್‌ಟಿಯನ್ನು ಒಳಗೊಂಡಿದೆ. ರಾಷ್ಟ್ರೀಯ ಮಟ್ಟದ ಪ್ರವೇಶ ಪರೀಕ್ಷೆಯೊಂದಕ್ಕೆ ಜಿಎಸ್‌ಟಿ ವಿಧಿಸುತ್ತಿರುವುದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಯುಪಿಎಸ್‌ಸಿ, ಗೇಟ್ ಮತ್ತು ಸಿಎಟಿಗೆ ಕ್ರಮವಾಗಿ ₹200, ₹1,500 ಮತ್ತು ₹2,000 ಶುಲ್ಕ ಪಡೆಯಲಾಗುತ್ತದೆ. ವೈದ್ಯಕೀಯ ಸ್ನಾತಕೋತ್ತರ ನೀಟ್‌ಗೆ ₹5,015 ವಿಧಿಸುತ್ತಿರುವುದು ಸರಿಯಲ್ಲ. ಇತರ ಪ್ರವೇಶ ಪರೀಕ್ಷೆಗಳಿಗೆ ಹೋಲಿಸಿದರೆ ಇದು ಅತ್ಯಧಿಕ. ಅಲ್ಲದೆ, ಅದಕ್ಕೆ ಜಿಎಸ್‌ಟಿ ವಿಧಿಸುತ್ತಿರುವುದು ತರ್ಕಹೀನ ಎಂದು ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನಿಮ್ಹಾನ್ಸ್, ಜೆಐಪಿಎಂಇಆರ್ ಇತರ ಸಂಸ್ಥೆಗಳಿಗೆ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್) ಪ್ರವೇಶ ಪರೀಕ್ಷೆ ನಡೆಸುತ್ತದೆ. ಇಲ್ಲಿ ಸಾಮಾನ್ಯ ಮತ್ತು ಒಬಿಸಿ ವಿದ್ಯಾರ್ಥಿಗಳಿಗೆ ಶುಲ್ಕ ₹1,500, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೆ ₹1,200 ನಿಗದಿ ಮಾಡಲಾಗಿದೆ. ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ ನೀಟ್ ಪರೀಕ್ಷೆ ತನ್ನ ಆದಾಯ ಹೆಚ್ಚಿಸಿಕೊಳ್ಳಲು ಒಂದು ಸಾಧನವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಅರ್ಜಿಯನ್ನು ಸಲ್ಲಿಸಲು ಮಾರ್ಚ್ 15 ಕೊನೆಯ ದಿನವಾಗಿದ್ದು, ಏಪ್ರಿಲ್ 18 ರಂದು ಪರೀಕ್ಷೆ ನಡೆಯಲಿದೆ.

ಮುಖ್ಯಮಂತ್ರಿ ನಾಪತ್ತೆ: ಯತ್ನಾಳ್ ಕಿಡಿ

ಒಂದನೇ ಪುಟದಿಂದ...

ಬಜೆಟ್ ಕುರಿತ ಚರ್ಚೆ ಆರಂಭಿಸುವಂತೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸೂಚಿಸಿದರು.

ಮೀಸಲಾತಿ ಬಗ್ಗೆ ಪ್ರಸ್ತಾಪಿಸಲು ಕೂಡಲೇ ಅವಕಾಶ ನೀಡಬೇಕು ಎಂದು ಆಗ್ರಹಿಸಿ ಧರಣಿ ನಡೆಸಲು ಯತ್ನಾಳ್ ಮುಂದಾದರು. ಆಗ ಸಿದ್ದರಾಮಯ್ಯ, ಯತ್ನಾಳ್‌ಗೆ ಅನುವು ಮಾಡಿಕೊಟ್ಟರು.

’ಸಿದ್ದರಾಮಯ್ಯ ಅವರಿಗೆ ನಮ್ಮ ಸಮುದಾಯದ ಬಗ್ಗೆ ಪ್ರೀತಿ ಇದೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಲು ನಮ್ಮ ಸಮುದಾಯದ ಕೊಡುಗೆ ದೊಡ್ಡದು. ಆದರೆ, ಅವರಿಗೆ ಸಮುದಾಯದ ಬಗ್ಗೆ ಪ್ರೀತಿ ಇಲ್ಲ. ಇನ್ನೆರಡು ವರ್ಷಗಳಲ್ಲಿ ಚುನಾವಣೆ ನಡೆಯಲಿದೆ ಎಂಬುದು ನಮ್ಮ ನಾಯಕರಿಗೆ ನೆನಪಿನಲ್ಲಿ ಇರಲಿ. ಆಗ ನಮ್ಮವರು ತಕ್ಕ ಪಾಠ ಕಲಿಸಲಿದ್ದಾರೆ’ ಎಂದು ಎಚ್ಚರಿಸಿದರು. ಆಗ ಕಾಂಗ್ರೆಸ್ ಸದಸ್ಯರು ಮೇಜು ತಟ್ಟಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಬಿಜೆಪಿಯ ಎಂ.ಪಿ. ರೇಣುಕಾಚಾರ್ಯ, ’ಮುಖ್ಯಮಂತ್ರಿ ಅವರಿಗೆ ಸಮುದಾಯದ ಬಗ್ಗೆ ಪ್ರೀತಿ ಇದೆ. ಅವರು ನಾಪತ್ತೆಯಾಗಿದ್ದಾರೆ ಎಂಬ ಪದವನ್ನು ವಾಪಸ್ ಪಡೆಯಿರಿ’ ಎಂದರು. ಆಗ ಯತ್ನಾಳ್, ’ನಾನು ವಾಜಪೇಯಿ ಸರ್ಕಾರದಲ್ಲಿ ಮಂತ್ರಿಯಾಗಿದ್ದವನು. ಹಾದಿ ಬೀದಿಯಲ್ಲಿ ಹೋಗುವವನು ಅಲ್ಲ‘ ಎಂದರು.

‘ಪರಿಶಿಷ್ಟ ಸಮುದಾಯದ ಹಲವರು ಹೆಲಿಕಾಪ್ಟರ್‌ನಲ್ಲಿ ಓಡಾಡುತ್ತಾರೆ. ಅಂತಹವರಿಗೆ ಮೀಸಲಾತಿಯ ಅಗತ್ಯ ಇಲ್ಲ. ನನಗೂ ಮೀಸಲಾತಿ ಬೇಡ. ಆದರೆ, ನಮ್ಮ ಸಮುದಾಯದ ಜನರಿಗೆ ಮೀಸಲಾತಿ ಸಿಗಬೇಕು‘ ಎಂದು ಪ್ರತಿಪಾದಿಸಿದ ಯತ್ನಾಳ್, ಕಾಲಹರಣ ಮಾಡುವುದನ್ನು ಬಿಟ್ಟು, ಎರಡು–ಮೂರು ತಿಂಗಳು ಅಥವಾ ಶತಮಾನದೊಳಗೆ ಮೀಸಲಾತಿ ನೀಡುತ್ತೇನೆ ಎಂದು ಮುಖ್ಯಮಂತ್ರಿ ಸ್ಪಷ್ಟವಾಗಿ ಹೇಳಲಿ. ಅವರು ಸ್ಪಷ್ಟ ಉತ್ತರ ನೀಡದಿದ್ದರೆ ಸದನದಲ್ಲಿ ಸೋಮವಾರ ಧರಣಿ ನಡೆಸುತ್ತೇನೆ’ ಎಂದೂ ಎಚ್ಚರಿಸಿದರು.

ಅಹೋರಾತ್ರಿ ಧರಣಿ: ಬಸವ ಜಯ ಮೃತ್ಯುಂಜಯ ಸ್ವಾಮೀಜಿ

‘ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವ ಬೇಡಿಕೆಗೆ ಸಂಬಂಧಿಸಿದಂತೆ ಅಧಿವೇಶನದಲ್ಲಿ ಸರ್ಕಾರ ನೀಡಿದ ಉತ್ತರ ಸಮಾಧಾನ ತಂದಿಲ್ಲ. ಹೀಗಾಗಿ, ಹೋರಾಟ ತೀವ್ರಗೊಳಿಸಲು ನಿರ್ಧರಿಸಿದ್ದೇವೆ. ಧರಣಿ ಸ್ಥಳದಲ್ಲಿ ಶಿವರಾತ್ರಿಯಂದು (ಗುರುವಾರ) ಅಹೋರಾತ್ರಿ ಧರಣಿ ನಡೆಸುತ್ತೇವೆ’ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು. ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾತ್ರಿ 9 ಗಂಟೆಯಿಂದ ಇಷ್ಟಲಿಂಗ ಪೂಜೆಯ ಮೂಲಕ ಶಿವರಾತ್ರಿ ಆಚರಣೆ ಮಾಡುತ್ತೇವೆ. ದೇವರ ಸ್ಮರಣೆಯೊಂದಿಗೆ ಧರಣಿ ಮುಂದುವರಿಸುತ್ತೇವೆ’ ಎಂದರು.

ಪ್ರವಾಸಿಗರಿಗಾಗಿ ತಲೆ ಎತ್ತಲಿವೆ ತ್ರಿಸ್ಟಾರ್ ಹೋಟೆಲ್‌ಗಳು

ಒಂದನೇ ಪುಟದಿಂದ...

ರೈಟ್ಸ್ ಸಂಸ್ಥೆ ಹಾಗೂ ಕೆಎಸ್‌ಟಿಡಿಸಿ ಅಧಿಕಾರಿಗಳ ಜೊತೆ ಸಭೆ ನಡೆಸಿದ ನಂತರ ಅವರು ಮಾಹಿತಿ ನೀಡಿದರು.

‘ಈ ಸ್ಥಳಗಳಲ್ಲಿ ಪ್ರವಾಸಿಗರಿಗೆ ತಂಗಲು ಉತ್ತಮ ಹೋಟೆಲ್‌ಗಳು ಇರಲಿಲ್ಲ. ಇಲಾಖೆಯ ವತಿಯಿಂದಲೇ ಇಲ್ಲಿ ಹೋಟೆಲ್‌ಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ’ ಎಂದರು.

‘ಕಾಮಗಾರಿಯ ಗುಣಮಟ್ಟದಲ್ಲಿ ಯಾವುದೇ ರೀತಿ ರಾಜಿ ಆಗಬಾರದು. ಸುಂದರವಾದ ವಿನ್ಯಾಸದೊಂದಿಗೆ ನಿಗದಿಪಡಿಸಿದ ಸಮಯದಲ್ಲಿ ಹೋಟೆಲ್‌ಗಳ ನಿರ್ಮಾಣ ಕಾರ್ಯ ಪೂರ್ಣಗೊಳಿಸಬೇಕು’ ಎಂದು ರೈಟ್ಸ್ ಕಂಪನಿಗೆ ಸಚಿವರು ಸೂಚಿಸಿದರು. ಕಂಪನಿಯ ಹಿರಿಯ ಉಪಪ್ರಧಾನ ವ್ಯವಸ್ಥಾಪಕ ಎಂ.ಜಿ.ಸುದೀಪ್, ವಾಸ್ತುಶಿಲ್ಪಿ ಬಾಲಯ್ಯ, ವ್ಯವಸ್ಥಾಪಕಿ ನೇಹಾ ಜೈನ್ ಹಾಗೂ ಎಂಜಿನಿಯರ್ ಗಿರೀಶ್, ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಶರ್ಮಾ, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ನ ವ್ಯವಸ್ಥಾಪಕ ನಿರ್ದೇಶಕ ಕುಮಾರ್ ಪುಷ್ಕರ್ ಸಭೆಯಲ್ಲಿ ಭಾಗವಹಿಸಿದ್ದರು.

ಅಮೆರಿಕದ ಇಂಡೊ–ಪೆಸಿಫಿಕ್ ಕಮಾಂಡ್‌ನ ಅಡ್ಮಿರಲ್ ಫಿಲಿಪ್ಸ್ ಡೇವಿಡ್‌ಸನ್ ಹೇಳಿಕೆ

ಗಡಿ ಬಿಕ್ಕಟ್ಟಿನ ವೇಳೆ ಭಾರತಕ್ಕೆ ಮಾಹಿತಿ ಪೂರೈಕೆ

ವಾಷಿಂಗ್ಟನ್ (ಪಿಟಿಐ): ಗಡಿಗೆ ಸಂಬಂಧಿಸಿದಂತೆ ಚೀನಾದೊಂದಿಗೆ ಸಂಘರ್ಷ ಏರ್ಪಟ್ಟ ಸಮಯದಲ್ಲಿ ಭಾರತಕ್ಕೆ ಮಹತ್ವದ ಮಾಹಿತಿ, ಶೀತ-ಪ್ರದೇಶದಲ್ಲಿ ಧರಿಸಲು ಬೇಕಾದ ವಸ್ತ್ರಗಳು ಹಾಗೂ ಹಲವು ಉಪಕರಣಗಳನ್ನು ಅಮೆರಿಕ ಒದಗಿಸಿತ್ತು ಎಂದು ಹಿರಿಯ ಮಿಲಿಟರಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅಮೆರಿಕದ ಇಂಡೊ–ಪೆಸಿಫಿಕ್ ಕಮಾಂಡ್‌ನ ಅಡ್ಮಿರಲ್ ಫಿಲಿಪ್ಸ್ ಡೇವಿಡ್‌ಸನ್ ಅವರು ಸೆನೆಟ್‌ನ ಆರ್ಮ್ಡ್ ಸರ್ವೀಸಸ್ ಕಮಿಟಿಗೆ ಈ ವಿಷಯ ತಿಳಿಸಿದ್ದಾರೆ.

ವಾಸ್ತವ ನಿಯಂತ್ರಣ ರೇಖೆ ಬಳಿ ಚೀನಾದ ಈ ಆಕ್ರಮಣಕಾರಿ ನಡೆಯನ್ನು ಹತ್ತಿಕ್ಕಲು ಮಿತ್ರರಾಷ್ಟ್ರಗಳ ನೆರವಿನ ಮಹತ್ವವನ್ನು ಭಾರತ ಮನಗಂಡಿತು. ಹೀಗಾಗಿ, ಬರುವ ದಿನಗಳಲ್ಲಿ ಭಾರತ 'ಕ್ವಾಡ್'ನೊಂದಿಗಿನ ಸಂಬಂಧವನ್ನು ಮತ್ತಷ್ಟೂ ಗಟ್ಟಿಗೊಳಿಸುವುದು ನಿಶ್ಚಿತ ಎಂದು ಫಿಲಿಪ್ಸ್ ಹೇಳಿದರು.

'ಭಾರತ ಹಲವು ವರ್ಷಗಳಿಂದ ಅಲಿಪ್ತ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದೆ. ಆದಾಗ್ಯೂ, ತನ್ನ ಗಡಿ ರಕ್ಷಣೆಗಾಗಿ ಕ್ವಾಡ್‌ನೊಂದಿಗಿನ ಬಾಂಧವ್ಯವನ್ನು ಭಾರತ ಸದೃಢ-ಗೊಳಿಸುವುದು. ಕಾರ್ಯತಂತ್ರದ ದೃಷ್ಟಿಯಿಂದ ಇದು ಅಮೆರಿಕ, ಆಸ್ಟ್ರೇಲಿಯಾ ಹಾಗೂ ಜಪಾನ್ ದೇಶಗಳಿಗೆ ಮಹತ್ವದ ವಿಷಯ' ಎಂದೂ ಅವರು ಹೇಳಿದರು.

'ಅಮೃತ ಮಹೋತ್ಸವ'ಕ್ಕೆ ಸಿದ್ಧತೆ

ನಾಳೆ ಸಬರಮತಿಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ

ಮೋದಿ

ನವದೆಹಲಿ (ಪಿಟಿಐ): ದೇಶದ 75ನೇ ಸ್ವಾತಂತ್ರ್ಯೋತ್ಸವದ ಸ್ಮರಣಾರ್ಥ ನಡೆಯುವ 'ಅಮೃತ ಮಹೋತ್ಸವ'ದಲ್ಲಿ ಎಲ್ಲ ಸಂಸದರು ಮತ್ತು ಜನಪ್ರತಿನಿಧಿಗಳು ಭಾಗವಹಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಮನವಿ ಮಾಡಿದ್ದಾರೆ.

ಬಿಜೆಪಿಯ ಸಂಸದೀಯ ಪಕ್ಷದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮೋದಿ, 75ನೇ ಸ್ವಾತಂತ್ರ್ಯೋತ್ಸವದ ಸ್ಮರಣಾರ್ಥ ದೇಶದ 75 ಸ್ಥಳಗಳಲ್ಲಿ 75 ವಾರಗಳವರೆಗೆ ಭವ್ಯ ಉತ್ಸವ ನಡೆಸಲಾಗುವುದು ಎಂದು ತಿಳಿಸಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಬುಧವಾರ ಇಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಅಮೃತ ಮಹೋತ್ಸವಕ್ಕೆ ಮಾರ್ಚ್ 12ರಂದು ಗುಜರಾತಿನ ಸಬರಮತಿ ಆಶ್ರಮದಲ್ಲಿ ಚಾಲನೆ ದೊರೆಯಲಿದೆ ಎಂದು ಅವರು ಹೇಳಿದರು.

ಸದನದಲ್ಲಿ ಹೇಳಿಕೆ ನೀಡಲು ಬಯಸಿದ್ದ ಪ್ರಧಾನಿ: 'ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ' ಕುರಿತು (ಆಜಾದಿ ಕಾ ಅಮೃತ ಮಹೋತ್ಸವ) ಪ್ರಧಾನಿ ಮೋದಿ ಅವರು ಲೋಕಸಭೆಯಲ್ಲಿ ಹೇಳಿಕೆ ನೀಡಲು ಬಯಸಿದ್ದರು. ಆದರೆ, ಸದನದಲ್ಲಿನ ಗದ್ದಲದಿಂದಾಗಿ ಸಾಧ್ಯವಾಗಲಿಲ್ಲ' ಎಂದು ಜೋಶಿ ಹೇಳಿದ್ದಾರೆ.

'ಸ್ಪೀಕರ್ ಅನುಮತಿ ನೀಡಿದ್ದರೂ, ಇತರರಿಂದ ಸಹಮತ ದೊರೆಯಲಿಲ್ಲ. ಹಾಗಾಗಿ, ಸದನದಲ್ಲಿ ಒಮ್ಮತ ದೊರೆತಾಗಲೇ ಮೋದಿ ಅವರು ಹೇಳಿಕೆ ನೀಡಲಿದ್ದಾರೆ' ಎಂದು ಲೋಕಸಭೆಯಲ್ಲಿ ಜೋಶಿ ತಿಳಿಸಿದ್ದಾರೆ.

ಸೈನಿಕ ಶಾಲೆ: ಬಾಲಕಿಯರ ಪ್ರವೇಶಕ್ಕೆ ಅನುಮತಿ

ನವದೆಹಲಿ: 'ದೇಶದಾದ್ಯಂತ ಇರುವ ಎಲ್ಲ 33 ಸೈನಿಕ ಶಾಲೆಗಳಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಬಾಲಕಿಯರು ಪ್ರವೇಶ ಪಡೆಯಬಹುದು' ಎಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ.

'2018-19ರಲ್ಲಿ ಮಿಜೋರಾಂನ ಚಿಂಗ್‌ಚಿಪ್ ಸೈನಿಕ ಶಾಲೆಯಲ್ಲಿ ಪ್ರಾಯೋಗಿಕವಾಗಿ ಬಾಲಕಿಯರ ಪ್ರವೇಶ ಯೋಜನೆಯು ಆರಂಭಗೊಂಡಿತ್ತು. ಇದರ ಯಶಸ್ವಿ ನಂತರ ದೇಶದ ಎಲ್ಲಾ ಸೈನಿಕ ಶಾಲೆಗಳಲ್ಲಿ ಬಾಲಕರೊಂದಿಗೆ ಬಾಲಕಿಯರಿಗೆ ಪ್ರವೇಶ ನೀಡಲು ಸರ್ಕಾರ ನಿರ್ಧರಿಸಿದೆ' ಎಂದು ಲೋಕಸಭೆಯಲ್ಲಿ ಬುಧವಾರ ರಕ್ಷಣಾ ಖಾತೆಯ ರಾಜ್ಯ ಸಚಿವ ಶ್ರೀಪಾದ್ ನಾಯಕ್ ಮಾಹಿತಿ ನೀಡಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ),
6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.

ಸಂಖ್ಯೆ: ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)-I/ಉಮುಅ(ನಿ)-II/ತಾಂಸ(ನಿ)-II/5726/2020–21 ದಿನಾಂಕ: 10–03–2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (2ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಲಿಯು ಅರ್ಹ ಗುತ್ತಿಗೆದಾರರಿಂದ **ಸಕಾನಿಅ (ಪ–3) ಉಪ ವಿಭಾಗದ ವಿಜಯನಗರ ಓ.ಹೆಚ್.ಟಿ. ಸೇವಾ ಠಾಣೆಯ ಪ್ರದೇಶದಡಿಯಲ್ಲಿ ಬರುವ ಸಿ.ಹೆಚ್.ಬಿ.ಎಸ್. ಬಡಾವಣೆಯ 8ನೇ ಮುಖ್ಯ ರಸ್ತೆಯ 21ನೇ ಕ್ರಾಸ್‌ನಿಂದ ಹೊಸಹಳ್ಳಿ ಮೆಟ್ರೋ ಸ್ಟೇಷನ್‌ವರೆಗೆ ಮತ್ತು ಸಮುದ್ರ ಹೋಟೆಲ್‌ನಿಂದ ಮಾರೇನಹಳ್ಳಿ ಮುಖ್ಯ ರಸ್ತೆಯ ಕೈಲಾಸೇಶ್ವರ ದೇವಸ್ಥಾನದವರೆಗೆ ಹಾಲಿಯಿರುವ ಸೋರುವ ಪಿ.ಎಸ್.ಸಿ. ಮಾರ್ಗದ ಬದಲಾಗಿ ಹೊಸದಾದ 600 ಮಿ.ಮೀ. ವ್ಯಾಸದ ಎಂ.ಎಸ್. ಮಾರ್ಗವನ್ನು ಒದಗಿಸುವ ಮತ್ತು ಅಳವಡಿಸುವ** ಕಾಮಗಾರಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಿದೆ.

ಟೆಂಡರ್‌ಗಿಟ್ಟಿರುವ ಮೊತ್ತ: ರೂ. 3,15,08,726/–.

"ಸರ್ಕಾರದ ಆದೇಶದ ಸಂಖ್ಯೆ. FD 675 EXP-12/2020, ಬೆಂಗಳೂರು ದಿನಾಂಕ: 22.12.2020. ಅನ್ವಯ ಟೆಂಡರ್‌ದಾರರು ಇಎಂಡಿ ಡಿಕ್ಲೇರೇಷನ್ ಫಾರಂಅನ್ನು ಸಲ್ಲಿಸಬೇಕು.

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 18.03.2021 ರಂದು ಮಧ್ಯಾಹ್ನ 3:00 ಗಂಟೆಯವರೆಗೆ.** ಟೆಂಡರ್‌ಗಳನ್ನು **ದಿನಾಂಕ: 19.03.2021 ರಂದು ಸಂಜೆ 4:00 ಗಂಟೆಯ ನಂತರ** ತೆರೆಯಲಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ಪಶ್ಚಿಮ)

DIPR/DDU/BC/3080/2020-21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಟೆಂಡರ್ ಮುಂದೂಡಿಕೆ ಪ್ರಕಟಣೆ

ಟೆಂಡರ್ ಮಂದೂಡಿಕೆ ಪ್ರಕಟಣೆ ಸಂಖ್ಯೆ: 01/2020–21/ ದಿನಾಂಕ:06.03.2021

ಉಲ್ಲೇಖ : ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 49/2020/21/ ದಿನಾಂಕ : 27.01.2021

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಉಪವಿಭಾಗಗಳಿಗೆ ಒಳಪಡುವ ಕಾಮಗಾರಿಗಳಿಗೆ (Standard Tender Document- KW 4 ನಿಬಂಧನೆಗನುಸಾರ)ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ ಮೂಲಕ ಟೆಂಡರ್ ಕರೆಯಲಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ. 760.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. 915.00 ಲಕ್ಷಗಳು ಆಗಿರುತ್ತವೆ.

1) ಟೆಂಡರ್ ಕ್ರಮ ಸಂಖ್ಯೆ 3 ಹಾಗೂ 4ರ ಪ್ಯಾಕೇಜ್ ಕಾಮಗಾರಿಗಳಿಗೆ ದಿನಾಂಕ 25.03.2021 ರಂದು ಸಂಜೆ 4 ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು.

ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ. ಪ್ರಕಟಣೆಯನ್ನು www.kpwd. gov.in.pwd Website ನಲ್ಲಿ ಓದಿಕೊಳ್ಳುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ

ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in

ಸಂಖ್ಯೆ: ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2020–21/3083 ದಿನಾಂಕ:09.03.2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು **3054 ಲಮ್‌ಸಮ್ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ 1) ವಿಜಯಪುರ ತಾಲೂಕಿನ ಕಗ್ಗೋಡ ಗ್ರಾಮದಲ್ಲಿ ಶ್ರೀ ರಾಮನಗೌಡ ಬಾಪುಗೌಡ ಪಾಟೀಲ (ಯತ್ನಾಳ) ಗೋ ರಕ್ಷಾ ಕೇಂದ್ರ ಸುತ್ತಲು ರಸ್ತೆ ಸುಧಾರಣೆ ರೂ. 200.00 ಲಕ್ಷ (ಏಫ–4) ಕಾಮಗಾರಿಯನ್ನು ಇ–ಟೆಂಡರ್‌ನ್ನು ದ್ವಿ ಲಕೋಟಿ ಪದ್ಧತಿಯಲ್ಲಿ ಅಹ್ವಾನಿಸಿದ್ದು. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.eproc.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.**

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.

ವಾಸಾಸಂಇ/ವಿಜಯಪುರ/ಆರ್.ಒ.ಸಂ.617/ಎಂಸಿಎ/2020–21

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಧಾರವಾಡ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಧಾರವಾಡ

ಕ್ರಸಂ:ಪೂರೈಕೆ.ವಹಿ:03: 2020–21 ದಿನಾಂಕ:– 10–03–2021

ಪತ್ರಿಕಾ ಪ್ರಕಟಣೆಗಾಗಿ

ಜಿಲ್ಲೆಯ ವಿವಿಧ ಆಸ್ಪತ್ರೆಗಳಲ್ಲಿ ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆ ಮಾನವ ಸಂಪನ್ಮೂಲದಿಂದ ಹೊರಗುತ್ತಿಗೆ ಆಧಾರದ ಮೇಲೆ 41 ವಿವಿಧ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಇ–ಪೋರ್ಟಲ್ **www.eproc.karnataka.gov.in** ಮೂಲಕ ಟೆಂಡರ ಆಹ್ವಾನಿಸಲಾಗಿದೆ ಇ–ಪ್ರೊಕ್ಯೂರಮೆಂಟ್ ಟೆಂಡರ್ **ಸಂಖ್ಯೆ: No:SUP/SUP/01/2020-21. ದಿನಾಂಕ: 09.03.2021.**

ಸದರ ಟೆಂಡರ್ ಮೊತ್ತ ಅಂದಾಜು **ರೂ. 80.00 ಲಕ್ಷಗಳು, (ಎಂಭತ್ತು ಲಕ್ಷಗಳು)** ಮಾತ್ರ ಇಚ್ಛೆಯುಳ್ಳ ಸಂಸ್ಥೆಯವರು ತಮ್ಮ ಸಂಸ್ಥೆಯಿಂದ ಶೇಕಡ, 2.5% ಇ.ಎಮ್.ಡಿ.ಯನ್ನು ಇ–ಪೋರ್ಟಲ್ ಮೂಲಕ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಧಾರವಾಡ ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಡೆದು ಲಗತ್ತಿಸತಕ್ಕದ್ದು, ಇ–ಪ್ರೊಕ್ಯೂರಮೆಂಟ್ ಮೂಲಕ **ದಿನಾಂಕ: 29–03–2021 ಸಾಯಂಕಾಲ 4.00 ರೊಳಗಾಗಿ** ಟೆಂಡರ್ ಅಪಲೋಡ್ ಮಾಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಕಾಣಿಸಲಾದ ಅಧಿಕಾರಿಗಳೊಡನೆ ಸರ್ಕಾರಿ ರಜೆಗಳನ್ನು ಹೊರತುಪಡಿಸಿ ಚರ್ಚಿಸಬಹುದಾಗಿದೆ. 0836–2447483.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಧಾರವಾಡ

ವಾ.ಸಾ.ಇ./ಧಾ/843/2020–21/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳು

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.1 ವಿಭಾಗ, ತುಮಕೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:12/2020–21 ದಿನಾಂಕ: 09.03.2021
(K/W-3) (Through e-procurement Only)

ತುಮಕೂರು ಜಿಲ್ಲೆ ವ್ಯಾಪ್ತಿಯ ಹೇಮಾವತಿ ಜಲಾಶಯ ಯೋಜನೆಯ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ತಿಪಟೂರು ತಾಲ್ಲೂಕಿನ ಆಯಕಟ್ಟು ರಸ್ತೆ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ **ರೂ.56.87 ಲಕ್ಷ ಕಾಮಗಾರಿಯನ್ನು ಕೈಗೊಳ್ಳಲು e-portal** ಮೂಲಕ **ಐಟಂವಾರು** ದ್ವಿ–ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತಾ ಕೇಂದ್ರ ಅಥವಾ ವೆಬ್ ಸೈಟ್‌ನಲ್ಲಿ http://eproc.karnataka.gov.in ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. (1) ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: **12.03.2021** ರಿಂದ **20.03.2021** ರವರೆಗೆ ಸಂಜೆ 4.00 ಗಂಟೆವರೆಗೆ. (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **20.03.2021** ಸಂಜೆ 4.00 ಗಂಟೆವರೆಗೆ. (3) ಭರ್ತಿ ಮಾಡಿದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಬಿಡ್ ತೆರೆಯುವ ದಿನಾಂಕ: **22.03.2021** ಬೆಳಿಗ್ಗೆ 11.00 ಗಂಟೆಯ ನಂತರ. ಹೆಚ್ಚಿನ ವಿವರಗಳಿಗೆ, ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.1 ವಿಭಾಗ, ತುಮಕೂರು ರವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕಾಡಾ ನಂ.1 ವಿಭಾಗ,
ಕಾವೇರಿ ಜಲಾನಯನ ಯೋಜನೆಗಳು, ತುಮಕೂರು.

DIPR/TUM/476/MCA/2020-21

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.

ಸಂ:ಕಾಇಂ/ವಿಜನಿನಿ/ಎಯೋವಿ.3/ಅ/ಟೆಂ.ಪ್ರ/2020–21/1267
ದಿನಾಂಕ:09.03.2021

ತಿದ್ದುಪಡಿ ಟೆಂಡರ್ ಪ್ರಕಟಣೆ–01 ಉಲ್ಲೇಖ: ಕಾಇಂ/ವಿಜನಿನಿ/ಎಯೋವಿ.3/ಅ/ಟೆಂ.ಪ್ರ/2020–21/1250 ದಿನಾಂಕ:04.03.2021 ಶೇಕಡಾವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 02/2020–21 ದಿ :04.03.2021

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ವ್ಯಾಪ್ತಿಗೆ ಒಳಪಡುವ ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಬೇಲೂರು ಮತ್ತು ಅರಸೀಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರಸ್ತೆ ಅಭಿವೃದ್ಧಿ ಪ್ಯಾಕೇಜ್ ಕಾಮಗಾರಿಗೆ ಶೇಕಡಾವಾರು ಅಲ್ಪಾವಧಿ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರೆಮೆಂಟ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯನ್ನು ತಾಂತ್ರಿಕ ಕಾರಣಗಳಿಂದಾಗಿ ಅನಿರ್ದಿಷ್ಟ ಕಾಲ ಮುಂದೂಡಲಾಗಿದೆ. **ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ, ದೂರವಾಣಿ ಸಂಖ್ಯೆ:08174 295111 e-mail: eeypd3ask@gmail.com**

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3 ಅರಸೀಕೆರೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮುಂಡರಗಿ

ಕ್ರಮ ಸಂಖ್ಯೆ : ಕೃ.ಉ.ಮಾ.ಸ.(ಮುಂ)/ಭ.ಸಿಬ್ಬಂದಿ:757:2020–2021
ದಿನಾಂಕ :03–03–2021

ಅಲ್ಪಾವಧಿ ಇ–ಟೆಂಡರ ಪ್ರಕಟಣೆ–2 ನೇ ಕರೆ

ಮುಂಡರಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 2020–2021 ನೇ ಸಾಲಿಗಾಗಿ ಅಂದರೆ ಕೆಲಸದ ಆದೇಶ ನೀಡುವ ದಿನಾಂಕ ದಿಂದ **31–05–2021** ರವರೆಗೆ ಈ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಭದ್ರತಾ ಕಾರ್ಯಕ್ಕಾಗಿ ಅವಶ್ಯವಿರುವ ಭದ್ರತಾ ಸಿಬ್ಬಂದಿ–04, ಗಣಕಯಂತ್ರ ನಿರ್ವಾಹಕ–01, ವಾಹನ ಚಾಲಕ–02, ಹಾಗೂ ಡಾಟಾ ಎಂಟ್ರಿ ಆಪರೇಟರ್–04 ಒಟ್ಟು=11 ಸಂಖ್ಯೆಯ ಭದ್ರತಾ ಸಿಬ್ಬಂದಿಗಳ ಪೂರೈಕೆಗಾಗಿ ಇ.ಎಂ.ಡಿ ರೂ. **1,00,000.00** ಇ–ಪ್ರೊಕ್ಯೂರಮೆಂಟ್‌ನಲ್ಲಿ ಸಂದಾಯಿಸುವುದು. ಆಸಕ್ತರಿರುವ ಭದ್ರತಾ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸುವುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ (www.eproc.karnataka.gov.in) ಸಹಾಯವಾಣಿ +918025501216 ಹಾಗೂ ಕಛೇರಿಯ ವೇಳೆಯಲ್ಲಿ ಕಛೇರಿ ದೂರವಾಣಿ ಸಂಖ್ಯೆ : 08371–262236 ಸಂಪರ್ಕಿಸಬಹುದು ವಿವರ ಈ ಕೆಳಗಿನಂತಿರುತ್ತದೆ.

(1) ಟೆಂಡರಗಳನ್ನು ವೆಬ್‌ಸೈಟ್ ಮೂಲಕ ಸಲ್ಲಿಸಲು ಕೊನೆಯ ದಿ : **18–03–2021** ಸಮಯ ಮಧ್ಯಾಹ್ನ 4–00 (2) ಟೆಂಡರಗಳನ್ನು ತೆರೆಯುವ ದಿನಾಂಕ: **20–03–2021** ರಂದು ಸಮಯ ಸಾಯಂಕಾಲ 4–30 ಸ್ಥಳ: ಎ.ಪಿ.ಎಂ.ಸಿ ಮುಂಡರಗಿ. (3) ಟೆಂಡರಗಳನ್ನು ಯಾವುದೆ ಕಾರಣ ನೀಡದೇ ಸ್ವೀಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. (4) ಸಮಿತಿಗೆ ನೇಮಿಸಿಕೊಳ್ಳುವ ಭದ್ರತಾ ಸಿಬ್ಬಂದಿಗಳ ಸಂಖ್ಯೆಯನ್ನು ಮಂಜೂರಾತಿಗೆ ಅನುಗುಣವಾಗಿ ಮತ್ತು ಸಮಿತಿಯ ಆದಾಯದ ಅನುಗುಣವಾಗಿ ಕಡಿಮೆಗೊಳಿಸುವ/ಹೆಚ್ಚಿಸುವ ಅಧಿಕಾರವನ್ನು ಸಮಿತಿಯು ಹೊಂದಿದ್ದು ಈ ಬಗ್ಗೆ ಸಮಿತಿಯ ಸೂಚನೆಗೆ ಭದ್ರತಾ ಏಜೆನ್ಸಿಯು ಬದ್ದರಾಗಿರತಕ್ಕದ್ದು.

ಸಹಿ/–(ರಾಜು ಎಸ್ ರಾಠೋಡ) ಕಾರ್ಯದರ್ಶಿ, ಕೃ.ಉ.ಮಾ.ಸ, ಮುಂಡರಗಿ
ಸಹಿ/– (ರವೀಂದ್ರ. ಈ. ಉಪ್ಪಿನಬೆಟಗೇರಿ) ಅಧ್ಯಕ್ಷರು, ಕೃ.ಉ.ಮಾ.ಸ, ಮುಂಡರಗಿ

ವಾಸಾಸಂಇ/ಗದಗ/ಎಂ.ಸಿ.ಎ/558/2020–21

ನಗರಸಭಾ ಕಾರ್ಯಾಲಯ, ಚಳ್ಳಕರೆ. (ಚಿತ್ರದುರ್ಗ ಜಿಲ್ಲೆ)

ಫೋನ್ ನಂ. 08195–250958 ಫ್ಯಾಕ್ಸ್ 08195–250958.

ಸಂಖ್ಯೆ:ಚ.ನ/ತಾಂತ್ರಿಕ/ನ.ನಿ/2020–21/ಟೆಂಡರ್–02/ಸಿಆರ್01/2020–21
ದಿನಾಂಕ: 08.03.2021

ಟೆಂಡರ್ ಪ್ರಕಟಣೆ

ಚಳ್ಳಕೆರೆ ನಗರಸಭಾ ವ್ಯಾಪ್ತಿಯಲ್ಲಿ 2020–21ನೇ ಸಾಲಿನ ನಗರಸಭಾ ನಿಧಿಯಡಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳಿಗೆ (ಇಂಡೆಂಟ್ ಸಂಖ್ಯೆ: **DMA/CMCCLK/OSM/SWMDVR/2020-20/1, DMA/CMCCLK/MF/DTDC11/2020-20/1)** ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ–2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KC-2 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರು/ಅಧಿಕೃತ ಎನ್‌ಜಿಓ/ಏಜೆನ್ಸಿಯವರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಐಟಂವಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಹಾಗೂ ದಿನಾಂಕ: 11.04.2021ರ ಸಂಜೆ 4.30 ಗಂಟೆ ವರೆಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ. www.challakerecity.mrc.gov.in ಮತ್ತು http://eproc.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯುಬಹುದು.

ಸಹಿ/– ಅಧ್ಯಕ್ಷರು, ನಗರಸಭೆ, ಚಳ್ಳಕೆರೆ | ಸಹಿ/– ಉಪಾಧ್ಯಕ್ಷರು ನಗರಸಭೆ, ಚಳ್ಳಕೆರೆ | ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ಚಳ್ಳಕೆರೆ

DIPR/CTA/MCA/842/2020-21 ಸಹಿ/– ಪೌರಾಯುಕ್ತರು, ನಗರಸಭೆ, ಚಳ್ಳಕೆರೆ

ಸ್ಪರ್ಧಾ ವಾಣಿ

ಪಿಎಸ್ಐ ಪರೀಕ್ಷೆ



ಸಾಮಾನ್ಯ ಅಧ್ಯಯನ ಪತ್ರಿಕೆಗೆ ತಯಾರಿ

ಬಿ.ಆರ್. ಮೋಹನ್‌ಕುಮಾರ್

ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಾಮಾನ್ಯ ಅಧ್ಯಯನ (ಜನರಲ್ ಸ್ಟಡಿ) ಪ್ರಶ್ನೆ ಪತ್ರಿಕೆಯು ಮುಖ್ಯವಾದ ಮತ್ತು ಹುದ್ದೆಗಳ ಆಯ್ಕೆಗೆ ನಿರ್ಧಾರ ಮಾಡುವಂತಹ ಪತ್ರಿಕೆ. ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ಪರೀಕ್ಷೆಯಿಂದ ಪ್ರಾರಂಭವಾಗಿ ಐಎಎಸ್ ಹಂತದ ಪರೀಕ್ಷೆಗಳವರೆಗೆ, ಸಾಮಾನ್ಯ ಅಧ್ಯಯನ ವಿಷಯಗಳ ಬಗ್ಗೆ ಮೂಲಜ್ಞಾನದ ಜೊತೆಗೆ ಆಳವಾದ ವಿಷಯ ಜ್ಞಾನವೂ ಅತ್ಯವಶ್ಯ.

ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಬೇಕಾಗಿರುವ ಪುಸ್ತಕಗಳನ್ನು ಮೊದಲು ಕ್ರೋಢೀಕರಿಸಿ, ಮನೆಯಲ್ಲಿಯೇ ವೈಯಕ್ತಿಕ ಚಿಕ್ಕ ಗ್ರಂಥಾಲಯ ಮಾಡಿಕೊಳ್ಳಬೇಕು. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ಅಭ್ಯರ್ಥಿಗಳಿಗೆ ರಾಜ್ಯ ಸರ್ಕಾರದ 5ರಿಂದ, 10ನೇ ತರಗತಿ ಪಠ್ಯಪುಸ್ತಕಗಳು (http://ktbs.kar.nic.in/New/index.html#!/textbook) ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ಎನ್‌ಸಿಇಆರ್‌ಟಿ 5ನೇ ತರಗತಿಯಿಂದ 12 ನೇ ತರಗತಿ ಪಠ್ಯಪುಸ್ತಕಗಳನ್ನು ಕೂಡ ಅಭ್ಯಾಸ ಮಾಡಬಹುದು. ಈ ಪುಸ್ತಕಗಳು ಮಾರುಕಟ್ಟೆಯಲ್ಲಿಯೂ ಲಭ್ಯವಿದ್ದು, ಈ ಪಠ್ಯಪುಸ್ತಕಗಳನ್ನು ಕನಿಷ್ಠ ಮೂರು ನಾಲ್ಕು ಬಾರಿಯಾದರೂ ಓದಿ, ಉತ್ತಮ ಜ್ಞಾನದ ತಳಹದಿ ಹಾಕಿಕೊಳ್ಳಬಹುದು.

ಮಾರುಕಟ್ಟೆಯಲ್ಲಿ ಲಭಿಸುವ ಪ್ರತಿ ವಿಷಯಕ್ಕೆ ಸಂಬಂಧಿಸಿದ ವಿಷಯ ತಜ್ಞರು ರಚಿಸಿದ ಪುಸ್ತಕಗಳನ್ನು ಓದುವುದು ಕೂಡ ಅವಶ್ಯ. ಪ್ರಚಲಿತ ಘಟನೆಗಳಿಗೆ ಮಾರುಕಟ್ಟೆಯಲ್ಲಿ ಲಭ್ಯವಿರುವ ನಿಯತಕಾಲಿಕ, ದಿನಪತ್ರಿಕೆಗಳು ಮತ್ತು ತರಬೇತಿ ಸಂಸ್ಥೆಗಳ ಉಚಿತ ತಿಂಗಳ ಇ- ಮ್ಯಾಗಜೀನ್‌ಗಳ ಸಹಾಯ ಪಡೆಯಬಹುದು. ಹಾಗೆಯೇ ವಿವಿಧ ತರಬೇತಿ ಸಂಸ್ಥೆಗಳ ಬೋಧನಾ ಪರಿಕರಗಳ ನಕಲು ಪ್ರತಿ ಪಡೆದು, ಎಲ್ಲಾ ಪುಸ್ತಕಗಳನ್ನು ಒಂದು ಕಡೆ ಕ್ರೋಢೀಕರಿಸಿ, ಸೂಕ್ತ ಸ್ಥಳವನ್ನು ನಿರ್ಧರಿಸಿ ಓದಲು ಪ್ರಾರಂಭಿಸಬೇಕು. ಪ್ರತಿ ವಿಷಯಕ್ಕೆ ಒಂದೊಂದು ನೋಟ್ ಪುಸ್ತಕವನ್ನು ಇಟ್ಟು ಅದರಲ್ಲಿ ನೋಟ್ಸ್ ಮಾಡಿಕೊಳ್ಳುವುದು ಸೂಕ್ತ.

> ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ಪರೀಕ್ಷೆಯಿಂದ ಪ್ರಾರಂಭವಾಗಿ ಐಎಎಸ್ ಹಂತದ ಪರೀಕ್ಷೆಗಳವರೆಗೆ, ಸಾಮಾನ್ಯ ಅಧ್ಯಯನ ವಿಷಯಗಳ ಬಗ್ಗೆ ಆಳವಾದ ವಿಷಯ ಜ್ಞಾನ ಅವಶ್ಯಕ.

ದೈಹಿಕ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ತಯಾರಿಗೆ ಬೇಕಾಗುವ ಸಮಯ ಮತ್ತು ಕೋಚಿಂಗ್ ತರಗತಿಗಳ ಸಮಯ ಹೊರತುಪಡಿಸಿ, ಕನಿಷ್ಠ ಆರು ಗಂಟೆಗಳ ಕಾಲ ಓದಲು ಮನಸ್ಸನ್ನು ಹಂತ ಹಂತವಾಗಿ ಅಣಿಗೊಳಿಸಿಕೊಳ್ಳಿ. ಎಲ್ಲಾ ವಿಷಯಗಳ ಮನನಕ್ಕೆ ಬೇಕಾಗುವ ಸಮಯವನ್ನು ವಿಭಜಿಸಿ ಓದುವ ಯೋಜನೆಯನ್ನು ತಯಾರಿಸಿಕೊಳ್ಳಬೇಕು. ಪ್ರತಿ ದಿನದ ಓದಿನ ಬಗ್ಗೆ ನಿಗಾ ಇಡಲು ದಿನಚರಿ ಪುಸ್ತಕವಿಟ್ಟು ಆಯಾ ದಿನ ಎಷ್ಟು ಗಂಟೆಗಳ ಕಾಲ ಓದಿದ್ದೀರಿ ಎನ್ನುವ ಮಾಹಿತಿ ಅನುಸರಿಸಿ, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಅರ್ಧ ಗಂಟೆಯಂತೆ ಓದುವ ಸಮಯವನ್ನು ಹೆಚ್ಚಿಸುತ್ತಾ, ಕನಿಷ್ಠ 6 ಗಂಟೆಗಳ ಕಾಲ ಉತ್ತಮ ಓದಿಗೆ ಗುರಿ ಇಟ್ಟುಕೊಳ್ಳಬೇಕಾಗುತ್ತದೆ. ಪರೀಕ್ಷೆ ಹತ್ತಿರದಲ್ಲಿ ಈ ಸಮಯವನ್ನು ಹೆಚ್ಚಿಸಿ ಶಿಸ್ತುಬದ್ಧವಾಗಿ ಓದುವುದರಿಂದ ಯಶಸ್ಸು ಖಂಡಿತ.

ದಿನಚರಿಯಲ್ಲಿ ಆಯಾದಿನ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿಯವರೆಗೆ ಓದಿದ ವಿಷಯಗಳ ಬಗೆಗಿನ 'ಕೀ ವರ್ಡ್' ಗಳನ್ನು ಮತ್ತು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ಬರೆದು, ಬಿಡುವಿನ ಸಮಯದಲ್ಲಿ ಅದನ್ನು ಪದೇ ಪದೇ ಓದಿ ಮನನ ಮಾಡಿಕೊಳ್ಳಬಹುದು. 'ರೀಡ್, ರೀಕಾಲ್, ರಿಪ್ರೊಡ್ಯೂಸ್'; ಅಂದರೆ ಓದುವುದು, ಜ್ಞಾಪಿಸಿಕೊಳ್ಳುವುದು ಮತ್ತು ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವುದರಿಂದ ಓದಿದ್ದನ್ನು ಪುನಃ ಪ್ರಸ್ತುತ ಪಡಿಸುವುದರಿಂದ ಓದಿದ ವಿಷಯಗಳು ಜ್ಞಾಪಕದಲ್ಲಿರುವುದಕ್ಕೆ ಸಹಕಾರಿ. ಪರೀಕ್ಷೆಯ ಸಮೀಪದಲ್ಲಿ ನೋಟ್ ಪುಸ್ತಕಗಳ ಮತ್ತು ದಿನಚರಿಯ ಸಹಾಯದಿಂದ ಪುನರಾವರ್ತನೆಯನ್ನು ಕಡಿಮೆ ಸಮಯದಲ್ಲಿ ಆತಂಕವಿಲ್ಲದೆ ಮಾಡಬಹುದಾಗಿದೆ.

ಓದಿನ ಮಧ್ಯದಲ್ಲಿ ವಿರಾಮ ಪಡೆದು, ಆ ಸಮಯದಲ್ಲಿ ಓದಿದ್ದನ್ನು ನೆನಪಿಸಿಕೊಳ್ಳಬೇಕು. ವಿರಾಮದ ನಂತರ ಮನಸ್ಸನ್ನು ಮತ್ತೆ ಅಣಿಗೊಳಿಸಲು, ಏಕಾಗ್ರತೆ ವೃದ್ಧಿಸಲು ಧ್ಯಾನ ಮಾಡಿ, ಪುಸ್ತಕ ಓದಿನ ಏಕತಾನತೆಯನ್ನು ಮುರಿಯಲು ಆ ದಿನದ ವೃತ್ತ ಪತ್ರಿಕೆ ಓದಿ. ಓದಿನ ಮಧ್ಯದಲ್ಲಿ ಆಲಸ್ಯ, ನಿದ್ದೆ ಸಹಜವಾಗಿದ್ದು, ಬಿಸಿಯಾದ ಕಾಫಿ/ಟೀ ಸೇವನೆ ಉತ್ತಮ. ಹಾಗೇ ಓದಿನ ದಣಿವಿದ್ದರೆ 10-15 ನಿಮಿಷಗಳ ಕಾಲ ಶವಾಸನ ಮಾಡಿ, ಪಾದದ ತುದಿಯಿಂದ ಮುಡಿಯವರೆಗೆ ಮನಸ್ಸಿನಲ್ಲಿ 'ರಿಲ್ಯಾಕ್ಸ್ ರಿಲ್ಯಾಕ್ಸ್' ಎಂದು ಹೇಳುತ್ತಾ ಮನಸ್ಸು ಮತ್ತು ಶರೀರದ ಬಿಗಿತನವನ್ನು ನಿವಾರಿಸಿ ಮತ್ತೆ ಓದಲು ಅಣಿಗೊಳಿಸಬಹುದು.

ಅಭ್ಯಾಸದ ಸಮಯದಲ್ಲಿ ಬರಬಹುದಾದ ಒತ್ತಡಗಳು, ಆರೋಗ್ಯ ಮತ್ತು ಕೌಟುಂಬಿಕ ಸಮಸ್ಯೆಗಳು, ಭಾವನಾತ್ಮಕ ಒತ್ತಡಗಳು ಈ ಎಲ್ಲವನ್ನೂ ಸಕಾರಾತ್ಮಕವಾಗಿ ನಿಭಾಯಿಸಿ, ಯಶಸ್ಸು ನನ್ನದೇ ಎಂಬ ದೃಢ ನಿರ್ಧಾರದಿಂದ, ಶಾಂತ ಚಿತ್ತತೆಯಿಂದ ಯಶಸ್ಸಿಗೆ ಹಂತ ಹಂತವಾಗಿ ಓದುವುದು ಸ್ಪರ್ಧಾರ್ಥಿಗಳ ಜಾಣತನ.

(ಲೇಖಕರು: ನಿರ್ದೇಶಕರು, ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ, ಬೆಂಗಳೂರು)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎರಡು ಚರಾಕ್ಷಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿ

ಗಣಿತ

ಎಸ್ಸೆಸ್ಸೆಲ್ಸಿ

ಈ ಎರಡು ರೇಖಾತ್ಮಕ ಸಮೀಕರಣಗಳೂ x ಮತ್ತು y ಗಳೆಂಬ ಚರಾಕ್ಷರಗಳನ್ನು ಮಾತ್ರ ಹೊಂದಿವೆ. ಇಂತಹ ಸಮೀಕರಣಗಳನ್ನು ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿ ಎನ್ನುತ್ತೇವೆ.

x ಮತ್ತು y ಎಂಬ ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಒಂದು ಜೋಡಿಯ ಸಾಮಾನ್ಯ ರೂಪವು

$a_1x + b_1y + c_1 = o$

$a_2x + b_2y + c_2 = 0$

ಇಲ್ಲಿ $a_1, b_1, c_1, a_2, b_2, c_2$ ಗಳೆಲ್ಲಾ ವಾಸ್ತವ ಸಂಖ್ಯೆಗಳು ಮತ್ತು

$$a_1^2 + b_1^2 \neq 0$$
$$a_2^2 + b_2^2 \neq 0$$

ಒಂದು ಸಮತಲದ ಮೇಲೆ ಎರಡು ಸರಳ ರೇಖೆಗಳನ್ನು ಕೊಟ್ಟಾಗ ಈ ಮೂಲ ಸಾಧ್ಯತೆಗಳಲ್ಲಿ ಯಾವುದಾದರೂ ಒಂದು ಸಾಧ್ಯತೆ ಮಾತ್ರ ಇರುತ್ತದೆ ಎಂಬುದನ್ನು ಕಾಣಬಹುದು.

1) ಎರಡು ರೇಖೆಗಳು ಒಂದು ಬಿಂದುವಿನಲ್ಲಿ ಛೇದಿಸುತ್ತವೆ.

2) ಎರಡು ರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ. ಅಂದರೆ ಅವುಗಳು ಸಮಾನಾಂತರ.

3) ಎರಡು ರೇಖೆಗಳು ಐಕ್ಯಗೊಂಡಿರುತ್ತವೆ.

ಉದಾಹರಣೆ: $x - 2y = 0,\ 3x + 4y = 20$ ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿ ಈ ಸಮೀಕರಣಗಳನ್ನು ನಕ್ಷಾರೂಪದಲ್ಲಿ ಪ್ರತಿನಿಧಿಸೋಣ. ಇದಕ್ಕೋಸ್ಕರ ಸಮೀಕರಣಕ್ಕೂ ಕನಿಷ್ಠ ಎರಡು ಪರಿಹಾರಗಳನ್ನು ತೆಗೆದುಕೊಳ್ಳೋಣ.

x	0	2
$y = \frac{x}{2}$	0	1

x	0	$\frac{20}{3}$	4
$y = \frac{20-3x}{4}$	5	0	2

ಈ ಕೋಷ್ಟಕದಲ್ಲಿ ಬೆಲೆಗಳನ್ನು ನೀಡಿದಾಗ ಅದಕ್ಕೆ ಅನುಗುಣವಾಗಿ ಬೆಲೆ ನಿರ್ಧಾರವಾಗಿದೆ.



ಈ ಪರಿಹಾರಗಳಿಗೆ ಅನುಗುಣವಾಗಿ A(0,0), B(2,1) ಮತ್ತು P(0,5), Q (4,2) ಬಿಂದುಗಳನ್ನು ನಕ್ಷೆಯ ಮೇಲೆ ಗುರುತಿಸೋಣ. ಇಲ್ಲಿ AB ಮತ್ತು PQ ಸರಳರೇಖೆಗಳನ್ನು ಎಳೆಯಿರಿ. ಈ ರೇಖೆಗಳು ಚರಾಕ್ಷರಗಳ ಜೋಡಿಯನ್ನು ನೀಡುತ್ತವೆ.

ಎರಡು ಸಮೀಕರಣಗಳನ್ನು ಪ್ರತಿನಿಧಿಸುವ ಎರಡು ಸರಳ ರೇಖೆಗಳು (4,2)ಎಂಬ ಬಿಂದುವಿನಲ್ಲಿ ಛೇದಿಸುತ್ತವೆ. ಎರಡು ರೇಖೆಗಳ ಮೇಲೆಯೂ ಇರುವ ಏಕಮಾತ್ರ ಸಾಮಾನ್ಯ ಬಿಂದು (4,2) ಆಗಿರುವುದರಿಂದ ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗೆ ಒಂದು ಮತ್ತು ಒಂದೇ ಪರಿಹಾರವಿದೆ.

ಉದಾಹರಣೆ: 2x + 3y = 9.4x + 6y = 18 ಈ ಎರಡು ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ನಕ್ಷೆಯ ರೂಪದಲ್ಲಿ ಪ್ರತಿನಿಧಿಸುವಿಕೆಯನ್ನು ಪಡೆಯಲು ಈ ಸಮೀಕರಣಗಳ ಎರಡು ಬಿಂದುಗಳನ್ನು ನಾವು ಕಂಡು ಹಿಡಿಯುತ್ತೇವೆ.

x	0	4,5
$y = \frac{9-2x}{3}$	3	0

x	0	3
$y = \frac{18-4x}{6}$	3	1

ಈ ಬಿಂದುಗಳನ್ನು ಒಂದು ಗ್ರಾಪ್ ಹಾಳೆಯ ಮೇಲೆ ಗುರುತಿಸಿ ನಾವು ಸರಳರೇಖೆಯನ್ನು ಎಳೆಯುತ್ತೇವೆ. ಎರಡು ಸರಳ ರೇಳೆಗಳು ಐಕ್ಯಗೊಳ್ಳುವುದನ್ನು ನಾವು ಕಾಣುತ್ತೇವೆ. ಈ ಐಕ್ಯಗೊಳ್ಳಲು ಎರಡು ಸಮೀಕರಣಗಳೂ ಸಮಾನವಾಗಿರುವುದು ಕಾರಣವಾಗಿದೆ.



ಈ ರೇಖೆಗಳ ಮೇಲೆ ಯಾವುದಾದರೂ ಸಮಾನ ಬಿಂದುಗಳ ಮೇಲೂ ನಕ್ಷೆಯಿಂದ ಸರಳ ರೇಖೆಯ ಮೇಲಿರುವ ಪ್ರತಿಯೊಂದು ಬಿಂದುವೂ ಎರಡೂ ಸಮೀಕರಣಗಳಿಗೆ ಒಂದು ಸಾಮಾನ್ಯ ಪರಿಹಾರವಾಗುತ್ತದೆ. ಈ ಸಮೀಕರಣಗಳಿಗೆ ಅಪರಿಮಿತ ಸಂಖ್ಯೆಯ ಪರಿಹಾರಗಳಾಗಿವೆ.

ಉದಾಹರಣೆ: ಎರಡು ಹಳಿಗಳನ್ನು x + 2y - 4 = 0 ಮತ್ತು 2x + 4y- 12 = 0 ಎಂಬ ಸಮೀಕರಣಗಳಿಂದ ಪ್ರತಿನಿಧಿಸಲಾಗಿದೆ. ಪರಿಹಾರ: ಈ ಪ್ರತಿಯೊಂದು ಸಮೀಕರಣದ ಎರಡು ಪರಿಹಾರಗಳನ್ನು ಕಂಡು ಹಿಡಿಯಲಾಗಿದೆ.

x	0	4
$y = \frac{4-x}{2}$	2	0

x	0	6
$y = \frac{12-2x}{4}$	3	0

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮ ಜೀವಶಾಸ್ತ್ರ ವಿಭಾಗದ 'ಲೈಫ್ ಪ್ರೋಸೆಸ್ ರೆಸ್ಪಿರೇಷನ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3ryOMUF

ಮಾತೃಕೆಯ ಪರಿವರ್ತಿತ

(ಮುಂದುವರಿದ ಭಾಗ)

ಗಣಿತ

ದ್ವಿತೀಯ ಪಿಯುಸಿ

$A = [a_{ij}]$ಯು ಒಂದು m x n ಮಾತೃಕೆ ಆದರೆ A ಮಾತೃಕೆಯಲ್ಲಿನ ಅಡ್ಡಸಾಲುಗಳು ಮತ್ತು ಕಂಬಸಾಲುಗಳನ್ನು ಪರಸ್ಪರ ಬದಲಾಯಿಸುವುದರಿಂದ ದೊರೆಯುವ ಮಾತೃಕೆಯನ್ನು A ನ ಪರಿವರ್ತಿತ ಮಾತೃಕೆಯೆಂದು ಕರೆಯುತ್ತೇವೆ. A ನ ಸ್ಥಳಾಂತರಿತ ಪರಿವರ್ತಿತ ಮಾತೃಕೆಯನ್ನು A' ಅಥವಾ A^T ನಿಂದ ಸೂಚಿಸುತ್ತೇವೆ. ಇನ್ನೊಂದು ಅರ್ಥದಲ್ಲಿ $A = (a_{ij})_{mxn}$ ಆದರೆ $A' = (a_{ji})_{nxm}$

$$A = \begin{bmatrix} 3 & 5 \\ \sqrt{3} & 1 \\ 0 & -1/5 \end{bmatrix} \quad A' = \begin{bmatrix} 3 & \sqrt{3} & 0 \\ 5 & 1 & -1/5 \end{bmatrix}$$

ಪರಿವರ್ತಿತ ಮಾತೃಕೆಗಳ ಗುಣಲಕ್ಷಣಗಳು

ನಿರ್ದಿಷ್ಟ ದರ್ಜೆಗಳ ಯಾವುದೇ A ಮತ್ತು B ಮಾತೃಕೆಗಳಿಗೆ ನಾವು ಈ ಗುಣಲಕ್ಷಣಗಳು ಇರುತ್ತವೆ.

1) $(A')' = A$
2) $(A + B)' = A' + B'$
3) $(KA)' = KA'$
4) $(AB)' = B'A'$

ಉದಾಹರಣೆ:

$A = \begin{bmatrix} -2 \\ 4 \\ 5 \end{bmatrix}, B = [1 \quad 3 \quad -6]$, ಆದರೆ $(AB)' = B'A'$

ಅನ್ನು ಪರಿಶೀಲಿಸಿ

ಪರಿಹಾರ:

$A = \begin{bmatrix} -2 \\ 4 \\ 5 \end{bmatrix}, B = [1 \quad 3 \quad -6]$ ದತ್ತ ಮಾತೃಕೆಗಳು

ಆದ್ದರಿಂದ:

$$AB = \begin{bmatrix} -2 \\ 4 \\ 5 \end{bmatrix}, [1 \quad 3 \quad -6] = \begin{bmatrix} -2 & -6 & 12 \\ 4 & 12 & -21 \\ 5 & 15 & -30 \end{bmatrix}$$

$$AB)' = \begin{bmatrix} -2 & -6 & 12 \\ 4 & 12 & -21 \\ 5 & 15 & -30 \end{bmatrix} \text{------(1)}$$

$$B'A' == \begin{bmatrix} 1 \\ 3 \\ -6 \end{bmatrix} [-2 \quad 4 \quad 5] = \begin{bmatrix} -2 & 4 & 5 \\ -6 & 12 & 15 \\ 12 & -24 & -30 \end{bmatrix} \text{-----(2)}$$

(1), (2) ರಿಂದ ಸ್ಪಷ್ಟವಾಗಿ

$$(AB)' = B'A'$$

ಸಮಾಂಗ ಮತ್ತು ಅಸಮಾಂಗ ಮಾತೃಕೆಗಳು

$A = [a_{ij}]$ ವರ್ಗ ಮಾತೃಕೆಯಾಗಿದ್ದು $A' = A$ ಆದರೆ A ಅನ್ನು ಸಮಾಂಗ-ಮಾತೃಕೆ ಎಂದು ಕರೆಯುತ್ತಾರೆ. ಅಂದರೆ i ಮತ್ತು j ಗಳ ಸಾಧ್ಯವಿರುವ ಎಲ್ಲ ಬೆಲೆಗಳಿಗೆ ಆಗಿರುತ್ತದೆ.

$$A = \begin{bmatrix} \sqrt{3} & 2 & 3 \\ 2 & -1.5 & -1 \\ 3 & -1 & 1 \end{bmatrix}$$

ಸಮಾಂಗ ಮಾತೃಕೆ ಆಗಿರುತ್ತದೆ.

$A = [a_{ij}]$ ವರ್ಗ ಮಾತೃಕೆಯಾಗಿದ್ದು, $A' = -A$ ಆದರೆ ಅನ್ನು ಅಸಮಾಂಗ ಮಾತೃಕೆ ಎಂದು ಕರೆಯುತ್ತಾರೆ ಅಂದರೆ i ಮತ್ತು j ಸಾಧ್ಯವಿರುವ ಎಲ್ಲ ಬೆಲೆಗಳಿಗೆ $[a_{ij}] = -[a_{ji}]$ ಆಗಿರುತ್ತದೆ.

ಈಗ ನಾವು i = j ತೆಗೆದುಕೊಂಡರೆ ನಮಗೆ $a_{ii} = -a_{ii}$ ದೊರೆಯುತ್ತದೆ. ಆದ್ದರಿಂದ ಎಲ್ಲಾ i ಗಳಿಗೆ $a_{ii} = 0$ ಇದರ ಅರ್ಥವೆಂದರೆ ಅಸಮಾಂಗ ಮಾತೃಕೆಯ ಎಲ್ಲಾ ಪ್ರಧಾನ ಕರ್ಣದ ಅಂಶಗಳು ಶೂನ್ಯವಾಗಿರುತ್ತವೆ.

$$B = \begin{bmatrix} O & e & f \\ -e & o & g \\ -f & -g & 0 \end{bmatrix}$$

ಮಾತೃಕೆಯು ಅಸಮಾಂಗ ಮಾತೃಕೆಯಾಗಿದೆ.

ಪ್ರಮೇಯ: 1 A ಯ ವಾಸ್ತವ ಸಂಖ್ಯೆಗಳನ್ನು ಒಳಗೊಂಡಿರುವ ಯಾವುದೇ ವರ್ಗ ಮಾತೃಕೆ ಆಗಿದ್ದರೆ A + A' ಸಮಾಂಗ ಮಾತೃಕೆ ಮತ್ತು A -A' ಅಸಮಾಂಗ ಮಾತೃಕೆ ಆಗಿರುತ್ತದೆ.

ಸಾಧನೆ:

: B = A + A' ಆಗಿರಲಿ

B' = (A + A')' (A + B)' = A' + B'

B' = A' + (A')'

B' = A' + A

B' = B

ಆದ್ದರಿಂದ B = A + A' ಸಮಾಂಗ ಮಾತೃಕೆ ಆಗಿರುತ್ತದೆ.

ಈಗ C = A - A'

C' = (A - A')'

C' = A - (A')'

C' = (A - A')

C' = A' - A

C' = (A - A')

C' = C

ಆದ್ದರಿಂದ C = A - A' ಅಸಮಾಂಗ ಮಾತೃಕೆ ಆಗಿರುತ್ತದೆ.

ಪ್ರಮೇಯ 2: ಯಾವುದೇ ವರ್ಗ ಮಾತೃಕೆಯನ್ನು ಒಂದು ಸಮಾಂಗ ಮತ್ತು ಅಸಮಾಂಗ ಮಾತೃಕೆಗಳ ಮೊತ್ತವೆಂದು ಅಭಿವ್ಯಕ್ತಗೊಳಿಸುವುದು.

ಸಾಧನೆ: A ಯಾವುದಾದರೊಂದು ವರ್ಗ ಮಾತೃಕೆ ಆಗಿರಲಿ ಆ ಮಾತೃಕೆಯನ್ನು ನಾವು ಈ ಕೆಳಗಿನಂತೆ ಬರೆದುಕೊಳ್ಳಬಹುದು.

$$A = \frac{1}{2}(A + A') + \frac{1}{2}(A - A')$$

ನಮಗೆ ಪ್ರಮೇಯ 1 ರಿಂದ ತಿಳಿದಿದೆ. A + A' ಸಮಾಂಗ ಮಾತೃಕೆ ಮತ್ತು A−A' ಅಸಮಾಂಗ ಮಾತೃಕೆ ಆಗಿರುತ್ತದೆ ಎಂದು ತಿಳಿದು ಬಂದಿದೆ. A ಯ ಯಾವುದೇ ಮಾತೃಕೆಗೆ (KA)' = KA' ಆದ ಕಾರಣ ಸಮಾಂಗ ಮಾತೃಕೆ ಮತ್ತು ಅಸಮಾಂಗ ಮಾತೃಕೆ ಆಗಿರುತ್ತದೆ ಎಂದು ಸಿದ್ಧವಾಗುತ್ತದೆ. ಹೀಗಾಗಿ ಯಾವುದೇ ಮಾತೃಕೆಯನ್ನು ಸಮಾಂಗ ಮತ್ತು ಅಸಮಾಂಗ ಮಾತೃಕೆಗಳ ಮೊತ್ತವೆಂದು ಅಭಿವ್ಯಕ್ತಗೊಳಿಸಬಹುದಾಗಿದೆ.

ಉದಾಹರಣೆ:

$$B = \begin{bmatrix} 2 & -2 & -4 \\ -1 & 3 & 4 \\ 1 & -2 & -3 \end{bmatrix}$$

ಮಾತೃಕೆಯನ್ನು ಸಮಾಂಗ ಮತ್ತು ಅಸಮಾಂಗ ಮಾತೃಕೆಯ ಮೊತ್ತವೆಂದು ಸ್ಪಷ್ಟಪಡಿಸಿ.

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಕ್ಯಾಲ್ಕುಲೇಟಿಂಗ್ ದಿ ಮ್ಯಾಗ್ನೆಟಿಕ್ ಫೋರ್ಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/2PRHjSQ

ಪ್ರಜಾವಾಣಿ ಉದ್ಯೋಗ ವಾರ್ತೆ

ಬಳ್ಳಾರಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗಳು

ಕರ್ನಾಟಕ ಮಹಿಳಾ ಮತ್ತು ಮಕ್ಕಳ ಇಲಾಖೆ ಬಳ್ಳಾರಿ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದ್ದು ಆಸ್ತಕರು ಅರ್ಜಿ ಸಲ್ಲಿಸಬಹುದು.

ಹುದ್ದೆ: ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು.

ಹುದ್ದೆಗಳ ಸಂಖ್ಯೆ: 170

ವಿದ್ಯಾರ್ಹತೆ: 4, 9, ದ್ವಿತೀಯ ಪಿಯುಸಿ ಉತ್ತೀರ್ಣರಾಗಿರಬೇಕು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಏಪ್ರಿಲ್ 5, 2021

ಹೆಚ್ಚಿನ ಮಾಹಿತಿಗೆ: **https://anganwadirecruit.kar.nic.in/**

ಪಕ್ಷ ತ್ಯಜಿಸಿದ ಬಿಜೆಪಿ ಶಾಸಕರು

ಗುವಾಹಟಿ (ಪಿಟಿಐ): ಚುನಾವಣೆಗೆ ಟಿಕೆಟ್ ನೀಡಿಲ್ಲ ಎಂಬ ಕಾರಣಕ್ಕೆ ಅಸ್ಸಾಂನಲ್ಲಿ ಆಡಳಿತಾರೂಢ ಬಿಜೆಪಿಯ ಶಾಸಕರಾದ ದಿಲೀಪ್‌ಕುಮಾರ್ ಪೌಲ್ ಹಾಗೂ ಶೀಲಾದಿತ್ಯ ದೇವ್ ಬುಧವಾರ ಪಕ್ಷ ತ್ಯಜಿಸಿದ್ದಾರೆ.

ಬಿಜೆಪಿಯ ತಂತ್ರಗಳಿಗೆ ಟಿಎಂಸಿ ಪ್ರತಿತಂತ್ರ ● ಮೃದು ಹಿಂದುತ್ವ, ಬಂಗಾಳದ ಮಗಳು ಕಾರ್ಯತಂತ್ರ

ಮಮತಾಗೆ ಮಾಡು ಇಲ್ಲವೇ ಮಡಿ ಹೋರಾಟ

ನಂದಿಗ್ರಾಮದಲ್ಲಿ ಮಮತಾ ರೋಡ್ ಶೋ

ಕೋಲ್ಕತ್ತ (ಪಿಟಿಐ): ಸರಿಯಾಗಿ ಹತ್ತು ವರ್ಷಗಳ ಹಿಂದೆ ಕಮ್ಯುನಿಸ್ಟ್ ಭದ್ರಕೋಟೆಯನ್ನು ಭೇದಿಸಿ ಪಶ್ಚಿಮ ಬಂಗಾಳದಲ್ಲಿ ಸರ್ಕಾರ ರಚಿಸಿದ್ದ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರಿಗೆ, ಈಗಿನ ವಿಧಾನಸಭಾ ಚುನಾವಣೆಯು ಮಾಡು ಇಲ್ಲವೆ ಮಡಿ ಹೋರಾಟವಾಗಿದೆ. ಪಶ್ಚಿಮ ಬಂಗಾಳವನ್ನು ಅತ್ಯಂತ ದೀರ್ಘಾವಧಿ ಆಳಿದ್ದ ಕಮ್ಯುನಿಸ್ಟ್ ಪಕ್ಷಗಳನ್ನು ಸೋಲಿಸಲು, ಬೀದಿಗಿಳಿದ ಮಮತಾ ಅವರು ಉಗ್ರ ಹೋರಾಟ ನಡೆಸಿದ್ದರು. ಈಗ ತಮ್ಮ ಸರ್ಕಾರವನ್ನು ಉಳಿಸಿಕೊಳ್ಳಲು ಅವರು ಅಂಥದ್ದೇ ಉಗ್ರ ಹೋರಾಟ ನಡೆಸಬೇಕಿದೆ.

ಅತ್ಯಂತ ವ್ಯವಸ್ಥಿತವಾಗಿ ಚುನಾವಣೆಗಳನ್ನು ಎದುರಿಸುವ ಬಿಜೆಪಿಯನ್ನು ಮಮತಾ ಬ್ಯಾನರ್ಜಿ ಅವರು ಏಕಾಂಗಿಯಾಗಿ ಎದುರಿಸಬೇಕಿದೆ. ಜತೆಗೆ ಅನಿರೀಕ್ಷಿತವಾಗಿ ಟಿಎಂಸಿ ತೊರೆಯುತ್ತಿರುವ ನಾಯಕರನ್ನು ಹಾಗೂ ಪಕ್ಷದೊಳಗಿನ ಭಿನ್ನಮತವನ್ನು ಎದುರಿಸಬೇಕಿದೆ. ಇಂತಹ ಬೆಳವಣಿಗೆಗಳಿಂದ ಟಿಎಂಸಿಯನ್ನು ಮುಳುಗುತ್ತಿರುವ ಹಡಗು ಎಂದು ಪರಿಗಣಿಸಲಾಗುತ್ತಿದೆ. ಹಾಗಿದ್ದರೂ ಮಮತಾ ಅವರು ಎದೆಗುಂದಿಲ್ಲ. ಈ ಚುನಾವಣೆಯನ್ನು ಬಂಗಾಳದ ಮಗಳು ಮತ್ತು ಗುಜರಾತ್ ಮೂಲದ ಹೊರಗಿನವರ ನಡುವಣ ಹೋರಾಟ ಎಂದು ಅವರು ಬಿಂಬಿಸುತ್ತಿದ್ದಾರೆ. ಮಮತಾ ಅವರ ಈ ಉಪರಾಷ್ಟ್ರೀಯತೆಯ ನೀತಿ ಫಲ ನೀಡುತ್ತದೆಯೆ ಎಂಬುದನ್ನು ಕಾದು ನೋಡಬೇಕಿದೆ.

1998ರಲ್ಲಿ ಕಾಂಗ್ರೆಸ್‌ನಿಂದ ಕವಲೊಡೆದು ಟಿಎಂಸಿ ಜನ್ಮ ತಳೆದಿದ್ದರೂ, ಎಡಪಕ್ಷಗಳನ್ನು ವಿರೋಧಿಸುವುದೇ ಅದರ ಸಿದ್ಧಾಂತವಾಗಿತ್ತು. 2001 ಮತ್ತು 2006ರ ಚುನಾವಣೆಗಳಲ್ಲಿ ಸೋತರೂ ಸಿಂಗೂರು ಮತ್ತು ನಂದಿಗ್ರಾಮ ಹೋರಾಟಗಳು, 2011ರಲ್ಲಿ ಟಿಎಂಸಿ ಅಧಿಕಾರಕ್ಕೆ ಬರುವಲ್ಲಿ ನೆರವಾದವು. 2016ರಲ್ಲಿ 201 ಕ್ಷೇತ್ರಗಳಲ್ಲಿ ಅಭಿಸುರವ ಮೂಲಕ ಬಂಗಾಳದಲ್ಲಿ ಟಿಎಂಸಿ ಮತ್ತು ಮಮತಾ ಬ್ಯಾನರ್ಜಿ ಅವರ ಹಿಡಿತ ಬಿಗಿಯಾಯಿತು. ಆದರೆ, ಬಿಜೆಪಿ ಕಾರ್ಯತಂತ್ರವು 2019ರ ಲೋಕಸಭಾ ಚುನಾವಣೆಯಲ್ಲಿ ಫಲನೀಡಿತು. 42ರಲ್ಲಿ ಬಿಜೆಪಿ 18 ಸ್ಥಾನಗಳನ್ನು ಗೆದ್ದುಕೊಂಡಿತು. ಇದು ಟಿಎಂಸಿಗಿಂತ ನಾಲ್ಕು ಸ್ಥಾನಗಳಷ್ಟೆ ಕಡಿಮೆ. ಅಲ್ಲಿಂದ ಬಿಜೆಪಿಯ ಬಲ ಹೆಚ್ಚಾದರೆ, ಟಿಎಂಸಿಯ ಬಲಕುಂದಿತು.

'2016ರ ಚುನಾವಣೆಯೂ ನಮಗೆ ಕಷ್ಟವಾಗಿರಲಿಲ್ಲ. ಆದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ತನ್ನ ಅಧಿಕಾರದ ಬಲ ಮತ್ತು ಹಣದ ಬಲವನ್ನು ಬಳಸುತ್ತಿರುವ ಕಾರಣ ಈಗಿನ ಚುನಾವಣೆ ಅತ್ಯಂತ ಸವಾಲಿನದ್ದು' ಎಂದಿದ್ದಾರೆ ಪಕ್ಷದ ವಕ್ತಾರ ಸೌಗತಾ ರಾಯ್.

ಬಿಜೆಪಿಯನ್ನು ಎದುರಿಸಲು ಮಮತಾ ಅವರು ಹಲವು ತಂತ್ರಗಳ ಮೊರೆ ಹೋಗಿದ್ದಾರೆ. ಪಕ್ಷವು ಈ ಚುನಾವಣೆಯನ್ನು ಸ್ಥಳೀಯರು ಮತ್ತು ಹೊರಗಿನವರ ಹೋರಾಟ ಎಂದು ಬಿಂಬಿಸುತ್ತಿದೆ. ಅಸ್ಸಾಂನಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿ ಜಾರಿಗೆ ತಂದಾಗ 16 ಲಕ್ಷದಷ್ಟು ಬಂಗಾಳಿ ಜನರನ್ನು ನೋಂದಣಿಯಿಂದ ಹೊರಗೆ ಇರಿಸಲಾಗಿತ್ತು. ಇದನ್ನು ಟಿಎಂಸಿ ಚುನಾವಣೆಗೆ ಬಳಸಿಕೊಳ್ಳುತ್ತಿದೆ. ಬಿಜೆಪಿಯು ಬಂಗಾಳಿಗಳನ್ನು ಕಡೆಗಣಿಸುತ್ತಿದೆ ಎಂಬ ಭಾವನೆಯನ್ನು ಟಿಎಂಸಿ ನಾಯಕರು ಪ್ರಚಾರದ ವೇಳೆ ಮೂಡಿಸುತ್ತಿದ್ದಾರೆ. ಈ ತಂತ್ರ ಫಲ ನೀಡುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಬಿಜೆಪಿಯ ಹಿಂದುತ್ವ ಪ್ರತಿಪಾದನೆಯ ಎದುರು ಟಿಎಂಸಿ ಮೃದುಹಿಂದುತ್ವದ ಮೊರೆ ಹೋಗಿದೆ. 2019ರ ಚುನಾವಣೆಯಲ್ಲಿ ಬಿಜೆಪಿಯು ರಾಜ್ಯದಲ್ಲಿ ಗಟ್ಟಿನೆಲೆ ಕಂಡುಕೊಂಡ ಬೆನ್ನಲ್ಲೇ ಟಿಎಂಸಿ ಹಿಂದೂಗಳ ಓಲೈಕೆಗೆ ಮುಂದಾಯಿತು. ಅರ್ಚಕರಿಗೆ ವಿಶೇಷ ವೇತನ, ಸೌಕರ್ಯಗಳನ್ನು ಘೋಷಿಸಿತು. ದುರ್ಗಾಪೂಜಾ ಮಂಡಳಿಗಳಿಗೆ ಹೆಚ್ಚಿನ ದೇಣಿಗೆಯನ್ನು ಸರ್ಕಾರದ ವತಿಯಿಂದ ನೀಡಲಾಯಿತು. ಬುಧವಾರ ಮಮತಾ ಬ್ಯಾನರ್ಜಿ ಅವರು ಚಂಡೀಪಾಠ್ ಪಠಿಸಿದ್ದು ಸಹ ಈ ತಂತ್ರದ ಭಾಗವೇ. ಟಿಎಂಸಿಯು ಮುಸ್ಲಿಮರನ್ನಷ್ಟೇ ಓಲೈಸುವುದಿಲ್ಲ ಎಂಬ ಭಾವನೆ ಹುಟ್ಟಲು ಇದು ನೆರವಾಗುತ್ತದೆ ಎಂದು ಪರಿಣತರು ವಿಶ್ಲೇಷಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಈಗಷ್ಟೇ ಚುನಾವಣಾ ರಂಗ ಪ್ರವೇಶಿಸಿರುವ ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಟಿಎಂಸಿಗೆ ಮುಳುವಾಗುತ್ತದೆ. ಟಿಎಂಸಿಯ ಮುಸ್ಲಿಂ ಮತದಾರರನ್ನು ಐಎಸ್‌ಎಫ್ ಕಸಿದುಕೊಳ್ಳುತ್ತದೆ. ಇದರಿಂದ ಬಿಜೆಪಿಗೆ ನೆರವಾಗುತ್ತದೆ ಎಂಬ ವಾದ ಒಂದು ಕಡೆ ಇದೆ. ಮುಸ್ಲಿಮರ ಮತಗಳು ವಿಭಜನೆಯಾದರೂ, ಟಿಎಂಸಿಗೆ ಅದು ನೆರವಾಗುತ್ತದೆ ಎಂದೂ ಪಕ್ಷದ ನಾಯಕರು ಹೇಳಿದ್ದಾರೆ. 'ಮುಸ್ಲಿಮರ ಮತ ವಿಭಜನೆಯಾದರೆ, ಟಿಎಂಸಿ ಸೋಲುತ್ತದೆ. ಆಗ ಬಿಜೆಪಿ ಗೆಲುವು ಸುಲಭವಾಗುತ್ತದೆ ಎಂಬ ಆತಂಕ ಬಂಗಾಳಿ ಹಿಂದೂಗಳಲ್ಲಿ ಇದೆ. ಇದರಿಂದ ಅವರು ಬಿಜೆಪಿಗೆ ವಿರುದ್ಧವಾಗಿ, ಟಿಎಂಸಿ ಪರವಾಗಿ ಕೆಲಸ ಮಾಡುವ ಸಾಧ್ಯತೆ ಇದೆ' ಎಂದು ಪಕ್ಷದ ನಾಯಕರೊಬ್ಬರು ಪ್ರತಿಪಾದಿಸಿದ್ದಾರೆ.

ಬುಧವಾರದ ಬೆಳವಣಿಗೆ

- ಸಿಪಿಎಂನ ಯುವ ವಿಭಾಗ ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಮುಖರ್ಜಿ ಅವರು ನಂದಿಗ್ರಾಮದಲ್ಲಿ ಮಮತಾ ಮತ್ತು ಸುವೇಂದು ಅಧಿಕಾರಿ ವಿರುದ್ಧ ಸ್ಪರ್ಧಿಸಲಿದ್ದಾರೆ
- ಎಐಎಡಿಎಂಕೆ ಪಕ್ಷವು ತಮಿಳುನಾಡು ವಿಧಾನಸಭೆಗೆ ಸ್ಪರ್ಧಿಸಲಿರುವ 171 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಮೊದಲ ಪಟ್ಟಿಯಲ್ಲಿ ಆರು ಅಭ್ಯರ್ಥಿಗಳ ಹೆಸರು ಪ್ರಕಟಿಸಲಾಗಿತ್ತು
- ಟಿ.ಟಿ.ವಿ. ದಿನಕರನ್ ನೇತೃತ್ವದ ಎಎಂಎಂಕೆ ಪಕ್ಷವು 15 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಮಾಜಿ ಸಂಸದರಾದ ಎಸ್. ಅನ್ಬಳಗನ್, ಕೆ.ಸುಕುಮಾರ್ ಅವರಿಗೆ ಟಿಕೆಟ್ ನೀಡಲಾಗಿದೆ. ಕೆಲವು ಮಾಜಿ ಶಾಸಕರು ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ

ನುಡಿ-ಕಿಡಿ

ಗುಂಪುಗಾರಿಕೆಯು ಕೇರಳ ಕಾಂಗ್ರೆಸ್ ಘಟಕದ ಅತಿದೊಡ್ಡ ಸಮಸ್ಯೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಮರಳಿ ಬರಬೇಕೆಂದು ಜನ ಬಯಸುತ್ತಿದ್ದಾರೆ. ಆದರೆ, ಪಕ್ಷದ ಹಿರಿಯ ನಾಯಕರೇ ಗುಂಪುಗಾರಿಕೆಯಲ್ಲಿ ತೊಡಗಿದ್ದಾರೆ
ಪಿ.ಸಿ. ಚಾಕೊ, ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದವರು

ದೆಹಲಿ ಕಾಂಗ್ರೆಸ್ ಘಟಕದಲ್ಲಿ ವರ್ಷಗಳ ಕಾಲ ಗುಂಪುಗಾರಿಕೆಯನ್ನು ಪ್ರೋತ್ಸಾಹಿಸಿದ ವ್ಯಕ್ತಿಯೇ ಈಗ ಗುಂಪುಗಾರಿಕೆ ಬಗ್ಗೆ ಮಾತನಾಡುತ್ತಿದ್ದಾರೆ
ಪವನ್ ಖೇರಾ, ಕಾಂಗ್ರೆಸ್ ವಕ್ತಾರ

ಈ ವಾರ ಕೋಲ್ಕತ್ತಕ್ಕೆ ಹೋಗಿ ಬಿಜೆಪಿಯನ್ನು ಸೋಲಿಸುವಂತೆ ರೈತರನ್ನು ಕೋರುತ್ತೇನೆ. ಆದರೆ, ಯಾವುದೇ ಪಕ್ಷಕ್ಕೆ ಬೆಂಬಲ ನೀಡುವುದಿಲ್ಲ. ನಾನು ಹೋಗುವುದು ಮತ ಕೇಳಲು ಅಲ್ಲ
ರಾಕೇಶ್ ಟಿಕಾಯತ್, ಭಾರತೀಯ ಕಿಸಾನ್ ಯೂನಿಯನ್ ನಾಯಕ

ಚುನಾವಣೆ ಹೊಸ್ತಿಲಲ್ಲಿ 'ಕೈ' ಬಿಟ್ಟ ಚಾಕೊ

ಚಾಕೊ

ನವದೆಹಲಿ/ಕೊಚ್ಚಿನ್ (ಪಿಟಿಐ): ಚುನಾವಣೆ ಹೊಸ್ತಿಲಲ್ಲಿ ಕಾಂಗ್ರೆಸ್‌ನ ಕೇರಳ ಘಟಕಕ್ಕೆ ಆಘಾತ ಎದುರಾಗಿದ್ದು, ಹಿರಿಯ ಮುಖಂಡ ಪಿ.ಸಿ. ಚಾಕೊ ಪಕ್ಷಕ್ಕೆ ಬುಧವಾರ ರಾಜೀನಾಮೆ ನೀಡಿದ್ದಾರೆ. ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಯಲ್ಲಿ ಗುಂಪುಗಾರಿಕೆ ನಡೆಯುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ಚಾಕೊ ಅವರು, ಪಕ್ಷದ ರಾಷ್ಟ್ರೀಯ ನಾಯಕತ್ವವು ಕಳೆದ ಎರಡು ವರ್ಷಗಳಿಂದ ನಿಷ್ಕ್ರಿಯವಾಗಿದೆ ಎಂದು ಆರೋಪಿಸಿದ್ದಾರೆ.

ತಮ್ಮ ಮುಂದಿನ ನಡೆ ಏನು ಎಂದು ಸ್ಪಷ್ಟವಾಗಿ ಹೇಳದ ಅವರು, 'ಬಿಜೆಪಿಯು ದಕ್ಷಿಣ ಭಾರತದಲ್ಲಿ ರಾಜಕೀಯ ಶಕ್ತಿ ಅಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಕಾಂಗ್ರೆಸ್‌ನ ಕೇರಳ ಘಟಕದಲ್ಲಿ ಪ್ರಜಾಪ್ರಭುತ್ವ ಎಂಬುದೇ ಇಲ್ಲ. ರಾಜ್ಯ ಕಾಂಗ್ರೆಸ್ ಸಮಿತಿಯಲ್ಲಿ ಅಭ್ಯರ್ಥಿಗಳ ಪಟ್ಟಿ ಚರ್ಚೆಗೇ ಬಂದಿಲ್ಲ' ಎಂದು ಚಾಕೊ ದೂರಿದ್ದಾರೆ. 'ರಾಜ್ಯ ಘಟಕದಲ್ಲಿ ಎರಡು ಗುಂಪುಗಳಿವೆ. ಒಂದು ತಂಡದ ನೇತೃತ್ವವನ್ನು ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ವಹಿಸಿದ್ದರೆ, ಮತ್ತೊಂದು ತಂಡವನ್ನು ರಮೇಶ್ ಚೆನ್ನಿತ್ತಲ ಮುನ್ನಡೆಸುತ್ತಿದ್ದಾರೆ. ಚುನಾವಣಾ ಕಣಕ್ಕೆ ಯಾರು ಧುಮುಕಬೇಕು ಎಂದು ಈ ಇಬ್ಬರೇ ನಿರ್ಧರಿಸುತ್ತಿದ್ದಾರೆ' ಎಂದು ಚಾಕೊ ಆರೋಪಿಸಿದ್ದಾರೆ.

ಕೇರಳ: 33 ಹಾಲಿ ಶಾಸಕರಿಗೆ ಟಿಕೆಟ್ ಇಲ್ಲ

ತಿರುವನಂತಪುರ: ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹಾಗೂ ಏಳು ಸಚಿವರಿಗೆ ಮುಂಬರುವ ಚುನಾವಣೆಯಲ್ಲಿ ಟಿಕೆಟ್ ಘೋಷಿಸಲಾಗಿದೆ.

ಪ್ರಕಟವಾಗಿರುವ 83 ಅಭ್ಯರ್ಥಿಗಳ ಪಟ್ಟಿಯಲ್ಲಿ ಥಾಮಸ್ ಐಸಾಕ್ ಸೇರಿದಂತೆ 33 ಮಂದಿ ಹಾಲಿ ಶಾಸಕರಿಗೆ ಜಾಗ ಸಿಕ್ಕಿಲ್ಲ.

ಯುವಜನತೆ ಹಾಗೂ ಮಹಿಳೆಯರನ್ನು ತಲುಪುವ ಗುರಿ ಹಾಕಿಕೊಂಡಿರುವ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟವು ಹೊಸಮುಖಗಳಿಗೆ ಈ ಬಾರಿ ಹೆಚ್ಚು ಮಣೆ ಹಾಕಿದೆ. ವಿಧಾನಸಭೆ ಸ್ಪೀಕರ್ ಕೆ.ಶ್ರೀರಾಮಕೃಷ್ಣನ್ (73) ಅವರಿಗೆ ವಯಸ್ಸಿನ ಕಾರಣಕ್ಕೆ ಈ ಬಾರಿ ಟಿಕೆಟ್ ನೀಡಲಾಗಿಲ್ಲ.

ಹಿರಿಯ ಸಚಿವರಾದ ಇ.ಪಿ. ಜಯರಾಜನ್, ಎ.ಕೆ. ಬಾಲನ್, ಪ್ರೊ. ರವೀಂದ್ರನಾಥ್ ಹಾಗೂ ಸುಧಾಕರನ್ ಅವರು ಟಿಕೆಟ್ ವಂಚಿತರ ಪಟ್ಟಿಯಲ್ಲಿದ್ದಾರೆ.

ಪಕ್ಷ ಅಳವಡಿಸಿಕೊಂಡಿರುವ ಎರಡು ಅವಧಿಯ ಅಧಿಕಾರ ಸೂತ್ರದ ಅನ್ವಯ ಇವರನ್ನು ಕೈಬಿಟ್ಟು ಹೊಸಬರಿಗೆ ಆದ್ಯತೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಮಟ್ಟದಲ್ಲಿ ಜಾತ್ಯತೀತ ಕಾರಣಗಳಿಗಾಗಿ ಹೋರಾಟವನ್ನು ಬಲಪಡಿಸಲು ಪಕ್ಷ ಮತ್ತೆ ಅಧಿಕಾರಕ್ಕೆ ಬರುವುದು ಅಗತ್ಯ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಎ. ವಿಜಯರಾಘವನ್ ತಿಳಿಸಿದ್ದಾರೆ.

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್
ನೋಂದಾಯಿತ ಕಛೇರಿ: 1ನೇ ಮಹಡಿ, ಪಾಲಿಕೆ ಕಟ್ಟಡ ಬ್ಲಾಕ್, ಎಸ್.ಎನ್ ಮಾರ್ಕೆಟ್, ನೆಹರು ರಸ್ತೆ ಶಿವಮೊಗ್ಗ–577201 P.No: 08182-279951
ನೇಮಕಾತಿ ಅಧಿಸೂಚನೆ
ಸಂಖ್ಯೆ. ADM/82/Rec-V/2021 ದಿನಾಂಕ : 06.03.2021
ಕಂಪನಿಯು ಒಂದು ಪ್ರಧಾನ ವ್ಯವಸ್ಥಾಪಕರು (ಆಡಳಿತ) ಮತ್ತು ಒಂದು ಹಿರಿಯ ನಗರ ಯೋಜಕರ (Sr.Urban Planner) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಉದ್ದೇಶಿಸಿದೆ. ಅರ್ಜಿಸಲ್ಲಿ ಸಲು ಕೊನೆಯ ದಿನಾಂಕ :19.04.2021. ಅರ್ಜಿಯ ಮಾದರಿ ಮತ್ತು ಇತರ ವಿವರಗಳಿಗಾಗಿ, ವೆಬ್‌ಸೈಟ್ : shivamoggasmartcity.co.in; shimogacity.mrc.gov.in ಹಾಗೂ ಸ್ಮಾರ್ಟ್ ಸಿಟಿ ಲಿಮಿಟೆಡ್ ಕಚೇರಿಯ ಸೂಚನಾ ಫಲಕ ವೀಕ್ಷಿಸಬಹುದು.
ವಾ.ಸಾ.ಸಂ.ಇ./ಶಿ/ಸಂ.56–03 ಝೇಂಕಾರ್/2020–21 ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2020–21/7279 ದಿನಾಂಕ:09.03.2021
–: ತಿದ್ದುಪಡಿ ಗುತ್ತಿಗೆ ಅಧಿಸೂಚನೆ:–
ಉಲ್ಲೇಖ:1) ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂ:ಲೋಇ:ಬೆವಿ: ತಾಂಸ: ಸಇಂ:ಗುತ್ತಿಗೆ/2020–21/6116 ದಿನಾಂಕ: 29–01–2021. 2) ಈ ಕಚೇರಿಯ ಟೆಂಡರ್ ಅಧಿಸೂಚನೆ ಸಂ:ಲೋಇ:ಬೆವಿ: ತಾಂಸ:ಸಇಂ: ಗುತ್ತಿಗೆ/2020–21/6913 ದಿನಾಂಕ: 25–02–2021.
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಉಲ್ಲೇಖಿತ ಅಧಿಸೂಚನೆಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರ ಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 4 ರಲ್ಲಿ ಲೆಕ್ಕ ಶೀರ್ಷಿಕೆ 5054 ರಾಜ್ಯ ಹೆದ್ದಾರಿ ಸುಧಾರಣೆಯಡಿ 1 ಕಾಮಗಾರಿಗೆ ಕರೆಯಲಾದ ಗುತ್ತಿಗೆಯ ದಿನಾಂಕಗಳನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.
ಕ್ರ.ಸಂ:1:ಘಟನಾವಳಿಗಳು:ಟೆಂಡರಗಳ ಬಗ್ಗೆ ವಿಚಾರಣೆ ದಿನಾಂಕ, ಮೊದಲು ಇದ್ದ ದಿನಾಂಕಗಳು:26–03–2021,ತಿದ್ದುಪಡಿ ಮಾಡಿದ ದಿನಾಂಕಗಳು:17–03–2021,ಕ್ರ. ಸಂ:2:ಘಟನಾವಳಿಗಳು:ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ,ಮೊದಲು ಇದ್ದ ದಿನಾಂಕಗಳು:29–03–2021, ತಿದ್ದುಪಡಿ ಮಾಡಿದ ದಿನಾಂಕಗಳು:19–03–2021, ಕ್ರ, ಸಂ:3: ಘಟನಾವಳಿಗಳು:ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ, ಮೊದಲು ಇದ್ದ ದಿನಾಂಕಗಳು:30–03–2021,ತಿದ್ದುಪಡಿ ಮಾಡಿದ ದಿನಾಂಕಗಳು: 20–03–2021, ಕ್ರ.ಸಂ:4:ಘಟನಾವಳಿಗಳು:ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ,ಮೊದಲು ಇದ್ದ ದಿನಾಂಕಗಳು:31–03–2021, ತಿದ್ದುಪಡಿ ಮಾಡಿದ ದಿನಾಂಕಗಳು:22–03–2021.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ದಿನಾಂಕ: 09.03.2021 ರ ನಂತರ ಪಡೆಯಬಹುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-1520/MCA/2020-21

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ.
ಐ.ಎಫ್.ಟಿ. ಸಂ: ಕಾ.ನಿ.ಇಂ./ಲೋ.ಇ./ವಿ.ಜೆ.ಪಿ/ಪಿ.ಬಿ/8443/2020–21/05724 ದಿನಾಂಕ: 10.03.2021
ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್)
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಲೆಕ್ಕ ಶೀರ್ಷಿಕೆ 8443– ಠೇವಣಿ ವಂತಿಕೆ ಅಡಿಯಲ್ಲಿ **2 ಕಾಮಗಾರಿಗಳಿಗೆ** ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ **ರೂ. 473.00 ಲಕ್ಷಗಳು** ಹಾಗೂ **ರೂ. 300.00 ಲಕ್ಷಗಳು** & ಸರ್ಕಾರದ ಆದೇಶದನ್ವಯ ಮುಂಗಡ ಠೇವಣಿ ಮೊತ್ತಕ್ಕೆ ವಿನಾಯಿತಿ ನೀಡಲಾಗಿದೆ. (Contractor Should enclose EMD Declation in Declaration in priscribed format vide GO No. FD/675/Expenditure/ 12/2020 Bangalore Dated:11.12.2020). ಸದರ ಕಾಮಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವುದು ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವುದು. ಗುತ್ತಿಗೆದಾರರ ಪೂರ್ವ ಭಾವಿ ಸಭೆ **ದಿನಾಂಕ: 19.03.2021 ರ ಮುಂಜಾನೆ 11:00 ಗಂಟೆಗೆ,** ಟೆಂಡರ್‌ಗಳನ್ನು ಸ್ವೀಕರಿಸುವ **ದಿನಾಂಕ: 23.03.2021ರ ಸಂಜೆ 4.30 ಗಂಟೆಯವರೆಗೆ,** ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 25.03.2021 ರ ಮುಂಜಾನೆ 11.00 ಗಂಟೆಯ ನಂತರ** ಮತ್ತು ಟೆಂಡರ್‌ಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 26.03.2021 ರ ಮುಂಜಾನೆ 11.00 ಗಂಟೆಯ ನಂತರ.** ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/621/ಜಿಎ/2020–21

"ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ"
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕರಾಮುವಿ)
ಮುಕ್ತಗಂಗೋತ್ರಿ, ಮೈಸೂರು – 570 006.
ಸಹಾಯವಾಣಿ : 88003 35638, ಇ–ಮೇಲ್: techsupport@ksouportal.com
ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941, 2519943, 2519948, 2519952.
ಅಂತರ್ಜಾಲ : www.ksoumysuru.ac.in
ಸಂಖ್ಯೆ: ಕರಾಮುವಿ/ಪ್ರವಿ/ಪ್ರವೇಶಾತಿ–1/90/ಉಪಕಡತ/2020–21/ಜನವರಿ ದಿನಾಂಕ: 10–03–2021
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಯು.ಜಿ.ಸಿ), ನವದೆಹಲಿ, ಇದರ ಮಾನ್ಯತೆ ಪಡೆದಿರುತ್ತದೆ. (ಯುಜಿಸಿ ಪ್ರಕಟಣೆ ಸಂಖ್ಯೆ: ಎಫ್.ನಂ: 1–6/2018 (ಡಿಇಬಿ–1) ದಿನಾಂಕ: 14.08.2018 ಮತ್ತು 03.10.2018)
ಪ್ರವೇಶಾತಿ ಪ್ರಕಟಣೆ: 2020–21ರ ಜನವರಿ (ಫೆಬ್ರವರಿ–ಮಾರ್ಚ್) ಆವೃತ್ತಿ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದಲ್ಲಿ ದೂರಶಿಕ್ಷಣ ನೀಡುವ ಏಕೈಕ ವಿಶ್ವವಿದ್ಯಾನಿಲಯವಾಗಿದೆ.
ಪ್ರಥಮ ವರ್ಷದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗಾಗಿ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.
ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳು:
ಸ್ನಾತಕ ಪದವಿ :
◆ ಬಿ.ಎ. ◆ ಬಿ.ಕಾಂ ◆ ಬಿ.ಲಿಬ್.ಐ.ಎಸ್ಸಿ ◆ ಬಿ.ಇಡಿ
ಸ್ನಾತಕೋತ್ತರ ಪದವಿ : ◆ ಎಂ.ಎ – ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಸಂಸ್ಕೃತ, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಾರ್ವಜನಿಕ ಆಡಳಿತ, ಸಮಾಜಶಾಸ್ತ್ರ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ.
◆ ಎಂ.ಲಿಬ್.ಐ.ಎಸ್ಸಿ ◆ ಎಂ.ಕಾಂ ◆ ಎಂ.ಬಿ.ಎ (7 ವಿಶೇಷ ಪರಿಣಿತಿ ವಿಷಯಗಳು : ಪ್ರವೇಶ ಪರೀಕ್ಷೆ ಇರುವುದಿಲ್ಲ)
◆ ಎಂ.ಎಸ್ಸಿ – ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ, ಕ್ಲಿನಿಕಲ್ ನ್ಯೂಟ್ರಿಷನ್ ಆಂಡ್ ಡಯಟೆಟಿಕ್ಸ್, ಕಂಪ್ಯೂಟರ್ ವಿಜ್ಞಾನ, ಪರಿಸರ ವಿಜ್ಞಾನ, ಭೂಗೋಳಶಾಸ್ತ್ರ, ಮಾಹಿತಿ ವಿಜ್ಞಾನ, ಸೂಕ್ಷ್ಮಜೀವಶಾಸ್ತ್ರ, ಮನೋವಿಜ್ಞಾನ.
◆ ಡಿಪ್ಲೋಮ (ಪದವಿ ಆಧಾರಿತ) :– ಇಂಗ್ಲಿಷ್, ಕಮ್ಯೂನಿಕೇಟಿವ್ ಇಂಗ್ಲಿಷ್, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಕುವೆಂಪು ಸಾಹಿತ್ಯ, ಹಣಕಾಸು ನಿರ್ವಹಣೆ, ಮಾನವ ಸಂಪನ್ಮೂಲ ನಿರ್ವಹಣೆ, ವ್ಯವಹಾರಿಕ ಕಾನೂನು, ವ್ಯವಹಾರಿಕ ನಿರ್ವಹಣೆ, ಮಾರುಕಟ್ಟೆ ನಿರ್ವಹಣೆ, ಅಂಬೇಡ್ಕರ್ ಅಧ್ಯಯನ, ನ್ಯೂಟ್ರಿಷನ್ ಆಂಡ್ ಡಯಟೆಟಿಕ್ಸ್, ಇನ್‌ಫರ್‌ಮೇಷನ್ ಟೆಕ್ನಾಲಜಿ, ಕಂಪ್ಯೂಟರ್ ಅಪ್ಲಿಕೇಷನ್.
◆ ಡಿಪ್ಲೋಮ (10+2 ಆಧಾರಿತ) :– ಕನ್ನಡ, ಪತ್ರಿಕೋದ್ಯಮ, ನ್ಯೂಟ್ರಿಷನ್ ಆಂಡ್ ಹೆಲ್ತ್ ಎಜುಕೇಷನ್, ಇನ್‌ಫರ್‌ಮೇಷನ್ ಟೆಕ್ನಾಲಜಿ, ಕಂಪ್ಯೂಟರ್ ಅಪ್ಲಿಕೇಷನ್.
◆ ಸರ್ಟಿಫಿಕೇಟ್ : – ಕನ್ನಡ, ಪಂಚಾಯತ್ ರಾಜ್, ಪೌಷ್ಟಿಕತೆ ಮತ್ತು ಆಹಾರ, ಮಾಹಿತಿ ಸಂವಹನ ತಂತ್ರಜ್ಞಾನ.
ಅಭ್ಯರ್ಥಿಗಳಿಗೆ ಸೂಚನೆಗಳು :
1) ಆಯಾ ಶೈಕ್ಷಣಿಕ ಕಾರ್ಯಕ್ರಮಗಳ ವಿವರಣಾ ಪುಸ್ತಕಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.in ನಲ್ಲಿ ಲಭ್ಯವಿದ್ದು, ಆಯಾ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಇರಬೇಕಾದ ವಿದ್ಯಾರ್ಹತೆ, ಶುಲ್ಕ ಮತ್ತಿತರೆ ವಿವರಗಳನ್ನು ನೀಡಲಾಗಿದ್ದು, ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದು/ವೀಕ್ಷಿಸಬಹುದು. ◆ ಪ್ರವೇಶಾತಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ನೇರವಾಗಿ ಭರ್ತಿ ಮಾಡುವುದು ಅಥವಾ ಕ.ರಾ.ಮು.ವಿ ಕೇಂದ್ರ ಕಚೇರಿ / ಪ್ರಾದೇಶಿಕ ಕೇಂದ್ರಗಳಲ್ಲಿ ಖುದ್ದಾಗಿ ಭೇಟಿ ಮಾಡಿ ಆನ್‌ಲೈನ್ ಮೂಲಕ ಪ್ರವೇಶಾತಿ ಅರ್ಜಿಯನ್ನು ಭರ್ತಿ ಮಾಡಿ ಪ್ರವೇಶಾತಿ ಪಡೆಯಬಹುದು. ◆ ಆನ್‌ಲೈನ್‌ನಲ್ಲಿ ಪ್ರವೇಶಾತಿ ಅರ್ಜಿಯನ್ನು ಭರ್ತಿ ಮಾಡಲು ಕರಾಮುವಿ ಆನ್‌ಲೈನ್ ಪೋರ್ಟಲ್ ವೀಕ್ಷಿಸುವುದು. "KSOU Online Admission Portal". ◆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರವೇ ಪ್ರವೇಶಾತಿ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ. ◆ ಪ್ರವೇಶಾತಿಯ ನಂತರ ಗುರುತಿನ ಪತ್ರವನ್ನು ಹಾಗೂ ಸಿದ್ಧಪಾಠಗಳನ್ನು ತಾವು ಆಯ್ಕೆ ಮಾಡಿಕೊಂಡಿರುವ ಪ್ರಾದೇಶಿಕ ಕೇಂದ್ರದಲ್ಲಿಯೇ ಪಡೆಯಬಹುದು.
2) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ವಿದ್ಯಾರ್ಥಿಗಳು ಪ್ರವೇಶಾತಿ ಪ್ರಕ್ರಿಯೆ ಶುಲ್ಕ, ಕೌಶಲ್ಯಾಭಿವೃದ್ಧಿ ಶುಲ್ಕ ಹಾಗೂ 25ನೇ ವರ್ಷದ 'ಬೆಳ್ಳಿ ಹಬ್ಬ'ದ ವಿಶೇಷ ಶುಲ್ಕವನ್ನು ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆಯ ಷರತ್ತಿಗೆ ಒಳಪಟ್ಟು ಶುಲ್ಕ ವಿನಾಯಿತಿ ಪ್ರವೇಶಾತಿಯನ್ನು ಪಡೆಯಬಹುದಾಗಿದೆ. ಇವರು ಸರ್ಕಾರವು ನಿಗದಿಪಡಿಸಿರುವ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಪೋರ್ಟಲ್‌ನಲ್ಲಿ 'https://ssp.postmatric.karnataka.gov.in' ವಿವರಗಳನ್ನು ಅಪ್‌ಲೋಡ್ ಮಾಡಿ ದಾಖಲಾತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಈ ಅವಕಾಶವು ಆನ್‌ಲೈನ್ ಪೋರ್ಟಲ್ ತೆರೆದಿರುವವರೆವಿಗೆ ಮಾತ್ರ ಪಡೆಯಬಹುದು. ನಂತರ ಪೂರ್ಣಪ್ರಮಾಣದ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.
3) ಕರಾಮುವಿ ಮತ್ತು ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಪ್ರಥಮ ವರ್ಷದ (ನಿಯಮಿತ ಅವಧಿಯೊಳಗೆ) ಶಿಕ್ಷಣ ಪೂರೈಸಿರುವ ವಿದ್ಯಾರ್ಥಿಗಳು ದ್ವಿತೀಯ ವರ್ಷಕ್ಕೆ ಕರಾಮುವಿಗೆ ಸೇರಬಯಸುವ ವಿದ್ಯಾರ್ಥಿಗಳೂ ಸಹ ನೇರ ಪ್ರವೇಶಾತಿ ಪಡೆದುಕೊಳ್ಳಬಹುದಾಗಿದೆ.
4) ಕರಾಮುವಿಯು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ವಿಶ್ವವಿದ್ಯಾನಿಲಯದ ಪರವಾಗಿ ಕಾರ್ಯನಿರ್ವಹಿಸಲು ಅಧಿಕಾರ ನೀಡಿರುವುದಿಲ್ಲ. ಅಂತಹ ಯಾವುದೇ ಬಾಹ್ಯ ವ್ಯಕ್ತಿಗಳ ವತಿಯಿಂದ ಅಭ್ಯರ್ಥಿಗಳು ನಷ್ಟಕ್ಕೊಳಗಾದಲ್ಲಿ ಅದಕ್ಕೆ ವಿಶ್ವವಿದ್ಯಾನಿಲಯವು ಯಾವುದೇ ರೀತಿಯಲ್ಲಿ ಹೊಣೆಯಾಗುವುದಿಲ್ಲ. ಅಭ್ಯರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಕರಾಮುವಿ ಕೇಂದ್ರ ಕಚೇರಿ ಮೈಸೂರು ಅಥವಾ ಕೆಳಗೆ ತಿಳಿಸಿರುವ ಯಾವುದೇ ಕರಾಮುವಿ ಪ್ರಾದೇಶಿಕ ಕೇಂದ್ರಗಳು ಹಾಗೂ ಕರಾಮುವಿ "ಕಲಿಕಾ ಕೇಂದ್ರ"ಗಳನ್ನು ಮಾತ್ರ ಸಂಪರ್ಕಿಸುವಂತೆ ತಿಳಿಸಲಾಗಿದೆ.
5) ಅಭ್ಯರ್ಥಿಗಳು ಪ್ರವೇಶಾತಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳಿಗಾಗಿ ಕರಾಮುವಿಯ ಅಂತರ್ಜಾಲ ತಾಣವನ್ನು www.ksoumysuru.ac.in ಕಾಲಕಾಲಕ್ಕೆ ವೀಕ್ಷಿಸಲು ಸೂಚಿಸಿದೆ. ಅಭ್ಯರ್ಥಿಗಳು ತಮ್ಮ ಪ್ರವೇಶಾತಿ ಬಗೆಗಿನ ಯಾವುದೇ ಸಮಸ್ಯೆಗಳಿಗೆ ಇ–ಮೇಲ್ ಅನ್ನು techsupport@ksouportal.com ಗೆ ಕಳುಹಿಸಬಹುದು. ಕರಾಮುವಿಯಿಂದ ಅಂಗೀಕೃತಗೊಂಡಿರುವ ವಿವಿಧ ಕಲಿಕಾ ಕೇಂದ್ರಗಳಲ್ಲಿ ಪ್ರವೇಶಾತಿ ಆಪ್ತ ಸಮಾಲೋಚನೆಯನ್ನು ನೀಡಲಾಗುವುದು. ಅಭ್ಯರ್ಥಿಗಳು ತಾವು ಆಯ್ಕೆ ಮಾಡಿಕೊಂಡಿರುವ ಪ್ರಾದೇಶಿಕ ಕೇಂದ್ರದ ವ್ಯಾಪ್ತಿಯಲ್ಲಿ ತಮಗೆ ಹತ್ತಿರವಾದ ಅಧ್ಯಯನ ಕೇಂದ್ರಗಳಿಗೆ ಭೇಟಿ ನೀಡಿ ಪ್ರವೇಶಾತಿ ಆಪ್ತ ಸಮಾಲೋಚನೆಯನ್ನು ಪಡೆದುಕೊಳ್ಳಬಹುದು. ಕರಾಮುವಿ ಕಲಿಕಾ ಕೇಂದ್ರಗಳ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.in ನಿಂದ ಪಡೆದುಕೊಳ್ಳಬಹುದಾಗಿದೆ.

ಕರಾಮುವಿ ಪ್ರಾದೇಶಿಕ ಕೇಂದ್ರಗಳು:
1. ಮೈಸೂರು (ಕೇಂದ್ರ ಕಚೇರಿ): ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570 006., ದೂ(ಕ) 0821–2500981, ಮೊ: 99457 34313, 97313 92627, 98440 10407.
2. ಬೆಂಗಳೂರು–1 ಪ್ರಾದೇಶಿಕ ಕೇಂದ್ರ : ಶ್ರೀಗೌರಿ ಚೇಂಬರ್ಸ್, #61, 5ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018. ದೂರವಾಣಿ: (ಕ) 080–26603664, ಮೊಬೈಲ್ : 94486 68880.
3. ಬೆಂಗಳೂರು–2 ಪ್ರಾದೇಶಿಕ ಕೇಂದ್ರ : ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ,ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬೆಸ್ಕಾಂ ಕಚೇರಿ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು–03. ದೂ: 080–23448811, ಮೊ: 98445 06629.
4. ಬೆಂಗಳೂರು–3 ಪ್ರಾದೇಶಿಕ ಕೇಂದ್ರ : ಆದಿತ್ಯ ಶಿಕ್ಷಣ ಸಂಸ್ಥೆ, ನಂ.12, ಕೋಗಿಲು ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ದೇವಸ್ಥಾನದ ಹಿಂಭಾಗ, ಮಾರುತಿನಗರ, ಯಲಹಂಕ, ಬೆಂಗಳೂರು–64 ಮೊ: 98805 26439 / 90195 26439.
5. ಬೆಳಗಾಂ ಪ್ರಾದೇಶಿಕ ಕೇಂದ್ರ : ಅಂಗಡಿ ಕಾಲೇಜ್ ಆಫ್ ಕಾಮರ್ಸ್ ಅಂಡ್ ಸೈನ್ಸ್, ಸವಗಾವ್ ರಸ್ತೆ, ಬೆಳಗಾವಿ–590 009, ಮೊ: 98454 91995.
6. ಬಳ್ಳಾರಿ ಪ್ರಾದೇಶಿಕ ಕೇಂದ್ರ : ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ–583 102. ಮೊ: 90351 43912.
7. ಚಾಮರಾಜನಗರ ಪ್ರಾದೇಶಿಕ ಕೇಂದ್ರ : ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನುಯೆಲ್ ಸ್ಕೂಲ್ ಹತ್ತಿರ, ಚಾಮರಾಜನಗರ–571342 ಮೊ: 96323 46618.
8. ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ : ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು–577 102, ಮೊ: 81978 18807.
9. ದಾವಣಗೆರೆ ಪ್ರಾದೇಶಿಕ ಕೇಂದ್ರ : ಜೆ.ಹೆಚ್.ಪಟೇಲ್ ಬಡಾವಣೆ, ಶಾಮನೂರು ಹಿಂಭಾಗ, ನಾಗನೂರು ರಸ್ತೆ, ದಾವಣಗೆರೆ–577 004, ಮೊ: 90085 40090.
10. ಧಾರವಾಡ ಪ್ರಾದೇಶಿಕ ಕೇಂದ್ರ : ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ಕ್ಯಾಂಪಸ್, ಕೆ. ಸಿ. ಡಿ. ರಸ್ತೆ, ಎಲ್‌ಐಸಿ ಕಚೇರಿ ಎದುರು, ಧಾರವಾಡ–580008. ದೂ: 0836–2441199, ಮೊ: 78993 75158.
11. ಹಾಸನ ಪ್ರಾದೇಶಿಕ ಕೇಂದ್ರ : ಎಸ್.ಎಂ.ಕೃಷ್ಣನಗರ, ಅರಸೀಕೆರೆ ರಸ್ತೆ, ದೊಡ್ಡಪುರ ಅಂಚೆ, ಕೇಂದ್ರೀಯ ವಿದ್ಯಾಲಯದ ಹತ್ತಿರ, ಬಿ.ಟಿ. ಕೊಪ್ಪಲು, ಹಾಸನ–573118 ಮೊ: 94826 03060 / 89040 36090,
12. ಕಲಬುರ್ಗಿ ಪ್ರಾದೇಶಿಕ ಕೇಂದ್ರ : ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ–585106 ದೂ: 08472–265868, ಮೊ: 99167 83555.
13. ಕಾರವಾರ ಪ್ರಾದೇಶಿಕ ಕೇಂದ್ರ : ಯು.ಎಸ್.ಕೆ.ವಿ ಹಳೆ ಕಟ್ಟಡ, ಮೊದಲನೆ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ–581301 ಮೊ: 96114 18726, 90353 95137.
14. ಕೋಲಾರ ಪ್ರಾದೇಶಿಕ ಕೇಂದ್ರ : ಎಸ್.ಪಿ. ಕಚೇರಿ ಹಿಂಭಾಗ, ಆರ್.ಎಲ್.ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ–563 103, ಮೊ: 89702 23247.
15. ಮಂಡ್ಯ ಪ್ರಾದೇಶಿಕ ಕೇಂದ್ರ : #ಸಿ.ಎಸ್–11(ಎ), 'ಇ' ಬ್ಲಾಕ್, ವಿವೇಕಾನಂದನಗರ ಲೇಔಟ್, ಹೊಳಲು ರಸ್ತೆ, ಮಂಡ್ಯ–571401. ಮೊ: 99644 95936.
16. ಮಂಗಳೂರು ಪ್ರಾದೇಶಿಕ ಕೇಂದ್ರ : ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, ಲೇಡಿಹಿಲ್, ಮಂಗಳೂರು–575006, ದೂ: 0824–2454697 ಮೊ: 9945058950/ 9972196692,
17. ರಾಮನಗರ ಪ್ರಾದೇಶಿಕ ಕೇಂದ್ರ : ಶಾಂತಿನಿಕೇತನ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್, ಬಿ.ಎಂ.ರಸ್ತೆ, ವಿವೇಕಾನಂದನಗರ, ರಾಮನಗರ–562159 ದೂ: 080–27274443, ಮೊ: 99864 58055,
18. ಶಿವಮೊಗ್ಗ ಪ್ರಾದೇಶಿಕ ಕೇಂದ್ರ : ಅಲ್ಕೊಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ–577201, ಮೊ:91644 67131,
19. ತುಮಕೂರು ಪ್ರಾದೇಶಿಕ ಕೇಂದ್ರ : ಸಿಎ–07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೆಳೆಕೋಟೆ, ತುಮಕೂರು–572105. ಮೊ: 98441 26625/ 91088 08219.
20. ಉಡುಪಿ ಪ್ರಾದೇಶಿಕ ಕೇಂದ್ರ : ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576101 ದೂ: 0820–2522247, ಮೊ: 99725 26647.
21. ಬೀದರ್ ಪ್ರಾದೇಶಿಕ ಕೇಂದ್ರ : ಸರ್ಕಾರಿ ಪ್ರ.ದ.ಕಾಲೇಜು, ನೌಬಾದ್, ಬೀದರ್, ಮೊ: 98454 91995.

ಪ್ರವೇಶಾತಿಗೆ ಸಂಬಂಧಿಸಿದ ಮುಖ್ಯ ದಿನಾಂಕಗಳು
ಬಿಎ/ಬಿ.ಕಾಂ/ಬಿ.ಲಿಬ್.ಐ.ಎಸ್ಸಿ./ಎಂಎ/ಎಂ.ಕಾಂ/ಎಂ.ಎಸ್ಸಿ./ಎಂ.ಬಿ.ಎ/ಎಂ.ಲಿಬ್.ಐ.ಎಸ್ಸಿ./ಡಿಪ್ಲೋಮಾ (ಪದವಿ ಆಧಾರಿತ)/ಡಿಪ್ಲೋಮಾ (10+2 ಆಧಾರಿತ)/ ಸರ್ಟಿಫಿಕೇಟ್ ಕೋರ್ಸುಗಳಿಗೆ :

ಪ್ರವೇಶಾತಿ ಪ್ರಾರಂಭ ದಿನಾಂಕ	12–03–2021
ಅಂತಿಮ ದಿನಾಂಕ ದಂಡ ಶುಲ್ಕವಿಲ್ಲದೆ	12–04–2021
ರೂ. 200/– ದಂಡ ಶುಲ್ಕದೊಡನೆ	26–04–2021
ರೂ. 400/– ದಂಡ ಶುಲ್ಕದೊಡನೆ	30–04–2021

ಬಿ.ಇಡಿ ಶಿಕ್ಷಣಕ್ರಮಕ್ಕೆ ಪ್ರವೇಶ ಪರೀಕ್ಷೆ :

ಪೋರ್ಟಲ್ ತೆರೆಯುವ ದಿನಾಂಕ	12–03–2021
ಅರ್ಜಿ ಸಲ್ಲಿಸಲು ಕಡೆಯ ದಿನಾಂಕ	29–03–2021
ಸಾಮಾನ್ಯ ಪ್ರವೇಶ ಪರೀಕ್ಷೆ ದಿನಾಂಕ	04–04–2021
ಪ್ರವೇಶಾತಿಗೆ ಅಂತಿಮ ದಿನಾಂಕ	30–04–2021

ಸೂಚನೆ: ಬಿ.ಇಡಿ ಪ್ರವೇಶ ಪರೀಕ್ಷೆ ಫಲಿತಾಂಶವನ್ನು ವಿಶ್ವವಿದ್ಯಾನಿಲಯದ ಅಂತರ್‌ಜಾಲದಲ್ಲಿ ಪ್ರಕಟಿಸಲಾಗುವುದು.
ಸಹಿ/–, ಕುಲಸಚಿವರು

ಕರ್ನಾಟಕ ಸರಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ (ಜಿಲ್ಲಾ ನಗರಾಭಿವೃದ್ಧಿ ಕೋಶ)
ರಾಯಚೂರು ಜಿಲ್ಲೆ, ರಾಯಚೂರು
O/O PD-11035/14/2018 (E 18362) ದಿನಾಂಕ : 08–03–2021
:: ಟೆಂಡರ್ ಪ್ರಕಟಣೆ – (ಇ–ಪ್ರೋಕ್ಯೂರ್‌ಮೆಂಟ್) ::
ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಗರೋತ್ಥಾನ (ಮುನ್ಸಿಪಾಲ್ಟಿ) 3 ರ ಯೋಜನೆ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಇ–ಪ್ರೋಕ್ಯೂರ್‌ಮೆಂಟ್ ಪದ್ಧತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು ಸದರಿ ಟೆಂಡರನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು www.eprocurement.karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು.
1) ಅನುದಾನದ ವಿವರ : ನಗರೋತ್ಥಾನ (ಮುನ್ಸಿಪಾಲ್ಟಿ–) 3ರ ಯೋಜನೆ, 2) ಕಾಮಗಾರಿಯ ಹೆಸರು : Construction of Roads Drains and Buildings in Hatti TP Area Under Nagarothana (Municipality) Phase3 Amount put to Tender Rs. 3,00,74,724.96, 3) ಇಂಡೆಂಟ್ ನಂಬರ : DMA/2020-21/OW/WORK_INDENT112660
ಸಹಿ/– ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು
ವಾ.ಸಾ.ಸಂ.ಇ/ರಾಯಚೂರು/658/ಎಂ.ಸಿ.&ಎ/2020–21

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ಸರ್ವೆ ಸಂ. 8, (ಬಿಇಪಿ ಆವರಣ) ಡಾ. ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು – 560010
ದೂ: +91 63648 90810, +91 63648 90811
CIN: U60100KA2000PLC028171 ಇ–ಮೇಲ್: md@kride.in
Tender Notice No. : KRIDE/DL/12/2021. Date: 11.03.2021.
ಟೆಂಡರ್ ಸೂಚನೆ
ಬೈಯಪ್ಪನಹಳ್ಳಿ – ಹೊಸೂರು ವಿಭಾಗದ ದ್ವಿಪಥೀಕರಣದ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ಅನುಭವಿ ಏಜೆನ್ಸಿಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕ್ರ. ಸಂ.	ಕಾಮಗಾರಿಯ ಹೆಸರು	ಮೊತ್ತ (ಕೋಟಿ ರೂ.ಗಳಲ್ಲಿ)
1	**ಬೈಯಪ್ಪನಹಳ್ಳಿ – ಹೊಸೂರು ದ್ವಿಪಥೀಕರಣ ಯೋಜನೆ** – "ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಹೀಲಲಿಗೆ (ಒಳಗೊಂಡಂತೆ) – ಬೈಯಪ್ಪನಹಳ್ಳಿ 'ಎ' ವಿಭಾಗದ ಕಿ.ಮೀ. 182/400 ದಿಂದ ಕಿ.ಮೀ. 205/300 ವರೆಗೆ ಸೆಸ್ ಮೇಲೆ ಮತ್ತು ಕಿ.ಮೀ. 188/200 (ಹುಸ್ಕೂರು ಗ್ರಾಮ) ಡಿಪೋದಲ್ಲಿ ಯಂತ್ರದಿಂದ ಪುಡಿಮಾಡಿದ ಕಲ್ಲಿನ ನಿಲುಭಾರದ ಸಂಗ್ರಹ ಮತ್ತು ಪೂರೈಕೆ"	7.97
2	**ಬೈಯಪ್ಪನಹಳ್ಳಿ – ಹೊಸೂರು ದ್ವಿಪಥೀಕರಣ ಯೋಜನೆ** – "ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಹೊಸೂರು ರೈಲ್ವೆ ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ 1, 2 & 3ರ ವಿಸ್ತರಣೆ, ಹೊಸ ಐಲ್ಯಾಂಡ್ ಪ್ಲಾಟ್‌ಫಾರ್ಮ್ 4&5ರ ನಿರ್ಮಾಣ, ಎಫ್‌ಒಬಿ, ತಾತ್ಕಾಲಿಕ ಗೂಡ್ಸ್ ಶೆಡ್ ಮತ್ತು ಗೂಡ್ಸ್ ಪ್ಲಾಟ್‌ಫಾರ್ಮ್‌ಗಳ ಉದ್ದೇಶಿತ ನಿರ್ಮಾಣ ಹಾಗೂ ಮಾರನಾಯಕನಹಳ್ಳಿ ರೈಲ್ವೆ ನಿಲ್ದಾಣದಲ್ಲಿ ರೈಲ್ ಲೆವೆಲ್ ಪ್ಲಾಟ್‌ಫಾರ್ಮ್ ನಿರ್ಮಾಣ ಹಾಗೂ ಎಲ್ಲ ವಿದ್ಯುದ್ದೀಕರಣ ಕಾರ್ಯಗಳು ಸೇರಿದಂತೆ ಇತರ ಸಂಬಂಧಿತ ಕಾಮಗಾರಿಗಳು".	7.01

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12–04–2021.
ವಿವರಗಳಿಗಾಗಿ www.kride.in ಗೆ ಭೇಟಿ ನೀಡಿ 'Tenders' ಮೇಲೆ ಕ್ಲಿಕ್ ಮಾಡಿ
ಸಹಿ/– ಜನರಲ್ ಮ್ಯಾನೇಜರ್/ಸಿವಿಲ್/ಪ್ರೊಜೆಕ್ಟ್ಸ್ ಕ–ರೈಡ್/ಬೆಂಗಳೂರು
DIPR/DDU/3071/SPAN/2020-21

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಜೀವನದಲ್ಲಿ, ನಿಮಗೆ ಒಳ್ಳೆಯದನ್ನು ಬಯಸುವವರಿಂದ ಹೊರತುಪಡಿಸಿ ಯಾರಿಂದಲೂ ಯಾವುದನ್ನೂ ಉಚಿತವಾಗಿ ಪಡೆಯದಿರುವುದು ಒಳ್ಳೆಯದು.

-ಚಿತ್ರಾ ಬ್ಯಾನರ್ಜಿ ದಿವಾಕರುಣಿ

ಹುಲಿ ಉಪಟಳವನ್ನು ಬೇಗ ನಿವಾರಿಸಿ ಮಾನವ – ಪ್ರಾಣಿ ಸಂಘರ್ಷ ತಪ್ಪಿಸಿ

ಕೊಡಗಿನ ಪೊನ್ನಂಪೇಟೆ ಹಾಗೂ ಅದರ ಸುತ್ತಲಿನ ಹಲವು ಗ್ರಾಮಗಳು ನರಭಕ್ಷಕ ಹುಲಿಯ ಭೀತಿಯಿಂದ ತತ್ತರಿಸಿ ಹೋಗಿವೆ. ಹದಿನೈದು ದಿನಗಳ ಅಂತರದಲ್ಲಿ ಮೂವರು ಕಾರ್ಮಿಕರ ದುರ್ಮರಣಕ್ಕೆ ಕಾರಣವಾಗಿರುವ ಹುಲಿ, 25ಕ್ಕೂ ಅಧಿಕ ಜಾನುವಾರುಗಳನ್ನು ಸಹ ಬಲಿ ಪಡೆದಿದೆ. ಅದರ ದಾಳಿಗೆ ತುತ್ತಾದ ಇನ್ನೊಬ್ಬ ವ್ಯಕ್ತಿಯ ಸ್ಥಿತಿಯೂ ಚಿಂತಾಜನಕವಾಗಿದೆ. ಹುಲಿ ಭೀತಿಯಿಂದಾಗಿ ಪೊನ್ನಂಪೇಟೆ ಸುತ್ತಲಿನ ಶ್ರೀಮಂಗಲ, ಮಂಚಳ್ಳಿ, ತೆರಾಲು, ತಾವಳಗೇರಿ, ಕುಮಟೂರು, ಬಾಡಗಕೇರಿ, ಬೆಳ್ಳೂರು, ನಿಟ್ಟೂರು, ಹುದಿಕೇರಿ ಮತ್ತಿತರ ಗ್ರಾಮಗಳ ಕಾಫಿ ಎಸ್ಟೇಟ್‌ಗಳಿಗೆ ಹೋಗಲು ಕಾರ್ಮಿಕರು ಹಿಂದೇಟು ಹಾಕುತ್ತಿದ್ದಾರೆ. ಕಾಳುಮೆಣಸು ಕೊಯ್ಲಿನ ಕೆಲಸ ಬಹುತೇಕ ಸ್ಥಗಿತಗೊಂಡಿದೆ. ರಾತ್ರೋರಾತ್ರಿ ದೊಡ್ಡಿಗಳಿಗೆ ಹುಲಿ ನುಗ್ಗುತ್ತಿರುವುದರಿಂದ ಎಷ್ಟೋ ರೈತರು ಜಾನುವಾರುಗಳನ್ನು ಇಟ್ಟುಕೊಳ್ಳುವುದು ಸುರಕ್ಷಿತವಲ್ಲ ಎಂದು ನಿರ್ಧರಿಸಿ ಮಾರಾಟ ಮಾಡಲು ಮುಂದಾಗಿದ್ದಾರೆ. ಬಾಧಿತ ಗ್ರಾಮಗಳಲ್ಲಿ ಹಲವು ದಿನಗಳಿಂದ ಸಂಜೆಯಾದೊಡನೆ ರಸ್ತೆ ಸಂಚಾರವೇ ಸ್ತಬ್ಧಗೊಳ್ಳುತ್ತಿದೆ. ಹುಲಿಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆಯ 150 ಜನರ ತಂಡ, ಸಾಕಾನೆ ಹಾಗೂ ಶ್ವಾನ ಪಡೆಯನ್ನೂ ಕಟ್ಟಿಕೊಂಡು ಗಸ್ತು ತಿರುಗುತ್ತಿದೆ. ಕಾಡಂಚಿನ ಗ್ರಾಮಗಳಲ್ಲಿ ಬೋನುಗಳನ್ನು ಸಹ ಇಡಲಾಗಿದೆ. ಇಷ್ಟೆಲ್ಲ ಪ್ರಯತ್ನ ನಡೆದರೂ ನರಭಕ್ಷಕ ಇನ್ನೂ ಸೆರೆ ಸಿಕ್ಕಿಲ್ಲ. ಈ ಮಧ್ಯೆ, ಮನುಷ್ಯರ ಜೀವಕ್ಕೆ ಎರವಾದ ಹುಲಿಯನ್ನು ಗುಂಡಿಟ್ಟು ಕೊಲ್ಲಬೇಕೆಂಬ ಒತ್ತಡ ಕೂಡ ಹೆಚ್ಚಾಗಿದೆ. ಆ ಒತ್ತಡದ ಪರಿಣಾಮವೇನೋ ಎನ್ನುವಂತೆ, ‘ಹುಲಿಯನ್ನು ಜೀವಂತವಾಗಿ ಸೆರೆ ಹಿಡಿಯಲು ಸಾಧ್ಯವಾಗದಿದ್ದರೆ ಗುಂಡಿಟ್ಟು ಕೊಲ್ಲಬೇಕು’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಆದೇಶವನ್ನೂ ಹೊರಡಿಸಿದ್ದಾರೆ.

ಮಾನವ–ಪ್ರಾಣಿ ಸಂಘರ್ಷವು ತೀವ್ರ ಸ್ವರೂಪ ಪಡೆಯುತ್ತಿದೆ. ಅದನ್ನು ತಪ್ಪಿಸಲು ದೀರ್ಘಾವಧಿ ಯೋಜನೆಗಳು ಬೇಕು

ಮಾನವ–ಪ್ರಾಣಿ ಸಂಘರ್ಷ ವರ್ಷದಿಂದ ವರ್ಷಕ್ಕೆ ತೀವ್ರ ಸ್ವರೂಪ ಪಡೆಯುತ್ತಲೇ ಹೊರಟಿದೆ. ಈಗ ನರಭಕ್ಷಕನ ಹಾವಳಿಗೆ ತುತ್ತಾಗಿರುವ ಕೊಡಗು ಜಿಲ್ಲೆಯ ದಕ್ಷಿಣದ ಭಾಗ ಕಾಡಾನೆಗಳ ಉಪಟಳವನ್ನೂ ಎದುರಿಸಿದ ಪ್ರದೇಶವಾಗಿದೆ. ವನ್ಯಜೀವಿಗಳು ಕಾಡಿನಿಂದ ನಾಡಿನತ್ತ ಧಾವಿಸಲು ಅವುಗಳ ಆವಾಸಸ್ಥಾನದಲ್ಲಿ ಹೆಚ್ಚಿರುವ ಮಾನವ ಚಟುವಟಿಕೆಗಳೇ ಕಾರಣ ಎಂಬುದು ಪರಿಸರತಜ್ಞರು ಹಲವು ವರ್ಷಗಳಿಂದ ಕೊಡುತ್ತಾ ಬಂದಿರುವ ಎಚ್ಚರಿಕೆ. ಅಂತಹ ಎಚ್ಚರಿಕೆಯನ್ನು ಸಂಪೂರ್ಣವಾಗಿ ಕಡೆಗಣಿಸುತ್ತಾ, ಸೂಕ್ಷ್ಮ ಪರಿಸರದಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೂ ಕಾರಣವಾಗುತ್ತಾ ಬಂದ ಅಧಿಕಾರಸ್ಥರು, ಈಗಿನ ಸ್ಥಿತಿಗೆ ಮಾತ್ರ ವನ್ಯಜೀವಿಗಳತ್ತ ಬೊಟ್ಟು ಮಾಡುತ್ತಿದ್ದಾರೆ. ಕೊಡಗಿನಲ್ಲಿ ಕಾಡಿನ ವಿಸ್ತೀರ್ಣ ಕಡಿಮೆ ಆಗುತ್ತಾ ಬಂದಿರುವುದು, ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರ ತಂಡ ಈ ಹಿಂದೆ ನಡೆಸಿದ ಸಮೀಕ್ಷೆಯಲ್ಲಿ ಎದ್ದುಕಂಡಿದೆ. ಕಾಫಿ ಎಸ್ಟೇಟ್‌ಗಳ ವಿಸ್ತೀರ್ಣ ಬೆಳೆಯುತ್ತಾ ಹೋಗಿರುವ ಮಾಹಿತಿಯೂ ಆ ವರದಿಯಲ್ಲಿದೆ. ನಾಗರಹೊಳೆ ರಾಷ್ಟ್ರೀಯ ರಕ್ಷಿತಾರಣ್ಯದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಆವಾಸಸ್ಥಾನಗಳ ಮೇಲೆ ಬಿದ್ದ ಅಧಿಕ ಒತ್ತಡ ಕೂಡ ಅವುಗಳು ಕಾಡಿನಿಂದ ಹೊರಬೀಳಲು ಕಾರಣ ಎಂಬ ವಾದವೂ ಉಂಟು. ಕಾಡಂಚಿನ ಗ್ರಾಮಗಳಲ್ಲಿ ಈಗ ಶುರುವಾಗಿರುವ ಹುಲಿ ಹಾವಳಿಗೆ ಪ್ರಾಯಶಃ ಮೇಲಿನ ಎಲ್ಲ ಅಂಶಗಳೂ ಕಾರಣಗಳಾಗಿರಬಹುದು. ಜೀವಗಳನ್ನು ಬಲಿ ಪಡೆದ ನರಭಕ್ಷಕನ ಹಾವಳಿ ನಿಲ್ಲಲೇಬೇಕು, ಜನರ ಜೀವ ರಕ್ಷಣೆ ಆಗಬೇಕು ಎಂಬುದರಲ್ಲಿ ಎರಡನೆಯ ಮಾತಿಲ್ಲ. ದುರಂತ ಘಟನೆಗಳು ಒಂದರ ಮೇಲೊಂದು ನಡೆಯುತ್ತಿದ್ದರೂ ಹುಲಿಯ ಚಲನವಲನವನ್ನು ಇನ್ನೂ ಗುರುತಿಸಲು ಸಾಧ್ಯವಾಗದಿರುವುದು ಅರಣ್ಯ ಇಲಾಖೆಯು ಅಳವಡಿಸಿಕೊಂಡ ತಂತ್ರಜ್ಞಾನ ಎಷ್ಟೊಂದು ಕೆಳಮಟ್ಟದಲ್ಲಿದೆ ಎನ್ನುವುದರ ದ್ಯೋತಕ. ಇಲಾಖೆಯು ಎದುರಿಸುತ್ತಿರುವ ಸಿಬ್ಬಂದಿ ಹಾಗೂ ತಾಂತ್ರಿಕ ಸಲಕರಣೆಗಳ ಕೊರತೆಯನ್ನು ಸರ್ಕಾರ ಆದ್ಯತೆಯ ಮೇಲೆ ನೀಗಿಸಬೇಕು. ಮನುಷ್ಯರ ಸುರಕ್ಷತೆಯಷ್ಟೇ ವನ್ಯಜೀವಿಗಳ ಸಂರಕ್ಷಣೆ ಕೂಡ ಮುಖ್ಯ. ಸಂಘರ್ಷದ ಇಂತಹ ಸಂದರ್ಭಗಳು ಎದುರಾಗುವವರೆಗೆ ಕುಂಭಕರ್ಣ ನಿದ್ರೆಗೆ ಜಾರದೆ, ಪರಿಸರದ ಆಗುಹೋಗುಗಳ ಮೇಲೆ ಅರಣ್ಯ ಇಲಾಖೆಯು ನಿರಂತರ ನಿಗಾ ಇಡಬೇಕು. ಎಲ್ಲ ಜೀವಗಳ ಸುರಕ್ಷತೆಯೂ ಮುಖ್ಯವಾದ್ದರಿಂದ ಇಂತಹ ಘಟನೆಗಳು ಮರುಕಳಿಸದಂತೆ ವಹಿಸಬೇಕಾದ ಮುನ್ನೆಚ್ಚರಿಕೆಗಳ ಕುರಿತು ಕಾಡಂಚಿನ ಗ್ರಾಮಗಳಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನೂ ಮಾಡಬೇಕು.

ದಿನದ ಟ್ವೀಟ್

ಹೆಚ್ಚಾಗಲಿ ಇಂಥ ಪ್ರಯತ್ನ

ಪಶ್ಚಿಮ ಬಂಗಾಳ ವಿಧಾನಸಭೆಯ ಒಟ್ಟು 294 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ತೃಣಮೂಲ ಕಾಂಗ್ರೆಸ್ಸಿನಿಂದ 50 ಮಹಿಳೆಯರು, 79 ಮಂದಿ ಪರಿಶಿಷ್ಟ ಜಾತಿಯವರು, 42 ಮುಸ್ಲಿಮರು ಮತ್ತು ಪರಿಶಿಷ್ಟ ಪಂಗಡದ 17 ಜನ ಸ್ಪರ್ಧಿಸುತ್ತಿದ್ದಾರೆ. ಎಲ್ಲರನ್ನೂ ಒಳಗೊಳ್ಳುವ ಈ ಪ್ರಯತ್ನ ನನಗಂತೂ ಇಷ್ಟವಾಯಿತು. ಸೋತರೂ ಪರವಾಗಿಲ್ಲ, ಈ ಬಗೆಯ ಪ್ರಯತ್ನಗಳು ಅಗತ್ಯ.

ಪುರುಷೋತ್ತಮ ಬಿಳಿಮಲೆ, ಲೇಖಕ

25 ವರ್ಷಗಳ ಹಿಂದೆ

ಸೋಮವಾರ, 11-3-1996

● **ಹವಾಲ: ಆರೋಪಪಟ್ಟಿ ಪರಿಶೀಲನೆ- ತೀರ್ಪು ಇಂದು**

ನವದೆಹಲಿ, ಮಾರ್ಚ್ 10 (ಯುಎನ್‌ಐ)– ಹವಾಲ ಹಗರಣದಲ್ಲಿ ಎನ್.ಡಿ.ತಿವಾರಿ, ಜಾಫರ್ ಷರೀಫ್ ಸೇರಿ ಎಂಟು ರಾಜಕಾರಣಿಗಳು ಹಾಗೂ ಐವರು ಅಧಿಕಾರಿಗಳ ವಿರುದ್ಧ ಸಿಬಿಐ ಸಲ್ಲಿಸಿರುವ ಆರೋಪಪಟ್ಟಿಗಳನ್ನು ತನಿಖೆಗೆ ಸ್ವೀಕರಿಸುವ ಕುರಿತು ಹವಾಲ ವಿಶೇಷ ನ್ಯಾಯಾಲಯ ಸೋಮವಾರ ತೀರ್ಪು ನೀಡಲಿದೆ.

ಹವಾಲ ವಿಶೇಷ ನ್ಯಾಯಾಧೀಶ ವಿ.ಬಿ. ಗುಪ್ತಾ ಅವರು ಈ ತಿಂಗಳ 7ರಂದು ತೀರ್ಪನ್ನು ನಾಳೆಗೆ ಕಾಯ್ದಿಟ್ಟಿದ್ದರು. ಎನ್.ಡಿ.ತಿವಾರಿ, ಜಾಫರ್ ಷರೀಫ್, ಆರ್.ಕೆ.ಧವನ್, ಶರದ್ ಯಾದವ್, ಹರ್‌ಮೋಹನ್ ಧವನ್, ನಟವರ್ ಸಿಂಗ್, ಡಿ.ಬಿ.ಥಾಕ್ಣೆ ಮತ್ತು ರಂಜಿತ್ ಸಿಂಗ್ ಅವರ ವಿರುದ್ಧ ಸಿಬಿಐ ಸಲ್ಲಿಸಿರುವ ಆರೋಪ ಪಟ್ಟಿಗಳನ್ನು ಅವಗಾಹನೆಗೆ ತೆಗೆದುಕೊಳ್ಳಬೇಕೇ ಬೇಡವೇ ಎಂಬ ಬಗ್ಗೆ ಅವರು ನಾಳೆ ತಮ್ಮ ನಿರ್ಧಾರವನ್ನು ಪ್ರಕಟಿಸುವರು.

● **ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆ- ಮಿಶ್ರಾ**

ನವದೆಹಲಿ, ಮಾರ್ಚ್ 10 (ಪಿಟಿಐ)– ದುರ್ಬಲ ವರ್ಗದವರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸಹಕಾರಿ ಸಂಘಗಳನ್ನು ಹೆಚ್ಚು ಪ್ರಜಾಸತ್ತಾತ್ಮಕಗೊಳಿಸಲು ಸಂವಿಧಾನಕ್ಕೆ ತಿದ್ದುಪಡಿ ತರಲಾಗುವುದು ಎಂದು ಕೃಷಿ ಹಾಗೂ ಸಹಕಾರಿ ಖಾತೆಗಳನ್ನು ಇತ್ತೀಚೆಗೆ ವಹಿಸಿಕೊಂಡ ಡಾ. ಜಗನ್ನಾಥ ಮಿಶ್ರಾ ಹೇಳಿದ್ದಾರೆ.

ಉದ್ದೇಶಿತ ತಿದ್ದುಪಡಿಯು ಸಹಕಾರಿ ಸಂಸ್ಥೆಗಳಿಗೆ ವೃತ್ತಿಪರ ನಿರ್ವಹಣೆ, ಉತ್ತಮ ಹಣಕಾಸು ಹಾಗೂ ಹೆಚ್ಚಿನ ಸ್ವಾಯತ್ತತೆ ನೀಡಲಿದೆ ಎಂದು ಮಿಶ್ರಾ ತಿಳಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 11-3-1971

● **ಆಡಳಿತ ಕಾಂಗ್ರೆಸ್ ಜಯಭೇರಿ ಇಂದಿರಾ ವಿಜಯ**

ನವದೆಹಲಿ, ಮಾರ್ಚ್ 10– ಲೋಕಸಭೆಗೆ ನಡೆದ ಮಧ್ಯಂತರ ಚುನಾವಣೆಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಪ್ರಥಮ ಫಲಿತಾಂಶವು ಆಡಳಿತ ಕಾಂಗ್ರೆಸ್ಸಿಗೆ ಗೆಲುವಿನ ಸರಮಾಲೆಯನ್ನು ತಂದುಕೊಟ್ಟಿದೆ. ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ರಾಯ್‌ಬರೇಲಿಯ ತಮ್ಮ ಸ್ಥಾನವನ್ನು ಒಂದು ಲಕ್ಷಕ್ಕೂ ಹೆಚ್ಚು ಮತಗಳಿಂದ ಉಳಿಸಿಕೊಂಡಿದ್ದಾರೆ. ಅರ್ಥ ಸಚಿವ ಚವಾಣ್ ಸತಾರಾದಿಂದ ಗೆದ್ದಿದ್ದಾರೆ.

ಉತ್ತರಪ್ರದೇಶ, ದೆಹಲಿ, ಮಹಾರಾಷ್ಟ್ರ, ಆಂಧ್ರ ಮುಂತಾದ ರಾಜ್ಯಗಳಲ್ಲಿ ಪ್ರಕಟವಾದ ಫಲಿತಾಂಶಗಳಲ್ಲಿ ಆಡಳಿತ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಿದೆ. ಸೂರತ್ ಕ್ಷೇತ್ರದಿಂದ ಮೊರಾರ್ಜಿ ದೇಸಾಯಿ ಅವರ ಗೆಲುವು ಸಂಸ್ಥಾ ಕಾಂಗ್ರೆಸ್ಸಿನ ಮುಖ್ಯ ವಿಜಯ. ಜನಸಂಘದ ಅಧ್ಯಕ್ಷ ವಾಜಪೇಯಿ ಗ್ವಾಲಿಯರ್‌ನಿಂದ ಗೆದ್ದಿದ್ದಾರೆ. ಜಯಪುರದಿಂದ ಮಹಾರಾಣಿ ಗಾಯತ್ರಿ ದೇವಿ ಅವರ ವಿಜಯ.

● **ರಾಜ್ಯದ ಎಲ್ಲ ಕ್ಷೇತ್ರಗಳಲ್ಲೂ ಆಡಳಿತ ಕಾಂಗ್ರೆಸ್ ಮುಂದು**

ಬೆಂಗಳೂರು, ಮಾರ್ಚ್ 10– ಇಂದು ಸಂಜೆ ಮತಗಳ ಎಣಿಕೆಯ ಪ್ರಥಮ ಘಟ್ಟ ಮುಗಿದಾಗ ರಾಜ್ಯದ 27 ಲೋಕಸಭಾ ಕ್ಷೇತ್ರಗಳಲ್ಲೂ ಆಡಳಿತ ಕಾಂಗ್ರೆಸ್ ಅಭ್ಯರ್ಥಿಗಳು ಮುಂದಿದ್ದಾರೆ.

ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಹುಕ್ಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಣಿಕೆಯ ವಿವರ ಮಾತ್ರ ತಿಳಿದಿದ್ದು ಸಂಸ್ಥಾ ಕಾಂಗ್ರೆಸ್ಸಿನ ಶ್ರೀ ಕರಾಳೆ ಅವರಿಗಿಂತ ಆಡಳಿತ ಕಾಂಗ್ರೆಸ್ಸಿನ ಶ್ರೀ ಶಂಕರಾನಂದ್ ಅವರು 3,662 ಮತಗಳಿಂದ ಮುಂದಿದ್ದಾರೆ.

ಇಂದು ಪ್ರತೀ ಲೋಕಸಭೆ ಕ್ಷೇತ್ರದಲ್ಲೂ ಎರಡು ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯ ಎಣಿಕೆ ಮಾತ್ರ ಮುಗಿದಿದೆ. ಉಳಿದವನ್ನು ನಾಳೆ ಬೆಳಿಗ್ಗೆ 8 ಗಂಟೆಗೆ ತೆಗೆದುಕೊಳ್ಳಲಾಗುವುದು.

ಕಾದ ಭೂಮಿಗೆ ತಂಪೂಡಿಸಲು ಪೆಟ್ರೋಲಿಗೆ ಎಷ್ಟೆಲ್ಲ ಪರ್ಯಾಯಗಳು ಬರುತ್ತಿವೆ

ಚೀನಾ ಹೊತ್ತಿಸಿದ ಕೂಲ್ ಕಿಡಿ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಆ ‘ಚೀನೀಯರೆಲ್ಲ ಒಟ್ಟಾಗಿ ಒಮ್ಮೆ ಕುಪ್ಪಳಿಸಿದರೆ ಸಾಕು, ಭೂಕಂಪನವಾಗುತ್ತದೆ’ ಎಂಬ ಮಾತು ಪಾಶ್ಚಿಮಾತ್ಯ ದೇಶಗಳಲ್ಲಿ ಆಗಾಗ ಕೇಳಿಬರುತ್ತದೆ. ಯಾಕೊ, ಭಾರತದ ಬಗ್ಗೆ ಯಾರೂ ಹಾಗೆಲ್ಲ ಹೇಳುವುದಿಲ್ಲ. ಜನಸಂಖ್ಯೆಯಲ್ಲಿ ಚೀನೀಯರನ್ನು ಹಿಂದಿಕ್ಕುವ ಸನ್ನಾಹದಲ್ಲಿ ನಾವಿದ್ದೇವೆ. ಆದರೂ ‘ಭಾರತೀಯರೆಲ್ಲ ಒಂದಾಗಿ ಕುಪ್ಪಳಿಸಿದರೆ...’ ಎಂಬ ವಿಹ್ವಲದ ಮಾತು ಯಾರಿಂದಲೂ ಬರುವುದಿಲ್ಲ. ಏಕೆ ಹೇಳಿ? ಚೀನೀಯರ ಹಾಗೆ ಒಂದಾಗಿ ನೆಗೆಯಲು ನಮಗೆ ಬರುವುದಿಲ್ಲವಲ್ಲ!

ಚೀನೀ ಅಧ್ಯಕ್ಷ ಷೀ ಝಿನ್‌ಪಿಂಗ್ ಆರು ತಿಂಗಳ ಹಿಂದೆ ವಿಶ್ವಸಂಸ್ಥೆಯ ಆನ್‌ಲೈನ್ ಸಮಾವೇಶದಲ್ಲಿ ಒಂದು ಮಾತನ್ನು ಹೇಳಿ ಇಡೀ ಪ್ರಪಂಚಕ್ಕೆ ಸಂಚಲನ ಮೂಡಿಸಿದರು: ‘ಕ್ರಿ.ಶ. 2060ರೊಳಗೆ ನಾವು ಝೀರೋ ಕಾರ್ಬನ್ ದೇಶವಾಗಲಿದ್ದೇವೆ’ ಅಂತ. ಅಂದರೆ ಇನ್ನು 40 ವರ್ಷಗಳಲ್ಲಿ ಚೀನಾದ ಎಲ್ಲ ಕಲ್ಲಿದ್ದಲ ಸ್ಥಾವರಗಳೂ ಹೊಗೆಮುಕ್ತ ಆಗಲಿವೆ. ಎಲ್ಲ ಪೆಟ್ರೋಲ್, ಡೀಸೆಲ್ ವಾಹನಗಳೂ ಗುಜರಿಗೆ ಸೇರಲಿವೆ. ಸಿಮೆಂಟ್, ಉಕ್ಕು, ಪ್ಲಾಸ್ಟಿಕ್ ಮುಂತಾದ ಎಲ್ಲ ಕಾರ್ಖಾನೆಗಳೂ ಫಾಸಿಲ್ ಇಂಧನಗಳಿಗೆ ವಿದಾಯ ಹೇಳಲಿವೆ. ಪೃಥ್ವಿಯ ಬಹುದೊಡ್ಡ ಭೂಭಾಗವೊಂದು ಬಿಸಿಪ್ರಳಯಕ್ಕೆ ಶೂನ್ಯ ಕೊಡುಗೆ ನೀಡಲಿದೆ.

ಅವರು ಅಷ್ಟು ಹೇಳಿದ್ದೇ ತಡ, ಎಲ್ಲ ಶಕ್ತ ರಾಷ್ಟ್ರಗಳು, ಎಲ್ಲ ಬಹುರಾಷ್ಟ್ರೀಯ ಸಶಕ್ತ ಕಂಪನಿಗಳು ಮೈಕೈ ಕೊಡವಿ ನಿಲ್ಲುತ್ತಿರುವುದು ಈಗ ಸ್ಪಷ್ಟ ಗೊತ್ತಾಗತೊಡಗಿದೆ. ಬಿಸಿಪ್ರಳಯವನ್ನು ತಡೆಗಟ್ಟಲು ತಾವೆಲ್ಲ ಏನೇನು ಪ್ಲಾನ್ ಹಾಕಿಕೊಳ್ಳುತ್ತಿದ್ದೇವೆ ಎಂಬುದನ್ನು ಅವು ದೊಡ್ಡದಾಗಿ ಹೇಳತೊಡಗಿವೆ. ಅಲ್ಲಿ ಇಲ್ಲಿ ಏಕೆ, ನಮ್ಮ ಬೆಂಗಳೂರಲ್ಲೂ ಸದ್ದಿಲ್ಲದೆ ಓಡಬಲ್ಲ ವಿದ್ಯುತ್ ವಾಹನಗಳು ಭಾರೀ ಸುದ್ದಿ ಮಾಡುತ್ತಿವೆ. ಬ್ಯಾಟರಿಚಾಲಿತ ‘ಟೆಸ್ಲಾ’ ಕಾರುಗಳ ದೊರೆ ಎನ್ನಿಸಿದ ಈಲಾನ್ ಮಸ್ಕ್ ಬೆಂಗಳೂರಿನಲ್ಲಿ ತನ್ನ ಕಂಪನಿಯ ಪುಟ್ಟ ಶಾಖಾ ಕಚೇರಿಯನ್ನು ತೆರೆದಿದ್ದೇ ತಡ, ಇನ್ನೇನು ಆತನ ಕಾರ್ ಕಾರ್ಖಾನೆ ಇಲ್ಲಿ ಆರಂಭವಾಗೇಬಿಟ್ಟಿತು ಎಂಬಂತೆ ಸಂಭ್ರಮದ ಸುದ್ದಿಗಳು ಹೊರಬಿದ್ದಿವೆ. ಪೆಟ್ರೋಲಿಯಂ ಮತ್ತು ಕಲ್ಲಿದ್ದಲನ್ನೇ ಚಿನ್ನದ ನಿಕ್ಷೇಪವೆಂಬಂತೆ ಪರಿಗಣಿಸುತ್ತಿದ್ದ ಭಾರತೀಯ ಕಂಪನಿಗಳು ಸಹ ಬದಲೀ ಶಕ್ತಿಯ ಉತ್ಪಾದನೆಗೆ ತಾವೂ ಸಿದ್ಧ ಎಂಬುದನ್ನು ವಾರ್ತಾಗೋಷ್ಠಿಯ ಮೂಲಕ, ಜಾಹೀರಾತುಗಳ ಮೂಲಕ ಹೇಳತೊಡಗಿವೆ. ಅವರಿವರು ಹಾಗಿರಲಿ, ಜಗತ್ತಿನ ಅತಿ ಪ್ರಸಿದ್ಧ ಕಲ್ಲಿದ್ದಲ ಗಣಿಗಳನ್ನೆಲ್ಲ ಬಾಚಿಕೊಳ್ಳುವ ಹವಣಿಕೆಯಲ್ಲಿರುವ ಅದಾನಿ ಕಂಪನಿ ಕೂಡ ರಾಜಸ್ತಾನದ ತನ್ನ ಗಾಳಿ ವಿದ್ಯುತ್ ಸ್ಥಾವರ ತನ್ನ ನಿಗದಿತ ಸಮಯಕ್ಕಿಂತ ಐದು ತಿಂಗಳ ಮೊದಲೇ 100 ಮೆಗಾವಾಟ್ ತಲುಪಿದೆ ಎಂಬ ಸುದ್ದಿಯನ್ನೂ ಹೊಮ್ಮಿಸಿದೆ. ವಿಶ್ವವ್ಯಾಪಿ ತೈಲ ಕಂಪನಿಗಳಾದ ಶೆಲ್, ಆರ್ಮಾಕೊ, ಬಿಪಿ, ಎಕ್ಸನ್ ಮೊಬಿಲ್ ಎಲ್ಲವೂ ಕಡಲಂಚಿಗೆ ಗಾಳಿಕಂಬಗಳನ್ನು ನೆಡಲು, ಬಿಸಿಲನ್ನು ಬಾಚಿಕೊಳ್ಳಲು ಆರಂಭಿಸಿವೆ.

ಹೀಗೆ ಎಲ್ಲೆಲ್ಲೂ ಹೊಸ ಹೊಸ ತಂತ್ರಜ್ಞಾನದ ಘೋಷಣೆ ಆಗಲು ಮುಖ್ಯ ಕಾರಣವೇನು ಗೊತ್ತೆ? ನಿಶ್ಚಲ ಕೊಳಕ್ಕೆ ಆನೆ ಧುಮುಕಿದಂತೆ ಚೀನಾ ಹೀಗೆ ಹಠಾತ್ತಾಗಿ ಝೀರೋ ಕಾರ್ಬನ್ ಕಡೆ ಹೊರಳುತ್ತೇನೆಂದು ಜಗತ್ತಿಗೆ ಘೋಷಿಸಿದ್ದು. ಇಷ್ಟು ವರ್ಷ ಯಾವ ಟೀಕೆಗೂ ಕ್ಯಾರೇ ಎನ್ನದೆ, ದಿನಕ್ಕೊಂದರಂತೆ ಹೊಸ ಹೊಸ ಕಲ್ಲಿದ್ದಲ ಸ್ಥಾವರಗಳನ್ನು ಸ್ಥಾಪಿಸುತ್ತ, ಜಗತ್ತಿನ ಅತಿ ದೊಡ್ಡ ಎರಡು ತೈಲ ಕಂಪನಿಗಳನ್ನು ಮುಷ್ಟಿಯಲ್ಲಿಟ್ಟುಕೊಂಡು ವಾಯುಮಂಡಲಕ್ಕೆ ಕೊಳಕು ತುಂಬುವಲ್ಲಿ ಅಮೆರಿಕವನ್ನೂ ಮೀರಿಸುತ್ತಿದ್ದ ದೇಶ ಅದಾಗಿತ್ತು. ಈಗ ಹೀಗೆ ಪಲ್ಟಿಹೊಡೆದು ನಿಂತಿದ್ದು ಹೇಗೆ, ಏಕೆ?

ಉತ್ತರ ಇಲ್ಲಿದೆ: ಬದಲೀ ಶಕ್ತಿಮೂಲಗಳಿಗೆ ಬೇಕಾದ ತಂತ್ರಜ್ಞಾನವನ್ನು ಅದು ಮೆಲ್ಲಗೆ ತನ್ನ ಹಿತ್ತಿಲಲ್ಲಿ ರೂಪಿಸಿಕೊಳ್ಳತೊಡಗಿತ್ತು. ಬಿಸಿಲು, ಗಾಳಿಯನ್ನು ವಿದ್ಯುತ್ತನ್ನಾಗಿ ಮಾರ್ಪಡಿಸಬಲ್ಲ ತಂತ್ರಜ್ಞಾನದಲ್ಲಿ ಅದು ಈಗ ಜಗತ್ತಿಗೇ ನಂಬರ್ ಒನ್. ಉಕ್ಕು, ಸಿಮೆಂಟ್ ಕಾರ್ಖಾನೆಗಳಿಂದ ಹೊಮ್ಮುವ ಕಾರ್ಬನ್ನನ್ನು ಗಾಳಿಗೆ ತೂರುವ ಬದಲು ಅದನ್ನೇ ಘನ ಸುಣ್ಣವನ್ನಾಗಿ ಪರಿವರ್ತಿಸಿ ಭೂಗತಗೊಳಿಸುವಲ್ಲಿ ಚೀನಾ ಈಗ ಪರಿಣತ. ಭಾರೀ ಲೀಥಿಯಂ ಬ್ಯಾಟರಿಯ ಬದಲು ಹಗುರ ಜಲಜನಕದ ಅನಿಲದಿಂದ ರೈಲು- ವಿಮಾನಗಳನ್ನು ಓಡಿಸುವ ತಂತ್ರಜ್ಞಾನವೂ ಅದಕ್ಕೀಗ ಕರತಲಾಮಲಕ. ತಾನು ರೂಪಿಸಿದ ಹೊಸ ತಂತ್ರಜ್ಞಾನವನ್ನು ಅದು ಈಗ ವಿದೇಶಗಳಿಗೆ ಮಾರಬೇಕಿದೆ. ಚೀನಾದ ಈ ಹೆಚ್ಚುಗಾರಿಕೆಯನ್ನು ಒಪ್ಪಿಕೊಳ್ಳಲು ಪಶ್ಚಿಮದ ಉದ್ಯಮಗಳು ಒಪ್ಪುತ್ತಿಲ್ಲ. ತಮ್ಮಲ್ಲೂ ತಂತ್ರಜ್ಞಾನ ವಿಕಾಸವಾಗುತ್ತಿದೆ ಎಂದು ಅವೂ ಹೇಳತೊಡಗಿವೆ.

ಈ ನಡುವೆ ಬಿಲ್ ಗೇಟ್ಸ್ ಇದೀಗಷ್ಟೇ ಬರೆದು ಪ್ರಕಟಿಸಿದ ಗ್ರಂಥ ‘ಹೌ ಟು ಅವೊಯ್ಡ್ ಎ ಕ್ಲೈಮೇಟ್ ಡಿಸಾಸ್ಟರ್’ (ಹವಾಗುಣ ದುರಂತವನ್ನು ತಪ್ಪಿಸುವುದು ಹೇಗೆ?) ಎಂಬ ಪುಸ್ತಕ ಎಲ್ಲ ದೇಶಗಳಲ್ಲಿ ಸುದ್ದಿ ಮಾಡಿದೆ. ನಾವು ಪ್ರತಿವರ್ಷ ಕಕ್ಕುತ್ತಿರುವ 51 ಶತಕೋಟಿ ಟನ್ ಕಾರ್ಬನ್ನನ್ನು ಶೂನ್ಯಕ್ಕೆ ತರುವುದು ಹೇಗೆ ಎಂಬುದನ್ನು ವಿವರಿಸುವ ಈ ಗ್ರಂಥದ ಬಗ್ಗೆ ಎನ್‌ಡಿಟಿವಿಯ ಪ್ರಣೊಯ್ ರಾಯ್ ಮತ್ತು ಬಿಲ್ ಗೇಟ್ಸ್ ನಡುವೆ ಮೊನ್ನೆ ಸಂವಾದ ಕೂಡ ನಡೆಯಿತು. ಆಫ್ರಿಕಾದ ಸೆನೆಗಾಲ್ ದೇಶದ ರಾಜಧಾನಿ ಡಕಾರ್ ನಗರದ ಚರಂಡಿ ರೊಚ್ಚೆಯನ್ನು ಒಂದು ಯಂತ್ರದ ಮೂಲಕ ಹಾಯಿಸಿ ಅದರ ಇನ್ನೊಂದು ತುದಿಯಲ್ಲಿ ಬಸಿಯುವ ಶುದ್ಧ ನೀರನ್ನು ಬಿಲ್ ಗೇಟ್ಸ್ ಗ್ಲಾಸಿನಲ್ಲಿ ಎತ್ತಿ ಕುಡಿಯುವುದನ್ನೂ ತೋರಿಸಲಾಯಿತು. ಗೇಟ್ಸ್ ಕುಟುಂಬದ ದತ್ತಿನಿಧಿಯಿಂದಲೇ ಸೃಷ್ಟಿಯಾದ ಆ ಯಂತ್ರ ತನಗೆ ಬೇಕಿದ್ದ ವಿದ್ಯುತ್ತನ್ನು ರೊಚ್ಚೆಯಲ್ಲೇ ಉತ್ಪಾದಿಸುತ್ತದೆ; ಆಚೆ ಮಾರುವಷ್ಟು ಹೆಚ್ಚುವರಿ ವಿದ್ಯುತ್ತನ್ನೂ ಅದು ಹೊಮ್ಮಿಸುತ್ತದೆ.

ಅಂತೂ ಒಂದು ಸರ್ವವ್ಯಾಪೀ ತಂತ್ರಕ್ರಾಂತಿಯ ಹೊಸ್ತಿಲಲ್ಲಿ ನಾವಿದ್ದೇವೆ. ಇನ್ನು ಕೆಲವೇ ವರ್ಷ: ನಿಮಗಿಷ್ಟು ಹೊಲವಿದ್ದರೆ ಆ ಹೊಲದ ಬಿಸಿಲೇ ನಿಮಗೆ ಬಹುಮುಖ್ಯ ಆದಾಯ ತರಬಹುದು. ಹೊಲದ ಬದುವಿನ ಗಿಡಮರಗಳಿಂದಲೇ ನಿಮಗೆ ಬೇಕಾದ ಬಯೊ ಡೀಸೆಲ್ ಸಿಗಬಹುದು. ನಿಮ್ಮ ಕೃಷಿತ್ಯಾಜ್ಯ, ಗೋಅನಿಲದಿಂದಲೂ ವಿದ್ಯುತ್ ಉತ್ಪಾದನೆ ಮಾಡಿ, ಅದನ್ನು ಪುಟ್ಟ ಯಂತ್ರದ ಮೂಲಕ ಹೈಡ್ರೊಜನ್ ಇಂಧನವನ್ನಾಗಿ ಪರಿವರ್ತಿಸಿ, ಅದನ್ನು ಟೂಥ್‌ಪೇಸ್ಟ್‌ನ ಹಾಗೆ ದೊಡ್ಡ ಡಬ್ಬಿಗಳಲ್ಲಿ ತುಂಬಿ ನಗರಕ್ಕೆ ಮಾರಬಹುದು. ಪೆಟ್ರೋಲ್ ಬೆಲೆ ಏರಿಕೆಯ ಬಿಸಿಮಾತುಗಳೆಲ್ಲ ಗತಕಾಲದ ಕತೆಗಳಾಗಬಹುದು.

ತುಸು ಬೇಸರದ ಸಂಗತಿ ಏನೆಂದರೆ, ಇವೆಲ್ಲ ಕ್ರಾಂತಿಕಾರಿ ತಂತ್ರಜ್ಞಾನಗಳೂ ಬೇರೆ ದೇಶಗಳಲ್ಲಿ, ಅದೂ ಖಾಸಗಿ ಕಂಪನಿಗಳ ಮುಷ್ಟಿಯಲ್ಲಿ ವಿಕಾಸವಾಗುತ್ತಿವೆ. ನಾವದಕ್ಕೆ ದುಬಾರಿ ಬೆಲೆ ತೆರಬೇಕು. ನಮ್ಮಲ್ಲೇ ಅಂಥ ತಾಂತ್ರಿಕ ಸಂಶೋಧನೆಗಳಿಗೆ ಆದ್ಯತೆ ಕೊಟ್ಟಿದ್ದಿದ್ದರೆ ಭಾರತವೇ ಜಗತ್ತಿಗೆ ಬೆಳಕು ತೋರಲು ಸಾಧ್ಯವಿತ್ತು. ಆದರೆ ಹವಾಗುಣ ಸಂಕಷ್ಟ ಪರಿಹಾರಕ್ಕೆ ನಮ್ಮಲ್ಲಿ ಆದ್ಯತೆ ತೀರ ಕಡಿಮೆ. ಕೇಂದ್ರದ ಈಚಿನ ಮುಂಗಡಪತ್ರದಲ್ಲಿ ಕಾಟಾಚಾರಕ್ಕೆ ಎಂಬಂತೆ 80 ಕೋಟಿ ಇಟ್ಟರೆ (ಕಳೆದ ವರ್ಷ 100 ಕೋಟಿ ಇಟ್ಟಿದ್ದನ್ನು ನಂತರ 40 ಕೋಟಿಗೆ ಇಳಿಸಲಾಗಿತ್ತು) ರಾಜ್ಯ ಬಜೆಟ್‌ನಲ್ಲಿ ಇದರ ಪ್ರಸ್ತಾಪವೇ ಇಲ್ಲ. ಹಾಗೆ ನೋಡಿದರೆ, ಯಾವ ಹೈಟೆಕ್ ತಂತ್ರಜ್ಞಾನವೂ ಇಲ್ಲದೆ, ಬಿಗ್ ಬಜೆಟ್ ಬೆಂಬಲವೂ ಇಲ್ಲದೆ ನಾವು ಹವಾಗುಣ ಸಮತೋಲ ಸಾಧಿಸಲು ತೀರ ಸುಲಭ ಉಪಾಯವೊಂದಿತ್ತು: ಅದು ಗಿಡಮರ ಬೆಳೆಸುವುದು! ಚೀನೀಯರು ಅಲ್ಲೂ ನಮಗೆ ಮಾದರಿಯಾಗಿ ನಿಲ್ಲುತ್ತಾರೆ.

ಇದ್ದುದರಲ್ಲಿ ಸಂತಸದ ಸಂಗತಿ ಏನೆಂದರೆ, ನಮ್ಮ ಮುಂಗಡಪತ್ರದಲ್ಲಿ ಜಾತಿವಾರು ನಿಗಮಗಳಿಗೆ ಘೋಷಿಸಲಾದ ದೊಡ್ಡ ಮೊತ್ತದ ಅನುದಾನಗಳ ಮಧ್ಯೆ ಎರಡು ಚಿಕ್ಕ ಸ್ಮೃತಿವನಗಳಿಗೂ ನಾಲ್ಕು ಕೋಟಿ ಹಂಚಿಕೆಯಾಗಿದೆ. ಪರವಾಗಿಲ್ಲ, ಆ ವನಗಳನ್ನೇ ಮಾದರಿಯಾಗಿಟ್ಟುಕೊಂಡು ಎಲ್ಲೆಡೆ ಗಿಡಮರಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಬಹುದಾಗಿದೆ- ಅದು ಜಾತಿವಾರು ಆದರೂ ಪರವಾಗಿಲ್ಲ.

ಚುರುಮುರಿ

ವ್ಯಾಕ್ಸಿನ್ ಡೋಸ್

● ಎಸ್.ಬಿ.ರಂಗನಾಥ್

‘ಬೆಂಗ್ಳೂರಲ್ಲಿ ಮತ್ತೆ ಕೆಲವೆಡೆ ಸೀಲ್‌ಡೌನ್!’ ಎಂದ ಸ್ನೇಹಿತ ಸೀನಪ್ಪ.

‘ಎಲ್ಲಾ ನಿನ್ನಂಥ ಬೇಜವಾಬ್ದಾರಿ ಜನ್ರಿಂದ. ಸೀನಿಯರ್ ಸಿಟಿಜನ್ಸ್‌ಗೆ ಕೊರೊನಾ ಲಸಿಕೆ ಶುರು ಮಾಡಿ ಒಂದು ವಾರವಾದ್ರೂ ನೀನು ತಗೊಂಡಿದೀಯಾ? ಎಷ್ಟು ಕರೆದ್ರೂ ಬರ್ಲಿಲ್ಲ’.

‘ಅದಕ್ಕೆ ಕಾರಣ ಎರಡು’.

‘ಯಾವಪ್ಪಾ ಆ ಘನಂದಾರಿ ಕಾರಣಗಳು?’

‘ಒಂದು, ನಂಗೆ ಯಯಾತಿಯಂತೆ ದೀರ್ಘಾಯುಷಿಯಾಗೋ ಬಯಕೆಯಿಲ್ಲ. ಎಷ್ಟೋ ಜನ ಹಿರಿಯ ರಾಜಕಾರಣಿಗಳು ನಮ್ಗೆ ಲಸಿಕೆ ಬೇಡಾಂದಿಲ್ವೇ? ನಮ್ಮ ಖರ್ಗೆ ಸಾಹೇಬ್ರೇ ಹಾಗೆ ಹೇಳಿದಾರೆ!

‘ಹಾಗೇನಿಲ್ಲ, ಅದ್ರ ಪ್ರಾಮುಖ್ಯತೆ ಅರಿತ ಕರುನಾಡ ಕೃಷಿ ಸಚಿವರು, ಕಾನೂನು ಗೊತ್ತಿರ್ಲಿಲ್ಲಾಂತ, ಡಾಕ್ಟರನ್ನ ಮನೆಗೇ ಕರೆಸ್ಕೊಂಡು ತಗೊಳ್ಲಿಲ್ವೇ? ಉದಾಸೀನ ಮಾಡಿದ್ದಕ್ಕೆ ಎಷ್ಟೋ ಸೆಲೆಬ್ರಿಟಿಗಳು ಬೆಲೆ ತೆರಬೇಕಾಯಿತಲ್ಲ... ನಿನ್ನ ಎರಡನೇ ಕಾರಣ ಏನಯ್ಯಾ?’

‘ಏನಿಲ್ಲ ಬಿಡಪ್ಪಾ’.

‘ಹೇಳೋ, ಪರ್ವಾಯಿಲ್ಲ’.

‘ಫಸ್ಟ್ ಡೋಸ್ ತಗೊಂಡ್ಮೇಲೆ ಸೆಕೆಂಡ್ ಡೋಸ್‌ವರೆಗೆ ಒಂದ್ ತಿಂಗ್ಳು ಎಣ್ಣೆ ಮುಟ್ಟೋಹಾಗಿಲ್ವಂತೆ?!’

‘ಏ ಗುಲ್ದೂ, ಅದೆಲ್ಲಾ ಸುಳ್ಳು. ಯಾರೋ ಹಾಗೆ ಹೇಳಿದ್ದು?’

‘ಬ್ರಾಂಡಿಶಾಪ್ ಬಾಬಣ್ಣ’.

‘ರೋಗಿ ಬಯಸಿದ್ದೂ ಅದೇ ಡಾಕ್ಟರ್ ಹೇಳಿದ್ದೂ ಅದೇ ಅನ್ನೋ ಹಾಗಿದೆ ನಿಂಗೆ. ಹೋಗೋಣ ಬಾ, ಕೇಳ್ತೀನಿ ಅವ್ನಿಗೆ ಯಾವ ಸೈಂಟಿಸ್ಟ್ ಹಾಗೆ ಹೇಳಿದಾರೇಂತ. ಅವ್ನು ಯಾಕೆ ಹಾಗೆ ಹೇಳಿದಾನೆ ಅನ್ನೋ ಅರಿವಿಲ್ದ ಅವಿವೇಕಿ ನೀನು’.

‘ಬೇಡ ಬಿಡಪ್ಪ, ತಗೊಳ್ತೀನಿ... ಲಸಿಕೆ ಹಾಕೋಕೆ ಏನೋ ಡಾಕ್ಯುಮೆಂಟ್ಸ್ ಕೇಳ್ತಾರಂತಲ್ಲ?’

‘ಆಧಾರ್ ಕಾರ್ಡ್, ವೋಟರ್ ಐಡಿ, ಪ್ಯಾನ್ ಕಾರ್ಡ್- ಯಾವ್ದಾದ್ರೂ ಒಂದು ಸಾಕು, ಹೋಗಿ ತಗೊಂಬಾ’.

‘ಆಗ್ಲಯ್ಯಾ, ತರ್ತೀನಿ ಇಲ್ಲೇ ಇರು’.

ಭಾಳಾ ಹೊತ್ತಿಂದ ನಾನು ಇಲ್ಲೇ ಕಾಯ್ತಿದ್ದೀನಿ. ಸೀನಪ್ಪನಿಗೆ ಅವುಗಳಲ್ಲಿ ಒಂದೂ ಇನ್ನೂ ಸಿಕ್ಕಂತೆ ಕಾಣುತ್ತಿಲ್ಲ!

ಸಂಗತ

ದೀರ್ಘರಜೆ ಮತ್ತು ಕಲಿಕೆಯ ನಷ್ಟ

ಮಕ್ಕಳು ದೀರ್ಘಕಾಲ ಶಾಲೆಯಿಂದ ಹೊರಗಿದ್ದುದರಿಂದ ಅವರಲ್ಲಿ ಕಲಿಕೆಯ ನಷ್ಟ ಉಂಟಾಗಿದೆ ಎನ್ನಲಾಗುತ್ತಿದೆ. ಆದರೆ ನಮ್ಮ ಸವಾಲಿರುವುದು ಈ ನಷ್ಟವನ್ನು ಲೆಕ್ಕ ಹಾಕುವುದರಲ್ಲಲ್ಲ

● ಉದಯ ಗಾಂವಕಾರ

2020ರ ಮಾರ್ಚ್ ತಿಂಗಳಲ್ಲಿ ಮುಚ್ಚಿಕೊಂಡ ಶಾಲೆಗಳು ಮತ್ತೆ ತೆರೆದದ್ದು ಈ ವರ್ಷದ ಜನವರಿ- ಫೆಬ್ರುವರಿಯಲ್ಲಿ. ಕಿರಿಯ ಪ್ರಾಥಮಿಕ ಶಾಲೆಗಳು ಈಗಲೂ ತೆರೆದಿಲ್ಲ. ಮನೆಯಲ್ಲೇ ಇದ್ದ ಮಕ್ಕಳನ್ನು ತಲುಪಲು ಪ್ರಯತ್ನಿಸಿದ ವಿದ್ಯಾಗಮ ಕಾರ್ಯಕ್ರಮಕ್ಕೆ ಆರಂಭದಲ್ಲೇ ಕಂಟಕ ಎದುರಾಯಿತು. ಶಿಕ್ಷಣ ಇಲಾಖೆಯು ದೂರದರ್ಶನದ ಮೂಲಕ ಸಂವೇಗ ಕಾರ್ಯಕ್ರಮವನ್ನು ಆರಂಭಿಸುವ ಮಹತ್ತರ ಹೆಜ್ಜೆಯನ್ನಿಟ್ಟಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತಾದರೂ ಈ ಕಾರ್ಯಕ್ರಮ ಎಲ್ಲ ‘ಮನೆ’ಗಳನ್ನು ತಲುಪಲಿಲ್ಲ.

ಕೋವಿಡ್-19 ಉಂಟು ಮಾಡಿದ ಆರ್ಥಿಕ ಹೊಡೆತವು ಅನೇಕ ಮಕ್ಕಳನ್ನು ಕೆಲಸಕ್ಕೆ ತಳ್ಳಿದ್ದು ಅರ್ಥವಾಗದಿರುವಂಥದ್ದಲ್ಲ. ಸಾಮಾಜಿಕ ಶ್ರೇಣಿಯ ಕೆಳಕ್ಕಿರುವವರ ಮಕ್ಕಳು, ಬಡ ಕುಟುಂಬದ ಮಕ್ಕಳು, ನಾಗರಿಕ ಸೌಲಭ್ಯಗಳಿಂದ ದೂರವೇ ಉಳಿದ ತೀರಾ ಹಿಂದುಳಿದ ಹಳ್ಳಿಗಳಲ್ಲಿ ವಾಸಿಸುವ ಮಕ್ಕಳು ‘ದೂರ ಕಲಿಕೆ’ಯ ಎಲ್ಲ ಪ್ರಯತ್ನಗಳಿಂದಲೂ ದೂರವೇ ಉಳಿಯುವಂತಾಯಿತು. ನಗರದಲ್ಲಿನ ಅನುಕೂಲವುಳ್ಳ ವಿದ್ಯಾರ್ಥಿಗಳಲ್ಲೂ ವಿಡಿಯೊ ಪಾಠಗಳು ಕಲಿಕೆಯನ್ನುಂಟು ಮಾಡಲು ವಿಫಲವಾದವು. ಆದ್ದರಿಂದ, ಈ ಎಂಟು ತಿಂಗಳ ದೀರ್ಘ ರಜೆ ಅನುಭವಿಸಿದ್ದರಿಂದ ಮಕ್ಕಳು ಈ ಹಿಂದೆ ಕಲಿತಿರುವುದರಲ್ಲೂ ಈ ವರ್ಷ ಕಲಿಯಬೇಕಾಗಿರುವುದರಲ್ಲೂ ಬಹಳಷ್ಟು ನಷ್ಟ ಸಂಭವಿಸಿದೆ ಎನ್ನುವುದು ಒಂದು ವಾದ.

ಈ ನಷ್ಟವನ್ನು ಬೇರೆ ಬೇರೆ ‘ಪ್ರಮಾಣ’ಗಳಲ್ಲಿ ನಿರೂಪಿಸಲಾಗುತ್ತಿದೆ. ಕಲಿಕೆಯ ನಷ್ಟ ಪರಿಕಲ್ಪನೆಯು ಮುಂದಿನ ವರ್ಷದ ಶೈಕ್ಷಣಿಕ ನೀತಿ ನಿರೂಪಣೆಯನ್ನು ಪ್ರಭಾವಿಸುವ ಸಾಧ್ಯತೆಯಿದೆ. ಕೋವಿಡ್‌ಪೂರ್ವ ಕಾಲದಲ್ಲೂ ಆಯಾ ತರಗತಿಯಲ್ಲಿ ಗಳಿಸಬೇಕಿದ್ದ ಸಾಮರ್ಥ್ಯಗಳನ್ನು ಬಹುದೊಡ್ಡ ಸಂಖ್ಯೆಯ ಮಕ್ಕಳು ಗಳಿಸಿಲ್ಲ ಎಂಬ ಅಧ್ಯಯನ ವರದಿಗಳನ್ನು ಇಲ್ಲಿ ಸ್ಮರಿಸಬಹುದು. ಮೂರನೇ ತರಗತಿಯ ಶೇ 50.8ರಷ್ಟು ವಿದ್ಯಾರ್ಥಿಗಳು ಒಂದನೇ ತರಗತಿಯ ಪಠ್ಯವನ್ನೂ ಓದಲಾರರು ಎಂದು ಪ್ರಥಮ್ ಸಂಸ್ಥೆಯು ನೀಡಿರುವ 2019ರ ಏಸರ್ (ASER) ವರದಿಯು ಹೇಳುತ್ತದೆ.

ಕಲಿಕೆಯೆನ್ನುವುದು ಪಾತ್ರೆಯಲ್ಲಿ ಪದಾರ್ಥವನ್ನು ತುಂಬಿಸಿದಂತೆ ಎಂದು ಭಾವಿಸುವ ಸಾಂಪ್ರದಾಯಿಕ ದೃಷ್ಟಿಕೋನವೇ ‘ಕಲಿಕಾ ನಷ್ಟ’ ಎಂಬ ಪರಿಕಲ್ಪನೆಯ ಮೂಲ. ಬೇಸಿಗೆ ರಜೆಯ ನಂತರ ಶಾಲೆಗೆ ಮರಳುವ ಮಕ್ಕಳು ಕಳೆದ ತರಗತಿಯಲ್ಲಿ ಪಡೆದ ಕೆಲವು ಮಾಹಿತಿಗಳನ್ನು ಮರೆತಿರುತ್ತಾರೆ. ಫಾರ್ಮುಲಾಗಳು, ನಿಯಮಗಳು, ಕವಿತೆ, ಗದ್ಯಭಾಗಗಳು ಮತ್ತು ಅಂಕಿಗಳು ಭಾಗಶಃ ಅಥವಾ ಪೂರ್ತಿಯಾಗಿ ಮರೆತು ಹೋಗಿರುತ್ತವೆ. ಇದು ಅತ್ಯಂತ ಸ್ವಾಭಾವಿಕವಾದ ಪ್ರಕ್ರಿಯೆ. ಮಗ್ಗಿಯನ್ನು ಮರೆತ ಮಗು ಮಗ್ಗಿ ಹೇಗೆ ಉಂಟಾಗುತ್ತದೆ ಎಂಬ, ತಾನೇ ರಚಿಸಿಕೊಂಡ ಜ್ಞಾನವನ್ನು ಸಂಪೂರ್ಣವಾಗಿ ಮರೆತಿರುವುದಿಲ್ಲ. ಮುಂದಿನ ವರ್ಷದ ಆರಂಭದಲ್ಲೇ ಜ್ಞಾನವನ್ನು ಮರುರಚಿಸಿಕೊಳ್ಳುವ ಅವಕಾಶ ದೊರೆತಲ್ಲಿ ಮಗು ಮತ್ತೆ ಎಲ್ಲವನ್ನೂ ಹೊಸದಾಗಿಸಿಕೊಳ್ಳುತ್ತದೆ.

ವರ್ಷಗಳ ನಂತರ ಬೈಕ್ ಸವಾರಿ ಮಾಡಬೇಕಾದಾಗ ಗೇರ್ ದಂಡೆಯನ್ನು ಕೆಳಕ್ಕೆ ತಳ್ಳಬೇಕೋ ಮೇಲಕ್ಕೆ ಎತ್ತಬೇಕೋ ಎಂಬ ಗೊಂದಲ ಉಂಟಾಗುವ ಹಾಗೆ, ಪುಟ್ಟ ಪುಟ್ಟ ಸಂಗತಿಗಳಿಗೆ ಮರುಪುಷ್ಟಿಯ ಅವಶ್ಯಕತೆ ಇದ್ದೇ ಇರುತ್ತದೆ. ಇದು ಕಲಿಕೆಯ ಭಾಗವೇ ಆಗಿದೆ. ಆದರೆ, ಈ ಮರೆವು ಬೈಕ್ ಸವಾರಿಯ ಮೂಲ ಕೌಶಲಗಳಲ್ಲಾದ ನಷ್ಟವೇನಲ್ಲ.

ಕಲಿಕೆಯು ನಿರಂತರ ಕ್ರಿಯೆಯಾಗಿದ್ದು, ಅದು ತರಗತಿಯ ಹೊರಗೂ ನಡೆಯುತ್ತದೆ. ಶಿಕ್ಷಣ ಶಾಸ್ತ್ರಜ್ಞ ವೈಗೊಸ್ಕಿಯವರ ಸಾಮಾಜಿಕ ರಚನಾವಾದವು ಕಲಿಕೆಯನ್ನು ಸಾಮಾಜಿಕ ಪ್ರಕ್ರಿಯೆ ಎಂದು ಗ್ರಹಿಸುತ್ತದೆ. ಶಾಲೆಗೆ ಬರುವ ಮೊದಲೇ ಮಕ್ಕಳು ಮಾತನಾಡುವುದನ್ನು ಕಲಿತಿರುತ್ತಾರೆ. ಬಣ್ಣಗಳನ್ನು ಗುರುತಿಸುತ್ತಾರೆ, ಸಂಬಂಧಗಳನ್ನು ಅರಿತಿರುತ್ತಾರೆ. ಹೀಗೆ ಶಾಲೆಗಳಲ್ಲಿ ಅನೇಕ ವರ್ಷಗಳೇ ಕಲಿಯಬೇಕಾಗಿದ್ದ ಸಾಮರ್ಥ್ಯಗಳು ಸಾಮಾಜಿಕ ಒಡನಾಟದ ಮಾತ್ರದಿಂದಲೇ ಸಂಭವಿಸಿರುತ್ತವೆ. ತರಗತಿ ಕೋಣೆಯು ಹೊಸತನ್ನು ಕಲಿಯುವ ಕೌಶಲವನ್ನಷ್ಟೇ ಕಲಿಸಬೇಕಾಗಿರುತ್ತದೆ. ಆಟಗಳು, ಸೋಲು-ಗೆಲುವು ಪ್ರಯತ್ನಗಳು, ವಿಭಿನ್ನ ಮತ್ತು ವಿನೂತನ ಇಂದ್ರಿಯಾನುಭವಗಳು ಪುಟ್ಟ ಮಕ್ಕಳಲ್ಲಿ ಜ್ಞಾನ ರಚನೆಗೆ ನೆರವಾಗುತ್ತವೆ. ಓದು, ಬರಹ, ಅಂಕಗಣಿತದಂತಹ ಕೌಶಲಗಳ ಮೂಲಕ ಮೇಲಿನ ತರಗತಿಗಳ ಮಕ್ಕಳು ಅಮೂರ್ತ ಸಂಗತಿಗಳನ್ನು ಗ್ರಹಿಸಿ, ಹೊಸದನ್ನು ಕಲಿಯುತ್ತಾರೆ.

ಕೋವಿಡ್ ನಂತರದ ತರಗತಿಗಳಲ್ಲಿ, ಇಂಟರ್‌ನೆಟ್, ಟಿ.ವಿ.ಯ ಲಭ್ಯತೆಯಿರುವ ಮಕ್ಕಳಿಗೆ ಕೆಲವು ಅನುಭವಗಳು ದಕ್ಕಿದ್ದರೆ, ದಿನಸಿ ಅಂಗಡಿಗೆ ಕೆಲಸಕ್ಕೆ ಹೋಗಿದ್ದ ಮಕ್ಕಳಿಗೂ ಇದಕ್ಕಿಂತ ಭಿನ್ನವಾದ, ಆದರೆ ಅಮೂಲ್ಯವಾದ ಅನುಭವಗಳು ಲಭ್ಯವಾಗಿರುತ್ತವೆ. ನಮ್ಮ ಸವಾಲಿರುವುದು ನಷ್ಟವನ್ನು ಲೆಕ್ಕ ಹಾಕುವುದರಲ್ಲಲ್ಲ. ಈ ಸಮೃದ್ಧ ಅನುಭವಗಳನ್ನು ಗುರುತಿಸಲು ಸಾಧ್ಯವಾಗುವಂತಹ ತರಗತಿ ಕೋಣೆಯ ಸಂಸ್ಕಾರವನ್ನು ರೂಪಿಸುವಲ್ಲಿ. ಎಲ್ಲ ಬಗೆಯ ಕಲಿಕೆಯ ಅನುಭವಗಳನ್ನು ಹೊಂದಿರುವ ಮತ್ತು ವಿಭಿನ್ನ ವೇಗದಲ್ಲಿ ಕಲಿಯುತ್ತಿರುವ ಮಕ್ಕಳನ್ನು ಸ್ವೀಕರಿಸುವುದರಲ್ಲಿ!

ಬೇರೆ ಬೇರೆ ಹಣೆಪಟ್ಟಿಗಳ ಮೂಲಕ ಮಕ್ಕಳನ್ನು ನಿರಾಕರಿಸಲು ಆತುರ ತೋರುವ ಕಲಿಕೆಯ ಪರಿಸರವನ್ನು ಸಂವೇದನಾಶೀಲವಾಗಿಸುವ ಪ್ರಯತ್ನ ಅತ್ಯಂತ ತುರ್ತಿನದು. ತನ್ನನ್ನು ಅವಗಣಿಸುತ್ತಿಲ್ಲ ಮತ್ತು ತಾನು ಈ ತರಗತಿಗೆ ಸೇರಿದವಳಲ್ಲ ಎಂಬ ಯೋಚನೆ ಮಗುವಿಗೆ ಬಾರದಂತಹ ಕಲಿಕೆಯ ಪರಿಸರವನ್ನು ನಿರ್ಮಿಸಲು ದೊಡ್ಡ ಪ್ರಯತ್ನ ಬೇಕಿಲ್ಲ. ನಮ್ಮ ಯೋಚನಾಕ್ರಮದಲ್ಲಿ ಬದಲಾವಣೆ ತರಬೇಕಾಗಿದೆ, ಅಷ್ಟೇ!

ವಾಚಕರ ವಾಣಿ

ನೈಟ್ ಲ್ಯಾಂಡಿಂಗ್: ಕಾಯುತ್ತಿದ್ದಾರೆ ಸ್ಥಳೀಯರು

ಕಲಬುರ್ಗಿ ವಿಮಾನ ನಿಲ್ದಾಣವು ದೇಶದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಿಮಾನ ನಿಲ್ದಾಣ ಎಂದು ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಗುರುತಿಸಿದೆ. ಇಲ್ಲಿಂದ ಬೆಂಗಳೂರಿಗೆ ಪ್ರತಿದಿನ ಎರಡು ವಿಮಾನಗಳ ಸೇವೆ ಇದ್ದರೂ ಬೆಳಗಿನ ಸಮಯದಲ್ಲಿರದ ಕಾರಣ ಅನನುಕೂಲವಾಗುತ್ತಿದೆ. ಮಂಗಳವಾರ ಹೊರತುಪಡಿಸಿದರೆ ವಾರದ ಮಿಕ್ಕೆಲ್ಲ ದಿನಗಳಲ್ಲಿ ಎರಡೂ ವಿಮಾನಗಳ ಸೇವೆ ಅಪರಾಹ್ನ ಮಾತ್ರ ಲಭ್ಯ. ಬೆಂಗಳೂರಿಗೆ ಇಲ್ಲಿಂದ ಬೆಳಿಗ್ಗೆ 7ಕ್ಕೆ ಹೊರಟು ನಂತರ ಕೆಲಸ ಮುಗಿಸಿಕೊಂಡು ಅಲ್ಲಿಂದ ರಾತ್ರಿ 8 ಅಥವಾ 9ಕ್ಕೆ ವಿಮಾನ ಸೇವೆ ಲಭಿಸಿದರೆ, ಅಂದೇ ಹೊರಟು ಮರಳಿ ಕಲಬುರ್ಗಿ ಸೇರಿ, ಅಲ್ಲಿ ತಂಗುವ ವೆಚ್ಚವನ್ನು ಉಳಿಸಬಹುದು ಎಂಬ ಮಾತಿಗೆ ತೂಕವಿದೆ.

ಕಲಬುರ್ಗಿ ವಿಮಾನ ನಿಲ್ದಾಣದ ನೈಟ್ ಲ್ಯಾಂಡಿಂಗ್ ವ್ಯವಸ್ಥೆಯ ಕಾಮಗಾರಿ 2020ರ ಡಿಸೆಂಬರ್‌ನಲ್ಲಿ ಮುಗಿಯುತ್ತದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವರು ಸಂಸತ್ತಿನಲ್ಲಿ ಲಿಖಿತ ಉತ್ತರ ಕೊಟ್ಟಿದ್ದರು. ಆದರೆ, ಕಾಮಗಾರಿ ಮುಗಿದರೂ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದಿಂದ (ಡಿಜಿಸಿಎ) ಈ ಸಂಬಂಧದ ಅನುಮತಿ ಇನ್ನೂ ಲಭಿಸಿಲ್ಲ ಎಂದು ಹೇಳಲಾಗುತ್ತಿದೆ. ಆದಷ್ಟು ಬೇಗ ಅನುಮತಿ ದೊರೆತಲ್ಲಿ ದೇಶದ ಪ್ರಮುಖ ವಾಯುಯಾನ ಸೇವಾ ಸಂಸ್ಥೆಗಳು ದೇಶದ ಪ್ರಮುಖ ನಗರಗಳಿಗೆ ವಾಯುಯಾನ ಸೇವೆ ಒದಗಿಸಲು ಉತ್ಸುಕವಾಗಿವೆ ಎಂದು ತಿಳಿದುಬಂದಿದೆ. ಈ ವ್ಯವಸ್ಥೆ ಶೀಘ್ರ ಕಾರ್ಯೋನ್ಮುಖವಾಗಲಿ ಎಂದು ಸ್ಥಳೀಯರು ಆಸೆ ತುಂಬಿದ ಕಂಗಳಿಂದ ಕಾದಿದ್ದೇವೆ.

ವೆಂಕಟೇಶ್ ಮುದಗಲ್, ಕಲಬುರ್ಗಿ

ಹೆಣ್ಣಿನ ಮೌಲ್ಯ ವಿಶ್ಲೇಷಣೆ ಜಾಡ್ಯದ ಕುರುಹು

‘ಬಾಹ್ಯಾಡಂಬರ, ಒಣಪ್ರತಿಷ್ಠೆ ಸಲ್ಲ’ ಎನ್ನುವ ಪತ್ರದಲ್ಲಿ (ವಾ.ವಾ., ಮಾರ್ಚ್ 10) ಶಿವನಕೆರೆ ಬಸವಲಿಂಗಪ್ಪ ಅವರು ಮಹಿಳೆಯರ ಸಮಾನತೆಯನ್ನು ಎತ್ತಿ ಹಿಡಿಯುವ ಒಳ್ಳೆಯ ದೃಷ್ಟಿಕೋನದಿಂದಲೇ ಬರಹವನ್ನು ಪ್ರಾರಂಭಿಸಿದ್ದರೂ ಕಡೆಗೆ ಮಹಿಳೆಯರು ಮೇಕಪ್ ಮಾಡಿಕೊಳ್ಳುವುದರ ಬಗ್ಗೆ ಅಸಹನೆ ಪ್ರದರ್ಶಿಸಿ, ತಮ್ಮ ಸಂದೇಶವನ್ನು ತಾವೇ ಗೊಂದಲಮಯವಾಗಿಸಿದ್ದಾರೆ. ಹೆಣ್ಣು ತನ್ನ ದೈಹಿಕ ಸೌಂದರ್ಯದ ಬಗ್ಗೆ ತಾಳುವ ನಿಲುವು ಏನೇ ಇದ್ದರೂ ಅದರ ಬಗ್ಗೆ ಹೆಣ್ಣಿನದೇ ಕಡೆಯ ತೀರ್ಮಾನವಾಗಬೇಕು. ಅದರ ಬಗ್ಗೆ ಪೂರ್ವಗ್ರಹ ಪ್ರಚೋದಿತ ತೀರ್ಪುಗಳನ್ನು ನೀಡುವುದು ಗಂಡಸರ ಕೆಲಸವೂ ಅಲ್ಲ, ಅದು ಅವರ ಜನ್ಮಸಿದ್ಧ ಹಕ್ಕೂ ಅಲ್ಲ. ಹೆಣ್ಣು ಮೇಕಪ್ ಮಾಡಿಕೊಂಡರೆ ಪರಿಸರ ಮಾಲಿನ್ಯ ಹೆಚ್ಚುತ್ತದೆ ಎಂದು ವ್ಯಾಖ್ಯಾನಿಸುವುದು ಹಾಸ್ಯಾಸ್ಪದವಲ್ಲವೇ?

ಹೆಣ್ಣಿಗೆ ಸಮಾನತೆ ನೀಡಬೇಕೆಂದು ಹೇಳುತ್ತಲೇ ಅವಳನ್ನು ಪುರುಷ ಪ್ರಧಾನ ಮಾದರಿಗಳಿಗೇ ಒಳಪಡಿಸಿ ಮೌಲ್ಯ ವಿಶ್ಲೇಷಣೆ ಮಾಡುವುದು ಕೂಡ ಜಾಡ್ಯದ ಕುರುಹೇ ಆಗಿದೆ. ಹೆಣ್ಣಿಗೇ ಏಕೆ ಪೋಷಕಹೃದಯ ಇರಬೇಕು? ಅದು ಗಂಡಿಗೆ ಅಷ್ಟು ಮುಖ್ಯವಲ್ಲವೇ? ತಾಯ್ತನವೇ ಅವಳ ಅಂತಿಮ ಸಾರ್ಥಕ್ಯವೇ? ಮಕ್ಕಳನ್ನು ಬೆಳೆಸುವುದು ಗಂಡ ಹೆಂಡಿರಿಬ್ಬರೂ ಸಮಾನವಾಗಿ ಹೊರಬೇಕಾದ ಜವಾಬ್ದಾರಿ ಅಲ್ಲವೇ? ‘ಸರ್ವೇ ಜನಾ ಸುಖಿನೋ ಭವಂತು’ ಆಗಬೇಕಾದರೆ ಪುರುಷ ಸಮಾಜವು ನಿರ್ದೇಶಿಸಿದ ಪಾತ್ರಗಳನ್ನೇ ಹೆಣ್ಣು ನಿರ್ವಹಿಸುತ್ತಾ ತೆಪ್ಪಗಿರಬೇಕಾದುದು ಅನಿವಾರ್ಯವೇ?

ಪವಮಾನ್, ಬೆಂಗಳೂರು

ಮಾನವತೆಯ ಆಧಾರದಲ್ಲಿ ಒಂದಾಗಬೇಕಿದೆ

‘ಹೀಗೂ ಸಾಧ್ಯ ಪರಿವರ್ತನೆ!’ ಎಂಬ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನ (ಸಂಗತ, ಮಾರ್ಚ್ 9) ಸಮಾಜದ ನೈತಿಕ ದುಃಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ತಳಸಮುದಾಯಗಳು ತಲೆಮಾರುಗಳಿಂದ ತಮ್ಮ ಗಳಿಕೆ, ಸಂಪತ್ತು, ಜ್ಞಾನ, ಶ್ರಮ, ಮಾನ, ಪ್ರಾಣ ಎಲ್ಲವನ್ನೂ ಆ ದೇವರಿಗಾಗಿ ಇಲ್ಲವೇ ತಮ್ಮವರನ್ನು ಹೊರತು ಇತರರಿಗೆ ಬಿಟ್ಟುಕೊಟ್ಟಿದ್ದಾರೆ. ಇದರಿಂದಾಗಿಯೇ ರಿಕ್ತ ಹಸ್ತದವರಾಗಿದ್ದಾರೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ವಂಚಿತರಾಗಿದ್ದಾರೆ. ಅದೇನೇ ಇರಲಿ, ಮಹಾರಾಷ್ಟ್ರದ ಪೆಡ್ಡ ಎಂಬ ಗ್ರಾಮದ ಜನರು ಮನಃಪರಿವರ್ತನೆ ಮಾಡಿಕೊಂಡು, ಅಸ್ಪೃಶ್ಯರೆನಿಸಿಕೊಂಡಿದ್ದ ಸಮಾಜದವರಿಗೆ ಸಿದ್ಧೇಶ್ವರ ದೇವಳದ ಮುಕ್ತ ಪ್ರವೇಶಕ್ಕೆ ಅವಕಾಶ ಕೊಟ್ಟಿರುವುದು ಅನುಕರಣೀಯ. ಆದರೆ ಈ ಅವಕಾಶ ದೊರೆತದ್ದು, ಅದೇ ಹಳ್ಳಿಯವರಾಗಿ ಈಗ ಮುಂಬೈನಲ್ಲಿ ಬೃಹತ್ ಉದ್ಯಮಿಯಾಗಿರುವ ತಳಸಮುದಾಯದ ಪ್ರಕಾಶ ಖಾಡೆ ಎಂಬ ಉದ್ಯಮಿ ಒಂದು ಕೋಟಿ ರೂಪಾಯಿಯನ್ನು ದೇವಾಲಯದ ಜೀರ್ಣೋದ್ಧಾರಕ್ಕಾಗಿ ದಾನ ನೀಡಿದ ಕಾರಣದಿಂದ.

ಇದರಿಂದ ಬರುವ ಅರ್ಥವೆಂದರೆ, ಹಣ ಕೊಟ್ಟರೆ ತಮ್ಮವರನ್ನಾಗಿಸಿಕೊಳ್ಳಲು ಅಸ್ಪೃಶ್ಯರಲ್ಲದವರು ತಯಾರಿದ್ದಾರೆ ಎಂಬುದು. ಅಸ್ಪೃಶ್ಯರು ಆರ್ಥಿಕವಾಗಿ ಸಬಲರಾದರೆ ಬೇರೆಲ್ಲಾ ತಂತಾನೇ ಬರುತ್ತದೆ ಎಂಬುದು ಇನ್ನೊಂದು. ಆದರೆ ಈ ನಮ್ಮ ಭರತಖಂಡದಲ್ಲಿ ವಾಸ್ತವ ಸಂಪೂರ್ಣ ಭಿನ್ನವಾಗಿದೆ. ಆದರೂ ಇದೊಂದು ಉತ್ತಮ ನಿದರ್ಶನ. ಅಸ್ಪೃಶ್ಯರಲ್ಲದವರು ಮತ್ತು ಮೇಲ್‌ಸ್ತರದಲ್ಲಿ ಇದ್ದೇವೆ ಎಂದುಕೊಳ್ಳುವವರು ಇವನ್ನು ಹೊರತುಪಡಿಸಿ ಮಾನವತೆಯ ಆಧಾರದ ಮೇಲೆ ದೇವೋಪಾಸನೆಗೆ ಒಂದಾಗಿ ಮುಂದಾಗಲು ಬದ್ಧರಾಗಬಹುದೇ?

ಬಿ.ಆರ್.ಅಣ್ಣಾಸಾಗರ, ಸೇಡಂ

ನಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳೋಣ

ಕೊಡಗು ಜಿಲ್ಲೆಯಲ್ಲಿ ನರಭಕ್ಷಕ ಹುಲಿಯನ್ನು ಹಿಡಿಯಲು ಸಾಧ್ಯವಾಗದಿದ್ದರೆ ಗುಂಡಿಕ್ಕಿ ಕೊಲ್ಲುವ ಆದೇಶವನ್ನು ಅರಣ್ಯಾಧಿಕಾರಿ ಹೊರಡಿಸಿರುವುದು ಯುಕ್ತವೇ? ವನ್ಯಮೃಗಗಳನ್ನು ಗುಂಡಿಕ್ಕಿ ಕೊಲ್ಲುತ್ತಾ ಹೋದರೆ ಮುಂದೆ ಅವುಗಳ ಸಂತತಿಯೇ ಸಂಪೂರ್ಣವಾಗಿ ನಶಿಸುವುದರಲ್ಲಿ ಅನುಮಾನವಿಲ್ಲ. ವನ್ಯಮೃಗಗಳನ್ನು ಸೆರೆಹಿಡಿಯಲು ಅಥವಾ ನಾಡಿನತ್ತ ಬಾರದಿರುವಂತೆ ಮಾಡಲು ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಯೋಜನೆ ರೂಪಿಸಬಹುದಲ್ಲವೇ? ಆಹಾರದ ಅಸಮತೋಲನದಿಂದಾಗಿ ವನ್ಯಮೃಗಗಳು ಕಾಡಿನಿಂದ ನಾಡಿನತ್ತ ಹೆಜ್ಜೆ ಹಾಕುತ್ತಿರುವುದಂತೂ ಸ್ಪಷ್ಟ. ಅದಕ್ಕೆ ಕಾರಣ ಮಾನವ ಮತ್ತು ಪ್ರಾಣಿಗಳ ನಡುವಿನ ನಿರಂತರ ಸಂಘರ್ಷ, ಅರಣ್ಯ ನಾಶ, ಗಣಿಗಾರಿಕೆ, ದುರಾಸೆ, ಪ್ರಕೃತಿ ಮೇಲಿನ ಅತಿಯಾದ ಹಸ್ತಕ್ಷೇಪ... ನಮ್ಮ ಕಡೆಯಿಂದ ಇಷ್ಟೆಲ್ಲಾ ತಪ್ಪುಗಳಿದ್ದರೂ ಸರಿಪಡಿಸಿಕೊಳ್ಳದೆ ಪ್ರಾಣಿಗಳನ್ನು ಕೊಲ್ಲುವುದು ಎಷ್ಟು ಸರಿ?

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಸಿಕೆ ರಾಜಕಾರಣ ಮುಂಚೂಣಿಗೆ ಭಾರತ

ಈಗ, ಕೋವಿಡ್-19 ತಡೆ ಲಸಿಕೆ ಎಂಬುದು ಜಗತ್ತಿನಲ್ಲಿ ಅತ್ಯಂತ ಬೇಡಿಕೆಯ ವಸ್ತು. ಲಸಿಕೆ ತಯಾರಿಸಿ ಪೂರೈಸುವ ಸಾಮರ್ಥ್ಯ ಯಾವ ದೇಶಕ್ಕೆ ಹೆಚ್ಚು ಇದೆಯೋ ಆ ದೇಶಕ್ಕೆ ಜಾಗತಿಕ ಮನ್ನಣೆ ದೊರೆಯುವ ಅವಕಾಶ. ಲಸಿಕೆ ತಯಾರಿಕೆ ಸಾಮರ್ಥ್ಯದಲ್ಲಿ ಜಗತ್ತಿನಲ್ಲಿಯೇ ಅದ್ವಿತೀಯ ಎನಿಸಿರುವ ಭಾರತಕ್ಕೆ ಈ ಗೌರವವನ್ನು ಪಡೆದುಕೊಳ್ಳುವ ಅವಕಾಶ ತನ್ನಿಂತಾನೆ ದೊರೆತಿದೆ. ಭಾರತ ಮಾತ್ರವಲ್ಲದೆ ಇತರ ದೇಶಗಳು ಕೂಡ ಲಸಿಕೆ ರಾಜತಾಂತ್ರಿಕತೆಯ ಲಾಭ ಪಡೆದುಕೊಳ್ಳಲು ಮುಂದಾಗಿವೆ. ಹಾಗಾಗಿ, ಈ ವಿಚಾರದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಯೂ ಇದೆ. ವಿವಿಧ ದೇಶಗಳಿಗೆ ಲಸಿಕೆ ಪೂರೈಸುವುದಾಗಿ ಚೀನಾ ಭರವಸೆ ಕೊಟ್ಟಿದೆ. ನೆರೆಯ ದೇಶಗಳು ಮತ್ತು ಮಿತ್ರರಾಷ್ಟ್ರಗಳಿಗಾಗಿ ಅರಬ್ ಸಂಯುಕ್ತ ಸಂಸ್ಥಾನ ಕೂಡ ಲಸಿಕೆ ಖರೀದಿಸಿ ವಿತರಿಸುವ ಕೆಲಸಕ್ಕೆ ಮುಂದಾಗಿದೆ.

ವಿವಿಧ ದೇಶಗಳಿಗೆ ಲಸಿಕೆ ಪೂರೈಸುವ ವಿಚಾರದಲ್ಲಿ ಭಾರತವು ಮುಂಚೂಣಿಯಲ್ಲಿ ಇದೆ. ಲಸಿಕೆ ರಾಜತಾಂತ್ರಿಕತೆಯಲ್ಲಿ ಭಾರತಕ್ಕೆ ಅತಿ ಹೆಚ್ಚಿನ ಪೈಪೋಟಿ ಒಡ್ಡುವ ಸಾಧ್ಯತೆ ಇದ್ದದ್ದು ಚೀನಾಕ್ಕೆ ಮಾತ್ರ. ಕೋವಿಡ್ ಪಿಡುಗಿನ ಮೂಲವಾದ ಚೀನಾವು ಆರಂಭದಲ್ಲಿಯೇ ಆ ಸಾಂಕ್ರಾಮಿಕವನ್ನು ನಿಯಂತ್ರಿಸಿತು. ಹಾಗಾಗಿ, ಬೇಗನೆ ಲಸಿಕೆ ಅಭಿವೃದ್ಧಿಪಡಿಸಿ, ಅದನ್ನು ದೊಡ್ಡ ಮಟ್ಟದಲ್ಲಿ ತಯಾರಿಸಿ ವಿವಿಧ ದೇಶಗಳಿಗೆ ಪೂರೈಸಬಹುದು ಎಂಬ ಚಿಂತನೆ ಆ ದೇಶಕ್ಕೆ ಇತ್ತು. ಆದರೆ, ಕೋವಿಡ್‌ನ ಎರಡನೇ ಅಲೆಯಿಂದಾಗಿ, ದೇಶದಲ್ಲಿರುವ 140 ಕೋಟಿ ಜನರಿಗೆ ಮೊದಲಿಗೆ ಲಸಿಕೆ ಹಾಕಿಸಬೇಕಾದ ಬೃಹತ್ ಹೊಣೆಗಾರಿಕೆಯನ್ನು ಪೂರೈಸಲೇಬೇಕಾದ ಅನಿವಾರ್ಯಕ್ಕೆ ಆ ದೇಶ ಸಿಲುಕಿತು. ಹಾಗಾಗಿ, ಜಗತ್ತಿನ ಇತರ ದೇಶಗಳಿಗೆ ಲಸಿಕೆ ಪೂರೈಸುವುದು ಸ್ವಲ್ಪ ವಿಳಂಬವಾಯಿತು.

ಹೀಗಿದ್ದರೂ ಲಸಿಕೆ ಮೂಲಕ ಇತರ ದೇಶಗಳ ಮೇಲೆ ತನ್ನ ಪ್ರಭಾವ ಹೆಚ್ಚಿಸುವ ಉಮೇದನ್ನು ಚೀನಾ ತೋರಿದೆ. ಯುರೋಪ್, ಆಫ್ರಿಕಾ, ಏಷ್ಯಾ, ಲ್ಯಾಟಿನ್ ಅಮೆರಿಕದ ವಿವಿಧ ದೇಶಗಳಿಗೆ 46 ಕೋಟಿಗೂ ಹೆಚ್ಚು ಡೋಸ್ ಲಸಿಕೆಗಳನ್ನು ಪೂರೈಸುವುದಾಗಿ ಚೀನಾ ಭರವಸೆ ಕೊಟ್ಟಿದೆ. ಶ್ರೀಲಂಕಾ, ಭೂತಾನ್, ಬಾಂಗ್ಲಾದೇಶ, ಮಾಲ್ಡೀವ್ಸ್, ಸೀಷೆಲ್ಸ್ ಸೇರಿ ಹಲವು ದೇಶಗಳಿಗೆ 5.81 ಕೋಟಿ ಡೋಸ್ ಲಸಿಕೆಯನ್ನು ಭಾರತ ಈಗಾಗಲೇ ಪೂರೈಸಿದೆ. ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆಗೆ ಎರಡು ಲಕ್ಷ ಡೋಸ್ ಲಸಿಕೆ ನೀಡಲಾಗಿದೆ.

ಶ್ರೀಲಂಕಾ ಮತ್ತು ಏಷ್ಯಾದ ಕೆಲವು ದೇಶಗಳಿಗೆ ಲಸಿಕೆ ಒದಗಿಸುವುದಾಗಿ ಚೀನಾ ಮಾತು ಕೊಟ್ಟಿತ್ತು. ಆದರೆ, ಅದಕ್ಕೂ ಮುಂಚೆಯೇ ಭಾರತ ಲಸಿಕೆ ಒದಗಿಸಿ ಮುನ್ನಡೆ ಸಾಧಿಸಿದೆ. ಈ ಎಲ್ಲ ಕಾರಣಗಳಿಂದಾಗಿಯೇ, ಲಸಿಕೆಯ ವಿಚಾರದಲ್ಲಿ ಭಾರತವು ಇತರೆಲ್ಲ ದೇಶಗಳಿಗಿಂತ ಮೇಲೆ ನಿಲ್ಲುತ್ತದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಹೇಳಿದ್ದಾರೆ. ಭಾರತದ ನಡೆಗೆ ವಿಶ್ವ ಸಂಸ್ಥೆ ಕೂಡ ಮೆಚ್ಚುಗೆ ವ್ಯಕ್ತಪಡಿಸಿದೆ.

ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಇರುವ 'ಕ್ವಾಡ್ ಕೂಟ'ವು ಲಸಿಕೆ ರಾಜತಾಂತ್ರಿಕತೆಯಲ್ಲಿ ಚೀನಾವನ್ನು ಹಿಮ್ಮೆಟ್ಟಿಸಲು ಕೈಜೋಡಿಸುವ ಸಾಧ್ಯತೆ ಈಗ ನಿಚ್ಚಳವಾಗಿದೆ. ಹಿಂದೂ ಮಹಾಸಾಗರ-ಫೆಸಿಫಿಕ್ ಸಾಗರ ಪ್ರದೇಶದಲ್ಲಿ ಚೀನಾದ ಪ್ರಾಬಲ್ಯಕ್ಕೆ ಕಡಿವಾಣ ಹಾಕುವುದೇ ಕ್ವಾಡ್ ಕೂಟದ ಪ್ರಧಾನ ಉದ್ದೇಶ. ಹಾಗಾಗಿಯೇ, ಭಾರತದ ಲಸಿಕೆ ತಯಾರಿಕೆಯ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಲು ಕ್ವಾಡ್ ಕೂಟದ ಇತರ ರಾಷ್ಟ್ರಗಳು ಸಜ್ಜಾಗಿವೆ. ಕ್ವಾಡ್ ನಾಯಕರ ನಡುವೆ ಶುಕ್ರವಾರ ನಡೆಯಲಿರುವ ಮಾತುಕತೆಯಲ್ಲಿ ಈ ಬಗ್ಗೆ ಸ್ಪಷ್ಟ ತೀರ್ಮಾನ ಹೊರಬೀಳುವ ನಿರೀಕ್ಷೆ ಇದೆ ಎಂದು ರಾಯಿಟರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಭಾರಿ ಸಂಖ್ಯೆಯ ಲಸಿಕೆಯು ಭಾರತಕ್ಕೆ ಬೇಕಾಗಿದೆ. ಹಾಗಿದ್ದರೂ ರಫ್ತು ನಿಷೇಧದಂತಹ ಕ್ರಮಗಳನ್ನು ಭಾರತ ಕೈಗೊಂಡಿಲ್ಲ. ಮಾರಾಟ ಮಾತ್ರವಲ್ಲದೆ, ನೆರವಿನ ರೂಪದಲ್ಲಿಯೂ ದೊಡ್ಡ ಸಂಖ್ಯೆಯ ಡೋಸ್‌ಗಳು ವಿವಿಧ ದೇಶಗಳಿಗೆ ರವಾನೆ ಆಗಿದೆ. ಕೆನಡಾದಂತಹ ದೇಶ ಕೂಡ ಭಾರತದ ಲಸಿಕೆಗೆ ಕೈಯೊಡ್ಡಿದೆ. ಲಸಿಕೆ ರಾಜತಾಂತ್ರಿಕತೆಯಿಂದಾಗಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ಮಾತ್ರವಲ್ಲದೆ, ಬಡ ರಾಷ್ಟ್ರಗಳಿಗೂ ಲಸಿಕೆ ಬೇಗನೆ ದೊರೆತಿದೆ. ಜೀವ ಉಳಿಸುವ ಲಸಿಕೆ ಪೂರೈಕೆಯಿಂದಾಗಿ ಭಾರತಕ್ಕೆ ಜಾಗತಿಕವಾಗಿ ದೊರೆಯುವ ಮಹತ್ವವು ಒಂದಷ್ಟು ಕಾಲ ಹಸಿರಾಗಿ ಉಳಿಯಬಹುದು.

ಭಾರತದಲ್ಲಿ 350 ಕೋಟಿ ಡೋಸ್ ತಯಾರಿಕೆ

ಕೋವಿಡ್ ಲಸಿಕೆ ಉತ್ಪಾದನೆಯಲ್ಲಿ ಅಮೆರಿಕ ಮೊದಲನೇ ಸ್ಥಾನದಲ್ಲಿದ್ದರೆ, ನಂತರದ ಸ್ಥಾನದಲ್ಲಿ ಭಾರತ ಇದೆ. 2021ರಲ್ಲಿ ಭಾರತದಲ್ಲಿ ಸುಮಾರು 350 ಕೋಟಿ ಡೋಸ್ ಲಸಿಕೆ ತಯಾರಿ ಆಗಬಹುದು ಎಂದು ಸಲಹಾ ಸಂಸ್ಥೆ ಡೆಲಾಯ್ಟ್ ಅಭಿಪ್ರಾಯಪಟ್ಟಿದೆ. ಅಮೆರಿಕ ಸುಮಾರು 400 ಕೋಟಿ ಡೋಸ್ ತಯಾರಿಸಬಹುದು ಎಂದು ಅಂದಾಜಿಸಿದೆ. ಜಾಗತಿಕ ಬೇಡಿಕೆ ಪೂರೈಸಲು ಭಾರತದ ಕಂಪನಿಗಳು ಉತ್ಪಾದನೆಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು ತಯಾರಿ ನಡೆಸುತ್ತಿವೆ.

ಲಸಿಕೆ ತಯಾರಿಕಾ ಸಾಮರ್ಥ್ಯ

ಕೋವಿಶೀಲ್ಡ್

7-10 ಕೋಟಿ ಡೋಸ್/30ಗಳಿಗೆ

ಕೋವ್ಯಾಕ್ಸಿನ್

15 ಕೋಟಿ ಡೋಸ್/ವರ್ಷಕ್ಕೆ

(ಕೇಂದ್ರ ಸರ್ಕಾರದ ಬಯೊಟೆಕ್ನಾಲಜಿ ಇಲಾಖೆಯು ರಾಜ್ಯಸಭೆಗೆ ನೀಡಿದ ಮಾಹಿತಿ)

- ಭಾರತದಲ್ಲಿ ಎರಡು ಕಂಪನಿಗಳು ಸದ್ಯ ಲಸಿಕೆಯ ಉತ್ಪಾದನೆ ಮತ್ತು ಪೂರೈಕೆ ಮಾಡುತ್ತಿವೆ.
- ಕೋವಿಶೀಲ್ಡ್ ಲಸಿಕೆಯನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಹಾಗೂ ಆಸ್ಟ್ರಾಜೆನೆಕಾ ಕಂಪನಿಗಳು ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿವೆ.
- **ಕೋವ್ಯಾಕ್ಸಿನ್ ಲಸಿಕೆ:** ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿದೆ. ಭಾರತ್ ಬಯೊಟೆಕ್ ಮತ್ತು ಐಸಿಎಂಆರ್ ಸಹಭಾಗಿತ್ವದಲ್ಲಿ ಅಭಿವೃದ್ಧಿಯಾಗಿದೆ.

ಯಾವ ದೇಶಗಳಿಗೆ ನೆರವಿನ ಲಸಿಕೆ

ಬಾಂಗ್ಲಾದೇಶ, ಮ್ಯಾನ್ಮಾರ್, ನೇಪಾಳ, ಭೂತಾನ್, ಮಾಲ್ಡೀವ್ಸ್, ಮಾರಿಷಸ್, ಸೀಷೆಲ್ಸ್, ಶ್ರೀಲಂಕಾ, ಬಹರೇನ್, ಒಮಾನ್, ಅಫ್ಗಾನಿಸ್ತಾನ, ಬಾರ್ಬಡೋಸ್ ಮತ್ತು ಡೊಮೊನಿಕಾ

ಯಾವ ದೇಶಗಳಿಗೆ ಲಸಿಕೆ ಮಾರಾಟ

ಬ್ರೆಜಿಲ್, ಮೊರಾಕ್ಕೊ, ಬಾಂಗ್ಲಾದೇಶ, ಮ್ಯಾನ್ಮಾರ್, ಈಜಿಪ್ಟ್, ಅಲ್ಜೀರಿಯಾ, ದಕ್ಷಿಣ ಆಫ್ರಿಕಾ, ಕುವೈತ್, ಯುಎಇ ಹಾಗೂ ಇತರೆ ದೇಶಗಳು

ವರದಿ: ಹಮೀದ್ ಕೆ., ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ

ಭಾರತದಿಂದ ಲಸಿಕೆ ಪೂರೈಕೆ

5.81 ಕೋಟಿ — ಭಾರತ ಈವರೆಗೆ ವಿವಿಧ ರಾಷ್ಟ್ರಗಳಿಗೆ ಪೂರೈಕೆ ಮಾಡಿದ ಒಟ್ಟು ಡೋಸ್‌ಗಳು

79 ಲಕ್ಷ — ಈ ಪೈಕಿ ನೆರವಿನ ರೂಪದಲ್ಲಿ ನೀಡಲಾದ ಡೋಸ್‌ಗಳ ಸಂಖ್ಯೆ

1.63 ಕೋಟಿ — ಅಂತರರಾಷ್ಟ್ರೀಯ ಲಸಿಕೆ ಒಕ್ಕೂಟಕ್ಕೆ (ಕೋವ್ಯಾಕ್ಸ್) ನೀಡಲಾದ ಡೋಸ್‌ಗಳು

3.38 ಕೋಟಿ — ವಿವಿಧ ದೇಶಗಳಿಗೆ ಮಾರಾಟ ಮಾಡಲಾದ ಡೋಸ್‌ಗಳ ಪ್ರಮಾಣ

ಉತ್ತುಂಗದಲ್ಲಿ ಭಾರತ

ಭಾರತವು ಈವರೆಗೆ ಸುಮಾರು 5.8 ಕೋಟಿ ಕೋವಿಡ್ ಲಸಿಕೆಯ ಡೋಸ್‌ಗಳನ್ನು 100ಕ್ಕೂ ಹೆಚ್ಚು ದೇಶಗಳಿಗೆ ವಿತರಣೆ ಮಾಡಿದೆ ಎಂದು ವಿದೇಶಾಂಗ ಸಚಿವಾಲಯ ಮಾಹಿತಿ ನೀಡಿದೆ. ಕೆಲವು ದೇಶಗಳಿಗೆ ಉಚಿತವಾಗಿ ನೆರವಿನ ರೂಪದಲ್ಲಿ ನೀಡಿದರೆ, ಅಂತರರಾಷ್ಟ್ರೀಯ ಲಸಿಕೆ ಒಕ್ಕೂಟಕ್ಕೆ ಒಂದಿಷ್ಟು ಲಸಿಕೆ ನೀಡಲಾಗುತ್ತಿದೆ. ಉಳಿದವನ್ನು ವಿವಿಧ ದೇಶಗಳಿಗೆ ಮಾರಾಟ ಮಾಡಲಾಗುತ್ತಿದೆ.

ದೇಶೀಯ ಬಳಕೆಯನ್ನು ಗಮನದಲ್ಲಿಟ್ಟುಕೊಂಡು ವಿದೇಶಗಳಿಗೆ ಹಂತಹಂತವಾಗಿ ರಫ್ತು ಮಾಡಲಾಗುತ್ತಿದೆ ಎಂದು ವಿದೇಶಾಂಗ ವಕ್ತಾರ ಅನುರಾಗ್ ಶ್ರೀವಾಸ್ತವ ತಿಳಿಸಿದ್ದಾರೆ. ಭಾರತದಲ್ಲಿ ನೆಲೆಸಿರುವ ವಿವಿಧ ದೇಶಗಳ ರಾಜತಾಂತ್ರಿಕರಿಗೆ ಲಸಿಕೆ ಪೂರೈಸಲೂ ಭಾರತ ಮುಂದಾಗಿದೆ. ಇಷ್ಟಲ್ಲದೇ, ಭಾರತದಲ್ಲಿ ನೆಲೆಸಿರುವ ವಿಶ್ವಸಂಸ್ಥೆಯ ವಿವಿಧ ಏಜೆನ್ಸಿಗಳು ಹಾಗೂ ಅಂತರರಾಷ್ಟ್ರೀಯ ಸಂಘಟನೆಗಳ ಸಿಬ್ಬಂದಿಗೂ ಲಸಿಕೆ ನೀಡುವ ಪ್ರಸ್ತಾವ ಇರಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಲಸಿಕೆ ರಫ್ತು (ಲಕ್ಷಗಳಲ್ಲಿ)



ದೇಶ	ಲಕ್ಷ
ಬಾಂಗ್ಲಾದೇಶ	90
ಬ್ರಿಟನ್	50
ನೈಜೀರಿಯಾ	39
ಮ್ಯಾನ್ಮಾರ್	37
ನೇಪಾಳ	23
ಇಥಿಯೋಪಿಯಾ	21
ಕಾಂಗೊ;17 ಲಕ್ಷ	17
ಶ್ರೀಲಂಕಾ	12
ಕೀನ್ಯಾ	10
ಉಗಾಂಡಾ	9
ಕೆನಡಾ	5
ಅರ್ಜೆಂಟಿನಾ	5
ಉಕ್ರೇನ್	5

'ಗವಿ' ಮೂಲಕ ಲಸಿಕೆ ಪೂರೈಕೆ

'ಗವಿ' ಎಂಬುದು ಒಂದು ಅಂತರರಾಷ್ಟ್ರೀಯ ಲಸಿಕೆ ಮೈತ್ರಿಕೂಟ. ಮಾರಣಾಂತಿಕ ರೋಗಗಳಿಂದ, ಬಡರಾಷ್ಟ್ರಗಳ ಮಕ್ಕಳನ್ನು ರಕ್ಷಿಸಲು ಲಸಿಕೆ ನೀಡುವ ಕಾರ್ಯಕ್ರಮವೇ ಗವಿ. ಗವಿ ಮೂಲತಃ ಒಂದು ಸ್ವಯಂಸೇವಾ ಸಂಸ್ಥೆ. ಆದರೆ, ಇದು ವಿಶ್ವ ಆರೋಗ್ಯ ಸಂಸ್ಥೆಯ ಜತೆಗೆ ಕಾರ್ಯನಿರ್ವಹಿಸುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ, ವಿಶ್ವ ಬ್ಯಾಂಕ್, ಯುನಿಸೆಫ್, ಲಸಿಕೆ ತಯಾರಿಕಾ ಕಂಪನಿಗಳು, ಲಸಿಕೆ ಅಭಿವೃದ್ಧಿ ಸಂಸ್ಥೆಗಳು, ಲಸಿಕೆ ದಾನ ನೀಡುವ ದೇಶಗಳು, ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಪ್ರತಿಷ್ಠಾನ ಹಾಗೂ ಹಲವು ಎನ್‌ಜಿಒಗಳ ಸಹಯೋಗದಲ್ಲಿ ಗವಿ ಕಾರ್ಯನಿರ್ವಹಿಸುತ್ತಿದೆ. ಗವಿ ಸಂಸ್ಥೆಯು ಈವರೆಗೆ ವಿಶ್ವದಾದ್ಯಂತ ವಿವಿಧ ಕಾಯಿಲೆಗಳನ್ನು ತಡೆಯುವ ಲಸಿಕೆಗಳನ್ನು 82.2 ಕೋಟಿ ಮಕ್ಕಳಿಗೆ ನೀಡಿದೆ.

ವಿಶ್ವದ ಎಲ್ಲಾ ರಾಷ್ಟ್ರಗಳಿಗೂ ಕೋವಿಡ್ ಲಸಿಕೆ ಸಮಾನ ಆದ್ಯತೆಯಲ್ಲಿ ಲಭ್ಯವಾಗಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಆಶಯ. ಇದಕ್ಕಾಗಿ ಲಸಿಕೆ ಹಂಚಿಕೆ ಬದ್ಧತೆ ಒಪ್ಪಂದವನ್ನೂ ಡಬ್ಲ್ಯುಎಚ್‌ಒ ಪ್ರಕಟಿಸಿದೆ. ಲಸಿಕೆ ಅಭಿವೃದ್ಧಿಯಾದ ನಂತರ ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳು, ಅವುಗಳಿಗೆ ಅಗತ್ಯವಿರುವಷ್ಟು ಲಸಿಕೆಗಳನ್ನು ಖರೀದಿಸಬಹುದು. ಲಸಿಕೆ ಖರೀದಿಸಲು ಶಕ್ತವಲ್ಲದ ರಾಷ್ಟ್ರಗಳಿಗೆ, ಲಸಿಕೆ ಖರೀದಿಸಲು ನೆರವು ನೀಡಬಹುದು ಎಂದು ಈ ಒಪ್ಪಂದ ಹೇಳುತ್ತದೆ. ಲಸಿಕೆ ಖರೀದಿಸಲು ಶಕ್ತವಲ್ಲದ 92 ದೇಶಗಳನ್ನು ಡಬ್ಲ್ಯುಎಚ್‌ಒ ಈಗಾಗಲೇ ಗುರುತಿಸಿದೆ. ಈ ದೇಶಗಳಿಗಾಗಿ ಲಸಿಕೆ ಖರೀದಿ ಮತ್ತು ವಿತರಣೆಗಾಗಿ ಒಂದು ನಿಧಿಯನ್ನು ಸ್ಥಾಪಿಸಿದೆ. ಈ ನಿಧಿಯು ದೇಣಿಗೆಗಳನ್ನು ಆಧರಿಸಿದೆ. ಗೇಟ್ಸ್ ಪ್ರತಿಷ್ಠಾನವು ಈಗಾಗಲೇ ಈ ನಿಧಿಗೆ ದೇಣಿಗೆ ನೀಡಿದೆ. ಈ ದೇಣಿಗೆಯನ್ನು ನಿರ್ವಹಿಸುವ ಮತ್ತು ಲಸಿಕೆ ಬದ್ಧತೆ ಒಪ್ಪಂದವನ್ನು ಅನುಷ್ಠಾನಕ್ಕೆ ತರುವ ಹೊಣೆಯನ್ನು ಗವಿ ಲಸಿಕೆ ಮೈತ್ರಿಕೂಟವು ಹೊತ್ತುಕೊಂಡಿದೆ.

ಲಸಿಕೆ ಅಭಿವೃದ್ಧಿಯಾಗುವ ಮುನ್ನವೇ ಮಾಡಿಕೊಂಡಿದ್ದ ಈ ಒಪ್ಪಂದದ ಪರಿಣಾಮವಾಗಿ ವಿಶ್ವದ ಬಹುತೇಕ ರಾಷ್ಟ್ರಗಳಿಗೆ ಕೋವಿಡ್-19 ಲಸಿಕೆಗಳು ದೊರೆಯುತ್ತಿವೆ. ಆಸ್ಟ್ರಾಜೆನೆಕಾ ಕಂಪನಿಯ ಕೋವಿಶೀಲ್ಡ್ ಲಸಿಕೆಯನ್ನು ಭಾರತದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಭಾರತದಲ್ಲೇ ತಯಾರಿಸುತ್ತಿದೆ. ಭಾರತದ ಕೋವಿಡ್ ಲಸಿಕೆ ಕಾರ್ಯಕ್ರಮದಲ್ಲೂ ಈ ಲಸಿಕೆಯನ್ನು ಬಳಸಿಕೊಳ್ಳಲಾಗುತ್ತಿದೆ. ಗವಿ ಪ್ರತಿಷ್ಠಾನದ ಒಪ್ಪಂದದ ಭಾಗವಾಗಿ ಭಾರತಕ್ಕೆ ಕೋವಿಶೀಲ್ಡ್‌ನ 4.1 ಕೋಟಿ ಡೋಸ್‌ಗಳು ಮೊದಲ ಹಂತದಲ್ಲಿಯೇ ದೊರೆತಿವೆ. ಭಾರತದ ಕಂಪನಿಗಳೂ ಗವಿ ಜತೆಗೆ ಒಪ್ಪಂದ ಮಾಡಿಕೊಂಡಿರುವ ಕಾರಣ, ಲಸಿಕೆ ತಯಾರಿಕೆ ವೆಚ್ಚವೂ ಕಡಿಮೆಯಾಗಿದೆ. ಕಡಿಮೆ ಬೆಲೆಯಲ್ಲಿ ಲಸಿಕೆ ದೊರೆಯುತ್ತಿದೆ. ಕಡಿಮೆ ವೆಚ್ಚದಲ್ಲಿ ಲಸಿಕೆ ತಯಾರಾಗುತ್ತಿರುವ ಕಾರಣಕ್ಕೇ ವಿಶ್ವದ ಹಲವು ರಾಷ್ಟ್ರಗಳಿಗೆ ಕೋವಿಡ್-19 ಲಸಿಕೆಯನ್ನು ಪೂರೈಕೆ ಮಾಡಲು ಭಾರತಕ್ಕೆ ಸಾಧ್ಯವಾಗುತ್ತಿದೆ.

ಆಧಾರ: ವಿದೇಶಾಂಗ ಸಚಿವಾಲಯ ವೆಬ್‌ಸೈಟ್, ರಾಯಿಟರ್ಸ್, ಗವಿ, ಪಿಟಿಐ, ದಿ ಡಾನ್

ಪಾಕಿಸ್ತಾನಕ್ಕೂ ಭಾರತದ ಲಸಿಕೆ

ಗವಿ ಅಂತರರಾಷ್ಟ್ರೀಯ ಲಸಿಕೆ ಬದ್ಧತೆ ಒಪ್ಪಂದದ ಭಾಗವಾಗಿ ಪಾಕಿಸ್ತಾನಕ್ಕೆ 4.5 ಕೋಟಿ ಕೋವಿಶೀಲ್ಡ್ ಲಸಿಕೆಗಳು ದೊರೆಯುತ್ತಿವೆ. ಇಷ್ಟೂ ಲಸಿಕೆಗಳನ್ನು ಸೀರಂ ಇನ್‌ಸ್ಟಿಟ್ಯೂಟ್ ಭಾರತದಲ್ಲೇ ತಯಾರಿಸಿದೆ. ಗವಿ ಒಪ್ಪಂದದ ಭಾಗವಾಗಿಯೇ ಭಾರತವು ಈ ಲಸಿಕೆಗಳನ್ನು ಪೂರೈಸುತ್ತಿದೆ.

ಚೀನಾ ಅಭಿವೃದ್ಧಿಪಡಿಸಿರುವ ಕೋವಿಡ್ ಲಸಿಕೆಯ ಒಂದು ಡೋಸ್‌ಗೆ 2,000 ಪಾಕಿಸ್ತಾನ ರೂಪಾಯಿ ಪಾವತಿಸಬೇಕಿದೆ. ಹೀಗಾಗಿ ಗವಿ ನೀಡುವ ಲಸಿಕೆಗಳನ್ನೇ ಆಶ್ರಯಿಸಿದ್ದೇವೆ ಎಂದು ಪಾಕಿಸ್ತಾನದ ಆರೋಗ್ಯ ಸಚಿವಾಲಯವು ಸಂಸತ್ತಿನ ಸಮಿತಿಗೆ ಮಾಹಿತಿ ನೀಡಿದೆ.

ಪಿಟೀಲು ವಾದಕಿ ಶಿಶಿರಕಣ ಧಾರ್ ನಿಧನ

ಕೋಲ್ಕತ್ತ: ಖ್ಯಾತ ಪಿಟೀಲು ವಾದಕಿ ಶಿಶಿರಕಣ ಧಾರ್ ಚೌಧರಿ (83) ಅವರು ಮಂಗಳವಾರ ರಾತ್ರಿ ನಿಧನರಾಗಿದ್ದಾರೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ದಿಗ್ಗಜರೆನಿಸಿಕೊಂಡಿದ್ದ ಇವರನ್ನು ಧ್ರುಪದ ಶೈಲಿಯಲ್ಲಿ ಪಿಟೀಲು ನುಡಿಸುವುದರಲ್ಲಿ ಮೀರಿಸುವವರೇ ಇರಲಿಲ್ಲ. ಭಾರತದಾದ್ಯಂತ ಅಷ್ಟೇ ಅಲ್ಲ ಇತರ ಹಲವು ರಾಷ್ಟ್ರಗಳಲ್ಲಿ ಕಾರ್ಯಕ್ರಮಗಳನ್ನು ನೀಡಿ ಅಪಾರ ಜನ ಮೆಚ್ಚುಗೆಗೆ ಪಾತ್ರರಾಗಿದ್ದರು.

1953ರಲ್ಲಿ ನಡೆದ ಅಖಿಲಭಾರತ ತಾನ್‌ಸೇನ್- ವಿಷ್ಣು ದಿಗಂಬರ ಸಂಗೀತ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆಯುವುದರೊಂದಿಗೆ ಅವರ ಸಂಗೀತ ಸಾಧನೆ ಹೊಸ ಎತ್ತರಕ್ಕೆ ಏರಿತ್ತು. ಅನೇಕ ಕಾರ್ಯಕ್ರಮಗಳಲ್ಲಿ ಅವರಿಗೆ, ತಬಲಾ ದಿಗ್ಗಜರೆನಿಸಿರುವ ಶಂಕರ್ ಘೋಷ್, ಮಹಾಪುರುಷ ಮಿಶ್ರಾ, ಝಾಕಿರ್ ಹುಸೇನ್, ಸ್ವಪ್ನ ಚೌಧರಿ ಮುಂತಾದವರು ಸಾಥ್ ನೀಡಿದ್ದರು.

1971ರಲ್ಲಿ ಕೋಲ್ಕತ್ತದ ರವೀಂದ್ರಭಾರತಿ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಸೇರಿದ್ದ ಅವರು ಸುಮಾರು 20 ವರ್ಷ ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣ ನೀಡಿದರು. ಸಂಗೀತ ವಿಭಾಗದ ಮುಖ್ಯಸ್ಥೆಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ಪಿಟೀಲಿನ ಮೇಲೆ ಅವರಿಗೆ ಇದ್ದ ಮಾಂತ್ರಿಕ ಹಿಡಿತದ ಬಗ್ಗೆ ಒಂದೆಡೆ ಮಾತನಾಡಿದ್ದ ತಬಲಾ ಮಾಸ್ಟರ್ ಪಂ. ಸ್ವಪ್ನ ಚೌಧರಿ ಅವರು, 'ವ್ಯಕ್ತಿಯೊಬ್ಬ ಅಸಾಧಾರಣ ಪ್ರತಿಭೆ ಹೊಂದಿದ್ದರೆ ಅದನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಅಂಥವರನ್ನು ಕೇಳಿ ಅನುಭವಿಸಬೇಕು. ಶಿಶಿರಕಣ ಧಾರ್ ಅವರ ಸಂಗೀತವೆಂದರೆ ಒಂದು ಧ್ಯಾನ. ಅವರು ಶ್ರೇಷ್ಠ ಕಲಾವಿದೆ ಹಾಗೂ ಶಿಕ್ಷಕಿ' ಎಂದಿದ್ದರು.

ಸರೋದ್ ವಾದಕ ಉಸ್ತಾದ್ ಅಲಿ ಅಕ್ಬರ್ ಖಾನ್ ಹಾಗೂ ಖ್ಯಾತ ಪಿಟೀಲು ವಾದಕ ಪಂ. ವಿ.ಜಿ. ಜೋಗ್ ಅವರ ಶಿಷ್ಯೆಯಾಗಿದ್ದ ಶಿಶಿರಕಣ ಧಾರ್ ಅವರು, ಪಿಟೀಲಿನಲ್ಲೂ ಸರೋದ್‌ನ ಕೆಲವು ತಂತ್ರಗಳನ್ನು ಬಳಸುತ್ತಿದ್ದರು. ಪಿಟೀಲಿನ ಜತೆಗೆ 'ವಯೋಲಾ' ನುಡಿಸುವುದರಲ್ಲಿಯೂ ಅವರು ಪರಿಣತಿ ಹೊಂದಿದ್ದರು. ಉತ್ತರ ಭಾರತ ಶೈಲಿಯ ಸಂಗೀತ ಪರಂಪರೆಗೆ ಹೊಂದಿಕೆಯಾಗುವಂತೆ ಈ ವಾದ್ಯವನ್ನು ಬಳಸಿದವರಲ್ಲಿ ಅವರು ಮೊದಲಿಗರಾಗಿದ್ದರು. ವಿಶೇಷವಾಗಿ ಧ್ರುಪದ ಶೈಲಿಯ ಆಲಾಪಗಳಿಗೆ ಈ ವಾದ್ಯ ಹೆಚ್ಚು ಸೂಕ್ತವಾದುದು ಎಂಬುದನ್ನು ಅವರು ಕಂಡುಕೊಂಡಿದ್ದರು.

1937ರಲ್ಲಿ ಅಸ್ಸಾಂನಲ್ಲಿ ಜನಿಸಿದ್ದ ಶಿಶಿರಕಣ ಧಾರ್ ಅವರು ಏಳನೇ ವಯಸ್ಸಿನಲ್ಲಿಯೇ ಉಸ್ತಾದ್ ಮೋತಿ ಮಿಯಾ ಅವರಿಂದ ಸಂಗೀತ ಕಲಿಯಲಾರಂಭಿಸಿದ್ದರು. ಹಲವು ವರ್ಷಗಳ ಕಾಲ ಪತಿಯೊಂದಿಗೆ ಅವರು ಕೋಲ್ಕತ್ತದಲ್ಲಿ ನೆಲೆಸಿದ್ದರು. ಅವರಿಗೆ ಒಬ್ಬ ಪುತ್ರಿ ಹಾಗೂ ಮೊಮ್ಮಗಳು ಇದ್ದಾರೆ.

ಗೋಲ್ಡನ್ ಚಾರಿಯಟ್ 14ರಿಂದ ಆರಂಭ

ಗೋಲ್ಡನ್ ಚಾರಿಯಟ್ ರೈಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಐಷಾರಾಮಿ ರೈಲು 'ಗೋಲ್ಡನ್ ಚಾರಿಯಟ್' ಅನ್ನು ಪುನರಾರಂಭಿಸಲು ಭಾರತೀಯ ರೈಲ್ವೆಯ ಐಆರ್‌ಸಿಟಿಸಿ ವಿಭಾಗವು ನಿರ್ಧರಿಸಿದೆ. ಈ ಋತುವಿನ ಮೊದಲ ಪಯಣ ಇದೇ 14ರಂದು (ಭಾನುವಾರ) ಆರಂಭವಾಗಲಿದೆ.

ಆರು ರಾತ್ರಿ ಮತ್ತು ಏಳು ದಿನಗಳ ಈ ಪಯಣವು ಬೆಂಗಳೂರಿನಿಂದ ಆರಂಭವಾಗಲಿದೆ. ಬಂಡೀಪುರ, ಮೈಸೂರು, ಹಳೇಬೀಡು, ಚಿಕ್ಕಮಗಳೂರು, ಹಂಪಿ, ಐಹೊಳೆ, ಪಟ್ಟದಕಲ್ ಮತ್ತು ಗೋವಾ ಸಂದರ್ಶನದ ಬಳಿಕ ಬೆಂಗಳೂರಿಗೆ ಮರಳಲಿದೆ. ಮೂರು ರಾತ್ರಿ ಮತ್ತು ನಾಲ್ಕು ದಿನಗಳ ಪ್ರವಾಸದ ಇನ್ನೊಂದು ರೈಲು ಇದೇ 21ರಂದು ಬೆಂಗಳೂರಿನಿಂದ ಹೊರಡಲಿದೆ. ಮೈಸೂರು, ಹಂಪಿ ಮತ್ತು ಮಹಾಬಲಿಪುರಂ ಸಂದರ್ಶಿಸುವ ರೈಲು ಬಳಿಕ ಬೆಂಗಳೂರಿಗೆ ಮರಳಲಿದೆ ಎಂದು ಐಆರ್‌ಸಿಟಿಸಿ ತಿಳಿಸಿದೆ.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಮಾಲೀಕತ್ವದ ಈ ರೈಲು ಸೇವೆ 2008ರಲ್ಲಿ ಆರಂಭವಾಗಿತ್ತು. 2020ರಲ್ಲಿ ಇದರ ನಿರ್ವಹಣೆಯನ್ನು ಐಆರ್‌ಸಿಟಿಸಿಗೆ ವಹಿಸಲಾಗಿದೆ.

ರೈಲಿನ ವಿನ್ಯಾಸದಲ್ಲಿ ಹಲವು ಬದಲಾವಣೆಗಳನ್ನು ಮಾಡಲಾಗಿದೆ. ವೈಫೈ, ಒಟಿಟಿ ಸೌಲಭ್ಯ ಅಳವಡಿಸಲಾಗಿದೆ. ಅಂತರರಾಷ್ಟ್ರೀಯ ಮತ್ತು ದೇಶೀಯ ಆಹಾರದ ಆಯ್ಕೆಯೂ ಇದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಅಸ್ಸಾಂನಲ್ಲಿ ಚುನಾವಣೆ ಚಟುವಟಿಕೆಗಳು ಬಿರುಸಾಗಿ ನಡೆಯುತ್ತಿರುವ ಮಧ್ಯೆಯೇ ಎಐಯುಡಿಎಫ್ ಮುಖಂಡ ಹಾಗೂ ಸಂಸದ ಮೌಲಾನಾ ಬದ್ರುದ್ದೀನ್ ಅಜ್ಮಲ್ ಅವರು 'ಭಾರತವನ್ನು ಇಸ್ಲಾಮಿಕ್ ರಾಷ್ಟ್ರವಾಗಿ ಪರಿವರ್ತಿಸುವ ಕರೆ' ಕೊಟ್ಟಿರುವ ವಿಷಯ ಸಾಕಷ್ಟು ಸುದ್ದಿಯಲ್ಲಿದೆ. ಅವರು ಹೀಗೆ ಹೇಳಿದ್ದಾರೆ ಎನ್ನಲಾದ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಭಾರತವನ್ನು ಇಸ್ಲಾಮಿಕ್ ದೇಶ ಮಾಡುವುದಾಗಿ ಬದ್ರುದ್ದೀನ್ ಹೇಳಿದ್ದಾರೆ ಎಂದು ಉಲ್ಲೇಖಿಸಿರುವ ಪೋಸ್ಟ್

ಈ ಕುರಿತು ಪರಿಶೀಲನೆ ನಡೆಸಿದ ಲಾಜಿಕಲ್ ಇಂಡಿಯನ್ಸ್ ವೆಬ್‌ಸೈಟ್, ವಿಡಿಯೊವನ್ನು ತಿರುಚಲಾಗಿದೆ ಎಂದು ತಿಳಿಸಿದೆ. ಮೂಲ ವಿಡಿಯೊದಲ್ಲಿ ಬದ್ರುದ್ದೀನ್ ಹೇಳಿರುವುದು ಇಷ್ಟು: 'ಮೊಘಲರು 800 ವರ್ಷ ಆಳಿದರೂ ಭಾರತವನ್ನು ಇಸ್ಲಾಮಿಕ್ ರಾಷ್ಟ್ರ ಮಾಡಲು ಆಗಲಿಲ್ಲ. ಬ್ರಿಟಿಷರ ಆಳ್ವಿಕೆಯಲ್ಲಿ ಕ್ರಿಶ್ಚಿಯನ್ ದೇಶ ಮಾಡಲು ಆಗಲಿಲ್ಲ. ಸ್ವಾತಂತ್ರ್ಯಾನಂತರ ಕಾಂಗ್ರೆಸ್ 55 ವರ್ಷ ಆಳಿದರೂ ಹಿಂದುತ್ವ ದೇಶ ಕಟ್ಟುವ ಕನಸು ಕಂಡಿರಲಿಲ್ಲ. ಇನ್ನು ನರೇಂದ್ರ ಮೋದಿ ಅವರಿಂದ ಹಿಂದುತ್ವ ದೇಶ ಕಟ್ಟಲು ಆಗದು. ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು, ಸೂಕ್ತವೆನಿಸಿದವರಿಗೆ ಮತ ನೀಡಿ'.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮೈತ್ರಿಯ ಗುಟ್ಟು

ಒಂದು ಟಗರು ಅರಮನೆಯ ಗಜಶಾಲೆಯಲ್ಲಿ, ಆನೆಗಳ ಮುಂದೆ ಹಾಕಿದ ಹುಲ್ಲಿನ ರಾಶಿಯಲ್ಲಿ ಒಂದಷ್ಟನ್ನು ತಿನ್ನುತ್ತಿತ್ತು. ಅದನ್ನು ಕಂಡ ಮಾವಟಿಗಳು ಅದನ್ನು ಹೊಡೆದು ಓಡಿಸಿದರು. ಇನ್ನೊಬ್ಬ ದೊಣ್ಣೆಯಿಂದ ಬೆನ್ನಿಗೆ ಹೊಡೆದ. ಸೊಂಟವನ್ನು ಬಾಗಿಸಿಕೊಂಡು ನೋವಿನಿಂದ ಕೂಗುತ್ತ ಅದು ಗಜಶಾಲೆಯ ಗೋಡೆಯ ಹಿಂದೆ ಮಲಗಿತು. ಅದೇ ದಿನ ರಾಜನ ಅಡುಗೆ ಮನೆಯಲ್ಲಿ ವಿಶೇಷ ಮೀನಿನ ಅಡುಗೆಯಾಗುತ್ತಿತ್ತು. ಹೊರಗೆ ನಿಂತಿದ್ದ ನಾಯಿಗೆ ಈ ವಾಸನೆಯ ಆಕರ್ಷಣೆಯನ್ನು ತಡೆದುಕೊಳ್ಳುವುದು ಅಸಾಧ್ಯವಾಯಿತು. ಅಡುಗೆಯವ ಬೇರೆಡೆಗೆ ನೋಡುತ್ತಿದ್ದಾಗ ಅಡುಗೆ ಮನೆಗೆ ನುಗ್ಗಿ, ಮುಚ್ಚಳವನ್ನು ತಳ್ಳಿ, ಮಾಂಸದ ತುಂಡನ್ನು ಬಾಯಿಯಲ್ಲಿ ಹಿಡಿದುಕೊಂಡಿತು. ಮುಚ್ಚಳ ಬಿದ್ದ ಸಪ್ಪಳ ಕೇಳಿ ಓಡಿಬಂದ ಅಡುಗೆಯವ ನಾಯಿಯನ್ನು ಕಂಡು ಬಾಗಿಲುಮುಚ್ಚಿ ಕೋಲಿನಿಂದ ಹೊಡೆದ. ಮಾಂಸದ ಚೂರನ್ನು ಅಲ್ಲಿಯೇ ಬಿಟ್ಟು ನಾಯಿ ಹೊರಗೆ ಹೋಗುವಾಗ ಮತ್ತೊಬ್ಬ ದೊಣ್ಣೆಯಿಂದ ಸೊಂಟದ ಮೇಲೆ ಪೆಟ್ಟು ಹಾಕಿದ. ನಾಯಿ ನೋವಿನಿಂದ ಅರಚುತ್ತ ಗಜಶಾಲೆಯ ಹಿಂದಿನ ಗೋಡೆಗೆ ಬಂದು ಕುಳಿತಿತು. ಅಲ್ಲಿಯೇ ಕುಳಿತಿದ್ದ ಟಗರು, 'ಯಾಕಪ್ಪಾ, ಸೊಂಟ ಬಗ್ಗಿಸಿಕೊಂಡು ನಡೆಯುತ್ತಿದ್ದೀ? ವಾತರೋಗವೇ?' ಎಂದು ಕೇಳಿತು. ನಾಯಿಗೆ ಕೋಪ ಬಂದು, 'ನೀನೂ ಹಾಗೆಯೇ ನಡೆಯುತ್ತಿದ್ದೀಯಲ್ಲ, ನಿನಗೆ ರೋಗ ಬಂದಿದೆಯೇ?' ಎಂದು ಒರಟಾಗಿ ಕೇಳಿತು. ಎರಡೂ ಪ್ರಾಣಿಗಳು ತಮಗಾದ ತೊಂದರೆಯನ್ನು ಹೇಳಿಕೊಂಡು ಅತ್ತವು. ಹಾಗಾದರೆ ಮುಂದೆ ನಮ್ಮ ಗತಿ ಏನು ಎಂದು ಚಿಂತಿಸಿದವು.

ಟಗರು ಹೇಳಿತು, 'ನಾವಿಬ್ಬರೂ ಒಟ್ಟಿಗೆ ಕೆಲಸ ಮಾಡಿದರೆ ಇಬ್ಬರೂ ಸಂತೋಷವಾಗಿರಬಹುದು. ನೀನು ಗಜಶಾಲೆಗೆ ಹೋಗು. ನೀನು ಹುಲ್ಲು ತಿನ್ನುವವನಲ್ಲ. ಆದ್ದರಿಂದ ಮಾವಟಿಗೆ ನಿನಗೆ ಏನೂ ಮಾಡುವುದಿಲ್ಲ. ನೀನು ಅಲ್ಲಿಯೇ ಕುಳಿತುಕೊಂಡು ಮಾವಟಿಗ ಹೊರಗೆ ಹೋದಾಗ ನಾಲ್ಕಾರು ಪಿಂಡಿ ಹುಲ್ಲು ಎತ್ತಿಕೊಂಡು ಇಲ್ಲಿಗೆ ಬಾ. ನಾನು ಅಡುಗೆ ಮನೆಗೆ ಹೋಗುತ್ತೇನೆ. ನಾನು ಸಸ್ಯಾಹಾರಿಯಾದ್ದರಿಂದ ಅಡುಗೆಯವನಿಗೆ ನನ್ನ ಮೇಲೆ ಸಂಶಯ ಬರುವುದಿಲ್ಲ. ಅಡುಗೆಯವ ಹೊರಗೆ ಹೋದಾಗ ನಾನು ನಾಲ್ಕಾರು ಮಾಂಸದ ತುಂಡುಗಳನ್ನು ಎತ್ತಿಕೊಂಡು ಬರುತ್ತೇನೆ'. ಇದೇ ಸರಿಯಾದ ಉಪಾಯವೆಂದು ಎರಡೂ ಪ್ರಾಣಿಗಳು ಒಪ್ಪಿ ಅದರಂತೆ ನಡೆದು ಸುಖವಾಗಿದ್ದವು. ಒಂದು ಸಂಜೆ ಮಿಥಿಲೆಯ ರಾಜ ವಿದೇಹ ಜಲಪಾನವಾದ ಮೇಲೆ ಅರಮನೆಯ ಮಾಳಿಗೆಯ ಮೇಲೆ ತಿರುಗಾಡುತ್ತಿದ್ದ. ಅಲ್ಲಿ ಗಜಶಾಲೆಯ ಗೋಡೆಯ ಹಿಂದೆ ಒಂದು ಟಗರು ಮತ್ತು ನಾಯಿ ಅತ್ಯಂತ ಸ್ನೇಹದಿಂದಿರುವುದನ್ನು ಕಂಡ. ಅದು ಅವನಿಗೆ ಆಶ್ಚರ್ಯ ತಂದಿತು.

ಮರುದಿನ ರಾಜ ಈ ಪ್ರಶ್ನೆಯನ್ನು ಮಂತ್ರಿಗಳಿಗೆ ಕೇಳಿದ, 'ಯಾಕೆ ಈ ಎರಡೂ ಪ್ರಾಣಿಗಳು ಶತ್ರುತ್ವವನ್ನು ಮರೆತು ಸ್ನೇಹಿಗಳಾಗಿವೆ?' ಮಂತ್ರಿಗಳಿಗೆ ಉತ್ತರ ಹೊಳೆಯಲಿಲ್ಲ. ಮಹೋಷಧಕುಮಾರ ಒಂದು ದಿನದ ಅವಕಾಶ ಕೇಳಿದ. ಮಧ್ಯಾಹ್ನ ಅರಮನೆಗೆ ಹೋಗಿ, ರಾಜ ನಿನ್ನೆಯ ದಿನ ಏನನ್ನು ಗಮನಿಸಿದ ಎಂದು ರಾಣಿಯನ್ನು ಕೇಳಿದ. ಆಕೆ, ಆತ ಅರಮನೆಯ ಮಾಳಿಗೆಯ ಮೇಲೆ ನಿಂತು ಬಹಳ ಹೊತ್ತು ಗಜಶಾಲೆಯನ್ನು ನೋಡುತ್ತಿದ್ದುದನ್ನು ಹೇಳಿದಳು. ಈತ ಅಲ್ಲಿ ಹೋಗಿ ನೋಡಿದರೆ, ಗೋಡೆಯ ಹಿಂದೆ ಹುಲ್ಲಿನ ರಾಶಿ ಹಾಗೂ ಮಾಂಸ ತಿಂದು ಉಳಿದ ಎಲುಬುಗಳು ಕಂಡವು. ಕುಮಾರ ಬಂದು ರಾಜನಿಗೆ ಹೇಳಿದ, 'ಬದುಕುವ ಆಸೆ, ವೈರಿಗಳನ್ನು ಸ್ನೇಹಿತರನ್ನಾಗಿ ಮಾಡುತ್ತದೆ. ಟಗರು ಮಾಂಸವನ್ನು ನಾಯಿಗೆ ತಂದುಕೊಟ್ಟರೆ, ನಾಯಿ ಟಗರಿಗೆ ಹುಲ್ಲು ತಂದು ಹಾಕುತ್ತದೆ'.

ಪರಸ್ಪರ ವೈರತ್ವವನ್ನು ಹೊಂದಿದವರು ಯಾವುದೋ ಸಮಾನ ಅಪೇಕ್ಷೆಗಾಗಿ ಸ್ನೇಹಿತರಾಗಿರುವಂತೆ ವರ್ತಿಸುವುದನ್ನು ಇಂದಿಗೂ ಕಾಣುತ್ತೇವೆ. ❖

ದಿನ ಭವಿಷ್ಯ

ಗುರುವಾರ 11 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪೂರ್ವಾಭಾದ್ರ ತ್ರಯೋದಶೀ ಗಂ. 19-50 (ಹ. 2-32) ಗುರುವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 37-44 (ರಾ. 9-43) ಶಿವ ನಾಮ ಯೋಗ ಗಂ. 7-35 ವಣಿಜ ಕರಣ ಗಂ. 19-50 ವಿಷ. ಗಂ. 56-6 ಅಮೃತ ಗಂ. 11-57 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ: ಬೆ ಗಂ 9-00 ರಿಂದ 10-30 ಯಮಗಂಡ ಕಾಲ: ಬೆ ಗಂ 6-00 ರಿಂದ 7-30 ಸೂರ್ಯೋದಯ: 6-33 ಸೂರ್ಯಾಸ್ತ: 6-26 ಅದೃಷ್ಟ ಸಂಖ್ಯೆ 5

ಮೇಷ: ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆಯಾಗಲಿವೆ. ಅತಿಥಿಗಳ ಆಗಮನದಿಂದ ಸಂತಸದ ವಾತಾವರಣ. ಆಯಾಸ ತೋರಿಬಂದರೂ ದಿನದ ಅಂತ್ಯದಲ್ಲಿ ಕೆಲಸಗಳಲ್ಲಿ ಪ್ರಗತಿ ಕಂಡುಬರಲಿದೆ.

ವೃಷಭ: ಆರ್ಥಿಕವಾಗಿ ನಾನಾರೀತಿಯಲ್ಲಿ ಧನ ಸಂಗ್ರಹವಾಗಿ ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಅನುಕೂಲತೆ ಕೂಡಿಬರಲಿದೆ. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿ ಲಾಭಾಂಶ ಹೆಚ್ಚಳ.

ಮಿಥುನ: ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಉತ್ತಮ ಕಾಲ. ಮನಸ್ಸಿಟ್ಟು ಕೆಲಸ ಮಾಡಿದಲ್ಲಿ ವಿದೇಶಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಭೂ ಖರೀದಿ ವ್ಯವಹಾರವನ್ನು ಮಾಡಲು ಸಕಾಲ.

ಕರ್ಕಾಟಕ: ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ನೌಕರ ವರ್ಗಕ್ಕೆ ಕೆಲಸಗಳಿಂದ ವಿರಾಮ. ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸುವುದು ಒಳ್ಳೆಯದು.

ಸಿಂಹ: ಉನ್ನತ ಅಧ್ಯಯನಕ್ಕೆ ಉತ್ತೇಜನ ದೊರೆತು ವಿದೇಶಕ್ಕೆ ಪ್ರಯಾಣ ಮಾಡುವ ಸಾಧ್ಯತೆ. ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ವಿಶೇಷ ಭೋಜನ ಕೂಟದಲ್ಲಿ ಭಾಗಿ.

ಕನ್ಯಾ: ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಸಂಗಾತಿಯ ಕೋಪವನ್ನು ಎದುರಿಸಬೇಕಾದೀತು. ಮನೆಯವರ ಪ್ರಯಾಣಕ್ಕಾಗಿ ವಿಶೇಷ ವೆಚ್ಚ ಭರಿಸಬೇಕಾದೀತು.

ತುಲಾ: ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳು ತೆರೆದುಕೊಳ್ಳುವ ಸಾಧ್ಯತೆ. ನ್ಯಾಯಾಲಯದಲ್ಲಿನ ಕಟ್ಟಳೆಗಳಿಗೆ ಚಾಲನೆ. ಖರೀದಿ ಮಾರಾಟ ವ್ಯವಹಾರಗಳಲ್ಲಿ ಉತ್ತಮ ಲಾಭ. ಸಾಹಿತಿ, ಬುದ್ಧಿಜೀವಿಗಳಿಗೆ ಗೌರವ ಪ್ರಾಪ್ತಿ.

ವೃಶ್ಚಿಕ: ಕೆಲಸ ಕಾರ್ಯಗಳಲ್ಲಿ ಅನುಕೂಲ. ಉದ್ಯೋಗ ಕ್ಷೇತ್ರದಲ್ಲಿ ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವಿಶ್ವಾಸದಿಂದ ಉದ್ಯೋಗ ವ್ಯಾಪಾರಗಳಲ್ಲಿ ತೊಡಗಿಕೊಳ್ಳುವುದರಿಂದ ಹೆಚ್ಚಿನ ಲಾಭ.

ಧನು: ಉದ್ಯೋಗಾಕಾಂಕ್ಷಿಗಳಿಗೆ ಅನಿರೀಕ್ಷಿತ ಉದ್ಯೋಗಾವಕಾಶ. ವಿದೇಶಿ ವ್ಯವಹಾರಸ್ಥರೊಂದಿಗಿನ ಸಂಪರ್ಕದಿಂದಾಗಿ ವ್ಯವಹಾರಕ್ಕೊಂದು ತಿರುವು. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಗತಿ.

ಮಕರ: ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲತೆ. ಸಾಮಾಜಿಕ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತೋಷ ಅನುಭವಿಸಲಿದ್ದೀರಿ. ಮಕ್ಕಳಿಂದ ಆರ್ಥಿಕ ಸಹಕಾರ.

ಕುಂಭ: ದೇವತಾನುಗ್ರಹದಿಂದ ಶುಭ ಕಾರ್ಯಗಳು ನಿಮ್ಮ ಮನದಿಚ್ಛೆಯಂತೆ ನೆರವೇರುವವು. ಧೈರ್ಯ ಆತ್ಮವಿಶ್ವಾಸ ಮತ್ತು ಪ್ರಯತ್ನ ಬಲದಿಂದಾಗಿ ಅನುಕೂಲ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ.

ಮೀನ: ನಿಮ್ಮ ಒಳ್ಳೆಯತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ಅವಶ್ಯಕತೆಗಿಂತ ಹೆಚ್ಚಾಗಿ ಹಣಕಾಸಿನ ನೆರವು ದೊರೆಯಲಿದೆ. ಶೀಘ್ರದಲ್ಲೇ ಸಂತೋಷಕರ ಸುದ್ದಿಯೊಂದನ್ನು ಆಲಿಸಲಿದ್ದೀರಿ.

ನಿಮ್ಮ ಜನ್ಮದಿನ 11-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಸಂಗಾತಿಯ ಪ್ರಭಾವದ ಅತಿರೇಕದಿಂದಾಗಿ ಸ್ವತಂತ್ರ ಯೋಚನೆಗೆ ಧಕ್ಕೆಯುಂಟಾಗಿ ನಿಮ್ಮನ್ನೇ ಕಳೆದುಕೊಳ್ಳುವ ಭಯ ಆವರಿಸಬಹುದು. ನೌಕರಿಗಿಂತಲೂ ಸ್ವಂತಂತ್ರ ಉದ್ಯೋಗವನ್ನು ಅವಲಂಬಿಸಿ ಯಶಸ್ಸನ್ನು ಸಾಧಿಸಲಿದ್ದೀರಿ.

ಪದಬಂಧ 4533

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ದೊಡ್ಡ ಪ್ರವಾಹ (4)
3. ಈತ ಅನುಭವವುಳ್ಳವನು (4)
5. ಕೊನೆಗೆ ಬೆಲೆಯನ್ನಿಟ್ಟು ನೀಡಿದ ಸಲುಗೆ (3)
6. ಭ್ರೂಣವನ್ನು ಆವರಿಸಿರುವ ಪೊರೆ (3)
8. ಸಂಗನ ಬದುಕಿನಲ್ಲಾದ ಘಟನೆ (3)
10. ಆ ಸಾರೆ ನೀಡಿದ ಆಶ್ರಯ (3)
11. ಪಾಯಸವನ್ನು ನೆಕ್ಕುತ್ತಿರುವ ಕಾಗೆ (3)
13. ಅಳುವಿನೊಂದಿಗೆ ಹೆದರಿಕೆ ಬಂದಿದೆಯಲ್ಲಾ? (3)
15. ಮೊದಲಿದ್ದ ಸ್ಥಿತಿಯಿದು (4)
16. ಯುದ್ಧದ ನಗಾರಿ (4)

ಮೇಲಿಂದ ಕೆಳಕ್ಕೆ

1. ಮಜವಾಗಿ ಆಳ್ವಿಕೆ ನಡೆಸಿದ ಚಕ್ರವರ್ತಿ (4)
2. ಬೆಕ್ಕಸಬೆರಗಾದ ಅಸುರ (3)
3. ಸುರನ ಹತ್ತಿರವಿರುವ ರಾಕ್ಷಸ (3)
4. ಕೊನೆಗೆ ಯೋಗವಿದ್ದದ್ದಕ್ಕೇ ಈ ಹಂಚಿಕೆ! (4)
7. ಇದು ರಜೋಗುಣಕ್ಕೆ ಸಂಬಂಧಪಟ್ಟದ್ದು (3)
9. ದಾಯಾದಿ ಮಾಡಿರುವ ಪಾವತಿ (3)
10. ಖರ್ಚು ಮತ್ತು ವೆಚ್ಚ (4)
12. ಒಳ್ಳೆಯ ಆಚಾರವುಳ್ಳವನು (4)
13. ದೇವತೆಗಳ ಜನನಿ (3)
14. ಅಷ್ಟ ದಿಕ್ಪಾಲಕರಲ್ಲಿಅತೀ ಶ್ರೀಮಂತ! (3)



4532ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗೊತ್ತುಗುರಿ 3.ಭವಿ 5.ವಲೀಮುಖ 7.ವಿನ್ಯಾಸ 8.ಅಂತರ್ದೇಶಿಯ 11.ಬಲಿಷ್ಠ 12.ರಸಉಕ್ತಿ 14.ರಿಕ್ತ 15.ಅವಭೃಥ

ಮೇಲಿಂದ ಕೆಳಕ್ಕೆ: 1.ಗೊತ್ತುವಳಿ 2.ಗುದಾಮು 4.ವಿಧ್ವಾಂಸ 6.ಖಚಿತ 7.ವಿಜಯ 8.ಅಂಗುಷ್ಠ 9.ಶೀಕರ 10.ಮುಕ್ತಿಪಥ 11.ಬತೇರಿ 13.ಸಣ್ಣವ

ಸುಡೊಕು 4919

		8				5		7
	2		6		7		4	
		5		4			9	1
	4				1		7	
8				2			1	4
	9		7			6		
9				3		4		
			4		8		2	
2		4						3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4918 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

15ನೇ ವರ್ಷದ ಪುಣ್ಯ ತಿಥಿ



ದಿ|| ಬಿ.ಜಯರಾಂ
ಮಾಜಿ ನಗರಸಭಾ ಸದಸ್ಯರು, ಮಲ್ಲೇಶ್ವರಂ DOD: 11.03.2006
ಜೀವಾತ್ಮವು ಪರಮಾತ್ಮನಲ್ಲಿ ವಿಲೀನವಾಗುವುದೇ ಜೀವನದ ಸಾಕ್ಷಾತ್ಕಾರ
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ
ಪತ್ನಿ ರಾಮಕ್ಕ ಮತ್ತು ಕುಟುಂಬ ವರ್ಗದವರು
ದೂರವಾಣಿ: 9845344442, 9845091138, 23443118

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮೊದಲನೇ ವರ್ಷದ ಪುಣ್ಯಸ್ಮರಣೆ



ದಿ. ಶ್ರೀ ಮುನಿಗೌಡಪ್ಪನವರ ಮಗ
ಶ್ರೀ ಕೆ. ಎಂ. ಶಾಮಣ್ಣನವರು
ಜನನ: 03–08–1943 – ಮರಣ: 11–03–2020
ಧರ್ಮಪತ್ನಿ ಪಾಪಮ್ಮ ಮತ್ತು ಮಕ್ಕಳು

ಮೂರನೇ ವರ್ಷದ ಪುಣ್ಯಸ್ಮರಣೆ

ಶ್ರೀ ಜಿ. ಹೆಚ್. ಮುನಿರೆಡ್ಡಿ
(ದಿ. ಗೌಡರ ಹನುಮಪ್ಪರೆಡ್ಡಿರವರ ಮಗರವರು
ದಿನಾಂಕ 11–3–2018ರಂದು ದೈವಾಧೀನರಾದರು.
ನೀವು ನಮ್ಮನ್ನಗಲಿ 3 ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಪತ್ನಿ ಶ್ರೀಮತಿ ಗೌರಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧುಗಳು

ಹದಿನೇಳನೇ ವರ್ಷದ ಪುಣ್ಯಸ್ಮರಣೆ



ಡಾ|| ಬಿ.ಸಿ. ಸಗನೇ ಗೌಡರು, ಎಂ.ಎಸ್.
ನಿವೃತ್ತ ಜಿಲ್ಲಾ ಸರ್ಜನರು,
ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ದ.ಕ.ಜಿಲ್ಲೆ.
ಜನನ : 05-04-1935 ನಿಧನ : 11-03-2004
ನೀವು ನಮ್ಮನ್ನಗಲಿ ಹದಿನೇಳು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬಸ್ಥರು, ಬೇಲೂರು–573115
ಫೋನ್: 6362934108, 9845689500, 9844436598, 9964480611

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ರಿಟೇಲ್ ಹಣದುಬ್ಬರ ಏರಿಕೆ?

ಬೆಂಗಳೂರು (ರಾಯಿಟರ್ಸ್): ಆಹಾರ ಮತ್ತು ಇಂಧನ ದರಗಳ ಏರಿಕೆ ಆಗಿರುವುದರಿಂದ ದೇಶದ ಚಿಲ್ಲರೆ ಹಣದುಬ್ಬರ ಪ್ರಮಾಣವು ಫೆಬ್ರುವರಿಯಲ್ಲಿ ಏರಿಕೆ ಆಗಿರುವ ಸಾಧ್ಯತೆ ಇದೆ ಎಂದು ರಾಯಿಟರ್ಸ್ ಸಮೀಕ್ಷೆ ಹೇಳಿದೆ. 'ಹೀಗಿದ್ದರೂ, ಹಣದುಬ್ಬರ ಪ್ರಮಾಣವು ಸತತ ಮೂರನೇ ತಿಂಗಳಿನಲ್ಲಿಯೂ ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿ ಮಾಡಿರುವ ಮಿತಿಯೊಳಗೇ ಇದೆ' ಎಂದು ಸಮೀಕ್ಷೆ ಹೇಳಿದೆ.

ರಾಯಿಟರ್ಸ್ ಸಂಸ್ಥೆಯು ಮಾರ್ಚ್ 5ರಿಂದ 9ರವರೆಗೆ 50 ಜನ ಅರ್ಥಶಾಸ್ತ್ರಜ್ಞರಿಂದ ಅಭಿಪ್ರಾಯ ಸಂಗ್ರಹಿಸಿದೆ. ಚಿಲ್ಲರೆ ಹಣದುಬ್ಬರ ಜನವರಿಯಲ್ಲಿ ಶೇ 4.06ರಷ್ಟು ಇದ್ದಿದ್ದು ಫೆಬ್ರುವರಿಯಲ್ಲಿ ಶೇ 4.83ಕ್ಕೆ ಏರಿಕೆಯಾಗಿದೆ ಎಂಬ ಅಭಿಪ್ರಾಯವು ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ. 'ಫೆಬ್ರುವರಿಯಲ್ಲಿ ಹಣದುಬ್ಬರವು ಶೇ 4.8ಕ್ಕೆ ಪುಟಿದೆದ್ದಿದೆ ಎಂದು ನಾವು ಭಾವಿಸುತ್ತೇವೆ. ಕಳೆದ ತಿಂಗಳು ದೇಶಿ ಇಂಧನ ದರದಲ್ಲಿ ಆಗಿರುವ ಏರಿಕೆಯು ಸಾಗಣೆ ವೆಚ್ಚ ಹೆಚ್ಚಾಗಿರುವುದನ್ನು ಸೂಚಿಸುತ್ತಿದೆ. 'ಇದರ ಜೊತೆಯಲ್ಲೇ ಹೆಚ್ಚಾಗಿ, ಆಹಾರ ಉತ್ಪನ್ನಗಳ ರಿಟೇಲ್ ಬೆಲೆಯು ಆಹಾರ ಹಣದುಬ್ಬರದಲ್ಲಿ ಗಮನಾರ್ಹ ಏರಿಕೆಯನ್ನು ಸೂಚಿಸುತ್ತಿದೆ' ಎಂದು ಕ್ಯಾಪಿಟಲ್ ಎಕನಾಮಿಕ್ಸ್‌ನಲ್ಲಿ ಭಾರತದ ಅರ್ಥಶಾಸ್ತ್ರಜ್ಞ ಶೈಲನ್ ಶಾ ಹೇಳಿದ್ದಾರೆ.

ತೈಲ ಬೆಲೆ ಸ್ಥಿರತೆ: ರಷ್ಯಾ ಭರವಸೆ

ಮಾಸ್ಕೊ (ರಾಯಿಟರ್ಸ್): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ತೀವ್ರ ಪ್ರಮಾಣದ ಏರಿಳಿತ ಇಲ್ಲದಂತೆ ನೋಡಿಕೊಳ್ಳಲು 'ಒಪೆಕ್ +' (ಪೆಟ್ರೋಲಿಯಂ ರಫ್ತು ಮಾಡುವ ದೇಶಗಳು ಹಾಗೂ ಆ ದೇಶಗಳ ಮಿತ್ರ ರಾಷ್ಟ್ರಗಳ ಒಕ್ಕೂಟ) ಸಂಘಟನೆಯು ಪ್ರಯತ್ನಿಸಲಿದೆ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಬುಧವಾರ ಹೇಳಿದ್ದಾರೆ.

ಮಾರುಕಟ್ಟೆಯಲ್ಲಿ ಕಚ್ಚಾ ತೈಲಕ್ಕೆ ಈಗ ಸಿಗುತ್ತಿರುವ ಬೆಲೆಯು ಉತ್ಪಾದಕ ಹಾಗೂ ಗ್ರಾಹಕ ದೇಶಗಳ ಹಿತ ಕಾಯುವಂತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸೌದಿ ಅರೇಬಿಯಾದ ವಿದೇಶಾಂಗ ಸಚಿವರ ಜೊತೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಲಾವ್ರೊವ್, 'ರಷ್ಯಾ ಮತ್ತು ಸೌದಿ ಅರೇಬಿಯಾ ಒಟ್ಟಾಗಿ ಒಪೆಕ್ + ಒಕ್ಕೂಟದಲ್ಲಿ ಸಹಕಾರ ಹೆಚ್ಚುವಂತೆ ಮಾಡುವ ಯೋಜನೆ ಹೊಂದಿವೆ' ಎಂದರು.

ವೈಕುಂಠಸಮಾರಾಧನೆ



ದೊಡ್ಡಮನೆ ವೈ. ಬಾಬುರೆಡ್ಡಿ
ದಿ|| ಶ್ರೀಮತಿ/ಶ್ರೀ ಸರೋಜಮ್ಮ ಯಲ್ಲಪ್ಪರೆಡ್ಡಿರವರ ಮಗ, ದೊಡ್ಡಬಾಣಸವಾಡಿ, ಬೆಂಗಳೂರು
ಇವರು ದಿನಾಂಕ: 28.02.2021ರ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 11.03.2021 ಗುರುವಾರ ಬೆಳಿಗ್ಗೆ 9.00 ರಿಂದ 10.30 ರವರೆಗೆ ನಮ್ಮ ಸ್ವಗೃಹ, ನಂ. 307, ವಿಜಯ ಬ್ಯಾಂಕ್ ಕಾಲೋನಿ, ರಾಮಮೂರ್ತಿನಗರ ಮುಖ್ಯರಸ್ತೆ, ದೊಡ್ಡಬಾಣಸವಾಡಿ ಬೆಂಗಳೂರು. ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಪತ್ನಿ–ಶ್ರೀಮತಿ ರಾಧ ಮತ್ತು ಮಕ್ಕಳು ಹಾಗೂ ಕುಟುಬದವರು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,098
ಇಂದಿನ ಅಂತ್ಯ	15,174
▲	76
ದಿನದ ಗರಿಷ್ಠ	15,218

ವಿನಿಮಯ ದರ

$ ಡಾಲರ್	72.91
£ ಪೌಂಡ್	101.13
€ ಯುರೊ	86.64
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹400
12 ಮೊಟ್ಟೆಗೆ ₹54
ಮೈಸೂರು
100 ಮೊಟ್ಟೆಗೆ ₹403

'ಇರಲಿ ಮುನ್ನುಗ್ಗುವ ಛಾತಿ'

ಎಂ. ಶ್ರೀನಿವಾಸ ರಾವ್
ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಆಂತ್ರಪ್ರೆನ್ಯೂರ್‌ಶಿಪ್‌ನ ಸಿಇಒ

ಸ್ಫೂರ್ತಿಯ ಉದ್ಯಮಿ

ಬದುಕಿನಲ್ಲಿ ಕೆಲವು ಅನಿರೀಕ್ಷಿತ ತಿರುವುಗಳಿರುತ್ತವೆ. ಅದರಲ್ಲೂ, ನೀವು ನಿಮ್ಮ ಕನಸಿನ ಬೆನ್ನೇರಿ ಹೋಗುವಾಗ ಎದುರಾಗುವ ಅನಿರೀಕ್ಷಿತ ಘಟನೆಗಳು ಅದೆಷ್ಟೋ... ಪದ್ಮಜಾ ರಾವ್ ಅವರ ಕಥೆ ಕೂಡ ಇದಕ್ಕೆ ಹೊರತಲ್ಲ. ಪದ್ಮಜಾ ಅವರು 2019ರಲ್ಲಿ ಶುರುವಾದ ಮಾಡ್ಯುಲರ್ ಪೀಠೋಪಕರಣಗಳ ತಯಾರಿಕಾ ಸಂಸ್ಥೆ 'ಅರ್ಬನ್‌ವುಡ್ ಇಂಟೀರಿಯರ್ಸ್'ನ ಸಹ ಸ್ಥಾಪಕರು ಮತ್ತು ಮಾರುಕಟ್ಟೆ ವಿಭಾಗದ ಮುಖ್ಯಸ್ಥರು.

2004ರಲ್ಲಿ 'ಇನ್ಫೊಸಿಸ್' ಕಂಪನಿಯ ಮೂಲಕ ತಮ್ಮ ವೃತ್ತಿ ಬದುಕು ಆರಂಭಿಸಿದ ಪದ್ಮಜಾ, ನಂತರದಲ್ಲಿ ಡಾಯಿಷ್ ಬ್ಯಾಂಕ್‌ನಲ್ಲಿ ಕೆಲವು ವರ್ಷ ಕೆಲಸ ಮಾಡಿದರು. ಆದರೆ, ಅವರೊಳಗಿನ ಉದ್ಯಮಿಯ ಮನೋಭಾವ ಜಾಗೃತವಾಗಿ ಇತ್ತು. 'ಒಳಾಂಗಣ ವಿನ್ಯಾಸ ನನ್ನನ್ನು ಸದಾ ಆಕರ್ಷಿಸುತ್ತಲೇ ಇತ್ತು. ಕಾಲೇಜಿನಲ್ಲಿರುವಾಗಲೇ ನಾನು ವಾಸ್ತುಶಿಲ್ಪಿಯಾಗುವ ಮತ್ತು ನನ್ನದೇ ಕಂಪನಿ ಆರಂಭಿಸುವ ಕನಸು ಕಾಣುತ್ತಿದ್ದೆ' ಎನ್ನುತ್ತಾರೆ ಪದ್ಮಜಾ.

ಕೆಲವು ಮಾಡ್ಯುಲರ್ ಫ್ಯಾಕ್ಟರಿಗಳ ಬಿಸಿನೆಸ್ ಕನ್ಸಲ್ಟೆಂಟ್ ಆಗಿ ಒಳಾಂಗಣ ವಿನ್ಯಾಸ ಕ್ಷೇತ್ರಕ್ಕೆ ಅವರು ಪ್ರವೇಶ ಪಡೆದರು. ಕಂಪನಿಗಳ ಒಳಾಂಗಣ ವಿನ್ಯಾಸಗಳನ್ನು ಮಾರುಕಟ್ಟೆಗೆ ಪರಿಚಯಿಸುವುದು ಅವರ ಕೆಲಸವಾಗಿತ್ತು. ಆದರೆ ಪದ್ಮಜಾ ಅವರಲ್ಲಿ ತಮಗೆ 'ಇನ್ನೇನೋ ಬೇಕೆನ್ನುವ' ತುಡಿತವಿತ್ತು. ತಮ್ಮ ಅನುಭವ ಬಳಸಿಕೊಂಡು ಅವರು ತಮ್ಮದೇ ವಹಿವಾಟು ಆರಂಭಿಸಿದರು. ಅರ್ಬನ್‌ವುಡ್ ಹಿಂದಿರುವ ಪ್ರೇರಣೆಯ ಬಗ್ಗೆ ಹೇಳುವ ಪದ್ಮಜಾ, 'ನನ್ನ ತಾಯಿಯೇ ನನಗೆ ದೊಡ್ಡ ಪ್ರೇರಣೆ. ಅವರು ಸ್ವತಂತ್ರ ಮನೋಭಾವದ ಮಹಿಳೆ. ನಾನೂ ಅವರಂತಾಗಬೇಕು' ಎನ್ನುತ್ತಾರೆ.

'ನಮ್ಮ ಪ್ರತಿ ಯೋಜನೆಗೂ ನಾವು ನೂರಕ್ಕೆ ನೂರರಷ್ಟು ಶ್ರಮ ಹಾಕುತ್ತೇವೆ. ಗ್ರಾಹಕರಿಗೆ ತಾವು ನೀಡಿದ ಹಣಕ್ಕೆ ತೃಪ್ತಿ ಸಿಗುವಂತಹ ಕೆಲಸ ನಮ್ಮಿಂದ ಆಗಬೇಕು. ಅವರು ಬಯಸಿದಂತೆ ನಮ್ಮ ಕೆಲಸಗಳು ನಡೆಯಬೇಕು' ಎಂದು ಪದ್ಮಜಾ ತಮ್ಮ ಯಶಸ್ಸಿನ ಗುಟ್ಟು ಹೇಳುತ್ತಾರೆ.

ಅರ್ಬನ್‌ವುಡ್ ಆರಂಭವಾದ ಕೆಲವೇ ಸಮಯದಲ್ಲಿ ಗ್ರಾಹಕರಿಗೆ ಹತ್ತಿರವಾದರೂ ಒಂದು ಹಂತದಲ್ಲಿ ಅಡ್ಡಿ-ಆತಂಕಗಳನ್ನು ಎದುರಿಸಬೇಕಾಯಿತು. 'ಒಬ್ಬ ಅನನುಭವಿ ಉದ್ಯಮಿಯಾಗಿ, ಸಂಪನ್ಮೂಲಗಳ ಕುರಿತು ನಾನು ಹೆಚ್ಚು ತಿಳಿದಿರಲಿಲ್ಲ. ಹಾಗಾಗಿ ಇಲ್ಲದೆಯೇ ನಾನು ಈ ವಹಿವಾಟು ಆರಂಭಿಸಿದ್ದೆ. ನನ್ನ ಕಂಪನಿಯು ಬಹಳ ಬೇಗನೆ ಆರ್ಥಿಕ ಮುಗ್ಗಟ್ಟು ಎದುರಿಸಬೇಕಾಯಿತು. ಇದೇ ಹೊತ್ತಿಗೆ ಕೋವಿಡ್–19 ಪರಿಸ್ಥಿತಿಯು ಎದುರಾಯಿತು. ನಮ್ಮ ಎಲ್ಲ ಸಿಬ್ಬಂದಿ ತಮ್ಮ ಊರಿಗೆ ಹಿಂದಿರುಗಿದರು. ಅದು ಬಹಳ ಸಂಕಷ್ಟದ ಸಮಯವಾಗಿತ್ತು' ಎಂದು ಪದ್ಮಜಾ ನೆನಪಿಸಿಕೊಳ್ಳುತ್ತಾರೆ.

ಸುಲಭಕ್ಕೆ ಸೋಲು ಒಪ್ಪಿಕೊಳ್ಳುವವರಲ್ಲದ ಪದ್ಮಜಾ, ಸವಾಲು ಎದುರಿಸಲು ದೃಢವಾಗಿ ನಿಂತರು. 'ವಹಿವಾಟನ್ನು ಮತ್ತೆ ಹಳಿಗೆ ತರಲು ಇರುವ ಅವಕಾಶಗಳನ್ನು ಹುಡುಕುವಾಗ, ಪ್ರಾಜೆಕ್ಟ್‌ಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಬೇರೆಯವರಿಗೆ ಒಪ್ಪಿಸಿ, ಅವರು ಮಾಡುವ ಕೆಲಸಗಳ ಮೇಲ್ವಿಚಾರಣೆ ನಡೆಸುವ ಮಾರ್ಗ ನನಗೆ ಕಂಡಿತು. ಕೆಲವು ಬಡಗಿಗಳ ಜೊತೆ ನಾನು ಮಾತನಾಡಿದೆ. ಅವರು ಪ್ರತಿ ಚದರ ಅಡಿ ಕೆಲಸಕ್ಕೆ ಇಂತಿಷ್ಟು ಎಂದು ಶುಲ್ಕ ವಿಧಿಸುತ್ತಾರೆ. ನಾನು ಅವರಿಗೆ ಅವರ ಸಾಮಾನ್ಯ ಶುಲ್ಕಕ್ಕಿಂತ ಚದರ ಅಡಿಗೆ ₹ 20 ಹೆಚ್ಚು ನೀಡುವುದಾಗಿ ಹೇಳಿದೆ. ಅವರಿಗೂ ಅದು ಸೂಕ್ತ ಅನ್ನಿಸಿತು. ಈ ಮೂಲಕ ಹೊಸ ಗುತ್ತಿಗೆಗಳು ದೊರೆತವು. ಅತಿ ಕಡಿಮೆ ಅವಧಿಯಲ್ಲಿ ಹಲವು ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಲು ನನಗೆ ಸಾಧ್ಯವಾಯಿತು' ಎಂದು ಪದ್ಮಜಾ ಹೇಳಿದರು.

ಹಿನ್ನಡೆಯಲ್ಲಿದ್ದ ವಹಿವಾಟನ್ನು ಮತ್ತೆ ಮುಂದಕ್ಕೆ ತರಲು ನೆರವಾದ ತಮ್ಮ ಗುಣಗಳ ಬಗ್ಗೆ ಪ್ರಸ್ತಾಪಿಸಿದ ಅವರು, 'ಆತ್ಮ ಮತ್ತು ಸಾಧಿಸಬೇಕೆಂಬ ಛಲ ಮುಖ್ಯ ಕಾರಣ. ಅಪಾಯವನ್ನು ಎದುರಿಸುವುದು ನನ್ನ ಮನೋಭಾವ. ಉದ್ಯಮಕ್ಕೆ ಕಾಲಿಡಲು ಇದೇ ಕಾರಣ. ಇವುಗಳಿಲ್ಲದೆ ಯಾವ ಸಾಧನೆಯೂ ಸಾಧ್ಯವಿಲ್ಲ' ಎನ್ನುತ್ತಾರೆ. ಸಹ ಉದ್ಯಮಿಗಳಿಗೆ ಪದ್ಮಜಾ ಅವರು ಸರಳ ಸಲಹೆ ನೀಡುತ್ತಾರೆ: 'ಪ್ರಾಮಾಣಿಕ ಉದ್ಯಮಿಯಾಗಿ. ನಿಮ್ಮ ಗ್ರಾಹಕರನ್ನು ಚೆನ್ನಾಗಿ ನೋಡಿಕೊಳ್ಳಿ. ವಹಿವಾಟು ನಡೆಸುವಾಗ ವಾಸ್ತವದ ನೆಲೆಯಲ್ಲಿ ಚಿಂತಿಸಿ. ಮುನ್ನುಗ್ಗುವ ಮನೋಭಾವ ಮತ್ತು ಮಾಡುವ ಕೆಲಸದಲ್ಲಿ ಪ್ರೀತಿ ಇಲ್ಲದಿದ್ದರೆ ಯಶಸ್ಸು ಮರೀಚಿಕೆಯಾಗಿಯೇ ಉಳಿಯುತ್ತದೆ.'

ಪದ್ಮಜಾ ರಾವ್

₹16 ಸಾವಿರ ತಲುಪಿದ ಕೊಬ್ಬರಿ ಧಾರಣೆ

• ಕೆ.ಜೆ.ಮರಿಯಪ್ಪ

ತುಮಕೂರು: ತೀವ್ರ ಕುಸಿತ ಕಂಡಿದ್ದ ಕೊಬ್ಬರಿ ಬೆಲೆಯು ಕಳೆದ ಮೂರ್ನಾಲ್ಕು ತಿಂಗಳಿಂದ ಏರುಮುಖ ಚಲನೆ ಕಂಡಿದೆ. ವಾರದಿಂದ ವಾರಕ್ಕೆ ಧಾರಣೆ ಹೆಚ್ಚಾಗುತ್ತಲೇ ಸಾಗಿದ್ದು, ಈಗ ಒಂದು ಕ್ವಿಂಟಲ್‌ಗೆ ₹ 16 ಸಾವಿರ ತಲುಪಿದೆ.

2020ರ ನವೆಂಬರ್‌ನಲ್ಲಿ ಕ್ವಿಂಟಲ್ ಕೊಬ್ಬರಿ ಬೆಲೆ ₹ 10 ಸಾವಿರಕ್ಕೆ ಕುಸಿದಿತ್ತು. ಬೆಂಬಲ ಬೆಲೆ ನೀಡಿ ಖರೀದಿಸುವಂತೆ ರೈತರಿಂದ ಒತ್ತಡ ಹೆಚ್ಚಾದ ನಂತರ ಖರೀದಿ ಕೇಂದ್ರ ತೆರೆಯಲಾಯಿತು. ನಂತರ, ಧಾರಣೆ ನಿಧಾನವಾಗಿ ಏರಿಕೆ ಆಯಿತು. ಹೊಸ ವರ್ಷದ ಆರಂಭದಲ್ಲಿ ಒಂದು ಕ್ವಿಂಟಲ್ ₹ 14 ಸಾವಿರಕ್ಕೆ ಹೆಚ್ಚಳ ಕಂಡಿತು. ದಿನಗಳು ಕಳೆದಂತೆ ಬೆಲೆ ಹೆಚ್ಚಳವಾಗುತ್ತಲೇ ಸಾಗಿದೆ.

ಬೆಲೆ ಏರಿಕೆಗೆ ಕಾರಣ: ಲಾಕ್‌ಡೌನ್ ವೇಳೆ ಶುಭ ಸಮಾರಂಭಗಳು ದೊಡ್ಡ ಮಟ್ಟದಲ್ಲಿ ನಡೆಯಲಿಲ್ಲ, ಇತರ ಚಟುವಟಿಕೆಗಳೂ ಮಂಕಾಗಿದ್ದವು. ಆಗ ಕೊಬ್ಬರಿ ಕೇಳುವವರೇ ಇರಲಿಲ್ಲ. ಲಾಕ್‌ಡೌನ್ ನಿಯಮಗಳು ಸಡಿಲವಾದ ನಂತರ ಬಹುತೇಕ ಚಟುವಟಿಕೆಗಳು ಆರಂಭವಾದವು, ಬೇಡಿಕೆ ಹೆಚ್ಚಳ ಆಯಿತು. ಜಿಲ್ಲೆಯ ಕೊಬ್ಬರಿಗೆ ಪ್ರಮುಖ ಮಾರುಕಟ್ಟೆಯಾದ ದೆಹಲಿ ಹಾಗೂ ಉತ್ತರ ಭಾರತದ ರಾಜ್ಯಗಳಲ್ಲಿ ಬೇಡಿಕೆ ಬಂದಿದೆ. ಜತೆಗೆ 'ಕೊಕೊನಟ್ ಪೌಡರ್' ತಯಾರಿಕೆಗೂ ರವಾನೆಯಾಗುತ್ತಿದೆ.

ಎಣ್ಣೆ ಕಾಳುಗಳ ಉತ್ಪಾದನೆ ಕಡಿಮೆಯಾಗಿದ್ದು, ಅಡುಗೆ ಎಣ್ಣೆ ಬೆಲೆ ದುಬಾರಿಯಾಗಿದೆ. ಅಡುಗೆಗೆ ಶೇಂಗಾ ಎಣ್ಣೆ, ಸೂರ್ಯಕಾಂತಿ ಎಣ್ಣೆ ಹಾಗೂ ಇತರೆ ಖಾದ್ಯ ತೈಲಗಳನ್ನು ಬಳಸುತ್ತಿದ್ದವರು ಈಗ ಕೊಬ್ಬರಿ ಎಣ್ಣೆ ಬಳಕೆಗೆ ಮುಂದಾಗಿದ್ದಾರೆ.

ಕುಸಿದ ಆವಕ: ಮಾರುಕಟ್ಟೆಯಲ್ಲಿ ಆವಕ ಸಹ ಕಡಿಮೆಯಾಗಿದ್ದು, ಜನವರಿಯಿಂದ ಏಪ್ರಿಲ್ ತಿಂಗಳವರೆಗೂ ಇದೇ ಸ್ಥಿತಿ ಇರುತ್ತದೆ. ರೈತರ ಬಳಿಯೂ ಕೊಬ್ಬರಿ ಇರುವುದಿಲ್ಲ. ಏಪ್ರಿಲ್ ನಂತರ ಹಂಗಾಮು ಆರಂಭವಾಗುತ್ತದೆ. ಈ ಸಮಯದಲ್ಲಿ ಅಲ್ಪಸ್ವಲ್ಪ ಪ್ರಮಾಣದಲ್ಲಿ ಕೊಬ್ಬರಿ ಬರುತ್ತದೆ. ದಾಸ್ತಾನು ಮಾಡಿಟ್ಟುಕೊಂಡಿರುವ ವರ್ತಕರು ಬೇಡಿಕೆ ಸೃಷ್ಟಿಯಾದಾಗ ಮಾರಾಟ ಮಾಡಿ ಒಳ್ಳೆಯ ಲಾಭ ಮಾಡಿಕೊಳ್ಳುತ್ತಾರೆ. ಈಗ ಬೆಲೆ ಏರಿಕೆಯಾದರೂ ರೈತರಿಗೆ ಹೆಚ್ಚಿನ ಲಾಭ ಆಗುವುದಿಲ್ಲ.

'ಈಗ ರೈತರ ಬಳಿ ಕೊಬ್ಬರಿ ಇಲ್ಲ. ಬೆಲೆ ಏರಿಕೆಯಾದರೂ ಅನುಕೂಲ ಆಗುವುದಿಲ್ಲ. ದಾಸ್ತಾನು ಮಾಡಿಟ್ಟುಕೊಂಡಿರುವ ವರ್ತಕರಿಗಷ್ಟೇ ಲಾಭ' ಎಂದು ತಿಪಟೂರು ಮಾರುಕಟ್ಟೆಗೆ ಕೊಬ್ಬರಿ ತಂದಿದ್ದ, ತಾಲ್ಲೂಕಿನ ದಸರೀಘಟ್ಟ ಗ್ರಾಮದ ನಂಜೇಗೌಡ ಹೇಳಿದರು.

ಮುಂಬೈ ಧಾರಣೆ

ಶೇಂಗಾ

10-3-2021

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1545 (1550)
ಒಂದು ವಾರದ ಡೆಲಿವರಿ	1540 (1545)
ಸೋಯಾ ಕಚ್ಚಾ	1235 (1210)
ಪಾಮ್ ವಾರದ ಡೆಲಿವರಿ	1208 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1750 (1660)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,500 (44,550)
ಬೆಳ್ಳಿ ಕೆ.ಜಿ 66,400 (66,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವರ್ಷಕ್ಕೆರಡು ಡಿವಿಡೆಂಡ್ ಖಾತರಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಮಾಲೀಕತ್ವದ ಕಂಪನಿಗಳಿಗೆ ಅನ್ವಯ ಆಗುವಂತೆ ಹೊಸ ನೀತಿಯೊಂದು ಜಾರಿಗೆ ಬಂದಿದೆ. ಇದರ ಪ್ರಕಾರ, ಕೇಂದ್ರ ಸರ್ಕಾರದ ಕಂಪನಿಗಳು ಷೇರುದಾರರಿಗೆ ವರ್ಷಕ್ಕೆ ಕನಿಷ್ಠ ಎರಡು ಬಾರಿಯಾದರೂ ಡಿವಿಡೆಂಡ್ ಪಾವತಿಸಬೇಕು.

'ಡಿವಿಡೆಂಡ್ ಕೊಡುವುದರಲ್ಲಿ ಸ್ಥಿರತೆ ಇರಬೇಕು ಎನ್ನುವ ನೀತಿ ಪ್ರಕಟಿಸಿದ್ದೇವೆ. ಡಿವಿಡೆಂಡ್ ಪಾವತಿಸಲು ವರ್ಷದ ಕೊನೆಯವರೆಗೂ ಕಾಯಬೇಕಿಲ್ಲ' ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ ಕಾರ್ಯದರ್ಶಿ ಟಿ.ಕೆ. ಪಾಂಡೆ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	950-1000
ನಡುಗೋಲು	1000-1100
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1600
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	335
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಕುಮಟ	
ಚಿಪ್ಪು	25099-28999
ಕೋಕ	16869-27869
ಫ್ಯಾಕ್ಟರಿ	13569-17639
ಹಳೆಚಾಲಿ	38169-40899
ಹೊಸಚಾಲಿ	32569-37099
ಪುತ್ತೂರು	
ಕೋಕ	9500-24000
ಹೊಸತು	28500-40500
ಸಿದ್ದಾಪುರ	
ಬಿಳಿಗೋಟು	22509-30099
ಚಾಲಿ	34199-36699
ಕೋಕ	20699-29869
ಕೆಂಪುಗೋಟು	19599-28789
ರಾಶಿ	39689-41869
ತಟ್ಟಿಬೆಟ್ಟೆ	28109-40919
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	41658-43340
ಗೊರಬಲು	18369-31550
ರಾಶಿ	38759-42199
ಸರಕು	47899-74100
ಶಿವಮೊಗ್ಗ ಮ್ಯಾಮ್ಕೋಸ್	
ಹಸ	42619-72399
ಬೆಟ್ಟೆ	42669-43299
ಗೊರಬಲು	23599-30589
ರಾಶಿ ಇಡಿ	40599-42199
ಆಪಿ	45999-46699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	9900	9900	9950	130.40 ಸೆಂಟ್ಸ್
ಎಸಿ	3975	3850	3925	
ಆರ್‌ಪಿ	5250	5200	5225	
ಆರ್‌ಸಿ	3000	3050	2950	1400 ಡಾಲರ್ಸ್

ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಮಹಾಂತೇಶ ನಗರ, ಬೆಳಗಾವಿ–590017.
ದೂರವಾಣಿ:0831–2405756/E-mail:bemul.pur@gmail.com
ಫ್ಯಾಕ್ಸ್: 0831–2454791
ಟೆಂಡರ್ ನೋಟಿಸ್ ಸಂಖ್ಯೆ: 134/ಖರೀದಿ/ಟೆಂಡರ್ ಫೈಲ್/2020–21/3444 ದಿನಾಂಕ: 08–03–2021

ಟೆಂಡರ್ ಪ್ರಕಟಣೆ (ಬೆ.ಹಾ.ಒ.)

ಬೆಳಗಾವಿ ಸಹಕಾರಿ ಹಾಲು ಒಕ್ಕೂಟವು ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಟೆಂಡರ್ ಬಿಡ್ ಮತ್ತು ವಾಣಿಜ್ಯ ಟೆಂಡರ್ ಬಿಡ್) ಕರೆಯಲಾಗಿದ್ದು, ಆಸಕ್ತ ಟೆಂಡರ್‌ದಾರರು ಭಾಗವಹಿಸಬಹುದು. ಸೇವೆ ಟೆಂಡರ್ ಪ್ರಕ್ರಿಯೆ ಬಗ್ಗೆ ಮಾಹಿತಿ ಈ ಕೆಳಗಿನಂತಿದೆ.

ಕ್ರ. ಸಂ:1:ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಸಂಖ್ಯೆ:BMU/Milk Tanker 1/2020-21,ವಿವರ ಎರಡು ವರ್ಷದ ಅವಧಿಗೆ ಹಾಲು ಸರಬರಾಜು ಮಾಡಲು ವಿವಿಧ ಸಾಮರ್ಥ್ಯದ ಟ್ಯಾಂಕರ್‌ಗಳ ಸೇವೆ ಕುರಿತು ಟೆಂಡರ್. (ಎಲ್ಲತೆರಿಗೆ, ಟೋಲ್ ಫೀ ಸೇರಿ ದರ ನಮೂದಿಸುವುದು):ಬೆಳಗಾವಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶೀತಲೀಕರಣ ಕೇಂದ್ರಗಳಿಂದ ಮುಖ್ಯ ಡೇರಿಗೆ ಹಾಗೂ ಹೊರರಾಜ್ಯ /ರಾಜ್ಯದೊಳಗಿನ ಪರಿವರ್ತನಾ ಘಟಕಗಳಿಗೆ 9 ಕೆಎಲ್ ಟ್ಯಾಂಕರ್ –ಅಂದಾಜು ಪ್ರತಿ ತಿಂಗಳಿಗೆ ಕನಿಷ್ಠ 3750 ಕಿ.ಮೀ.–03ಸಂಖ್ಯೆ,ಇ.ಎಂ.ಡಿ. ಮೊತ್ತ (ರೂ.):50,000,ಕ್ರ. ಸಂ:2: ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಸಂಖ್ಯೆ:BMU/Milk Tanker 2/2020-21,ವಿವರ ಎರಡು ವರ್ಷದ ಅವಧಿಗೆ ಹಾಲು ಸರಬರಾಜು ಮಾಡಲು ವಿವಿಧ ಸಾಮರ್ಥ್ಯದ ಟ್ಯಾಂಕರ್‌ಗಳ ಸೇವೆ ಕುರಿತು ಟೆಂಡರ್. (ಎಲ್ಲತೆರಿಗೆ, ಟೋಲ್ ಫೀ ಸೇರಿ ದರ ನಮೂದಿಸುವುದು):ಬೆಳಗಾವಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶೀತಲೀಕರಣ ಕೇಂದ್ರಗಳಿಂದ ಮುಖ್ಯ ಡೇರಿಗೆ ಹಾಗೂ ಹೊರರಾಜ್ಯ/ರಾಜ್ಯದೊಳಗಿನ ಪರಿವರ್ತನಾ ಘಟಕಗಳಿಗೆ 15 ಕೆಎಲ್ ಟ್ಯಾಂಕರ್ –ಅಂದಾಜು ಪ್ರತಿ ತಿಂಗಳಿಗೆ ಕನಿಷ್ಠ 3750 ಕಿ.ಮೀ. .–03 ಸಂಖ್ಯೆ,ಇ.ಎಂ.ಡಿ. ಮೊತ್ತ (ರೂ.):50,000, ಕ್ರ. ಸಂ:3:ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಸಂಖ್ಯೆ:BMU/Milk Tanker 3/2020-21, ವಿವರ ಎರಡು ವರ್ಷದ ಅವಧಿಗೆ ಹಾಲು ಸರಬರಾಜು ಮಾಡಲು ವಿವಿಧ ಸಾಮರ್ಥ್ಯದ ಟ್ಯಾಂಕರ್‌ಗಳ ಸೇವೆ ಕುರಿತು ಟೆಂಡರ್. (ಎಲ್ಲತೆರಿಗೆ, ಟೋಲ್ ಫೀ ಸೇರಿ ದರ ನಮೂದಿಸುವುದು):ಬೆಳಗಾವಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶೀತಲೀಕರಣ ಕೇಂದ್ರಗಳಿಂದ ಮುಖ್ಯ ಡೇರಿಗೆ ಹಾಗೂ ಹೊರರಾಜ್ಯ /ರಾಜ್ಯದೊಳಗಿನ ಪರಿವರ್ತನಾ ಘಟಕಗಳಿಗೆ 19 ಕೆಎಲ್ ಟ್ಯಾಂಕರ್ ಅಂದಾಜು ಪ್ರತಿ ತಿಂಗಳಿಗೆ ಕನಿಷ್ಠ 3750 ಕಿ.ಮೀ .–03 ಸಂಖ್ಯೆ,ಇ.ಎಂ.ಡಿ. ಮೊತ್ತ (ರೂ.):50,000, ಕ್ರ. ಸಂ:4:ಇ–ಪ್ರಕ್ಯೂರ್ ಮೆಂಟ್ ಟೆಂಡರ್ ಸಂಖ್ಯೆ:BMU/Milk Tanker 4/2020-21,ವಿವರ ಎರಡು ವರ್ಷದ ಅವಧಿಗೆ ಹಾಲು ಸರಬರಾಜು ಮಾಡಲು ವಿವಿಧ ಸಾಮರ್ಥ್ಯದ ಟ್ಯಾಂಕರ್‌ಗಳ ಸೇವೆ ಕುರಿತು ಟೆಂಡರ್.(ಎಲ್ಲತೆರಿಗೆ, ಟೋಲ್ ಫೀ ಸೇರಿ ದರ ನಮೂದಿಸುವುದು): ಬೆಳಗಾವಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶೀತಲೀಕರಣ ಕೇಂದ್ರಗಳಿಂದ ಮುಖ್ಯ ಡೇರಿಗೆ ಹಾಗೂ ಹೊರರಾಜ್ಯ /ರಾಜ್ಯದೊಳಗಿನ ಪರಿವರ್ತನಾ ಘಟಕಗಳಿಗೆ 24 ಕೆಎಲ್ ಟ್ಯಾಂಕರ್ ಅಂದಾಜು ಪ್ರತಿ ತಿಂಗಳಿಗೆ ಕನಿಷ್ಠ 3750 ಕಿ.ಮೀ.–03 ಸಂಖ್ಯೆ,ಇ.ಎಂ.ಡಿ. ಮೊತ್ತ (ರೂ.):50,000, ಕ್ರ.ಸಂ:5:ಇ–ಪ್ರಕ್ಯೂರ್ ಮೆಂಟ್ ಟೆಂಡರ್ ಸಂಖ್ಯೆ:BMU/Milk Tanker 5/2020–21,ವಿವರ ಎರಡು ವರ್ಷದ ಅವಧಿಗೆ ಹಾಲು ಸರಬರಾಜು ಮಾಡಲು ವಿವಿಧ ಸಾಮರ್ಥ್ಯದ ಟ್ಯಾಂಕರ್‌ಗಳ ಸೇವೆ ಕುರಿತು ಟೆಂಡರ್.(ಎಲ್ಲತೆರಿಗೆ, ಟೋಲ್ ಫೀ ಸೇರಿ ದರ ನಮೂದಿಸುವುದು):ಅಥಣಿ ಹಾಲು ಶೀತಲೀಕರಣ ಕೇಂದ್ರದಿಂದ ಡೆಂಪೋ ಡೇರಿಗೆ 19–22 ಕೆಎಲ್ ಟ್ಯಾಂಕರ್ ಪ್ರತಿದಿನ ಟ್ರಿಪ್ ಆದಾರದ ಮೇಲೆ ಪ್ರತಿ ದಿನಕ್ಕೆ 92 ಕಿ.ಮೀ.– 01 ಸಂಖ್ಯೆ, ಇ.ಎಂ.ಡಿ. ಮೊತ್ತ (ರೂ.):50,000, ಕ್ರ. ಸಂ:6:ಇ–ಪ್ರಕ್ಯೂರ್ ಮೆಂಟ್ ಟೆಂಡರ್ ಸಂಖ್ಯೆ: BMU/BMC Tanker 4/2020-21,ವಿವರ ಎರಡು ವರ್ಷದ ಅವಧಿಗೆ ಹಾಲು ಸರಬರಾಜು ಮಾಡಲು ವಿವಿಧ ಸಾಮರ್ಥ್ಯದ ಟ್ಯಾಂಕರ್‌ಗಳ ಸೇವೆ ಕುರಿತು ಟೆಂಡರ್. (ಎಲ್ಲತೆರಿಗೆ, ಟೋಲ್ ಫೀ ಸೇರಿ ದರ ನಮೂದಿಸುವುದು):ಆಲದಕಟ್ಟಿ, ಬೆಟಗೇರಿ, ಎಮ್. ಶಿವಾಪುರ ಇಲ್ಲಿಂದ ಮುಖ್ಯ ಡೈರಿ/ಸಿ.ಸಿ/ ಪರಿವರ್ತನಾ ಘಟಕಗಳಿಗೆ 10 ಕೆಎಲ್ ಟ್ಯಾಂಕರ್– ಅಂದಾಜು ಪ್ರತಿ ದಿನಕ್ಕೆ 180 ಕಿ.ಮೀ. –01 ಸಂಖ್ಯೆ,ಇ.ಎಂ.ಡಿ. ಮೊತ್ತ (ರೂ.): 50,000,ಕ್ರ. ಸಂ:7:ಇ–ಪ್ರಕ್ಯೂರ್ ಮೆಂಟ್ ಟೆಂಡರ್ ಸಂಖ್ಯೆ:BMU/BMC Tanker 5/2020-21,ವಿವರ ಎರಡು ವರ್ಷದ ಅವಧಿಗೆ ಹಾಲು ಸರಬರಾಜು ಮಾಡಲು ವಿವಿಧ ಸಾಮರ್ಥ್ಯದ ಟ್ಯಾಂಕರ್‌ಗಳ ಸೇವೆ ಕುರಿತು ಟೆಂಡರ್. (ಎಲ್ಲತೆರಿಗೆ, ಟೋಲ್ ಫೀ ಸೇರಿ ದರ ನಮೂದಿಸುವುದು): ಖಾನಟ್ಟಿ, ಸುಲ್ತಾನಪುರ, ಹಂದಿಗಂದ ಇಲ್ಲಿಂದ ಮುಖ್ಯ ಡೈರಿ/ಸಿ.ಸಿ/ ಪರಿವರ್ತನಾ ಘಟಕಗಳಿಗೆ 10 ಕೆಎಲ್ ಟ್ಯಾಂಕರ್ ಅಂದಾಜು ಪ್ರತಿ ದಿನಕ್ಕೆ 245 ಕಿ.ಮೀ.–01 ಸಂಖ್ಯೆ, ಇ.ಎಂ.ಡಿ. ಮೊತ್ತ (ರೂ.):50,000,ಕ್ರ. ಸಂ:8: ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಸಂಖ್ಯೆ:BMU/ BMC Tanker 11/2020-21,ವಿವರ ಎರಡು ವರ್ಷದ ಅವಧಿಗೆ ಹಾಲು ಸರಬರಾಜು ಮಾಡಲು ವಿವಿಧ ಸಾಮರ್ಥ್ಯದ ಟ್ಯಾಂಕರ್‌ಗಳ ಸೇವೆ ಕುರಿತು ಟೆಂಡರ್. (ಎಲ್ಲತೆರಿಗೆ, ಟೋಲ್ ಫೀ ಸೇರಿ ದರ ನಮೂದಿಸುವುದು): ಮೊರಬ,ಹಿರೇಕೊಡಿ, ಕಂಚಕರವಾಡಿ, ಬಿರಡಿ ಇಲ್ಲಿಂದ ಮುಖ್ಯ ಡೈರಿ/ಸಿ.ಸಿ/ ಪರಿವರ್ತನಾ ಘಟಕಗಳಿಗೆ 10 ಕೆಎಲ್ ಟ್ಯಾಂಕರ್ ಅಂದಾಜು ಪ್ರತಿ ದಿನಕ್ಕೆ 235 ಕಿ.ಮೀ. 01 ಸಂಖ್ಯೆ,ಇ.ಎಂ.ಡಿ. ಮೊತ್ತ (ರೂ.):50,000, ಕೊನೆಯ ದಿನಾಂಕ:08–04–2021

ಸಹಿ/–ಬೆಳಗಾವಿ ಹಾಲು ಒಕ್ಕೂಟದ ಪರವಾಗಿ
ವ್ಯವಸ್ಥಾಪಕ ನಿರ್ದೇಶಕರು
DIPR/BGM/RO-NO-1524/MCA/2020-21

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Dealers And Stockists
DEALERS REQUIRED all over Karnataka for Electric Cycles and Geared 3 Wheeler, developed by IIT'ian Madras. Contact: 97404 49955

Finance
ಮುದ್ರಾ, ಯೋಜನೆಯ ಮೂಲಕ ಕೃಷಿ ಸ್ತಿರಾಸ್ತಿ, ವೈಯುಕ್ತಿಕ, ಬಿಸಿನೆಸ್, ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ ಲಭ್ಯ. 8095868219, 7057624634

Business For Sale
ಮಾರಾಟಕ್ಕಿದೆ: ಬೆಂಗಳೂರಿನಲ್ಲಿ ಉತ್ತಮ ವ್ಯಾಪಾರವಿರುವ ಬೇಕರೀ (ಜೂಸ್ & ಟೀ ಪಾಯಿಂಟ್). ಸಂಪರ್ಕಿಸಿ: 7406781063

ಭವಿಷ್ಯ
Astrology
ವಿಶೇಷ ವ್ಯಕ್ತಿಯಾಗಬೇಕಾ? ಪರಿಹರಿಸುವ ವಿದ್ಯೆಗಳನ್ನು, ವಶೀಕರಣದ ವ್ಯಂಜನವನ್ನು ಮನೆಯಲ್ಲಿದ್ದುಕೊಂಡೇ ಕಲಿತುಕೊಳ್ಳಿ. ಸಮಸ್ಯೆಗಳಿಗೂ, ರೋಗಕ್ಕೂ, ವ್ಯಾಪಾರಕ್ಕೂ, ಪರಿಹಾರಕ್ಕಾಗಿ ಹಣಕಾಸಿನ ಸಹಾಯವಿದೆ. 8884826120

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ನಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಚೌಡೇಶ್ವರಿದೇವಿ★ ಆರಾಧಕರು ಪ್ರಧಾನ ತಾಂತ್ರಿಕ್ ಮಂಜುನಾಥ್. ಪ್ರೀತಿಪ್ರೇಮ, ದಾಂಪತ್ಯ ಸಮಸ್ಯೆ, ವಶೀಕರಣ ಫೋನಿನ ಮೂಖಾಂತರ ಕೆಲವೇ ನಿಮಿಷಗಳಲ್ಲಿ ಪರಿಹಾರ. 8050498041

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ಪ್ರಖ್ಯಾತ ಪಂಡಿತರು, ವಶೀಕರಣ ಸ್ಪೆಷಲಿಸ್ಟ್. ಯಾವುದೇ ಗುಪ್ತ ಸಮಸ್ಯೆಗಳಿಗೆ ಕೇರಳೀಯ, ಬಂಗಾಳಿ ಪದ್ಧತಿಯಿಂದ ಖಚಿತ ಪರಿಹಾರ. A.R. ಗಣಾಚಾರಿ 9902157331

ಉದ್ಯೋಗಾವಕಾಶ
Part-Time Jobs
WORK FROM HOME: ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಕೆಲಸ, ಗಳಿಸಿ 15000-22000/- ಕೊರಿಯರ್ ಸೌಲಭ್ಯವಿದೆ. 7338376317, 9108059956

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General
COURIER EXPERIENCE Bike Delivery Boys for Bangalore 12,000+ Call 9870107800 & 7498999950

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ತಕ್ಷಣ ಬೇಕಾಗಿದ್ದಾರೆ ಸರ್ಕಾರದಿಂದ ಮಾನ್ಯತೆ ಪಡೆದಿರುವ ಸಂಸ್ಥೆಗೆ ಕೆಲಸ ಮಾಡಲು ಯುವಕ ಯುವತಿಯರು ಬೇಕಾಗಿದ್ದಾರೆ ವಯಸ್ಸು: 18 ರಿಂದ 27 ರವರೆಗೆ ವಿದ್ಯಾರ್ಹತೆ SSLC, PUC Any Degree Pass/Fail ಸಂಬಳ: 15 ಸಾವಿರದಿಂದ 18000 ವರೆಗೆ ವಸತಿ ಸೌಲಭ್ಯವಿರುತ್ತದೆ: 7975784278/ 9916361106

Wanted
ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9916016092, 9739993386,

ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಬೆಂಗಳೂರಿನಲ್ಲಿರುವ ಟೈರ್ ಅಂಗಡಿಗೆ ಸಹಾಯಕರು ಬೇಕಾಗಿದ್ದಾರೆ. ಸಂಬಳ 12,000/- ಜೊತೆಗೆ ಊಟ ಮತ್ತು ವಸತಿ ಕೊಡಲಾಗುವುದು. ಕೂಡಲೇ ಸಂಪರ್ಕಿಸಿ: 9900902109

ಪ್ರವಾಸ
Travel
★ವಿಮಾನದಲ್ಲಿ 20.04.2021★ 8ದಿನಗಳು ಗುಜರಾತ್, ಭಾವನಗರ್, ಸೋಮನಾಥ್. 04.05.2021 12ದಿನಗಳು ವೈಷ್ಣೋದೇವಿ, ಶಿಮ್ಲಾ ಮನಾಲಿ,ಸಪ್ತಶಕ್ತಿಪೀಠಗಳು. ಆರ್.ಗಾಂಧಿ ಟೂರ್ಸ್. 9902433500/ 9945445809

ತಾ.13-3-2021 ರಿಂದ 4ದಿನ 9ನವಗ್ರಹ ದರ್ಶನ ಮತ್ತು ಶ್ರೀರಂಗ, ತಂಜಾವೂರು, ಕುಂಭಕೋಣಂ, ಚಿದಂಬರಂ ತಾ.18-3-2021 ರಿಂದ 9 ದಿನ ವೈಷ್ಣವಿದೇವಿ, ಡೆಲ್ಲಿ, ಹರಿದ್ವಾರ, ಆಗ್ರಾ, ಅಮೃತ್‌ಸರ್. ಶ್ರೀ ಗುರುರಾಜ ಟ್ರಾವೆಲ್ಸ್.9900124333, 9611082432, 8123099913

ಕಾಶಿ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ, 6ದಿನಗಳು ವಿಮಾನದಲ್ಲಿ ಪ್ರಯಾಗ್‌ರಾಜ್, ಗಯಾ, ಬುದ್ಧಗಯಾ, ವೈದ್ಯನಾಥೇಶ್ವರ ಹಾಗೂ ಇತರೆ. ಪ್ರಕೃತಿ ಹಾಲಿಡೇಸ್.7259646056, 9741518956

ವಾಹನ
Four Wheelers Selling
Others
TATA Yodha ಟೆಸ್ಟ್ ಡ್ರೈವ್ ಮಾಡಿದ ನಂತರವು ಬೇರೆ ಪಿಕ್‌ಅಪ್ ವಾಹನ ಖರೀದಿಸಿದಲ್ಲಿ ನಮ್ಮಿಂದ ₹5,000/-* ಪಡೆಯಿರಿ
TATA YODHA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

ಕೊಡುಗೆಗಳು ₹25,000/-* ದವರೆಗೆ
ಎಕ್ಸ್‌ಚೇಂಜ್ ₹25,000/-* ದವರೆಗೆ
ಕೇವಲ ₹2,360/– ಪಾವತಿಸಿ 2 ವರ್ಷ/ 75,000 ಕಿ.ಮೀ. ಮೇಂಟೆನೆನ್ಸ್ ಪಡೆಯಿರಿ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore -72597 84441 96208 63338
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 9880142353
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಶಿವ ಶಿವ ಶಂಕರ...

ಇಂದು ಶಿವರಾತ್ರಿ; ಶಿವನ ಆರಾಧನೆಗೆ ಮೀಸಲಾದ ದಿನ. ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ, ಲಯಗಳನ್ನು ಸಂಕೇತಿಸುವ ವಿಶಿಷ್ಟ ದೇವತೆಯೇ ಶಿವ. ಈ ತತ್ತ್ವದ ಸರಳ ಪರಿಚಯ ಇಲ್ಲಿದೆ...

● ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ಸಂಸ್ಕೃತಿಯಲ್ಲಿ ಶಿವತತ್ತ್ವದ ಕಲ್ಪನೆ ತುಂಬ ಪುರಾತನವಾದುದು; ವೇದಕಾಲದಲ್ಲಿಯೇ ಶಿವನು ಪ್ರಮುಖ ದೇವತೆಯಾಗಿದ್ದ ಎನ್ನುವುದು ಸ್ಪಷ್ಟ. ಶಿವನ ಆರಾಧನೆಗೆಂದೇ ಮೀಸಲಾದ ಪರ್ವದಿನ ಮಹಾಶಿವರಾತ್ರಿ.

ತ್ರಿಮೂರ್ತಿಗಳ ಕಲ್ಪನೆ ನಮಗೆ ಗೊತ್ತಿದೆ; ಬ್ರಹ್ಮ, ವಿಷ್ಣು, ರುದ್ರ – ಇವರು ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವವರು. ಈ ಮೂರು ತತ್ತ್ವಗಳೂ ಒಂದೇ ತತ್ತ್ವದ ಬೇರೆ ಬೇರೆ ಆಯಾಮಗಳ ಅಭಿವ್ಯಕ್ತಿಯಷ್ಟೆ ಎಂದೂ ಹೇಳಬಹುದು. ಭಾರತೀಯ ಸಂಸ್ಕೃತಿಯ ಸೃಷ್ಟಿತತ್ತ್ವಗಳಾಗಿ ಮೂವರನ್ನು ರಾಮಮನೋಹರ ಲೋಹಿಯಾ ಅವರು ನಿರೂಪಿಸುವ ಕ್ರಮವೂ ವಿಶಿಷ್ಟವಾಗಿದೆ; ಈ ಗುಂಪಿನಲ್ಲೂ ಶಿವನಿದ್ದಾನೆ; ಉಳಿದ ಇಬ್ಬರು ರಾಮ ಮತ್ತು ಕೃಷ್ಣ.

ಶಿವನಿಗೆ ಹಲವು ಹೆಸರುಗಳು: ರುದ್ರ, ಶಂಕರ, ಮಹಾದೇವ, ಶಂಭು, ತ್ರಿನೇತ್ರ, ಚಂದ್ರಶೇಖರ, ಗಿರೀಶ, ಫಾಲನೇತ್ರ, ಪಾರ್ವತೀರಮಣ, ಭೂತನಾಥ, ಕಪಾಲಿ, ನಟರಾಜ, ಮಹಾನಟ – ಹೀಗೆ ಅವನ ಒಂದೊಂದು ತತ್ತ್ವಕ್ಕೂ ಒಂದೊಂದು ಹೆಸರು. ಪ್ರಧಾನವಾಗಿ ಎರಡು ಹೆಸರುಗಳು ಅವನ ಎಲ್ಲ ತತ್ತ್ವಗಳನ್ನೂ ಪ್ರತಿನಿಧಿಸುತ್ತವೆ; ಅವೇ ಒಂದು ರುದ್ರ, ಮತ್ತೊಂದು ಶಿವ. ಮಾತ್ರವಲ್ಲ, ಈ ಎರಡು ತತ್ತ್ವಗಳು ಎಲ್ಲ ದೇವತೆಗಳನ್ನೂ ಪ್ರತಿನಿಧಿಸುತ್ತವೆ ಎಂದೂ ಹೇಳಬಹುದು. 'ಸರ್ವದೇವಾತ್ಮಕೋ ರುದ್ರಃ ಸರ್ವೇ ದೇವಾ ಶಿವಾತ್ಮಕಾಃ' ಎಂಬ ಮಾತೊಂದಿದೆ; 'ರುದ್ರನು ಸರ್ವದೇವತಾರೂಪಿ, ಎಲ್ಲ ದೇವತೆಗಳೂ ಶಿವಸ್ವರೂಪರೇ ಹೌದು' ಎಂಬುದು ಇದರ ತಾತ್ಪರ್ಯ. ಶಿವತತ್ತ್ವದಲ್ಲಿಯೇ ಎಲ್ಲ ದೇವತೆಗಳ ತತ್ತ್ವವೂ ಅಡಕವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. 'ರುದ್ರ' ಎಂದರೆ ರೋದನಕ್ಕೆ ಕಾರಣನಾಗಿರುವವನು, ಎಂದರೆ ಅಳುವಂತೆ ಮಾಡುವವನು ಎಂಬ ಅರ್ಥವಿದೆ; 'ಶಿವ' ಎಂದರೆ ಮಂಗಳಕರ ಎಂಬ ಅರ್ಥವಿದೆ. ಹೀಗಾಗಿ ಶಿವತತ್ತ್ವವು ದುಷ್ಟ ಶಿಕ್ಷಣ ಮತ್ತು ಶಿಷ್ಟ ರಕ್ಷಣ – ಎಂಬ ಸೂತ್ರವನ್ನು ಎತ್ತಿಹಿಡಿಯುವುದು.

ಶಿವನನ್ನು ಕುರಿತು ನಮ್ಮಲ್ಲಿ ಹೇರಳವಾದ ಸಾಹಿತ್ಯವೂ ಇದೆ;

ವೇದಗಳಲ್ಲಿ ಮಾತ್ರವಲ್ಲದೆ ಕಾವ್ಯ, ನಾಟಕ, ಸ್ತೋತ್ರಗಳಲ್ಲಿ ಶಿವ, ಶಿವತತ್ತ್ವ ಮತ್ತು ಅವನ ಪರಿವಾರದ ಬಗ್ಗೆ ವರ್ಣನೆಗಳಿವೆ. ಆಗಮಗಳಲ್ಲೂ ಈ ತತ್ತ್ವದ ಉಲ್ಲೇಖ–ಪ್ರಶಂಸೆಗಳನ್ನು ಧಾರಾಳವಾಗಿಯೇ ಕಾಣುತ್ತೇವೆ.

ಶಿವತತ್ತ್ವವು ಸೃಷ್ಟಿಯ ಹಲವು ವಿವರಗಳನ್ನು ಒಳಗೊಂಡಿದೆ. ಶಿವನ ನಟರಾಜಸ್ವರೂಪವು ಇಡಿಯ ಸೃಷ್ಟಿಪ್ರಕ್ರಿಯೆಯನ್ನು ಸಂಕೇತಿಸುತ್ತದೆ. ಸೃಷ್ಟಿ, ಸ್ಥಿತಿ, ಸಂಹಾರಗಳಲ್ಲದೆ ತಿರೋಭಾವ ಮತ್ತು ಅನುಗ್ರಹ ಎಂಬ ಇನ್ನೆರಡು ತತ್ತ್ವಗಳನ್ನೂ ನಟರಾಜನ ಕಲ್ಪನೆಯಲ್ಲಿ ಕಾಣಬಹುದು. ಅವನು ಕೈಯಲ್ಲಿ ಹಿಡಿದಿರುವ ಡಮರುಗದ ನಾದದಿಂದಲೇ ಇಡಿಯ ಸೃಷ್ಟಿ, ಅದೂ ನಾದಮಯವಾಗಿ ಸೃಷ್ಟಿಯಾಯಿತೆಂಬ ಕಲ್ಪನೆಯಿದೆ. ಮಾತ್ರವಲ್ಲ, ನಟರಾಜನೇ ಮಹಾನಟ; ಅವನು ಎಲ್ಲ ಕಲೆಗಳಿಗೂ ಅಧಿಪತಿ.

ಶಿವರಾತ್ರಿಯ ಆಚರಣೆ

ಶಿವನನ್ನು ಸಾಮಾನ್ಯವಾಗಿ ಲಿಂಗರೂಪದಲ್ಲಿಯೇ ಆರಾಧಿಸಲಾಗುತ್ತದೆ. ಶಿವನು ಅಭಿಷೇಕಪ್ರಿಯ; ಹೀಗಾಗಿ ಶಿವರಾತ್ರಿಯಂದು ಅವನಿಗೆ ವಿಶೇಷ ಅಭಿಷೇಕ ಮಾಡುವುದುಂಟು. ರುದ್ರ (ನಮಕ) ಮತ್ತು ಚಮಕದ ಪಠಣದೊಂದಿಗೆ ಮಾಡುವ ಅಭಿಷೇಕವೇ ರುದ್ರಾಭಿಷೇಕ. ಅವನಿಗೆ ಇಷ್ಟವಾದುದು ಬಿಲ್ವಪತ್ರೆ; ಇದು ತ್ರಿಮೂರ್ತಿಗಳನ್ನು ಪ್ರತಿನಿಧಿಸುತ್ತದೆ. ಬಿಲ್ವಾಷ್ಟೋತ್ತರದ ಮೂಲಕ ಶಿವನನ್ನು ಅರ್ಚಿಸಬೇಕು; ತುಂಬೆಯ ಹೂವು ಕೂಡ ಅವನಿಗೆ ಪ್ರಿಯ. ಶಿವರಾತ್ರಿಯಂದು ಮಾಡುವ ಜಾಗರಣೆಗೂ ಹಲವು ತಾತ್ತ್ವಿಕ, ದಾರ್ಶನಿಕ ಆಯಾಮಗಳಿವೆ.

ಶಿವನ ಕುಟುಂಬ, ಅದು ಆದರ್ಶ ಸಂಸಾರಕ್ಕೂ ನಿದರ್ಶನವಾಗಿದೆ; ಅನ್ಯೋನ್ಯ ದಾಂಪತ್ಯ ಎಂದರೆ ಅದು ಶಿವ–ಪಾರ್ವತಿಯರ ದಾಂಪತ್ಯವೇ ಹೌದು. ಶಿವನು ತನ್ನ ಶರೀರದ ಅರ್ಧಭಾಗವನ್ನೇ ತನ್ನ ಮಡದಿಗೆ ಮೀಸಲಾಗಿರಿಸಿ ಅರ್ಧನಾರೀಶ್ವರನಾದವನು; ದಾಂಪತ್ಯ ಎಂದರೆ ಗಂಡು ಹೆಚ್ಚು, ಹೆಣ್ಣು ಕಡಿಮೆ ಎಂದೋ ಅಥವಾ ಹೆಣ್ಣು ಹೆಚ್ಚು, ಗಂಡು ಕಡಿಮೆ ಎಂದೋ ಲೆಕ್ಕಾಚಾರದ ವ್ಯವಹಾರ ಅಲ್ಲ, ಅದು ಇಬ್ಬರ ಸಮಪಾಲಿನ ಸಮಬಾಳು ಎಂಬುದನ್ನು ಅರ್ಧನಾರೀಶ್ವರನ ಕಲ್ಪನೆಯಲ್ಲಿ ಕಾಣಬಹುದು. ಪಾರ್ವತಿಯ ತಪಸ್ಸಿನ ಫಲ ಶಿವ, ಶಿವನ ತಪಸ್ಸಿನ ಫಲ ಪಾರ್ವತಿ – ಎಂಬ ಅಪ್ಪಯ್ಯ ದೀಕ್ಷಿತರ ಒಕ್ಕಣೆ ದಾಂಪತ್ಯದ ಪರಿಕಲ್ಪನೆಯ ಮಹೋನ್ನತೆಯನ್ನು ಸಾರುವಂತಿದೆ.

ಶಿವನಿಗೆ ತನ್ನ ಮಡದಿಗೆ ಅರ್ಧಶರೀರವನ್ನೇ ಕೊಡುವಷ್ಟು ಪ್ರೀತಿ ಇದೆ ನಿಜ; ಹೀಗಿದ್ದರೂ ಅವನು ಪರಮವೈರಾಗ್ಯಸ್ವರೂಪಿ. ಅವನು ಕೇವಲ ಭೋಗದಲ್ಲಿಯೇ ಮುಳುಗುವವನೂ ಅಲ್ಲ ಅಥವಾ ಕೇವಲ ತ್ಯಾಗದಲ್ಲಿಯೇ ತಲ್ಲಿನನಾಗುವವನೂ ಅಲ್ಲ; ತ್ಯಾಗಭೋಗದ ಸಮನ್ವಯದ ಸಂಕೇತವೇ ಅವನು.

ಹೀಗೆ ವಿಶಿಷ್ಟ ದೇವತೆಯಾದ ಶಿವನ ಆರಾಧನೆಗೆಂದೇ ಮೀಸಲಾದ ದಿನವೇ ಶಿವರಾತ್ರಿ. ❖

ಮಾದನೂರಿನ ಮುನಿವರ ವಿಷ್ಣುತೀರ್ಥ

● ಪುಷ್ಪಾ ಮೋಹನ ಮುದಕವಿ

ಭಾಗವತ ಶಿರೋಮಣಿಗಳಾದ ಶ್ರೀ ವಿಷ್ಣುತೀರ್ಥರದು ಅಸೀಮ ವೈರಾಗ್ಯಜೀವನ. ಅಸದೃಶ ಪಾಂಡಿತ್ಯ. ಅವಿಚ್ಛಿನ್ನ ಭಗವದ್ಭಕ್ತಿ. ಅಡವಿ ಆಚಾರ್ಯರೆಂದು ಪ್ರಖ್ಯಾತರು. ಇವರು ಮಹಾರುದ್ರದೇವರ ಅಂಶಸಂಭೂತರೆಂದು ಪ್ರತೀತಿಯಿದೆ.

ವಿಷ್ಣುತೀರ್ಥರ ಪೂರ್ವಾಶ್ರಮದ ಹೆಸರು ಜಯತೀರ್ಥಾಚಾರ್ಯ. ಜನ್ಮಸ್ಥಳ ಸತ್ಯಬೋಧತೀರ್ಥರ ತಪೋಭೂಮಿಯಾದ ಸವಣೂರಿನ ಸನಿಹದ ಸಿದ್ದಾಪುರವೆಂಬ ಪುಟ್ಟ ಗ್ರಾಮ. ಈಶ್ವರನಾಮ ಸಂವತ್ಸರ ಶ್ರಾವಣ ಬಹುಳ ಅಷ್ಟಮಿ, ಅಂದರೆ ಕ್ರಿ. ಶ. 1756ರಲ್ಲಿ ಬಾಳಾಚಾರ್ಯ-ಭಾಗೀರಥಿಬಾಯಿ ದಂಪತಿಗಳ ಮಗನಾಗಿ ಜನಿಸಿದರು. ಜಯತೀರ್ಥನಿಗೆ ಪ್ರಾರಂಭಿಕ ಪಾಠ ತಂದೆಯಿಂದಲೇ. ಮುಂದೆ ವೆಂಕಟರಾಮಾಚಾರ್ಯರಲ್ಲಿ ಶಿಷ್ಯತ್ವ ವಹಿಸಿ ಸರ್ವಶಾಸ್ತ್ರಗಳನ್ನು ಅಧ್ಯಯನ ಮಾಡಿ ಅಪಾರ ಪಾಂಡಿತ್ಯ ಗಳಿಸಿದರು. ಗೃಹಸ್ಥಾಶ್ರಮ ಪ್ರವೇಶಿಸಿದ ಜಯತೀರ್ಥಾಚಾರ್ಯರ ಸಂಸಾರಯಾನ ಸುಖಮಯವಾಗಿ ಸಾಗಿತ್ತು.

ಅನಿರೀಕ್ಷಿತ ಘಟನೆಯೊಂದು ಜಯತೀರ್ಥಾಚಾರ್ಯರ ಬದುಕಿನ ದಿಕ್ಕನ್ನೇ ಬದಲಿಸಿತು. ಒಂದು ಮಧ್ಯಾಹ್ನ ಅವರು ವೈಭವೋಪೇತವಾದ ಮಂಚದ ಮೇಲೆ ಮಲಗಿದ್ದಾರೆ. ಪತ್ನಿ ಪಾದಗಳನ್ನು ಒತ್ತುತ್ತಿದ್ದಾಳೆ. ದಾಸಯ್ಯನೋರ್ವ ಭಿಕ್ಷೆಗಾಗಿ ಬಾಗಿಲ ಬಳಿ ಬಂದು 'ಮಂಚಬಾರದು/ ಮಡದಿಬಾರಳು/ ಕಂಚುಕನ್ನಡಿ ಬಾರವು/ ಸಂಚಿತಾರ್ಥವು ಕಿಂಚ ಬಾರದು/ ಮುಂಚೆಮಾಡಿರೋ ಧರ್ಮವ' ಎಂದು ಪುರಂದರದಾಸರ ಪದವೊಂದನ್ನು ಹಾಡುತ್ತಿದ್ದ. ಅದು ತನಗಾಗಿಯೇ ಹೇಳಿದಂತೆ ತೋರಲು ಪದದಲ್ಲಿಯ ಅಕ್ಷರಕ್ಷರವೂ ತನ್ನನ್ನೇ ಸೂಚ್ಯವಾಗಿ ಚುಚ್ಚಿದಂತೆ ಭಾಸವಾಯಿತು. ಕ್ಷಣಾರ್ಧದಲ್ಲಿ ವೈಚಾರಿಕಪ್ರಜ್ಞೆ ಜಾಗೃತವಾಯಿತು; ಭಾವಪರವಶರಾಗಿ ವೈರಾಗ್ಯ ತಾಳಿ ವಿರಕ್ತರಾಗಿ, ಹರಿಯನ್ನರಸುತ್ತಾ ಅಡವಿಯೆಡೆಗೆ ಹೊರಟೇಬಿಟ್ಟರು. ಈಗಿನ ಕೊಪ್ಪಳದ ಸಮೀಪವಿರುವ ಕಿನ್ನಾಳಿಗೆ ಆಗಮಿಸಿ ಅಲ್ಲಿಯೇ ನೆಲೆನಿಂತು ಶಿಷ್ಯರಿಗೆ ಶ್ರೀಮದಾನಂದತೀರ್ಥರ ಸಚ್ಛಾಸ್ತ್ರ ಪ್ರವಚನ ಮಾಡುತ್ತಾ ಭಗವದಾರಾಧನೆಯಲ್ಲಿ ಕಾಲ ಕಳೆಯತೊಡಗಿದರು. ಗೃಹಸ್ಥಾಶ್ರಮದಲ್ಲಿದ್ದರೂ ಯತಿಗಳಂತೆ ಜೀವಿಸಿದರು. ಸಜ್ಜನರನ್ನು ಉದ್ಧರಿಸಲೋಸುಗ ಜ್ಞಾನದ ಹೊಳೆಯನ್ನೇ ಹರಿಸಿದರು. ಶಿಷ್ಯವೃಂದವೂ ಬೆಳೆಯತೊಡಗಿತು.

ಜಯತೀರ್ಥಾಚಾರ್ಯರು ಮಲಾಪಹಾರೀ ತೀರದ ಮುನವಳ್ಳಿ (ಗೌತಮ ಋಷಿಗಳ ತಪೋಭೂಮಿ)ಗೆ ಬಂದು ಅನುಷ್ಠಾನಪರರಾಗಿ ನೆಲೆಸಲು ಬಯಸಿ ಹನ್ನೆರಡು ಸಾರೆ ಸುಧಾ ಪ್ರವಚನ ಮಾಡಿದರು. ಕೀರ್ತಿ ಬೆನ್ನಟ್ಟಿ ಬಂದಿತು. ಮರಾಠಾ ಪೇಶ್ವೆ ಮುಂತಾದ ಹಲವಾರು ಪ್ರತಿಷ್ಠಿತ ವ್ಯಕ್ತಿಗಳು ಅವರ ದರ್ಶನಕ್ಕಾಗಿ ಹಾತೊರೆಯುತ್ತಿದ್ದರು. ಆಚಾರ್ಯರಿಗೆ ಸನ್ಯಾಸಾಶ್ರಮವು ಶ್ರೀ ಮದುತ್ತರಾದಿಮಠದ ಶ್ರೀ ಸತ್ಯವರತೀರ್ಥರಿಂದಾಯಿತು. ಯತ್ಯಾಶ್ರಮದ ಹೆಸರು 'ವಿಷ್ಣುತೀರ್ಥರು'. ಪೀಠಾಧಿಪತ್ಯವನ್ನು ಬಯಸದೇ ತಪೋನಿರತರಾಗಿರಲು ಪುನಃ ಅಡವಿಯನ್ನೇ ಸೇರಿದರು; ಅಡವಿ ಆಚಾರ್ಯರೆಂದೇ ಖ್ಯಾತರಾದರು.

ವಿಷ್ಣುತೀರ್ಥರು ತಮ್ಮ 51ನೇ ವಯಸ್ಸಿನಲ್ಲಿ ಮಾದನೂರಿನಲ್ಲಿ ಮಾಘ ಕೃಷ್ಣ ತ್ರಯೋದಶಿ ಮಹಾಶಿವರಾತ್ರಿಯ ದಿನ ವೃಂದಾವನಸ್ಥರಾದರು. ❖

ವಿಷ್ಣುತೀರ್ಥರ ಸಾಹಿತ್ಯ

ಶ್ರೀಕೃಷ್ಣಾಷ್ಟಕ, ರಮಾಸ್ತೋತ್ರ, ಆಧ್ಯಾತ್ಮಾಮೃತರಸರಂಜನಿ, ಭಾಗವತ ಸಾರೋದ್ಧಾರ, ಶ್ರೀಮನ್ಯಾಯಸುಧಾ ಟಿಪ್ಪಣಿ, ಆಜ್ಞಾಪತ್ರ, ಷೋಡಶಿ, ಚತುರ್ದಶಿ, ಗೀತಾಸಾರೋದ್ಧಾರ, ಬಿಂಬಸ್ತುತಿ ಮುಂತಾದವು.

ಆರೋಗ್ಯ ಸೇವೆಗಳಿಗೆ ಸುರಕ್ಷಾ ನಿಧಿ

ನವದೆಹಲಿ (ಪಿಟಿಐ): ಆರೋಗ್ಯಕ್ಕೆ ಸಂಬಂಧಿಸಿದ ಯೋಜನೆಗಳಿಗೆ ಹಣ ಒದಗಿಸುವುದಕ್ಕಾಗಿ 'ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ನಿಧಿ'ಯನ್ನು (ಪಿಎಂ-ಎಸ್‌ಎಸ್‌ಎನ್) ಸ್ಥಾಪಿಸುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ.

'ಇದು ಆರೋಗ್ಯ ಸೇವೆಗಳಿಗೆ ಮೀಸಲಾದ, ಬಳಕೆಗೆ ಕಾಲಮಿತಿ ಇಲ್ಲದ ನಿಧಿ ಎಂಬುದು ಇದರ ವಿಶೇಷತೆಯಾಗಿದೆ. ಅಂದರೆ, ನಿಧಿಯಲ್ಲಿರುವ ಮೊತ್ತವು ಒಂದು ವರ್ಷದ ಅವಧಿಯಲ್ಲಿ ವೆಚ್ಚ ಆಗದೇ ಇದ್ದರೂ ಮರಳಿ ಬೊಕ್ಕಸಕ್ಕೆ ಹೋಗುವುದಿಲ್ಲ. ಮುಂದಿನ ವರ್ಷಗಳಲ್ಲಿ ಬಳಸುವುದಕ್ಕೂ ಅವಕಾಶ ಇರುತ್ತದೆ. ಆರೋಗ್ಯ ಮತ್ತು ಶಿಕ್ಷಣ ಸೆಸ್ ಮೂಲಕ ಸಂಗ್ರಹವಾಗುವ ಹಣದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಂಗ್ರಹವಾಗುವ ಹಣವು ಈ ನಿಧಿಗೆ ಸೇರಲಿದೆ' ಎಂದು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

'ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಆಯುಷ್ಮಾನ್ ಭಾರತ, ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ, ರಾಷ್ಟ್ರೀಯ ಆರೋಗ್ಯ ಮಿಷನ್, ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಮುಂತಾದವುಗಳಿಗೆ ಈ ನಿಧಿಯು ಬಳಕೆ ಆಗಲಿದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ಎದುರಾಗಬಹುದಾದ ತುರ್ತು ಸಂದರ್ಭಗಳನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಲು ಹಾಗೂ 'ರಾಷ್ಟ್ರೀಯ ಆರೋಗ್ಯ ನೀತಿ -2017'ರಲ್ಲಿ ಘೋಷಿಸಲಾಗಿರುವ ಗುರಿ ಸಾಧಿಸಲು ಸಹ ಈ ನಿಧಿಯನ್ನು ಬಳಸಲಾಗುವುದು. 'ಈ ನಿಧಿಯ ನಿರ್ವಹಣೆ ಮತ್ತು ಆಡಳಿತವನ್ನು ಆರೋಗ್ಯ ಸಚಿವಾಲಯ ನಡೆಸಲಿದೆ. ಆರೋಗ್ಯ ಸಂಬಂಧಿ ಯೋಜನೆಗಳಿಗೆ ಆಗುವ ವೆಚ್ಚಗಳನ್ನು ಮೊದಲು ಈ ನಿಧಿಯಿಂದ ಭರಿಸಲಾಗುವುದು. ಅದಾದ ಬಳಿಕ ಬಜೆಟ್‌ನಲ್ಲಿ ನೀಡಲಾದ ಅನುದಾನವನ್ನು ಬಳಕೆ ಮಾಡಲಾಗುವುದು. ನಿಧಿಯಲ್ಲಿ ಉಳಿದಿರುವ ಹಣವು ಆರ್ಥಿಕ ವರ್ಷದ ಅಂತ್ಯದಲ್ಲಿ ರದ್ದಾಗುವುದಿಲ್ಲ ಎಂಬ ಖಾತರಿ ಇರುವುದರಿಂದ, ಇರುವ ಸಂಪನ್ಮೂಲವನ್ನು ಸಮರ್ಥವಾಗಿ ಬಳಸಿಕೊಂಡು ಉತ್ತಮ ಮತ್ತು ಕೈಗೆಟಕುವ ದರದಲ್ಲಿ ಆರೋಗ್ಯ ಸೇವೆಗಳನ್ನು ನೀಡಲು ಸಾಧ್ಯವಾಗಲಿದೆ ಎಂಬುದು ಈ ನಿಧಿಯ ಪ್ರಮುಖ ಲಾಭ' ಎಂದು ಸರ್ಕಾರ ಹೇಳಿದೆ.

2018ರ ಬಜೆಟ್ ಭಾಷಣದಲ್ಲಿ ಅಂದಿನ ವಿತ್ತ ಸಚಿವ ಅರುಣ್ ಜೇಟ್ಲಿ ,ಆಯುಷ್ಮಾನ್ ಭಾರತ್ ಯೋಜನೆಯನ್ನು ಘೋಷಿಸುವುದರ ಜತೆಗೆ, ಆಗ ಜಾರಿಯಲ್ಲಿದ್ದ ಶೇ 3ರಷ್ಟು ಶಿಕ್ಷಣ ಸೆಸ್‌ಅನ್ನು ಶೇ 4ಕ್ಕೆ ಹೆಚ್ಚಿಸಿ, 'ಆರೋಗ್ಯ ಮತ್ತು ಶಿಕ್ಷಣ ಸೆಸ್' ಆಗಿ ಬದಲಿಸುವುದಾಗಿ ತಿಳಿಸಿದ್ದರು.

ಮುಖ್ಯಾಂಶಗಳು

- ಬಳಕೆಯಾಗದ ಹಣ ರದ್ದಾಗುವುದಿಲ್ಲ
- 2018ರ ಬಜೆಟ್ ಭಾಷಣದಲ್ಲಿ ಜೇಟ್ಲಿ ಘೋಷಿಸಿದ್ದ ಯೋಜನೆ
- ನಿಧಿ ನಿರ್ವಹಣೆಯ ಹೊಣೆ ಆರೋಗ್ಯ ಸಚಿವಾಲಯಕ್ಕೆ

ಹರಿಯಾಣ: 'ವಿಶ್ವಾಸ' ಗೆದ್ದ ಖಟ್ಟರ್

ಚಂಡೀಗಡ (ಪಿಟಿಐ): ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ನೇತೃತ್ವದ ಸರ್ಕಾರದ ವಿರುದ್ಧ ಕಾಂಗ್ರೆಸ್ ಬುಧವಾರ ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿದೆ.

ಅವಿಶ್ವಾಸ ನಿರ್ಣಯದ ಮೇಲೆ ಸುದೀರ್ಘ 6 ಗಂಟೆ ಕಾಲ ಚರ್ಚೆ ನಡೆದ ನಂತರ, ನಿರ್ಣಯವನ್ನು ಮತಕ್ಕೆ ಹಾಕಲಾಯಿತು. ನಿರ್ಣಯದ ವಿರುದ್ಧ 55 ಮತಗಳು ಬಿದ್ದರೆ, 32 ಶಾಸಕರು ಪರವಾಗಿ ಮತ ಚಲಾಯಿಸಿದರು.

ಪ್ರಶ್ನೋತ್ತರ ಅವಧಿ ಮುಗಿದ ನಂತರ, ಸರ್ಕಾರದ ವಿರುದ್ಧ ಮಂಡನೆಯಾದ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಗೆ ಸ್ಪೀಕರ್ ಗ್ಯಾನ್‌ಚಂದ ಗುಪ್ತಾ ಅವಕಾಶ ನೀಡಿದರು.

ನಿರ್ಣಯದ ಪರ ಮಾತನಾಡಿದ ವಿರೋಧ ಪಕ್ಷದ ನಾಯಕ ಭೂಪಿಂದರ್ ಹೂಡಾ, 'ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ನೇತೃತ್ವದ ಸರ್ಕಾರ ಜನರ ವಿಶ್ವಾಸ ಕಳೆದುಕೊಂಡಿದೆ' ಎಂದರು.



ಮನೋಹರಲಾಲ್ ಖಟ್ಟರ್

'ಅವಿಶ್ವಾಸ ನಿರ್ಣಯದ ಮೇಲೆ ಗುಪ್ತ ಮತದಾನಕ್ಕೆ ಅವಕಾಶ ನೀಡಬೇಕು' ಎಂದೂ ಮನವಿ ಮಾಡಿದರು.

'ಕೇಂದ್ರ ರೂಪಿಸಿರುವ ನೂತನ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರತಿಭಟನ ನಿರತ ರೈತರನ್ನು ಎದುರಿಸಲಿಕ್ಕಾಗದೇ ಆಡಳಿತಾರೂಢ ಪಕ್ಷದ ಶಾಸಕರು ತಮ್ಮ ಕ್ಷೇತ್ರಗಳಿಗೆ ಭೇಟಿ ನೀಡುತ್ತಿಲ್ಲ. ಸರ್ಕಾರ ಜನರ ವಿಶ್ವಾಸವನ್ನು ಕಳೆದುಕೊಂಡಿದೆ ಎಂಬುದನ್ನು ಇದು ತೋರುತ್ತದೆ' ಎಂದು ಹೂಡಾ ಹೇಳಿದರು.

'ಯಾರು ರೈತರ ಪರ, ಯಾರು ರೈತ ವಿರೋಧಿಗಳು ಎಂಬುದನ್ನು ಈ ಅವಿಶ್ವಾಸ ನಿರ್ಣಯ ತೋರಿಸಲಿದೆ' ಎಂದು ಮತ್ತೊಬ್ಬ ಕಾಂಗ್ರೆಸ್ ಮುಖಂಡ ರಘುವೀರ್ ಸಿಂಗ್ ಕಡಿಯಾನ್ ಹೇಳಿದರು.

ಟೆಲಿಕಾಂ ನಿಯಮಗಳಿಗೆ ತಿದ್ದುಪಡಿ

ನವದೆಹಲಿ: ಕೇಂದ್ರ ಸರ್ಕಾರ ಟೆಲಿಕಾಂ ಕಂಪನಿಗಳಿಗೆ ಸಂಬಂಧಿಸಿದ ಪರವಾನಗಿ ನಿಯಮಗಳಿಗೆ ತಿದ್ದುಪಡಿ ತಂದಿದೆ. ಅದರಂತೆ, ಸರ್ಕಾರ ಅನುಮೋದಿಸಿದ ಸಾಧನಗಳನ್ನು ಮಾತ್ರ ಟೆಲಿಕಾಂ ಕಂಪನಿಗಳು ಅಳವಡಿಸಬೇಕು. ಈ ನಿಯಮ ಜೂ. 15ರಿಂದ ಜಾರಿಗೆ ಬರಲಿದೆ.

ಈ ನಿಯಮದಿಂದ, ವಿವಿಧ ಸಾಧನಗಳನ್ನು ಪೂರೈಸುವ ಚೀನಾ ಮೂಲದ ಕಂಪನಿಗಳಿಗೆ ಭಾರಿ ಹಿನ್ನಡೆಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಫಿಟ್‌ನೆಸ್ ಪರೀಕ್ಷೆಯಲ್ಲಿ ವರುಣ್ ಅನುತ್ತೀರ್ಣ

ಅಹಮದಾಬಾದ್ (ಪಿಟಿಐ): ಭಾರತದ ಲೆಗ್ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಫಿಟ್‌ನೆಸ್ ಪರೀಕ್ಷೆಯಲ್ಲಿ ಮತ್ತೊಮ್ಮೆ ಅನುತ್ತೀರ್ಣರಾಗಿದ್ದು, ಇಂಗ್ಲೆಂಡ್ ವಿರುದ್ಧ ಟ್ವೆಂಟಿ–20 ಕ್ರಿಕೆಟ್ ಸರಣಿಯಿಂದ ಹೊರಗುಳಿಯಲಿದ್ದಾರೆ. ಭುಜದ ನೋವಿನಿಂದ ಬಳಲುತ್ತಿರುವ ಮಧ್ಯಮ ವೇಗಿ ನಟರಾಜನ್ ಕೂಡ ಸರಣಿಯ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯುವುದು ಅನುಮಾನವಾಗಿದೆ. ಮೊದಲ ಪಂದ್ಯ ಶುಕ್ರವಾರ ನಡೆಯಲಿದೆ.

ವರುಣ್ ಅವರು ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ (ಎನ್‌ಸಿಎ) ಫಿಟ್‌ನೆಸ್ ಟೆಸ್ಟ್‌ಗೆ ಒಳಗಾದರು. ಭುಜದ ನೋವಿನಿಂದ ಬಳಲುತ್ತಿರುವ ಯಾರ್ಕರ್ ಪರಿಣತ ನಟರಾಜನ್ ಇನ್ನಷ್ಟೇ ತಂಡವನ್ನು ಸೇರಿಕೊಳ್ಳಬೇಕಿದೆ.

'ಭುಜದ ಗಾಯದ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾ ಸರಣಿಯಿಂದ ವರುಣ್ ಹೊರಗುಳಿದಿದ್ದರು. ಚೇತರಿಸಿಕೊಂಡ ಬಳಿಕ ಇಂಗ್ಲೆಂಡ್ ವಿರುದ್ಧದ ಟ್ವೆಂಟಿ–20 ಸರಣಿಗೆ ಆಯ್ಕೆ ಮಾಡಲಾಗಿತ್ತು. ಎನ್‌ಸಿಎದ ಪುನಶ್ಚೇತನ ಶಿಬಿರದಲ್ಲೂ ಅವರಲ್ಲಿ ಚೇತರಿಕೆಯ ಲಕ್ಷಣಗಳು ಕಂಡುಬಂದಿದ್ದವು. ಆದಾಗ್ಯೂ ಅವರು ಯೊಯೊ ಪರೀಕ್ಷೆಯಲ್ಲಿ (ಕನಿಷ್ಠ ಎರಡು ಬಾರಿ ಎರಡು ಕಿ.ಮೀ. ಓಟ) ವಿಫಲರಾಗಿದ್ದಾರೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವರುಣ್ ಚಕ್ರವರ್ತಿ

ಅಕ್ಟೋಬರ್‌ನಿಂದ ತವರು ತಂಡ ತಮಿಳುನಾಡು ಪರ ಒಂದೂ ಸ್ಪರ್ಧಾತ್ಮಕ ಪಂದ್ಯವಾಡದ ವರುಣ್ ಚಕ್ರವರ್ತಿ ಅವರನ್ನು ಚೇತನ್ ಶರ್ಮಾ ನೇತೃತ್ವದ ಸಮಿತಿಯು ಈ ಸರಣಿಗೆ ಆಯ್ಕೆ ಮಾಡಿದ್ದು ಏಕೆ ಎಂಬ ಪ್ರಶ್ನೆ ಈಗ ಉದ್ಭವಿಸಿದೆ.

ತೀರಥ್‌ಸಿಂಗ್ ರಾವತ್ ಉತ್ತರಾಖಂಡ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿಯ ಹಿರಿಯ ಮುಖಂಡ ತೀರಥ್ ಸಿಂಗ್ ರಾವತ್ ಅವರು ಉತ್ತರಾಖಂಡದ 9ನೇ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು.

ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲರಾದ ಬೇಬಿ ರಾಣಿ ಮೌರ್ಯ ಅವರು ತೀರಥ್‌ಸಿಂಗ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಗರ್ವಾಲ್ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದ ತೀರಥ್‌ಸಿಂಗ್ ಅವರಿಗೆ, ಬಿಜೆಪಿಯಲ್ಲಿನ ಕ್ಷಿಪ್ರ ಬೆಳವಣಿಗೆಯಿಂದಾಗಿ ಮುಖ್ಯಮಂತ್ರಿ ಪದವಿ ಒಲಿದುಬಂತು. ತಮ್ಮ ಕಾರ್ಯವೈಖರಿಗೆ ಪಕ್ಷದ ವಲಯದಲ್ಲಿಯೇ ಭಾರಿ ಅಸಮಾಧಾನ, ವಿರೋಧ ವ್ಯಕ್ತವಾದ ಕಾರಣ ತ್ರಿವೇಂದ್ರಸಿಂಗ್ ರಾವತ್ ಮಂಗಳವಾರವಷ್ಟೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ತೀರಥ್‌ಸಿಂಗ್ ರಾವತ್

ಪಕ್ಷದ ಹೈಕಮಾಂಡ್‌ನ ಪ್ರತಿನಿಧಿಗಳಾದ ರಮಣ್‌ಸಿಂಗ್ ಹಾಗೂ ದುಷ್ಯಂತ್ ಸಿಂಗ್ ಅವರ ಉಪಸ್ಥಿತಿಯಲ್ಲಿ ಡೆಹ್ರಾಡೂನ್‌ನಲ್ಲಿ ಬುಧವಾರ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರಥ್‌ಸಿಂಗ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಯಿತು. ರಾಜ್ಯದ ಸಂಸದರು ಸಹ ಈ ಸಭೆಯಲ್ಲಿ ಇದ್ದರು.

'ತೀರಥ್‌ಸಿಂಗ್ ಅವರಿಗೆ ಆಡಳಿತ ಮತ್ತು ಸಂಘಟನೆ ಕ್ಷೇತ್ರದಲ್ಲಿ ಅಪಾರ ಅನುಭವ ಇದೆ. ಅವರ ನಾಯಕತ್ವದಲ್ಲಿ ರಾಜ್ಯ ಮತ್ತಷ್ಟು ಅಭಿವೃದ್ಧಿ ಹೊಂದುವ ವಿಶ್ವಾಸ ಇದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯಿಸಿದರು.

ಪ್ರಮಾಣ ವಚನ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರಾವತ್, 'ಆರೋಗ್ಯ, ಶಿಕ್ಷಣ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳ ಅಭಿವೃದ್ಧಿಗೆ ನಾನು ಹೆಚ್ಚು ಒತ್ತು ನೀಡುವೆ' ಎಂದು ಹೇಳಿದರು.

ಉತ್ತರಾಖಂಡ ವಿಧಾನಸಭೆಗೆ ಚುನಾವಣೆ ನಡೆಯಲು ಒಂದು ವರ್ಷ ಮಾತ್ರ ಬಾಕಿ ಇದೆ. ಪಕ್ಷದಲ್ಲಿನ ಅಸಮಾಧಾನ ಶಮನ ಮಾಡುವ ಜೊತೆಗೆ ರಾಜ್ಯವನ್ನು ಅಭಿವೃದ್ಧಿಪಥದಲ್ಲಿ ಕೊಂಡೊಯ್ದು, ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಗೆಲುವಿನ ದಡ ಸೇರಿಸುವ ಜವಾಬ್ದಾರಿ ತೀರಥ್ ಸಿಂಗ್ ಅವರ ಮೇಲಿದೆ.

ಆರ್‌ಎಸ್‌ಎಸ್ ಪ್ರಚಾರಕರಾಗಿ ತಮ್ಮ ಸಾಮಾಜಿಕ ಜೀವನ ಆರಂಭಿಸಿದ ತೀರಥ್‌ಸಿಂಗ್ ಅವರು, ಹೇಮವತಿನಂದನ್ ಬಹುಗುಣ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದರು. ಭಾರತೀಯ ಯುವ ಮೋರ್ಚಾದಲ್ಲಿಯೂ ಕಾರ್ಯ ನಿರ್ವಹಿಸಿದ್ದಾರೆ.

ಉತ್ತರಾಖಂಡ ರಾಜ್ಯ ಉದಯವಾದ ನಂತರ, 2000–02 ಅವಧಿಗೆ ಮೊದಲ ಶಿಕ್ಷಣ ಮಂತ್ರಿಯಾಗಿ, ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗಿ 2013–15ರ ಅವಧಿಗೆ ತೀರಥ್‌ಸಿಂಗ್ ಅವರು ಸೇವೆ ಸಲ್ಲಿಸಿದ್ದಾರೆ.

ಟಿಟಿ: ರಾಜ್ಯದ ಆಟಗಾರರಿಗೆ ನಿರಾಸೆ

ಬೆಂಗಳೂರು: ಕರ್ನಾಟಕದ ಆಟಗಾರರು ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಮತ್ತು ಯೂತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ನಿರಾಸೆ ಅನುಭವಿಸಿದರು.

ಜೂನಿಯರ್ ಬಾಲಕರ ವಿಭಾಗದಲ್ಲಿ ಸಮ್ಯಕ್ ಕಶ್ಯಪ್ ಪ್ರೀಕ್ವಾರ್ಟರ್‌ಫೈನಲ್‌ವರೆಗೆ ತಲುಪಿದ್ದರು. ಆದರೆ ಬಂಗಾಳದ ಸೌಮ್ಯದೀಪ್ ಸರ್ಕಾರ್ ವಿರುದ್ಧ 8-11,9-11,10-12ರಿಂದ ವೀರೋಚಿತ ಸೋಲು ಅನುಭವಿಸಿದರು. ಆದರೆ ಯೂತ್ ವಿಭಾಗದಲ್ಲಿ ಸಮ್ಯಕ್ ಮೊದಲ ಸುತ್ತಿನ ಪಂದ್ಯದಲ್ಲೇ 7-11,12-10,11-8,6-11,10-12ರಿಂದ ಯೆಂಗ್‌ಕೋಮ್ ಕೆ. ಎದುರು ಮಣಿದರು.

ಜೂನಿಯರ್ ವಿಭಾಗದ 2ನೇ ಸುತ್ತಿನ ಪಂದ್ಯದಲ್ಲಿ ಆಕಾಶ್ ಕೆ.ಜೆ 11-6,6-11,4-11,3-11ರಿಂದ ಉತ್ತರ ಪ್ರದೇಶದ ದಿವ್ಯಾಂಶ್ ಶ್ರೀವಾತ್ಸವ್ ಎದುರು ಸೋತರು.

ಕೋವಿಡ್‌ಗೆ ವರ್ಷ: ಲಸಿಕೆಯಿಂದ ಒಂದಿಷ್ಟು ಹರ್ಷ

ವಾಷಿಂಗ್ಟನ್ (ಎಪಿ): 2020ರ ಮಾರ್ಚ್ 11ರಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್–19 ಅನ್ನು ಸಾಂಕ್ರಾಮಿಕ ಎಂದು ಘೋಷಿಸಿತು. ಅದಕ್ಕೀಗ ವರ್ಷ ತುಂಬಿದೆ. ಈ ಅವಧಿಯಲ್ಲಿ ಜನರು ಎದುರಿಸಿದ ಕಷ್ಟಕರ ದಿನಗಳು ಅಷ್ಟಿಷ್ಟಲ್ಲ.

ವರ್ಷದ ನಂತರ ಕೆಲವರು ಸಾಮಾನ್ಯ ಸ್ಥಿತಿಗೆ ಮರಳುವ ಕನಸು ಕಾಣುತ್ತಿದ್ದಾರೆ. ಲಸಿಕೆಗಳು ಬಂದಿರುವುದು ಇದಕ್ಕೆ ಕಾರಣ. ಈ ಸಮಯದಲ್ಲಿ ಜನರು ಒಂದು ವರ್ಷ ಹೇಗೆ ಕಳೆದೆವು ಎಂಬುದನ್ನು ಅವಲೋಕನ ಮಾಡಿಕೊಳ್ಳುತ್ತಿದ್ದಾರೆ.

2020 ಮಾರ್ಚ್ 11ರಂದು 1.25 ಲಕ್ಷ ಕೋವಿಡ್–19 ಪ್ರಕರಣಗಳು ದೃಢವಾಗಿದ್ದವು ಮತ್ತು 5000ಕ್ಕಿಂತ ಕಡಿಮೆ ಸಾವುಗಳು ವರದಿಯಾಗಿದ್ದವು. ಜಗತ್ತಿನ ಇತರ ಭಾಗಗಳು ಇನ್ನೂ ಅಷ್ಟಾಗಿ ಕೋವಿಡ್‌ನಿಂದ ತತ್ತರಿಸಿರಲಿಲ್ಲ. ಆದರೆ ಭಾರತ ಸಹಿತ ವಿಶ್ವದ ಅನೇಕ ರಾಷ್ಟ್ರಗಳು ಮಾರ್ಚ್ ಮೂರನೇ ವಾರದಲ್ಲಿ ಸಂಪೂರ್ಣ ಲಾಕ್‌ಡೌನ್ ಘೋಷಿಸುವ ಮಟ್ಟಿಗೆ ಪರಿಸ್ಥಿತಿ ಬಿಗಡಾಯಿಸಿತ್ತು. ಇಂದು ಪ್ರಕರಣಗಳ ಸಂಖ್ಯೆ 11.78 ಕೋಟಿ ದಾಟಿದ್ದರೆ, ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 26.14 ಲಕ್ಷ ದಾಟಿದೆ.

ಐಟಿವಿ ತೊರೆದ ನಿರೂಪಕ ಮೋರ್ಗನ್

ಲಂಡನ್: ಮೇಘನ್ ಮಾರ್ಕೆಲ್ ಕುರಿತ ತಮ್ಮ ಟೀಕೆಗಳಿಗೆ ವ್ಯಾಪಕ ಆಕ್ಷೇಪ ವ್ಯಕ್ತವಾದ ಕಾರಣ, ಬ್ರಿಟನ್‌ನ ಐಟಿವಿಯ 'ಗುಡ್ ಮಾರ್ನಿಂಗ್ ಬ್ರಿಟನ್' ಕಾರ್ಯಕ್ರಮದ ನಿರೂಪಕ ಪಿಯರ್ಸ್ ಮೋರ್ಗನ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಜನಾಂಗೀಯ ತಾರತಮ್ಯಕ್ಕೆ ಸಂಬಂಧಿಸಿ ಪ್ರಿನ್ಸ್ ಹ್ಯಾರಿ ಪತ್ನಿ ಮೇಘನ್ ಮಾರ್ಕೆಲ್ ಮಾಡಿರುವ ಆರೋಪಕ್ಕೆ ರಾಣಿ ಎಲಿಜಬೆತ್ ಪ್ರತಿಕ್ರಿಯಿಸಿದ್ದು, ಸಮಸ್ಯೆಯನ್ನು ಖಾಸಗಿಯಾಗಿ ಪರಿಹರಿಸಲಾಗುವುದು ಎಂದು ಹೇಳಿದ್ದಾರೆ.



ನಿಮ್ಮ ಉತ್ತರವು ಎ ಬಿ ಸಿ ಸಾಲಿನ ಕ್ರಮದಲ್ಲಿ ಇದ್ದು, ಪ್ರತಿ ಸಾಲು ಎಡದಿಂದ ಬಲಕ್ಕೆ ಇರಬೇಕು.

ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಚಿತ್ರಬಂಧ

ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ

ಬಂಪರ್ ಬಹುಮಾನ* ONE PLUS 7 PRO ಮೊಬೈಲ್

ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ

14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಜಾನ್ ಗಿಫ್ಟ್ ವೌಚರ್

ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8ರೊಳಗೆ 9246020020ಗೆ SMS ಮಾಡಿ.

ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859

*ಷರತ್ತುಗಳು ಅನ್ವಯ

ನಿನ್ನೆಯ ಉತ್ತರ: A526 B738 C941

Pepsodent

ಕೀಟಾಣು ನಿಮ್ಮ ಬಾಯಿಯಲ್ಲಿ ಅಡಗಿರುತ್ತವೆ. ಕೇವಲ ಹಲ್ಲುಗಳಲ್ಲಷ್ಟೇ ಅಲ್ಲ.

ಹೆದರಬೇಡಿ. ಬಾಯಿಯನ್ನು ಜರ್ಮಿಚೆಕ್ ಮಾಡಿ.



ಕೀಟಾಣು ಹಲ್ಲುಗಳ ಮೇಲಷ್ಟೇ ಅಲ್ಲ, ಬಾಯಿಯ ಬೇರೆ ಬೇರೆ ಭಾಗಗಳ ಮೇಲೆ ಪರಿಣಾಮ ಬೀರುತ್ತೆ. ಅದು ನಿಮ್ಮ ಬಾಯಿಯ ಕೇವಲ 20% ನಷ್ಟು ಭಾಗವಾಗಿರುತ್ತೆ. ಪೆಪ್ಸೊಡೆಂಟ್ ಜರ್ಮಿಚೆಕ್. ಇದರಲ್ಲಿದೆ ಸಿಪಿಸಿ ಟೆಕ್ನಾಲಜಿ. ಒಂದು ಸಾಧಾರಣ ಟೂಥ್ ಪೇಸ್ಟ್ ನ ತುಲನೆಯಲ್ಲಿ ಬಾಯಿಯ ಕೀಟಾಣುಗಳೊಂದಿಗೆ ಉತ್ತಮವಾಗಿ ಹೋರಾಡುತ್ತದೆ.

100g ₹45/-

ರಚನಾತ್ಮಕ ಚಿತ್ರಣ. *ಬಾಯಿಯ ಬ್ಯಾಕ್ಟೀರಿಯದ ಮೇಲೆ ಪರೀಕ್ಷಿಸಲಾಗಿದೆ. ಬನಾಮ್ ಮಾನಕ್ ಫ್ಲೋರಿಡೇಟೆಡ್ ಟೂಥ್ ಪೇಸ್ಟ್ ರಹಿತ ಆಂಟಿ–ಜರ್ಮ್ ಆಕ್ಟಿವ್ಸ್.

ಸಂಕ್ಷಿಪ್ತ ಸುದ್ದಿ

ಆರ್‌ಸಿಬಿಗೆ ಫಿನ್ ಅಲೆನ್ ಸೇರ್ಪಡೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳುರು ತಂಡಕ್ಕೆ ನ್ಯೂಜಿಲೆಂಡ್‌ನ ವಿಕೆಟ್‌ಕೀಪರ್ ಫಿನ್ ಅಲೆನ್ ಅವರನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ.

ಆರ್‌ಸಿಬಿಯಲ್ಲಿದ್ದ ಜೋಶ್ ಫಿಲಿಪ್ ಅವರು ಈ ಬಾರಿ ಟೂರ್ನಿಗೆ ಅಲಭ್ಯರಾಗಿದ್ದಾರೆ. ಆದ್ದರಿಂದ ಅವರ ಸ್ಥಾನಕ್ಕೆ ಫಿನ್ ಅವಕಾಶ ಗಿಟ್ಟಿಸಿದ್ದಾರೆ. ಹೋದ ವರ್ಷದ ಟೂರ್ನಿಯಲ್ಲಿ ಆರ್‌ಸಿಬಿಯಲ್ಲಿ ಜೋಶ್ ಆಡಿದ್ದರು. ಐದು ಪಂದ್ಯಗಳಲ್ಲಿ 78 ರನ್ ಗಳಿಸಿದ್ದರು.

ಫಿನ್ ಅಲೆನ್‌ಗೆ ಇದು ಚೊಚ್ಚಲ ಐಪಿಎಲ್ ಟೂರ್ನಿ. ನ್ಯೂಜಿಲೆಂಡ್‌ನಲ್ಲಿ 12 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿರುವ ಫಿನ್ ಮೂರು ಅರ್ಧಶತಕ ಗಳಿಸಿದ್ದಾರೆ. ಅವರಿಗೆ ಮೂಲಬೆಲೆ 20 ಲಕ್ಷ ರೂಪಾಯಿ ನೀಡಿ ಖರೀದಿಸಲಾಗಿದೆ ಎಂದು ಐಪಿಎಲ್ ವೆಬ್‌ಸೈಟ್ ಪ್ರಕಟಿಸಿದೆ.

ಟಿ20 ರ‍್ಯಾಂಕಿಂಗ್: ಭಾರತಕ್ಕೆ ಬಡ್ತಿ

ದುಬೈ: ಭಾರತ ಕ್ರಿಕೆಟ್ ತಂಡವು ಆಸ್ಟ್ರೇಲಿಯಾವನ್ನು ಹಿಂದಿಕ್ಕಿ ಐಸಿಸಿ ಟ್ವೆಂಟಿ–20 ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದೆ. ಇಂಗ್ಲೆಂಡ್ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ವಿರಾಟ್ ಕೊಹ್ಲಿ ನೇತೃತ್ವದ ಭಾರತ (268) ತಂಡ ಇಂಗ್ಲೆಂಡ್‌ಗಿಂತ ಏಳು ರೇಟಿಂಗ್ ಪಾಯಿಂಟ್ಸ್ ಹಿಂದಿದೆ. ಇಂಗ್ಲೆಂಡ್ 275 ಪಾಯಿಂಟ್ಸ್ ಕಲೆಹಾಕಿದೆ. ನ್ಯೂಜಿಲೆಂಡ್ ವಿರುದ್ಧ ಇತ್ತೀಚೆಗೆ ನಡೆದ ಐದು ಪಂದ್ಯಗಳ ಸರಣಿಯಲ್ಲಿ ಆಸ್ಟ್ರೇಲಿಯಾ ಸೋಲು ಅನುಭವಿಸಿದ್ದರಿಂದ ಆ ತಂಡದ ಕ್ರಮಾಂಕ ಕುಸಿದಿದೆ. ಸದ್ಯ ಆಸ್ಟ್ರೇಲಿಯಾ ಮತ್ತು ಭಾರತದ ನಡುವೆ ಒಂದು ಪಾಯಿಂಟ್‌ನ ಅಂತರವಿದೆ.

ಬ್ಯಾಟ್ಸ್‌ಮನ್‌ಗಳ ವಿಭಾಗದಲ್ಲಿ ಭಾರತದ ಆಟಗಾರ, ಕನ್ನಡಿಗ ಕೆ.ಎಲ್.ರಾಹುಲ್ (816 ರೇಟಿಂಗ್ ಪಾಯಿಂಟ್ಸ್) ಒಂದು ಸ್ಥಾನ ಕೆಳಗಿಳಿದಿದ್ದು, ಮೂರನೇ ಸ್ಥಾನದಲ್ಲಿದ್ದಾರೆ. ವಿರಾಟ್ ಕೊಹ್ಲಿ (697) ಆರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಇಂಗ್ಲೆಂಡ್‌ನ ಡೇವಿಡ್ ಮಲಾನ್ (915) ಹಾಗೂ ಆಸ್ಟ್ರೇಲಿಯಾದ ಆ್ಯರನ್ ಫಿಂಚ್ (830) ಈ ವಿಭಾಗದಲ್ಲಿ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನದಲ್ಲಿರುವವರು.

ನ್ಯೂಜಿಲೆಂಡ್ ವಿರುದ್ಧದ ಸರಣಿಯಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ ಹಿನ್ನೆಲೆಯಲ್ಲಿ ಫಿಂಚ್ ಸ್ಥಾನದಲ್ಲಿ ಏರಿಕೆಯಾಗಿದೆ. ನ್ಯೂಜಿಲೆಂಡ್‌ನ ಮಾರ್ಟಿನ್ ಗಪ್ಟಿಲ್ ಎಂಟನೇ ಸ್ಥಾನಕ್ಕೇರಿದ್ದಾರೆ.

ಹಾಕಿ: ‘ಟಾಪ್ಸ್’ ಭತ್ಯೆ

ನವದೆಹಲಿ (ಪಿಟಿಐ): ಭಾರತ ಪುರುಷ ಮತ್ತು ಮಹಿಳಾ ಹಾಕಿ ತಂಡಗಳ ಆಟಗಾರರಿಗೆ ಒಲಿಂಪಿಕ್ಸ್‌ವರೆಗೆ ಟಾಪ್ಸ್ (ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ) ನಲ್ಲಿ ಮಾಸಿಕ ಭತ್ಯ ನೀಡಲು ನಿರ್ಧರಿಸ ಲಾಗಿದೆ.

‘ಮಿಷನ್ ಒಲಿಂಪಿಕ್ಸ್ ಘಟಕವು ಆಟಗಾರರಿಗೆ ತಲಾ ₹ 50 ಸಾವಿರ ಮಾಸಿಕ ಭತ್ಯೆ ಮಂಜೂರು ಮಾಡಿದೆ. ಟಾಪ್ಸ್ ಯೋಜನೆಯ ಅನುದಾನದಡಿಯಲ್ಲಿ ಇದನ್ನು ನೀಡಲಾಗುವುದು' ಎಂದು ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಪ್ರಕಟಣೆಯಲ್ಲಿ ತಿಳಿಸಲಾಗಿದೆ. 33 ಪುರುಷರು ಮತ್ತು 25 ಮಹಿಳಾ ಹಾಕಿಪಟುಗಳು ಈ ಭತ್ಯೆ ಪಡೆಯಲಿದ್ದಾರೆ.

ವಿಜಯ್ ಹಜಾರೆ ಟ್ರೋಫಿ ಸೆಮಿಫೈನಲ್: ಕರ್ನಾಟಕ–ಮುಂಬೈ ಪೈಪೋಟಿ

‘ಆರಂಭಿಕ ಬ್ಯಾಟ್ಸ್‌ಮನ್‌ಗಳ’ ಹಣಾಹಣಿ

ನವದೆಹಲಿ(ಪಿಟಿಐ): ದೇಶಿ ಕ್ರಿಕೆಟ್‌ನ ಬದ್ಧ ಎದುರಾಳಿಗಳಾದ ಕರ್ನಾಟಕ ಮತ್ತು ಮುಂಬೈ ತಂಡಗಳು ಗುರುವಾರ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಈ ಪಂದ್ಯವು ಉಭಯ ತಂಡಗಳ ಆರಂಭಿಕ ಬ್ಯಾಟ್ಸ್‌ಮನ್‌ಗಳ ನಡುವಿನ ಹಣಾಹಣಿಗೆ ವೇದಿಕೆಯಾಗುವ ನಿರೀಕ್ಷೆ ಇದೆ. ಹಾಲಿ ಚಾಂಪಿಯನ್ ಕರ್ನಾಟಕ ತಂಡದ ನಾಯಕ ಮತ್ತು ಆರಂಭಿಕ ಬ್ಯಾಟ್ಸ್‌ಮನ್ ಆರ್. ಸಮರ್ಥ್, ಅವರ ಜೊತೆಗಾರ ದೇವದತ್ತ ಪಡಿಕ್ಕಲ್ ಮತ್ತು ಮುಂಬೈ ತಂಡದ ನಾಯಕರೂ ಆಗಿರುವ ಓಪನರ್ ಪೃಥ್ವಿ ಶಾ ಅವರು ಟೂರ್ನಿಯಲ್ಲಿ ಇದುವರೆಗೆ ರನ್‌ಗಳ ಹೊಳೆ ಹರಿಸಿದ್ದಾರೆ. ಅತಿ ಹೆಚ್ಚು ರನ್‌ಗಳಿಸಿದ ಬ್ಯಾಟ್ಸ್‌ಮನ್‌ಗಳ ಪಟ್ಟಿಯ ಅಗ್ರಸ್ಥಾನದಲ್ಲಿ ದೇವದತ್ತ, ನಂತರದ ಎರಡು ಸ್ಥಾನಗಳಲ್ಲಿ ಕ್ರಮವಾಗಿ ಸಮರ್ಥ್ ಮತ್ತು ಪೃಥ್ವಿ ಇದ್ದಾರೆ.

ಈ ಟೂರ್ನಿಯಲ್ಲಿ ಒಟ್ಟು ನಾಲ್ಕು ಶತಕಗಳನ್ನು ಗಳಿಸಿರುವ ದೇವದತ್ತ ದಾಖಲೆ ಬರೆದಿದ್ದಾರೆ. ದೇವದತ್ತ, ಇಲ್ಲಿ ಸಮರ್ಥ್ ಜೊತೆಗೆ ಕ್ವಾರ್ಟರ್‌ಫೈನಲ್‌ನಲ್ಲಿ ದ್ವಿಶತಕದ ಜೊತೆಯಾಟವಾಡಿದ್ದರು. ಸಮರ್ಥ್ ಕೂಡ ಮೂರು ಶತಕ ಹೊಡೆದಿದ್ದಾರೆ.

ಇವರಿಬ್ಬರ ಜೊತೆಯಾಟವನ್ನು ಮುರಿಯುವುದು ಎದುರಾಳಿ ಬೌಲರ್‌ಗಳಿಗೆ ಸವಾಲಾಗಿ ಪರಿಣಮಿಸಿದೆ. ಮುಂಬೈ ತಂಡದಲ್ಲಿ ಪೃಥ್ವಿ ಕೂಡ ಮೂರು ಶತಕಗಳ ಸಾಧನೆ ಮಾಡಿದ್ದಾರೆ. ಆದರೆ ಅವರ ಆರಂಭಿಕ ಜೊತೆಗಾರ ಯುವ ಬ್ಯಾಟ್ಸ್‌ಮನ್ ಯಶಸ್ವಿ ಜೈಸ್ವಾಲ್ ಲಯದಲ್ಲಿ ಸ್ಥಿರತೆ ಇಲ್ಲ. ಎಂಟರ ಘಟ್ಟದ ಪಂದ್ಯದಲ್ಲಿ ಅವರು ಅರ್ಧಶತಕ ಗಳಿಸಿದ್ದರು. ಆದರೆ ಹೆಚ್ಚು ಎಸೆತಗಳನ್ನು ಆಡಿದ್ದರು.

ಕರ್ನಾಟಕದ ಬ್ಯಾಟಿಂಗ್ ಕ್ರಮಾಂಕ ಬಲಿಷ್ಠವಾಗಿದೆ. ಅನುಭವಿ ಮನೀಷ್ ಪಾಂಡೆ, ಕೆ.ವಿ. ಸಿದ್ಧಾರ್ಥ್ ಕೂಡ ಉತ್ತಮ ಕಾಣಿಕ ನೀಡುವ ಲಯದಲ್ಲಿದ್ದಾರೆ. ಫಾರ್ಮ್‌ಗಾಗಿ ತಡಕಾಡುತ್ತಿರುವ ಕರುಣ್ ನಾಯರ್ ಒಂದಷ್ಟು ರನ್‌ಗಳ ಕಾಣಿಕೆ ಕೊಟ್ಟರೆ ತಂಡದ ಬಲ ವರ್ಧಿಸುತ್ತದೆ. ಆರ್‌ರೌಂಡರ್ ಗೌತಮ್, ಶ್ರೇಯಸ್ ಗೋಪಾಲ್ ಮತ್ತು ಅಭಿಮನ್ಯು ಮಿಥುನ್ ಎರಡೂ ವಿಭಾಗಗಳಲ್ಲಿ ತಂಡಕ್ಕೆ ಆಸರೆಯಾಗುವ ಸಮರ್ಥರು. ಈ ಮೂವರಿಗೂ ತಮ್ಮ ಬೌಲಿಂಗ್‌ನಲ್ಲಿ ಮುಂಬೈನ ಪೃಥ್ವಿ ಶಾ, ಆದಿತ್ಯ ತಾರೆ, ಸರ್ಫರಾಜ್ ಖಾನ್ ಅವರನ್ನು ಕಟ್ಟಿಹಾಕುವ ಪ್ರಮುಖ ಸವಾಲಿದೆ. ಶ್ರೇಯಸ್ ಅಯ್ಯರ್, ಶಾರ್ದೂಲ್ ಠಾಕೂರ್ ಅವರ ಅನುಪಸ್ಥಿತಿಯಿಂದಾಗಿ ಮುಂಬೈ ತಂಡದ ಯುವ ಆಟಗಾರರ ಮೇಲೆ ಹೆಚ್ಚಿನ ಹೊಣೆ ಬಿದ್ದಿದೆ. ಬೌಲಿಂಗ್‌ನಲ್ಲಿ ತುಷಾರ್ ದೇಶಪಾಂಡೆ ಮತ್ತು ಶಮ್ಸ್ ಮಲಾನಿ ಅವರ ಮೇಲೆ ನಿರೀಕ್ಷೆಯ ಭಾರವಿದೆ.

ಪಂದ್ಯ ಆರಂಭ: ಬೆಳಿಗ್ಗೆ 9

ಕೆ.ವಿ. ಸಿದ್ಧಾರ್ಥ್, ಸಮರ್ಥ್ ಮತ್ತು ದೇವದತ್ತ ಪಡಿಕ್ಕಲ್ –ಪ್ರಜಾವಾಣಿ ಸಂಗ್ರಹ ಚಿತ್ರ

ಈ ಆವೃತ್ತಿಯಲ್ಲಿ ಇದುವರೆಗೆ ಹೆಚ್ಚು ರನ್ ಗಳಿಸಿದವರು

ಆಟಗಾರ	ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ
ಕರ್ನಾಟಕ					
ದೇವದತ್ತ ಪಡಿಕ್ಕಲ್	6	673	152	4	2
ಆರ್.ಸಮರ್ಥ್	6	605	192	3	2
ಕೆ.ವಿ.ಸಿದ್ಧಾರ್ಥ್	6	245	86*	-	2
ಮುಂಬೈ					
ಪೃಥ್ವಿ ಶಾ	6	589	227*	3	-
ಸೂರ್ಯಕುಮಾರ್ ಯಾದವ್	5	332	133	1	2
ಶ್ರೇಯಸ್ ಅಯ್ಯರ್	4	260	116	2	-

ಉತ್ತರಪ್ರದೇಶ ತಂಡಕ್ಕೆ ಗುಜರಾತ್ ಎದುರಾಳಿ

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯ ಲಿರುವ ಇನ್ನೊಂದು ಸೆಮಿಫೈನಲ್‌ನಲ್ಲಿ ಪ್ರಿಯಾಂಕ್ ಪಾಂಚಾಲ್ ನಾಯಕತ್ವದ ಗುಜರಾತ್ ಮತ್ತು ಕರಣ್ ಶರ್ಮಾ ನೇತೃತ್ವದ ಉತ್ತರಪ್ರದೇಶ ತಂಡಗಳು ಹಣಾಹಣಿ ನಡೆಸಲಿವೆ.

ಪ್ರಿಯಾಂಕ್

ರ‍್ಯಾಂಕಿಂಗ್: ಪಂತ್ 7ನೇ ಸ್ಥಾನಕ್ಕೆ

ದುಬೈ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಸರಣಿಯ ನಾಲ್ಕನೇ ಪಂದ್ಯದಲ್ಲಿ ಶತಕ ಸಿಡಿಸಿದ್ದ ಭಾರತದ ವಿಕೆಟ್ ಕೀಪರ್ ಬ್ಯಾಟ್ಸಮನ್ ರಿಷಭ್ ಪಂತ್ ಐಸಿಸಿ ಟೆಸ್ಟ್ ಬ್ಯಾಟ್ಸ್‌ಮನ್‌ಗಳ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ ಏಳನೇ ಸ್ಥಾನಕ್ಕೇರಿದ್ದಾರೆ.

ಅಹಮದಾಬಾದ್‌ನಲ್ಲಿ ನಡೆದ ಅಂತಿಮ ಟೆಸ್ಟ್‌ನಲ್ಲಿ ಪಂತ್ ಬಾರಿಸಿದ ಶತಕವು (101) ಭಾರತ ತಂಡದ ಗೆಲುವಿಗೆ ಕಾರಣವಾಗಿತ್ತು.

23 ವರ್ಷದ ರಿಷಭ್ ಅವರು ಸದ್ಯ ಏಳು ಸ್ಥಾನಗಳ ಏರಿಕೆ ಕಂಡಿದ್ದು, ಸಹ ಆಟಗಾರ ರೋಹಿತ್ ಶರ್ಮಾ ಹಾಗೂ ನ್ಯೂಜಿಲೆಂಡ್‌ನ ಹೆನ್ರಿ ನಿಕೋಲ್ಸ್ ಜೊತೆ ಏಳನೇ ಸ್ಥಾನ ಹಂಚಿಕೊಂಡಿದ್ದಾರೆ.

ಭಾರತ ಐಸಿಸಿ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಅರ್ಹತೆ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಾಷಿಂಗ್ಟನ್ ಸುಂದರ್ ಕೂಡ 39 ಸ್ಥಾನಗಳ ಬಡ್ತಿ ಸಾಧಿಸಿದ್ದು, ಸದ್ಯ 62ನೇ ಸ್ಥಾನದಲ್ಲಿದ್ದಾರೆ.

ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಐದನೇ ಸ್ಥಾನದಲ್ಲಿ ಮುಂದುವರಿದಿದ್ದು, 13ನೇ ಕ್ರಮಾಂಕ ದಲ್ಲಿ ಚೇತೇಶ್ವರ್ ಪೂಜಾರ (697) ಇದ್ದಾರೆ. ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಮಿಂಚಿದ್ದ ಆರ್. ಅಶ್ವಿನ್ ಅವರು ಬೌಲರ್‌ಗಳ ವಿಭಾಗದಲ್ಲಿ ನ್ಯೂಜಿ ಲೆಂಡ್‌ನ ನೀಲ್ ವ್ಯಾಗ್ನರ್ ಅವರನ್ನು ಹಿಂದಿಕ್ಕಿ ಎರಡನೇ ಸ್ಥಾನಕ್ಕೇರಿದ್ದಾರೆ. 2017ರ ನಂತರ ಮೊದಲ ಬಾರಿ ಅವರು ಈ ಸ್ಥಾನ ಗಳಿಸಿದ್ದಾರೆ.

ಆಲ್‌ರೌಂಡರ್‌ಗಳ ವಿಭಾಗದಲ್ಲಿ ಅಶ್ವಿನ್ ಅವರಿಗೆ ನಾಲ್ಕನೇ ಕ್ರಮಾಂಕವಿದೆ. ಸ್ಪಿನ್ನರ್ ಅಕ್ಷರ್ ಪಟೇಲ್ ಎಂಟು ಸ್ಥಾನಗಳ ಬಡ್ತಿಯೊಂದಿಗೆ ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ 30ನೇ ಸ್ಥಾನದಲ್ಲಿದ್ದಾರೆ.

ಶೀಘ್ರದಲ್ಲೇ ವೇಗಿ ಬೂಮ್ರಾ ವಿವಾಹ?

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಧ್ಯಮ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಕೆಲವೇ ದಿನಗಳಲ್ಲಿ ವಿವಾಹಿತರಾಗಲಿದ್ದಾರೆ ಎಂಬ ವದಂತಿ ದಟ್ಟವಾಗಿ ಹರಡಿದೆ.

ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯ ನಡುವೆಯೇ ಅವರು ‘ವೈಯಕ್ತಿಕ’ ಕಾರಣ ನೀಡಿ ತಂಡ ತೊರೆದಿದ್ದರು. ಬೂಮ್ರಾ. ಗೆಳತಿ ಸಂಜನಾ ಗಣೇಶನ್ ಅವರನ್ನು ವಿವಾಹವಾಗುವ ಸಿದ್ಧತೆಯಲ್ಲಿದ್ದಾರೆ ಎಂದು ಹೇಳಲಾಗಿದೆ. ಆದರೆ ಬೂಮ್ರಾ ಆಗಲಿ, ಸಂಜನಾ ಆಗಲಿ ಈ ಕುರಿತು ಎಲ್ಲೂ ಮಾತನಾಡಿಲ್ಲ.

ಸೌತಾಂಪ್ಟನ್‌ನಲ್ಲಿ ಫೈನಲ್ ಖಚಿತ

ದುಬೈ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯವನ್ನು ಲಾರ್ಡ್ಸ್‌ನಿಂದ ಸೌತಾಂಪ್ಟನ್‌ಗೆ ಸ್ಥಳಾಂತರಿಸಿದ್ದನ್ನು ಐಸಿಸಿ ಖಚಿತ ಪಡಿಸಿದೆ.

ಜೂನ್ 18 ರಿಂದ 22ರವರೆಗೆ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಲಿವೆ. 'ಹ್ಯಾಂಪ್‌ಶೈರ್ ಬೌಲ್ ಕ್ರೀಡಾಂಗಣದಲ್ಲಿ ಫೈನಲ್ ಆಯೋಜನೆಯಾಗಲಿದೆ.

ಇಂಗ್ಲೆಂಡ್ ಸರ್ಕಾರವು ಕೋವಿಡ್ ತಡೆ ನಿಯ ಮಾವಳಿಯ ಕುರಿತು ಮುಂಬರುವ ದಿನ ಗಳಲ್ಲಿ ಜಾರಿ ಮಾಡುವಕ್ರಮಗಳನ್ನುನೋಡಿಕೊಂಡು ಯೋಜಿಸಲಾಗು ವುದು‘ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

'ಸೌತಾಂಪ್ಟನ್‌ನಲ್ಲಿ ವಿಶ್ವದರ್ಜೆಯ ತರಬೇತಿ ಸೌಲಭ್ಯಗಳು, ಬಯೋಬಬಲ್ ವ್ಯವಸ್ಥೆ ಇದೆ. ಉಭಯ ತಂಡಗಳಿಗೂ ಪೂರ್ವಸಿದ್ಧತೆ ನಡೆಸಲು ಉತ್ತಮ ವಾತಾವರಣ ಮತ್ತು ಸೌಕರ್ಯಗಳು ಇಲ್ಲಿವೆ‘ ಎಂದು ಐಸಿಸಿ ತಿಳಿಸಿದೆ.

'ಇದೇ ಮೊದಲ ಬಾರಿ ನಡೆಯುತ್ತಿರುವ ಡಬ್ಲ್ಯುಟಿಸಿಯ ಪ್ರಶಸ್ತಿ ಸುತ್ತಿನ ಹಣಾಹಣಿಗೆ ಆತಿಥ್ಯ ವಹಿಸುವುದು ಹೆಮ್ಮೆಯ ವಿಷಯ‘ ಎಂದು ಐಸಿಸಿ ಪ್ರಧಾನ ವ್ಯವಸ್ಥಾಪಕ ಜೆಫ್ ಅಲಾರ್ಡೈಸ್ ತಿಳಿಸಿದ್ದಾರೆ. ಸೌತಾಂಪ್ಟನ್‌ನಲ್ಲಿ ಫೈನಲ್ ಆಯೋಜನೆ ಕುರಿತು ಈಚೆಗಷ್ಟೇ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದರು.

ಫೈನಲ್‌ಗೆ ಪ್ರಥಮ ತಂಡವಾಗಿ ನ್ಯೂಜಿಲೆಂಡ್ ಪ್ರವೇಶಿಸಿತ್ತು. ಹೋದ ಶನಿವಾರ ಭಾರತ ತಂಡವು ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ 3–1ರಿಂದ ಜಯ ಸಾಧಿಸಿ ಫೈನಲ್‌ಗೆ ಪ್ರವೇಶ ಗಿಟ್ಟಿಸಿತ್ತು.

ಮುಂಬೈ ರೇಸ್

‘ಸುಲ್ತಾನ್ ಸುಲೈಮಾನ್’ ಗೆಲ್ಲುವ ನಿರೀಕ್ಷೆ

ವತ್‌ರ್ವೈಲ್ ಪ್ಲೇಟ್ ಗುರುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ‘ಸುಲ್ತಾನ್ ಸುಲೈಮಾನ್’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಫಾರೆವರ್ ಫ್ರೀ 7, ಸ್ಪೆಕ್ಟಾಕ್ಯುಲರ್ 1, ವಿಸ್ಪರಿಂಗ್ ಕ್ವೀನ್ 8
2ನೇ ರೇಸ್: ಫಾರೆವರ್ ಟುಗೆದರ್ 3, ಗ್ಲೋರಿಸಸ್ 1, ಅಥುಲ್ಯ 2
3ನೇ ರೇಸ್: ಸುಲ್ತಾನ್ ಸುಲೈಮಾನ್ 1, ರಿವೀಲ್ಟರ್ 2, ಮೌಂಟ್ ಮೊರಯ್ಯ 6
4ನೇ ರೇಸ್: ಮಿಸ್ಟಿಕ್ ಬೇ 5, ಗೆಜಿನೊ 2, ಸಿಲ್ವರ್ ಫ್ಲೇಮ್ಸ್ 3
5ನೇ ರೇಸ್: ನರಕಮಿಸೀ 4, ವಿಕ್ಟೋರಿನ 6, ಫಿಡಾಟೊ 3
6ನೇ ರೇಸ್: ಎಕ್ಸೋಟಿಕ್ 3, ವೇಇನ್ 1, ವಿಂಡ್ ವಿಸ್ಲರ್ 4
7ನೇ ರೇಸ್: ಸ್ಪ್ರಿಂಗ್ ಗ್ರೂವ್ 2, ವರ್ಲ್ಡ್ ಈಸ್ ಓನ್ 3, ವೈಲ್ಡ್ ಫೈರ್ 1
8ನೇ ರೇಸ್: ಆಸ್ಪಿರೇಶನ್ 3, ಫೆನ್ಸಿಂಗ್ 1, ಅರ್ರೆಸಿಫ್ 11

ಉತ್ತಮ ಬೆಟ್: ಫಾರೆವರ್ ಟುಗೆದರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7

ಗುವಾಹಟಿಯಲ್ಲಿ ರಾಜಸ್ಥಾನ್ ರಾಯಲ್ಸ್ ಶಿಬಿರ

ಗುವಾಹಟಿ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಜಸ್ಥಾನ್ ರಾಯಲ್ಸ್ ತಂಡದ ಆಟಗಾರರು ಗುವಾಹಟಿಯಲ್ಲಿ ಆರಂಭಗೊಂಡಿರುವ ಕ್ರಿಕೆಟ್ ಅಕಾಡೆಮಿಯಲ್ಲಿ ಮೂರು ದಿನಗಳ ಶಿಬಿರದಲ್ಲಿ ಪಾಲ್ಗೊಂಡರು. ಬರ್ಸಾಪರ ಕ್ರೀಡಾಂಗಣದಲ್ಲಿರುವ ಅಕಾಡೆಮಿಯಲ್ಲಿ ಕಳೆದ ಏಳರಿಂದ ಒಂಬತ್ತರ ವರೆಗೆ ಶಿಬಿರ ನಡೆದಿತ್ತು. ತಂಡದ ಮುಖ್ಯ ಫಿಸಿಯೊ ಜಾನ್ ಗ್ಲಾಸ್ಟರ್ ಏಳು ಹಂತಗಳಲ್ಲಿ ತರಬೇತಿ ನೀಡಿದರು. ಅವರೊಂದಿಗೆ ಮಾಜಿ ಕ್ರಿಕೆಟಿಗ ಸ್ಟುವರ್ಟ್ ಬಿನ್ನಿ ಮತ್ತು ಸ್ಟ್ರೆಂತ್–ಕಂಡೀಷನಿಂಗ್ ಕೋಚ್ ಎ.ಟಿ. ರಾಜಮಣಿ ಪ್ರಭು ಇದ್ದರು.

ಒರಟು ನಡವಳಿಕೆಗೆ ಕ್ರಮ: ಐಸಿಸಿ ಸಿಇಒ ಮನುಗೆ ರಜೆ

ನವದೆಹಲಿ (ಪಿಟಿಐ): ಸಹೋದ್ಯೋಗಿಗಳೊಂದಿಗೆ ಒರಟು ನಡವಳಿಕೆ ತೋರಿದ ಆರೋಪದ ಮೇಲೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮನು ಸವಾನಿ ಅವರನ್ನು ರಜೆ ಮೇಲೆ ಕಳಿಸಲಾಗಿದೆ. ಈ ಪ್ರಕರಣದಿಂದಾಗಿ ಅವರು ತಮ್ಮ ಅವಧಿ ಪೂರೈಸುವ ಮುನ್ನವೆ ಸ್ಥಾನ ಬಿಡಬೇಕಾದ ಸಾಧ್ಯತೆಯೂ ಇದೆ ಎನ್ನಲಾಗಿದೆ.

'ಐಸಿಸಿಯ ಸಿಬ್ಬಂದಿ ಮತ್ತು ಕೆಲವು ಮಹತ್ವದ ಹುದ್ದೆಗಳಲ್ಲಿರುವ ಉದ್ಯೋಗಿಗಳು ಮನು ಅವರ ಒರಟು ನಡವಳಿಕೆಯ ಕುರಿತು ದೂರಿದ್ದಾರೆ. ಆದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ‘ ಎಂದು ಐಸಿಸಿ ಮೂಲಗಳು ತಿಳಿಸಿವೆ.

56 ವರ್ಷದ ಮನು ಮಂಗಳವಾರ ಕಚೇರಿಗೆ ಬಂದಿದ್ದರು. ಕೆಲಹೊತ್ತಿನ ನಂತರ ಅವರನ್ನು ರಜೆ ಮೇಲೆ ಕಳಿಸಲಾಯಿತು. ಡೇವ್ ರಿಚರ್ಡ್ಸನ್ ಅವರ ನಿರ್ಗಮನದಿಂದಾಗಿ ತೆರವಾಗಿದ್ದ ಸಿಇಒ ಹುದ್ದೆಗೆ 2019ರ ವಿಶ್ವಕಪ್ ನಂತರ ಐಸಿಸಿಗೆ ಸಿಇಒ ಆಗಿ ಮನು ನೇಮಕವಾಗಿದ್ದರು. 2022ರವರೆಗೂ ಅವರ ಕಾರ್ಯಾವಧಿ ಇದೆ.

'ಕೆಲವು ಕ್ರಿಕೆಟ್ ಮಂಡಳಿಗಳಿಗೂ ಮನು ಅವರ ಕಾರ್ಯವೈಖರಿಯ ಬಗ್ಗೆ ಅತೃಪ್ತಿ ಇತ್ತು‘ ಎಂದೂ ಮೂಲಗಳು ತಿಳಿಸಿವೆ.

ಮನು ಸವಾನಿ